ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 16 ಸಂಚಿಕೆ 3-4

ಂಯುಕ್ತ ಸಂಚಿಕೆ) ಜುಲೈ-ಡಿಸೆಂಬರ್ 1987

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 16. Nos. 3 & 4, July to December 1987

Chief Editor: Dr. N. S. Lakshminarayana Bhatta

ಪ್ರಧಾನ ಸಂಪಾದಕರು :
ಡಾ॥ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಸಂಪಾದಕರು :
ಡಾ. ಎಸ್. ಚಂದ್ರಶೇಖರ್
ಎಸ್. ಶಿವಣ್ಣ
ಡಾ. ಎನ್. ವಿ. ವಿಮಲ

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100–00

ಪ್ರಕಾಶಕರು : ಡಾ॥ ಕೆ. ಮರುಳಸಿದ್ಧಪ್ಪ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ಶಿವಮೊಗ್ಗೆಯಲ್ಲಿ ಮಳೆ–1946 1

ಡಾ॥ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಪಂಪ–ಜಿನಸೇನ ತೌಲನಿಕ ಅಧ್ಯಯನ 4

ಡಾ॥ ಹಂಪನಾ

ಶಕ್ತಿಪೂಜೆ ಮತ್ತು ಭೂತಾರಾಧನೆಗಳ ಅಭೇದ 37

ವಸಂತ ಕುಮಾರ್ ಪೆರ್ಲ

ಮಧುರಾ ವಿಜಯದ ನಾಯಕ 46

'ಕಂಪಣ'ನೋ 'ಕೆಂಪಣ್ಣ'ನೋ ಒಂದು ವಿವೇಚನೆ

ಶ್ರೀಮತಿ ಎಸ್. ಆರ್. ಲೀಲಾ

ಘಾರಿಕತಿ_ಸೋಡ ಚೀಟಿ 52

ಪ್ರಭು ಖಾನಾಪೂರೆ

ಕಾರ್ನಾಡರ ತುಘಲಕ–ಒಂದು ವಿವೇಚನೆ 66

ದಿವಸ್ಪತಿ ಹೆಗಡೆ

ಪ್ರಿಯ ಪ್ರೇಯಸಿಗೆ (ಕವನ) 84

(ಮೂಲ) ಸರೋಜಿನಿನಾಯ್ಡು (ಅನು.) ಸಿ.ಪಿ.ಕೆ.

ದಕ್ಷಿಣ ಭಾರತದ ಸ್ಥಳನಾಮಗಳು–ಒಂದು ಸಮೀಕ್ಷೆ 85

ಡಾ॥ ರಘುಪತಿ ಕೆಮ್ತೂರು

ಜನಸಂಖ್ಯಾ ಧೋರಣೆಗಳು–ಒಂದು ಪರಿಚಯ 97

ಮಾವಿನಕುಳಿ ಶ್ರೀನಿವಾಸ

ಸೀಮೆ ಮತ್ತು ಅದರ ಆಡಳಿತ ವ್ಯವಸ್ಥೆ 109

ಎಚ್. ವಿ. ಶ್ರೀಧರ

ಶ್ರೇಷ್ಠ ಮಲಯಾಳಿ ಸಾಹಿತಿ ತಗಳಿ ಶಿವಶಂಕರ ಪಿಳ್ಳೈ 117

ಡಾ॥ ಕೃಷ್ಣ ಭಟ್ ಅರ್ತಿಕ ಜೆ

ಮಂಥನ

'ಮನೋಹರಿ' ಯೋ 'ಚಲಾಚಲ' ವೊ ? 125

ಡಾ॥ ಸಿ. ಪಿ. ಕೆ.

ಅಲ್ಲಮನ ವಚನದಲ್ಲಿ ಅಡಿಗಲ್ಲು 126

ಡಾ॥ ಸಿ. ಪಿ. ಕೆ.

ನಾಯರುಮಂಗಲ 128

ಡಾ॥ ಬಿ. ವಸಂತಶೆಟ್ಟಿ

ಶಿವಮೊಗ್ಗೆಯಲ್ಲಿ ಮಳೆ-1946

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಹತ್ತು ದಿನದಿಂದ ಊರಲ್ಲಿ
ರಚ್ಚೆಹಿಟ್ಟು ರಾಚುತ್ತಿದೆ ಮಳೆ
ಬಡಿದಂತೆ ನೆಲಕ್ಕೆ ಏಕಕಾಲಕ್ಕೆ ಸಹಸ್ರವೊಳೆ
ಊರಿನ ಕೆನ್ನೆಗೆ ಪಟಪಟ
ಬಾರಿಸಿ ಬೈಯುತ ವಟವಟ
ಕೂಗಿ ಬರಿಸುತ್ತಿದೆ ಎಲ್ಲರೆದೆಯಲ್ಲಿ ದಿಗಿಲು
ತಿಂಗಳ ಹಿಂದೆ ಮಾತಾಡಲೂ ಬರದೆ ಉಗ್ಗುತ್ತಿದ್ದ ಮುಗಿಲು

ಕುಂಬಾರ ಗುಂಡಿಯು ಸಣ್ಣ ಹೊಂಡಗಳೆಲ್ಲ
ಸಾರಿನ ದೊನ್ನೆ, ಕೆಂಪನೆ ಸೊನ್ನೆ
ಪ್ರಿಯನ ಮೊದಲ ಮುತ್ತಿಗೆ ನಾಚಿದ ಕನ್ನೆಯ ಕೆನ್ನೆ
ಒಮ್ಮೊಮ್ಮೆ ಕದಡಾರತಿಯ ಜಲ
ರಜಸ್ವಲೆಯು ಕೆದರಿದ ದಳ
ಮಳೆ ನಿಂತಿತೊ ಮಣ್ಣ ಬಿಲಕ್ಕೆ ಬೆಣ್ಣೆತಳ

ಮಳೆ ಹೊಡೆತಕ್ಕೆ ಕಂಗಾಲು
ಮುಚ್ಚಿದೆ ಮನೆ ಮನೆ ಬಾಗಿಲು
ಸಿಳ್ಳು ಹಾಕುತ್ತ ಓಣಿಗಳಲ್ಲಿ
ಪುಂಡಗಾಳಿಯು ಇರಿಚಲು ಕಾವಲು
ತೆರೆದಿದ್ದರೆ ಕಿಟಕಿ ಒಳಕ್ಕೆ ಕೊಂಚ ಹಣಿಕಿ
ಪೋಲಿಕೂಗುವ ತೆವಲು ಪಡ್ಡೆಗಾಳಿಗೆ
ಕನಸುತ್ತದೆ ಗೂಳಿಮನಸ್ಸು ಕಾಮದ ಹೋಳಿಗೆ

ನುಗ್ಗಿದೆ ದೊಡ್ಡ ಬ್ರಾಹ್ಮಣರ ಬೀದಿಗೂ ನೀರು
ಹೊಳೆ ಚರಂಡಿ ಒಂದಾಗಿ
ಗುಂಡಾಭಟ್ಟರ ಮಡಿ ಬಂದಾಗಿ
ಪೂಜೆ ಸ್ನಾನಕ್ಕೆ ರಜ

ಸಂಧ್ಯಾವಂದನೆ ವಜ
ಕಾಫಿ ನೀರಿಗೇ ಆಗಿ ತತ್ವಾರ
ಭಟ್ಟರ ಮಡಿಯಂ ವ್ಯಾಖ್ಯಾನ ವಿಸ್ತಾರ
ಹಿಂದೆ ತಿವಿಸಿಕೊಂಡಿದ್ದ ನಲ್ಲಿಯಂ ಮಂಖಕ್ಕೆ
ಈಗ ಕುಂಕುಮ ಹೂವು ಇಟ್ಟು ಸತ್ಕಾರ

ತುಂಗೆಗೆ ಗಂಗೆಯಾಗುವ ಮನ
ಭಾಗೀರಥೀ ಹಬ್ಬದ ದಿನ
ಹೊಳೆ ಮೆಟ್ಟಲಲ್ಲಿ
ರಾಮಣ್ಣ ಶೆಟ್ಟಿ ಪಾರ್ಕಿನ ಇಳಿ ಘಟ್ಟದಲ್ಲಿ
ನೂಕು ನುಗ್ಗಲು ಜನ
ತುಂಗೆಯು ಸರ್ಕಸ್ಸು ಊರೆದುರಿಗೆ :

ಪ್ರಶಾಂತಲಯಂದ ಬ್ಯಾಂಡುನಡಿಗೆ, ಈ ಗಳಿಗೆ.
ಹೆಡಿಗೆ ಮುಂಚ್ಚುಳ ಸರಿಸಿ ಸರಸರನೆ ನೆಲಕ್ಕೆ ಹರಿವ
ಸರ್ಪಗತಿ ತೆರೆಗೆ
ಮರುಗಳಿಗೆ
ಹೆಡೆಯೆತ್ತಿ ರಪ್ಪನೆ ಬಡಿದು ದಡಕ್ಕೆ
ಸರಿ ದೂರ ಎನ್ನುವ ರೋಷ
ನಿಮಿಷಕ್ಕೊಂದಂ ಮೆಟ್ಟಲಂ ಮುಳುಗು
ಜಲಕ್ಕೆ ನೆಲ ನುಂಗುವ ಆವೇಶ

ಇಂಥ ನೆರೆಯಲ್ಲೂ ಮೊರೆವ ಹರಿವಲ್ಲೂ
ಜಾರಿ ತೂರಿ ಹೋರಾಡಿ ಬರುವ ಉಕ್ಕಡ ಬುಗುರಿ
ಜೀವದ ಜೊತೆ ಅಂಬಿಗರ ಹುಚ್ಚಾಟ
ತೇಲುವ ಕಳ್ಳನಾಟಾ ಹಿಡಿಯಲು
ಹೊಳೆಗಿಳಿದಾನೆಗಳ ಮೋಜಿನ ನೀರಾಟ
ಆಡುವ ಆನೆ ಒಮ್ಮೊಮ್ಮೆ ಗಾಢ ನಿಶ್ಚಲ
ಮುಳುಗದ ಬೆನ್ನು ತಲೆ, ಮೇಲೆ ಪ್ರಶ್ನಾರ್ಥಕ ಕಾಗೆ
ಆನೆಯೊ ಬಂಡೆಯೊ ? ಬೆರಗಿನ ದೃಶ್ಯ
'ಆನೆ ಬಂಡೆ' 'ಕಾಗೆ ಬಂಡೆ' ಪದಕ್ಕೆ
ಹೊಸ ಅರ್ಥಸ್ಪರ್ಶ

ಎಸೆಯುತ್ತಾರೆ ಜನ ಕೈಮುಗಿದು ತಾಯೊಡಲಿಗೆ
ಹೂವು ಅಕ್ಷತೆ ಕಾಸು ಹಚ್ಚಿಡುತ್ತಾರೆ ಧೂಪ
ತೇಲಿಬಿಡುತ್ತಾರೆ ಹೆಂಗಳೆಯರು ನಮಿಸಿ
ನೂರಾರು ದೊನ್ನೆ ದೀಪ
ಹಾಡುವ ನೀರಲ್ಲಾಡುವ ಬೆಂಕಿಯ ಪುಟಾಣಿ ಪಾಪ !
ಕಾಡುವ ಬೆರಗು
ದೂರ ಕಡಲಲ್ಲಿ ಯುದ್ಧಕ್ಕೆ ಹೊರಟಿದೆ
ಪಂಜು ಬೆಳಕಿನ ಸಾಲು ಹಡಗು

ಸಂಜೆ ರಸ್ತೆಯ ತುಂಬ
ಅರಳಿದ ಛತ್ರಿಗಳ ವಾಕಿಂಗು
ಕೆಸರು ರಸ್ತೆಯಲ್ಲಿ ಎಂಕ ಸೀನರಿಗೆ ಸ್ಕೇಟಿಂಗು
ಚಿಕ್ಕ ಬೆಳಕಿಲ್ಲದೆ ಕಕ್ಕಾಬಿಕ್ಕಿ ರಾತ್ರಿ
ಊಟದ ಹೊತ್ತಿಗೆ ಕರೆಂಟು ಹೋಗುವುದು ಖಾತ್ರಿ
ಬುಡ್ಡಿ ಬೆಳಕಿನಲ್ಲಿ ಬೆಚ್ಚನೆ ಊಟ
ಎಲ್ಲಿಲ್ಲದ ಸ್ನೇಹ ಹಬೆ ಅನ್ನಕ್ಕೆ ಹಾಗಲ ಗೊಜ್ಜಿಗೆ
ನಡುವೆ ತೂರುವ ಒಂದೆರಡು ಮೆಣಸಿನ ಬಜ್ಜಿಗೆ
ನಲಿಯುತ್ತದೆ ಕಿವಿ
ಹಪ್ಪಳ ಬಾಳಕ ಮುರಿಯುವ ಸದ್ದಿಗೆ

ಆಹಾ !
ಎಲ್ಲಪ್ಪಾ ಸುರಿದೀತು ಇನ್ನೊಮ್ಮೆ ಅಂಥ ಮಳೆ !
ಎಲ್ಲಪ್ಪಾ ಹರಿದೀತು ಇನ್ನೊಮ್ಮೆ ಹಾಗೆ ಹೊಳೆ !

ಪಂಪ–ಜಿನಸೇನ ತೌಲನಿಕ ಅಧ್ಯಯನ

ಡಾ. ಹಂಪನಾ

ಪೀಠಿಕೆ

ಮಹಾಪುರಾಣ ಜೈನವಾಙ್ಮಯದಲ್ಲಿ ಮೇರುಕೃತಿ.[1] ಅದು ಕನ್ನಡದ ಜೈನ ಕವಿಗಳಿಗೆ ತಾಯಿಬೇರು. ಕನ್ನಡ ಜೈನಪುರಾಣಗಳಿಗೆ ಸಂಸ್ಕೃತ ಮಹಾಪುರಾಣ ತಲಕಾವೇರಿ.[2] ಪಂಪ ಪೊನ್ನ ರನ್ನ ಜನ್ನರಾದಿಯಾಗಿ ಹಲವಾರು ಕನ್ನಡ ಕವಿಗಳು ಮಹಾಪುರಾಣದಲ್ಲಿ ಮನತಣಿಯುವಂತೆ ಕ್ರೀಡಿಸಿದ್ದಾರೆ. ಕನ್ನಡ ಕವಿಗಳ ಋಣ ಭಾರದಿಂದ ಮಹಾಪುರಾಣ ಜಗ್ಗಿಲ್ಲ, ಪೂರ್ಣ ಸೂರೆಯಾಗಿಲ್ಲ. ಅದು ಮೊಗೆ ಮೊಗೆದಷ್ಟೂ ಮಂಗಿಯಂದೆ ಒಸರುವ ಅಕ್ಷಯಕಾವ್ಯ–ಪುರಾಣ. ಮಹಾಪುರಾಣ ಕಾವ್ಯಕ್ಕೆ ಕಾವ್ಯ, ಪುರಾಣಕ್ಕೆ ಪುರಾಣ.[3] ಅದರ ಉದ್ದಕ್ಕೂ, ಧರ್ಮ ಪ್ರಧಾನ ವಾದರೂ, ಕಾವ್ಯ ಆನುಷಂಗಿಕವಾಗಿ ಬರುತ್ತದೆ. ಅಲ್ಲಲ್ಲಿ ಕಾವ್ಯವೇ ಪ್ರಮುಖ ವಾಗಿ ಧರ್ಮ ಗೌಣವಾದ ರಸಾರ್ದ್ರಭಾಗಗಳೂ ಮಹಾಪುರಾಣದಲ್ಲಿವೆ.[4] ಒಂದರ್ಥದಲ್ಲಿ ಮಹಾಪುರಾಣವೂ ರಾಮಾಯಣ ಮಹಾಭಾರತಗಳಿಗೆ ಹೊಯ್ ಕಯ್ ಆಗಿ ಅವುಗಳ ಹತ್ತಿರ ನಿಲ್ಲುವ ಕೃತಿ.[5]

ಮಹಾಪುರಾಣದ ಮೇಲೆ ಸಮಗ್ರ ವಿಮರ್ಶೆ ಇನ್ನೂ ನಡೆಯಬೇಕಾಗಿದೆ.[6] ಕನ್ನಡದ ಸಂದರ್ಭದಲ್ಲಂತೂ ಇದರ ಅಧ್ಯಯನ ಮಹತ್ವದ್ದಾಗಿರುತ್ತದೆ. ಮಹಾ ಪುರಾಣದ ಕೊಂಬೆ ರೆಂಬೆಗಳಾಗಿ ಕವಲೊಡೆದು ಹುಟ್ಟಿಕೊಂಡಿರುವ ಕನ್ನಡ ಕಾವ್ಯಗಳ ನಿಜಬಣ್ಣ ಬಯಲಾಗಬೇಕಾದರೆ ತೌಲನಿಕ ಅಭ್ಯಾಸ ನಡೆಯಬೇಕು. ಅಂಥ ತುಲನಾ ತ್ಮಕ ವ್ಯಾಸಂಗದಿಂದ ಮಾತ್ರ ಕನ್ನಡ ಜೈನ ಕವಿಗಳ ಸ್ವಂತ ಕಾಂತಿಯ ಮೌಲಿಕತೆ ಎಷ್ಟೆಂಬುದು ನಿರ್ಧಾರಗೊಳ್ಳಲು ಸಾಧ್ಯ. ಇದು ಹತ್ತಾರು ಪಿ. ಎಚ್. ಡಿ., ಮಹಾಪ್ರಬಂಧಗಳ ವಸ್ತುವಾಗುತ್ತದೆ. ಪಂಪನ ಆದಿಪುರಾಣ ಮತ್ತು ಪೂರ್ವ ಪುರಾಣ, ಜನ್ನನ ಅನಂತನಾಥಪುರಾಣ ಮತ್ತು ಉತ್ತರ ಪುರಾಣ, ಪೊನ್ನನ ಶಾಂತಿ ಪುರಾಣ ಮತ್ತು ಉತ್ತರ ಪುರಾಣ, ನಾಗಚಂದ್ರನ ಮಲ್ಲಿನಾಥ ಪುರಾಣ ಮತ್ತು ಉತ್ತರ ಪುರಾಣ – ಹೀಗೆ ಸಮಷ್ಟಿಯಾಗಿ, ವ್ಯಷ್ಟಿಯಾಗಿ ತೆಗೆದುಕೊಂಡು ಹೋಲಿಸಿ ತೂಗಿ ನೋಡುವ ತೌಲನಿಕ ಕಾರ್ಯ ನಡೆಸಬಹುದು. ಹಳಗನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಇದರ ಉಪಯುಕ್ತತೆಯನ್ನು ಉತ್ಪ್ರೇಕ್ಷಿಸಬೇಕಾಗಿಲ್ಲ.

ಪ್ರಸ್ತುತ ಲೇಖನದಲ್ಲಿ ಪಂಪನ ಆದಿಪುರಾಣ ಮತ್ತು ಪೂರ್ವ ಪುರಾಣ ಕುರಿತ ಒಂದು ತುಲನಾತ್ಮಕ ಸಮೀಕ್ಷೆಯ ಸ್ಥೂಲ ಪ್ರಯತ್ನವಿದೆ.[7]

ಮಹಾಪುರಾಣ ಸಂಸ್ಕೃತ ಭಾಷೆಯಲ್ಲಿದೆ. ಅದರಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗವನ್ನು ಪೂರ್ವ ಪುರಾಣವೆಂದೂ, ಎರಡನೆಯ ಭಾಗವನ್ನು ಉತ್ತರ ಪುರಾಣವೆಂದೂ ಹೆಸರಿಸಲಾಗಿದೆ.[8] ಪೂರ್ವಪುರಾಣದಲ್ಲಿ 12 ಸಾವಿರ ಶ್ಲೋಕಗಳಿವೆ. ಉತ್ತರ ಪುರಾಣದಲ್ಲಿ 8 ಸಾವಿರ ಶ್ಲೋಕಗಳಿವೆ. ಮಹಾಪುರಾಣ ಒಟ್ಟು 20 ಸಾವಿರ ಶ್ಲೋಕಗಳ 77 ಪರ್ವಗಳ ಬೃಹದ್ ಗ್ರಂಥ[9] ಪೂರ್ವ ಪುರಾಣದ 12 ಸಾವಿರ ಶ್ಲೋಕಗಳಲ್ಲಿ 10,380 ಶ್ಲೋಕಗಳನ್ನು ಜಿನ ಸೇನಾಚಾರ್ಯರು ರಚಿಸಿದ್ದಾರೆ. ಜಿನಸೇನಾಚಾರ್ಯರ ಶಿಷ್ಯ ಗುಣಭದ್ರಾಚಾರ್ಯರು ಪೂರ್ವ ಪುರಾಣದಲ್ಲಿ 1620 ಶ್ಲೋಕಗಳನ್ನೂ, ಉತ್ತರ ಪುರಾಣದ 8 ಸಾವಿರ ಶ್ಲೋಕಗಳನ್ನೂ ಬರೆದು ಮಹಾಪುರಾಣದ ರಚನೆಯನ್ನು ಪೂರ್ಣಗೊಳಿಸಿದ್ದಾರೆ. ಹೀಗೆ ಮಹಾಪುರಾಣ ಗುರು–ಶಿಷ್ಯರ ಸಂಯುಕ್ತ ರಚನೆಯಾಗಿದೆ. ಆದರೂ ರೂಢಿಯಲ್ಲಿ ಪೂರ್ವಪುರಾಣವನ್ನು ಜಿನಸೇನರೂ, ಉತ್ತರ ಪುರಾಣವನ್ನು ಗುಣಭದ್ರರೂ ರಚಿಸಿದರೆಂದು ಹೇಳುವುದು ವಾಡಿಕೆ. ಪೂರ್ವಪುರಾಣಕ್ಕೆ 'ಆದಿಪುರಾಣ'ವೆಂದೂ, ಮಹಾಪುರಾಣಕ್ಕೆ 'ತ್ರಿಷಷ್ಟಿ (ಶಲಾಕಾ) ಪುರುಷ ಚರಿತೆ'ಎಂದೂ ರೂಢಿಯ ಬೇರೆ ಬೇರೆ ಹೆಸರುಗಳು ಚಾಲ್ತಿಯಲ್ಲಿವೆ.[11]

ಜಿನಸೇನರೆಂಬ ಹೆಸರಿನ ಜೈನಾಚಾರ್ಯರು ಹಲವರಿದ್ದಾರೆ ಅವರಲ್ಲಿ ಇಬ್ಬರು ತುಂಬ ಪ್ರಸಿದ್ಧರು. ಒಬ್ಬರು ಪುನ್ನಾಟ ಸಂಘದ ಜಿನಸೇನರು.[12] ಅವರು 'ಹರಿವಂಶಪುರಾಣ' ಎಂಬ ಪುರಾಣಕಾವ್ಯವನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ.[13] 66 ಸರ್ಗ ಮತ್ತು 12 ಸಾವಿರ ಶ್ಲೋಕ ಪ್ರಮಾಣದ ಹರಿವಂಶ ಪುರಾಣದ ರಚನೆ ಪೂರೈಸಿದ್ದು 783ರಲ್ಲಿ. ಅವರಿಗಿಂತ ಭಿನ್ನರಾದ ಇನ್ನೊಬ್ಬ ಜಿನಸೇನರೇ ಈ ಪೂರ್ವ ಪುರಾಣದ ಲೇಖಕರು. ಈ ಜಿನಸೇನರು ಸೇನ ಸಂಘದವರು.[14] ಇವರ ಜೀವಿತ ಕಾಲ ಒಂಬತ್ತನೆಯ ಶತಮಾನ.[15] ಪ್ರಸ್ತುತ ವಿವೇಚನೆಗೆ ಒಳಪಡುವ ಪೂರ್ವಪುರಾಣ (ಆದಿಪುರಾಣ)ರಚಿಸಿದ ಈ ಜಿನಸೇನಾಚಾರ್ಯರು ಕರ್ನಾಟಕದವರು. ಅವರ ಪೂರ್ವಾಶ್ರಮದ ಜೀವನ ವಿವರಗಳು ತಿಳಿಯವು. ಮುನಿಗಳಾದ ಮೇಲೆ ರಚಿಸಿದ ಕೃತಿಗಳು ಮತ್ತು ಅವರ ಗುರುಗಳ ವಿಚಾರ ತಿಳಿದಿದೆ. ಚಂದ್ರಸೇನರ ಶಿಷ್ಯರು ಆರ್ಯನಂದಿ, ಆರ್ಯನಂದಿಯ ಶಿಷ್ಯರು ವೀರಸೇನರು. ಈ ವೀರಸೇನರ ಶಿಷ್ಯರೇ ಜಿನಸೇನರು.[16] ಇವರ ದೀಕ್ಷಾಗುರು ಜಯಸೇನರು. ಜಿನಸೇನರ ಪಟ್ಟ ಶಿಷ್ಯರು ಗುಣಭದ್ರರು.[16] ಇದು ಕ್ರಮವಾಗಿ ಬೆಳೆದು ಬಂದ ಗುರುಶಿಷ್ಯ ಪರಂಪರೆ.

ಕರ್ನಾಟಕವನ್ನು ಆಳಿದ ಸುಪ್ರಸಿದ್ಧ ರಾಜಮನೆತನಗಳಲ್ಲಿ ರಾಷ್ಟ್ರಕೂಟರು ಗಣ್ಯರು.[17] ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ರಾಜ

ಗುರುಗಳಾಗಿದ್ದವರು ಈ ಜಿನಸೇನಾಚಾರ್ಯರು.[17a] ಇವರು ಸಂಸ್ಕೃತ-ಪ್ರಾಕೃತ (ಕನ್ನಡ) ಭಾಷೆಗಳಲ್ಲಿ ನಿಷ್ಣಾತರು. ಇವರು ರಚಿಸಿದ ಹಲವು ಕೃತಿಗಳಲ್ಲಿ ಜಿನಗುಣ ಸ್ತೋತ್ರ (-ಸ್ತುತಿ) ಮತ್ತು ವರ್ಧಮಾನ ಪುರಾಣ ದೊರೆತಿಲ್ಲ. ಈಗ ಉಪ ಲಬ್ಧವಿದ್ದು ಪ್ರಕಟವಾಗಿರುವ ಕೃತಿಗಳ ವಿವರ:

1. ಜಯಧವಲಾ ಟೀಕೆ : ಜೈನ ಆಗಮಗಳಲ್ಲಿ ಒಂದಾದ 'ಜಯಧವಲಾ' ಗ್ರಂಥದಲ್ಲಿ ಕಷಾಯ ಪ್ರಾಭೃತ ಭಾಗವಿದೆ. ಇದರ ಮೇಲೆ ವೀರಸೇನರು 20 ಸಾವಿರ ಶ್ಲೋಕಗಳ ಟೀಕೆ ರಚಿಸಿದ್ದರು. ಅಪೂರ್ಣವಾಗಿ ಉಳಿದ ಈ ಕೆಲಸವನ್ನು ಜಿನಸೇನರು 837ರಲ್ಲಿ ಪೂರೈಸಿದರು. ಇದರಲ್ಲಿ 60 ಸಾವಿರ ಶ್ಲೋಕಗಳಿವೆ : ಅಂದರೆ ಜಿನಸೇನಾಚಾರ್ಯರು 40 ಸಾವಿರ ಶ್ಲೋಕಗಳನ್ನು ರಚಿಸಿದಂತಾಯಿತು.[18]

2. ಪಾರ್ಶ್ವಾಭ್ಯುದಯ : ಇದೂ ಸಂಸ್ಕೃತದಲ್ಲಿದೆ. ಇದರಲ್ಲಿ 4 ಸರ್ಗ ಗಳಿವೆ. ಇದು ಮಂದಾಕ್ರಾಂತ ವೃತ್ತದಲ್ಲಿ ರಚಿಸಲಾದ ಒಂದು ಖಂಡಕಾವ್ಯ.[19] ಈ ಕಾವ್ಯ ಕಾಲಿದಾಸ ಕವಿಯ 'ಮೇಘದೂತ' ಕಾವ್ಯದ ಮೇಲೆ ಸಮಸ್ಯಾಪೂರ್ತಿ ರೂಪವಾಗಿ ರೂಪಗೊಂಡಿದೆ. ಮೇಘದೂತ ಕಾವ್ಯದ 364 ಮಂದಾಕ್ರಾಂತ ಪದ್ಯಗಳನ್ನು ತೆಗೆದುಕೊಂಡು ಆಯಾ ಪದ್ಯದ ಮೊದಲೆರಡು ಸಾಲುಗಳನ್ನು ಹಾಗೇ ಉಳಿಸಿಕೊಂಡು ಉಳಿದ ಚರಣಗಳನ್ನು ಬೇರೆ ರಚಿಸಲಾಗಿದೆ. ಅದರಿಂದ ಪಾರ್ಶ್ವ ನಾಥ ತೀರ್ಥಂಕರರ ಚರಿತ್ರೆ ತಿಳಿದು ಬರುವಂತೆ ಚಮತ್ಕಾರ ಮಾಡಲಾಗಿದೆ. ಈ ಮಾದರಿಯನ್ನು ಮುಂದುವರಿಸಿದ ಅನಂತರದವರು ನೇಮಿದೂತ, ಹಂಸದೂತ, ಶೀಲದೂತ ಮೊದಲಾದ ಕೃತಿಗಳನ್ನು ಬರೆದಿದ್ದಾರೆ.

3. ಪೂರ್ವಪುರಾಣ (ಆದಿಪುರಾಣ) : ಜಿನಸೇನರು ಸಮಗ್ರ ಮಹಾಪುರಾಣ ಬರೆಯಲು ತೊಡಗಿದ್ದರು. ಆದರೆ 10,380 ಶ್ಲೋಕಗಳನ್ನು ಬರೆದು ಪರಂಧಾಮವನ್ನೈದಿದರು.[20]

ಜಿನಸೇನರ ಶಿಷ್ಯರಾದ ಗುಣಭದ್ರರು ಮಹಾಪುರಾಣದ ಶೇಷ ಭಾಗವನ್ನು[21] ಬರೆದು ಪೂರೈಸಿದ್ದು ಧಾರವಾಡ ಜಿಲ್ಲೆ ಶಿಗ್ಗಾವಿ ತಾಲ್ಲೂಕಿನ ಬಂಕಾಪುರದಲ್ಲಿ[22]. ಗುಣಭದ್ರಾಚಾರ್ಯರೂ ತಮ್ಮ ಗುರು ಜಿನಸೇನಾಚಾರ್ಯರಂತೆ ಜೈನ ಸಿದ್ಧಾಂತ ಮತ್ತು ವಿವಿಧ ಶಾಸ್ತ್ರಗಳಲ್ಲಿ ನಿಷ್ಣಾತರು ; "ಆಚಾರ್ಯ ಜಿನಸೇನರ ಮತ್ತು ದಶರಥ ಗುರುಗಳ ಶಿಷ್ಯನಾದ, ಸುಪ್ರಸಿದ್ಧ ಗುಣಭದ್ರಸೂರಿಯಾದ ನಾನು ಸಂಪೂರ್ಣ ವ್ಯಾಕರಣ ಶಾಸ್ತ್ರದಲ್ಲಿ ಪಾರಂಗತನಾಗಿದ್ದೇನೆ. ಅಗಾಧವಾದ ಸಿದ್ಧಾಂತ ಸಾಗರವನ್ನು ದಾಟಿರು ವುದರಿಂದ ನನ್ನ ಬುದ್ಧಿ ಹಾಗೂ ಪ್ರತಿಭೆ ಸೂರ್ಯ ಪ್ರಕಾಶದಂತೆ ಹೊಳೆಯುತ್ತಿವೆ. ವಿದ್ಯೆ ಹಾಗೂ ಉಪವಿದ್ಯೆಗಳಲ್ಲಿ ನಿಷ್ಣಾತನಾದ ನಾನು ಪ್ರಮಾಣ ಹಾಗೂ ನಯಗಳ

ಸ್ವರೂಪವನ್ನು ಚೆನ್ನಾಗಿ ಬಲ್ಲೆ' ಎಂದು ಹೇಳಿಕೊಂಡಿದ್ದಾರೆ[23]. ಗುಣಭದ್ರಾಚಾರ್ಯರ ಮೂರು ಕೃತಿಗಳು ಉಪಲಬ್ಧವಿವೆ :

1. ಆತ್ಮಾನುಶಾಸನ : ಇದು ಸಂಸ್ಕೃತ ಭಾಷೆಯಲ್ಲಿದೆ[24]. ಇದರಲ್ಲಿ ಭರ್ತೃಹರಿಯ ವೈರಾಗ್ಯ ಶತಕದ ಶೈಲಿಯಲ್ಲಿ ರಚಿಸಿರುವ 272 ಪದ್ಯಗಳಿವೆ. ಆಚಾರ್ಯ ಪ್ರಭಾಚಂದ್ರರು ಈ ಕಾವ್ಯಕ್ಕೆ ಸಂಸ್ಕೃತದಲ್ಲೊಂದು ಟೀಕೆಯನ್ನು ಬರೆದಿದ್ದಾರೆ. ಹಿಂದಿ ಮತ್ತು ಕನ್ನಡದಲ್ಲಿಯೂ ಟೀಕೆಗಳಿವೆ.[25]

2. ಜಿನದತ್ತ ಚರಿತೆ : ಗಂಭೀರವಾದ ಸಂಸ್ಕೃತ ಶೈಲಿಯಲ್ಲಿರುವ ಈ ಕಾವ್ಯ ಅನುಷ್ಟುಬ್ ಛಂದಸ್ಸಿನಲ್ಲಿದೆ. ಇದರಲ್ಲಿ 9 ಸರ್ಗಗಳಿವೆ ; ಹಿಂದಿಗೂ ಅನುವಾದ ವಾಗಿದೆ.[26]

3. ಉತ್ತರ ಪುರಾಣ (ಮಹಾಪುರಾಣ) : ಪೂರ್ವಪುರಾಣದ ಕಡೆಯ ನಾಲ್ಕೈದು ಪರ್ವಗಳನ್ನೂ[27] ಮತ್ತು ಪೂರ್ತಿಯಾಗಿ ಉತ್ತರ ಪುರಾಣವನ್ನೂ ಹೀಗೆ ಒಟ್ಟು 9620 ಶ್ಲೋಕಗಳನ್ನು ರಚಿಸಿದ್ದಾರೆ. ಇದೊಂದು ಮಹತ್ಕಾರ್ಯ[28].

ಹಿನ್ನೆಲೆ :

ಮಹಾವೀರ ಮೊದಲಾದ ತೀರ್ಥಂಕರರ ಉಪದೇಶಸಾರ ಅನಂತರದ ಶ್ರುತಕೇವಲಿಗಳಿಂದ ಪ್ರಣೀತವಾಗಿ ಕ್ರಿ. ಪೂ.ಅಂತ್ಯದ ವೇಳೆಗೆ ಲಿಪಿಬದ್ಧವಾಯಿತು[29]. ತದನಂತರ ಬಂದ ಆಚಾರ್ಯರು ಶ್ರುತಸ್ಕಂದ (ಅನುಯೋಗ ಚತುಷ್ಟಯ) ದಲ್ಲಿ, ಮೊದಲನೆಯದಾದ ಪ್ರಥಮಾನುಯೋಗದಲ್ಲಿ ಬರುವ 63 ಜನ ಮಹಾ ಪುರುಷರ ಚರಿತೆಯನ್ನು ನಿರೂಪಿಸುತ್ತಾ ಬಂದರು. ಮಹಾಪುರಾಣ ಈ ಬಗೆಯ ನಿರೂಪಣೆಗೆ ಸೇರಿದ್ದಾಗಿದೆ. ಮಹಾಪುರಾಣಕ್ಕೊಂದು ಪರಂಪರೆಯಿದೆ ;

> ವಿರಚಿಸಿದರ್ ಮುನ್ನೆ ಮಹಾ
> ಪುರಾಣಮಂ ನೆಗಳ್ದ ಕೂಚಿಭಟ್ಟಾರಕರುಂ
> ಪರಮಶ್ರೀನಂದಿ ಮುನೀ
> ಶ್ವರರುಂ ತದನಂತರಂ ಜಿನಾಗಮ ತಿಲಕರ್ ॥ 24
> ಕವಿಪರಮೇಶ್ವರರ್ ಬರೆದುದಂ ಜಿನಸೇನ ಮಹಾಮುನಿಶರೀ
> ಯವನಿಗೆ ಪೇಳ್ದು ಮಾಣೆ ಗುಣಭದ್ರ ಮುನೀಶ್ವರರೆಯ್ದೆ ಪೇಳ್ದು ಪ
> ಲ್ಲವಿಸಿದುದಂ ತ್ರಿಷಷ್ಟಿ ಪುರುಷ ಪ್ರತಿಬದ್ಧ ಪುರಾಣಮಂ ಮಹೋ
> ತ್ಸವದೊಳೆ ಭವ್ಯಕೋಟಿಗಱಿಯಲ್ ಬರೆದಂ ಗುಣರತ್ನ ಭೂಷಣಂ ॥ 25

ಈ ಉದಾಹೃತ ಪದ್ಯಗಳೆರಡೂ ಚಾವುಂಡರಾಯ ಪುರಾಣದ್ದು (ತ್ರಿಷಷ್ಟಿ ಲಕ್ಷಣ ಮಹಾಪುರಾಣ)[30]. ಚಾವುಂಡರಾಯ ಹೇಳುವ ಪ್ರಕಾರ ಕೂಚಿಭಟ್ಟಾರಕರೂ[31] ನಂದಿಮುನೀಶ್ವರರೂ[31a] ಕವಿಪರಮೇಶ್ವರರೂ[32] ಬರೆದು ಪಲ್ಲವಿಸುತ್ತಾ ಬಂದ (63 ಜನ) ತ್ರಿಷಷ್ಟಿ ಪುರುಷ ಪುರಾಣ(ಮಹಾಪುರಾಣ)ವನ್ನು ಜಿನಸೇನ-ಗುಣ

ಭದ್ರರೂ ಹೇಳಿದರು. ಅದನ್ನು ಚಾವುಂಡರಾಯ ಕನ್ನಡದಲ್ಲಿ ಮುಂದುವರಿಸಿದ್ದಾನೆ. ಪುಷ್ಪದಂತ ಮೊದಲಾದವರು ಪ್ರಾಕೃತ ಮೊದಲಾದ ಭಾಷೆಗಳಲ್ಲಿ ಮುಂದುವರಿಸಿದ್ದಾರೆ.[33] ವಾಸ್ತವವಾಗಿ ಜಿನಸೇನರೇ ಈ ಪೂರ್ವ ಪರಂಪರೆ ಕುರಿತು ಪ್ರಸ್ತಾಪಿಸಿದ್ದಾರೆ :

ಅ. ಜಿನವಾಣಿಯಾದ ಪುರಾಣವನ್ನು ಸಂಕ್ಷೇಪಿಸಿ ಹೇಳುವೆನು[34]

ಆ. ಪ್ರಾಚೀನ ಕವಿಗಳನ್ನೇ ಹಸ್ತಾವಲಂಬನವನ್ನಾಗಿ ತಿಳಿದು ಈ ಪುರಾಣವೆಂಬ ಮಹಾಸಮುದ್ರವನ್ನು ದಾಂಟುವುದಕ್ಕೆ ಉದ್ಯತನಾಗಿದ್ದೇನೆ.[35]

ಇ. ಯಾರು ಶಬ್ದಾರ್ಥ ಸಂಗ್ರಹವುಳ್ಳ ಪುರಾಣವನ್ನು ಸಂಕ್ಷೇಪವಾಗಿ ರಚಿಸಿದರೋ ಅಂತಹ ಕವಿಶ್ರೇಷ್ಠರಾದ ಕವಿಪರಮೇಶ್ವರರು ಲೋಕದಲ್ಲಿ ಕವಿಪೂಜೆಗೆ ಯೋಗ್ಯರು.[36]

ಜೈನ ಪುರಾಣಗಳ ಪ್ರಧಾನ ಆಶಯೋದ್ದೇಶವೆಂದರೆ ಗಹನವಾದ ಧಾರ್ಮಿಕ ತತ್ವಗಳನ್ನು ಜನತೆಗೆ ತಲಪಿಸುವುದು. ಪುರಾಣಗಳೂ ಸೀಮಿತಾರ್ಥದಲ್ಲಿ ಕಾವ್ಯಗಳೇ. ಆದರೆ ವ್ಯಕ್ತಿನಿಷ್ಠ ಕಾವ್ಯಗಳಿಗಿಂತ, ರಾಮಾಯಣ ಮಹಾಭಾರತಗಳಂತಹ ಲೌಕಿಕ ಕಾವ್ಯಗಳಿಗಿಂತ, ಜೈನ ಪುರಾಣಗಳು ಭಿನ್ನವಾಗಿವೆ.[37] ಜೈನಪುರಾಣಗಳು ಧಾರ್ಮಿಕ ಕಾವ್ಯಗಳು. ರುದ್ರಭಟ್ಟನ ಜಗನ್ನಾಥ ವಿಜಯ, ಜಗನ್ನಾಥ ದಾಸರ ಹರಿಕಥಾಮೃತಸಾರ, ವೀರಶೈವ ಪುರಾಣಗಳು, ಹರಿಹರನ ರಗಳೆಗಳು ಇತ್ಯಾದಿಯಾದ ಕೃತಿಗಳೂ ಜೈನ ಪುರಾಣಗಳಂತೆ ಧಾರ್ಮಿಕ ಸ್ವರೂಪದ್ದಾಗಿವೆ.[38] ಈ ಬಗೆಯ ಧಾರ್ಮಿಕ ಕಾವ್ಯಗಳು ಕೆಲವು ನಿರ್ದಿಷ್ಟ ಕಟ್ಟುಕಟ್ಟಲೆಗಳಿಗೆ ಒಳಪಟ್ಟಿರುತ್ತವೆ. ತಮ್ಮ ಕಾವ್ಯ ಸ್ಫೂರ್ತಿಯ ಭಾವಲಹರಿಯನ್ನು ಮುಕ್ತವಾಗಿ ಹರಿಸಲು ಕವಿಗಳಿಗೆ ಇಲ್ಲಿ ಅವಕಾಶಗಳು ಕಡಮೆ ಹಾಗೂ ಇರುವ ಅವಕಾಶಗಳು ಕೂಡ ಕೆಲವು ನಿರ್ಬಂಧಗಳಿಗೆ ಒಳಗಾಗಿರುತ್ತವೆ. ಸೌಂದರ್ಯ ವರ್ಣನೆಗೆ ಎಲ್ಲಿಯೂ ನಿರ್ದಿಷ್ಟ ಗುರಿಯೂ ಇರುತ್ತದೆ. ಒಟ್ಟಿನಲ್ಲಿ ಕಾವ್ಯಶಕ್ತಿ ಗರಿಗೆದರಿ, ಲೌಕಿಕ ಕಾವ್ಯಗಳಲ್ಲಿರುವಂತೆ, ಇಲ್ಲಿ ಸ್ವಚ್ಛಂದವಾಗಿ ಉದ್ದೀಪಿಸುವಂತಿಲ್ಲ.

ಜೈನ ಪುರಾಣಗಳಲ್ಲಿನ ಸಾಮಾನ್ಯ ಚೌಕಟ್ಟು ಇಂತಿರುತ್ತದೆ : ತೀರ್ಥಂಕರನಾಗುವ ಜೀವದ ಹುಟ್ಟು ಬೆಳವಣಿಗೆ ನೆರವಾಗುವ ವ್ಯಕ್ತಿಗಳ (ತಂದೆ ತಾಯಿ ಪತ್ನಿ ಸೋದರರು ಸ್ನೇಹಿತರು ಮೊದಲಾದವರು) ಹಿಂದಿನ ಭವಗಳ ವಿವರಣೆ ಅವರ ವಿರೋಧಿಕೆಯ ವಿಕಾಸಕ್ಕೊದಗುವ ಪರೀಷಹ–ಉಪಸರ್ಗಗಳು, ಹೀಗೆ ಒದಗಿ ಬರುವ ಅಡ್ಡಿ ಆತಂಕಗಳನ್ನು ಅಪ್ರತೀಕಾರ ಭಾವನೆಯಿಂದ ತಾಳಿಕೊಂಡು ಮೆಟ್ಟಿನಿಂತ ಬಗೆ ಕರ್ಮ ತತ್ವ, ಕರ್ಮಕ್ಕೆ ಕಾರಣವಾಗುವ ಕಾರ್ಯಗಳು, ಕರ್ಮಕ್ಷಯ. ರತ್ನತ್ರಯ, ದೀಕ್ಷೆ ತಪಸ್ಸು ಪಂಚಕಲ್ಯಾಣ ಆದಿಯಾದ ಧಾರ್ಮಿಕ ಪ್ರಕ್ರಿಯೆಗಳು–ಇವಿಷ್ಟೂ ಸವಿವರವಾಗಿ ಬರುತ್ತವೆ.[39] ಒಂದು ಪುರಾಣವೆಂದರೆ ಅದೊಂದು ಜೀವದ ಊರ್ಧ್ವ

ಯಾತ್ರೆಯ ಚಿತ್ರಣ. ಜೀವ ಈ ಬಿಡುಗಡೆಯಿಂದ ಪಡೆಯುವ ಅಂತಿಮ ಪರಮ ಸುಖದ ಸ್ವರೂಪವನ್ನು ಪುರಾಣದ ಉತ್ತರಾರ್ಧ ಭಾಗದಲ್ಲಿ ಚಿತ್ರಿತವಾಗಿರುತ್ತದೆ.

ಜೈನಪುರಾಣ ಲಕ್ಷಣಗಳನ್ನು ಗರ್ಭೀಕರಿಸಿಕೊಂಡು ಉದಾತ್ತ ಮಾದರಿಯಾಗಿ ನಿಂತಿರುವ ಬೃಹತ್ ಗ್ರಂಥ ಮಹಾಪುರಾಣ. ಮಹಾಪುರಾಣದಲ್ಲಿ ನಿರೂಪಿತವಾಗಿರುವುದು 63 ಜನ ಮಹಾ ಪುರುಷರ ಚರಿತೆ, ತತ್ಸಂಬಂಧಿಯಾದ ಕಥೆ. ಜೈನಧರ್ಮದ ಪರಿಗ್ರಹಿಕೆಯಂತೆ ವರ್ತಮಾನಕಾಲದ 24 ಜನ ತೀರ್ಥಂಕರರು, 12 ಜನ ಚಕ್ರವರ್ತಿಗಳು, 9 ಜನ ನಾರಾಯಣ (ವಾಸುದೇವ)ರು, 9 ಜನ ಪ್ರತಿನಾರಾಯಣ (ವಾಸುದೇವ)ರು, 9 ಜನ ಬಲಭದ್ರರು—ಹೀಗೆ ಒಟ್ಟು 63 ಜನ ಮಹಾಪುರುಷರ ಜೀವನ ವಿವರ, ಸಾಧನೆ ಸಿದ್ಧಿಯ ನಿರೂಪಣೆ ಮಹಾಪುರಾಣಸಾರ.[40] ಮಹಾಪುರಾಣದ ಮೊದಲನೆಯ ಭಾಗವಾದ ಪೂರ್ವ ಪುರಾಣದಲ್ಲಿ ಸುದೀರ್ಘವಾದ ಪೀಠಿಕೆ, ಕುಲಂಕರರ ಚರಿತೆ, ಅನಂತರ 24 ಜನ ತೀರ್ಥಂಕರರಲ್ಲಿ ಪ್ರಥಮನಾದ ಆದಿದೇವನ (ಪುರುದೇವ, ಋಷಭದೇವ, ಆದಿನಾಥ) ಚರಿತೆ, ಆತನ ಮಕ್ಕಳಲ್ಲಿ ಪ್ರಥಮ ಚಕ್ರವರ್ತಿಯಾದ ಭರತನ ಮತ್ತು ಆತನ ತಮ್ಮನಾದ ಬಾಹುಬಲಿ (ಭುಜಬಲಿ)ಯ ಚರಿತೆ ಸವಿವರವಾಗಿ ಬಂದಿದೆ. ಇನ್ನುಳಿದ 23 ಜನ ತೀರ್ಥಂಕರರ ಹಾಗೂ ಇತರ ಮಹಾಪುರುಷರ ಚರಿತೆಯಷ್ಟೂ ಉತ್ತರ ಪುರಾಣದಲ್ಲಿದೆ.[41]

ಪಂಪನಿಗೆ ಸ್ವಧರ್ಮ ಸಂಬಂಧವಾದ ಶಾಸ್ತ್ರ ಸಾಹಿತ್ಯ ಪರಂಪರೆಯ ನಿಕಟ ಪರಿಚಯವಿತ್ತು.[42] ಹಾಗೆ ನೋಡುವುದಾದರೆ ಜಿನಸೇನ–ಗುಣಭದ್ರರ ರಚನೆಗಿಂತ ಮೊದಲಿನ ಆಗಮ ಕೃತಿಗಳನ್ನೂ ಪಂಪ ಬಲ್ಲವನಾಗಿದ್ದ :

ಪುರುದೇವಾದಿ ಜಿನೇಂದ್ರಮಾಲೆ ಗಣಭೃತ್ಸಂತಾನಮೆಂದೀ ಪರಂ
ಪರೆಯಿಂ ವಿಶ್ರುತ ವೀರಸೇನ ಜಿನಸೇನಾಚಾರ್ಯ ಪರ್ಯಂತಮಾ
ಗಿರೆ ಬಂದೀಕಥೆಗುಣ್ಬವೆತ್ತುದವರಿಂ ಜ್ಞಾನರ್ಧಿ ಸಂಪನ್ನರಿಂ
ದಿರದಾಂ ಧೃಷ್ಟನೆನೀ ಕಥಾಬ್ಧಿಯುಮನೀಸಲ್ ಮನಂದಂದೆನೋ॥[43]

ಸಮಗ್ರ ಮಹಾಪುರಾಣವೇ ಪಂಪನ ಮುಂದೆ ಹರಡಿಕೊಂಡು ಮೈ ಚಾಚಿತ್ತು. ಪಂಪ ಆ ಇಡೀ ಮಹಾಪುರಾಣವನ್ನು ಕನ್ನಡಕ್ಕೆ ತರಬಹುದಿತ್ತು. ಆತ ಹಾಗೇಕೆ ಮಾಡಲಿಲ್ಲವೆಂಬ ಪ್ರಶ್ನೆ ತೌಲನಿಕ ವಿದ್ಯಾರ್ಥಿಗೆ ಅಪ್ರಸ್ತುತವಲ್ಲ. ಅಂತಹ ಕೆಲಸ ಪಂಪನಿಗೆ ಅಗಾಧವಾಗಲಿ ಅಸಾಧ್ಯವಾಗಲಿ ಅಲ್ಲ. ಅದು ಬಹು ಸಮಯ ಹಿಡಿಯುವ, ಒಂದು ಆಯುರವಧಿಗೆ ಸೇರಿದ ಬೃಹತ್ ಕಾರ್ಯವೆಂಬುದು ನಿಜ. ವ್ಯಾಸಭಾರತವನ್ನು ಕನ್ನಡದಲ್ಲಿ ಲೀಲಾಜಾಲವಾಗಿ ಬರೆಯುವ ಈ ಕವಿಗೆ ಮಹಾಪುರಾಣವನ್ನು ಕನ್ನಡಿಸುವುದು ಅಳವಿಗೆ ಎಟಕುವ ಕಾರ್ಯವಾಗಿತ್ತು.[44] ಆದರೆ ಪಂಪ ತನ್ನ ವಿಮರ್ಶನ ಪ್ರಜ್ಞೆಯನ್ನೂ, ಸೃಜನ ಕ್ರಿಯೆ ಜಾಗೃತವಾಗಿರುವ ಕ್ಷಣಗಳಲ್ಲೂ, ಎಚ್ಚರವಾಗಿರಿಸಿಕೊಂಡಿರುವ ಅಪರೂಪದ ಕವಿ. 18 ಪರ್ವಗಳ

ವ್ಯಾಸಭಾರತದಲ್ಲಿ ಕಡೆಯ ಕೆಲವು ಪರ್ವಗಳನ್ನು ಕೈಬಿಟ್ಟಿರುವ ಪಂಪ[45] ಮಹಾಪುರಾಣದಲ್ಲೂ ಕಡೆಯ ಅರ್ಧವನ್ನು (ಉತ್ತರಾರ್ಧ) ಬಿಟ್ಟು ಮೊದಲರ್ಧವನ್ನು (ಪೂರ್ವ ಪುರಾಣ) ಮಾತ್ರ ಆರಿಸಿಕೊಂಡಿದ್ದಾನೆ. 24 ಜನ ತೀರ್ಥಂಕರರಲ್ಲಿ ಯಾವ ತೀರ್ಥಂಕರ ಚರಿತೆಯನ್ನು ಆರಿಸಿಕೊಳ್ಳುವುದು ಎಂಬುದು ಪಂಪನಿಗಿರುವ ಮುಂದಿನ ಸವಾಲಾಗಿತ್ತು. ವಸ್ತುವಿನ ಆಯ್ಕೆಯಲ್ಲಿ ಔಚಿತ್ಯಪ್ರಜ್ಞೆಯೂ ಪ್ರತಿಭೆಯೂ ಅಡಗಿರುತ್ತದೆ. ಸರಿಯಾದ ವಸ್ತುವನ್ನು ಆರಿಸಿಕೊಳ್ಳದಿದ್ದಲ್ಲಿ ಆರಂಭದಲ್ಲೇ ಎಡವಿ ಮುಗ್ಗರಿಸಿದಂತೆ ಆಗುತ್ತದೆ. ಬೃಹತ್ ಭಾವಗಳನ್ನು ವಸ್ತುಗೈದು ಮಹತ್ ಕೃತಿಗಳನ್ನು ರಚಿಸುವುದರಿಂದ ಜಗತ್ ಕವಿಗಳಾಗುತ್ತಾರೆಂಬುದು ಕುವೆಂಪು ವಾಣಿ.[46] ಆ ಬಗೆಯ ವಸ್ತು ಪರಿಭಾವನೆಯ ಕ್ಷಣಗಳಲ್ಲಿ ಪಂಪನನ್ನು ಸೆಳೆದದ್ದು ಪೂರ್ವ ಪುರಾಣ. ಅದಕ್ಕೆ ತನ್ನದೇ ಆದ ಶೋಭೆ ಔನ್ನತ್ಯ ಗಾಂಭೀರ್ಯ ಮತ್ತು ಮಾಸದ ಚೆಲುವು ಇದೆ.[47] ಅದು ಮುಂದಿನ ಎಲ್ಲ ತೀರ್ಥಂಕರರ ಪುರಾಣಗಳಿಗೆ ಬುನಾದಿ. ಅದರಿಂದ ಪಂಪ ಪ್ರತಿಜ್ಞೆ ಮಾಡುವಾಗಲೇ ಮುಂಜಾಗರೂಕತೆ ವಹಿಸಿದ್ದಾನೆ; ಇಡೀ ಮಹಾ ಪುರಾಣವನ್ನು ಕನ್ನಡಕ್ಕೆ ಕೊಡುವುದಾಗಿ ಹೇಳಲಿಲ್ಲ. ಆತ ಪೂಣ್ದುದು ಆದಿಪುರಾಣವನ್ನು ಮೂರು ತಿಂಗಳಲ್ಲಿ ಬರೆದು ಮುಗಿಸುತ್ತೇನೆಂಬುದಾಗಿ: 'ಆದಿಪುರಾಣಮುಮ್...ಪೂಣ್ದು ತೆಱದಿಂ...ಮೂಱುಂ ತಿಂಗಳೊಳೆ ಸಮಾಪ್ತಿಯಾದಂದೆನೆ'.[48]

ಪಂಪ ತನ್ನ ಕಾವ್ಯಕ್ಕೆ ವಸ್ತು ಆಯ್ಕೆಯ ಪರೀಕ್ಷೆಯಲ್ಲಿ ಪಾರಾದಂತೆ, ಕಾವ್ಯ ಮಾಧ್ಯಮದ ಆಯ್ಕೆಯಲ್ಲೂ ಉತ್ತೀರ್ಣನಾಗಿದ್ದಾನೆ. ಇದು ಕಾವ್ಯರೂಪಕ್ಕೆ (Form) ಸೇರಿದ ವಿಷಯ. ಪಂಪ ಕಾವ್ಯ ವೇದಿಕೆಯನ್ನು ಹತ್ತುವ ವೇಳೆಗೆ ಕನ್ನಡದಲ್ಲಿ ಮಹಾಕಾವ್ಯಗಳು ರಚಿತವಾಗಿದ್ದುವು.[49] ಗದ್ಯ ಕಾವ್ಯಗಳೂ ಪದ್ಯ ಕಾವ್ಯಗಳೂ ಗದ್ಯ–ಪದ್ಯ ಸಮ್ಮಿಶ್ರ ಕಾವ್ಯಗಳೂ, ಬೆದಂಡೆ–ಚತ್ತಾಣ–ಓವನಿಗೆ–ಒನಕೆವಾಡು ಎಂದು ಮಾರ್ಗಪದ್ಧತಿಯೂ ದೇಸಿ ಕಾವ್ಯಪದ್ಧತಿಯೂ ಸಿದ್ಧವಾಗಿತ್ತು. ಅವುಗಳಲ್ಲಿ ಚಂಪೂ ಕಾವ್ಯಪದ್ಧತಿ ಹೆಚ್ಚು ಪ್ರತಿಷ್ಠಿತವಾಗತೊಡಗಿತ್ತು. ಇವುಗಳಲ್ಲಿ ಒಂದರ ಆಯ್ಕೆ ಪ್ರಶ್ನೆ ಬಂದಾಗ ಪಂಪ ಚಂಪೂ ರೂಪವನ್ನೇ ಆರಿಸಿಕೊಂಡಿದ್ದು ಅವನ ಯೋಗ್ಯತೆಗೂ ಯೋಗ್ಯವಾಗಿದೆ. ಆದಿಪುರಾಣದ ವಸ್ತುವಿಗೆ ಚಂಪೂರೂಪ ಹೇಳಿ ಮಾಡಿಸಿದಂತೆ ಹೊಂದಿಕೊಂಡಿದೆ. ಜತೆಗೆ ಮಹಾಪುರಾಣ ಪೂರ್ತಿ ಶ್ಲೋಕ ರೂಪದಲ್ಲಿದ್ದು ಒಂದೇ ಬಗೆಯ ರಚನೆಯಿಂದ ಏಕತಾನತೆಯಿದೆ. ಅದನ್ನು ತಪ್ಪಿಸಿ ಪಂಪ ಗದ್ಯ–ಪದ್ಯಗಳ, ಪದ್ಯಗಳಲ್ಲಿ ವೃತ್ತ ಕಂದ ರಗಳೆ ಅಕ್ಕರ ತ್ರಿಪದಿ ಎಂದು ವೈವಿಧ್ಯ ತುಂಬಿದ್ದಾನೆ.

ಒಂದು ದೊಡ್ಡ ಕಾವ್ಯದ ವಸ್ತು ಮತ್ತು ರೂಪ ಯಾವುದಿರಬೇಕೆಂಬುದರೊಂದಿಗೇ ನಿರ್ಧರಿಸಿಕೊಳ್ಳಬೇಕಾದ, ಕಾವ್ಯ ರಚನೆಗೆ ಸಂಬಂಧಿಸಿದ ಇನ್ನೊಂದು

ವಿಷಯ ಭಾಷೆಗೆ ಸೇರಿದ್ದು. ಇದು ಅಭಿವ್ಯಕ್ತಿ ಸಾಧ್ಯವಂದ, ಭಾಷಾ ಶರೀರದ ಪ್ರಶ್ನೆ. ಪಂಪ ಉಭಯ ಭಾಷೆಗಳಲ್ಲೂ ಸಮಾನ ಶಕ್ತಿಯಿರುವ ಪ್ರತಿಭಾಶಾಲಿ, ಸಂಸ್ಕೃತದಲ್ಲೇ ಆದಿಪು.ವನ್ನು ಪುನರ್ ರಚಿಸುವ ಸಾಮರ್ಥ್ಯವೂ ಆತನಿಗಿತ್ತು.[50] ಒಂದುವೇಳೆ ಪಂಪ ಸಂಸ್ಕೃತದಲ್ಲೇ ಬರೆದಿದ್ದರೆ ಏನಾಗುತ್ತಿತ್ತು ? ಸಂಸ್ಕೃತಕ್ಕೆ ಮಹದ್ ಲಾಭವೂ ಕನ್ನಡಕ್ಕೆ ದೊಡ್ಡ ನಷ್ಟವೂ ಆಗುತ್ತಿತ್ತು. ಆದರೆ ಪಂಪ ಸಂಸ್ಕೃತ ಅಥವಾ ಪ್ರಾಕೃತ ಭಾಷೆಯನ್ನು ಪಕ್ಕಕ್ಕೆ ಸರಿಸಿ ಕನ್ನಡ ಭಾಷೆಯನ್ನೇ ಆರಿಸಿಕೊಂಡು ಅಲ್ಲಿಯೂ, ಆ ಕಾಲದ ಸಂದರ್ಭದಲ್ಲಿಯೂ, ಔಚಿತ್ಯ ಪ್ರಜ್ಞೆಯನ್ನು ಪ್ರಕಟಿಸಿದ್ದಾನೆ. ಕನ್ನಡ ಭಾಷೆ ಮಹಾಕಾವ್ಯಗಳ ಭಾಷೆಯಾಗಿತ್ತು, ಪಂಪನಂಥ ಮಹಿಮಾನ್ವಿತನ ಬರುವಿಕೆಗಾಗಿ ನಡೆಮಡಿ ಹಾಸಿ ಸಿದ್ಧವಾಗಿತ್ತು. ಕಾವ್ಯ ಸೂಕ್ಷ್ಮಗಳನ್ನೂ ಭಾಷಾ ಸೂಕ್ಷ್ಮಗಳನ್ನೂ ನಾಡಿ ಹಿಡಿದು ನೋಡುವ ನಿಪುಣ ಕವಿಯಾದ ಪಂಪನ ಸಾಧನೆ ಕನ್ನಡದ ಸಾಧನೆಯೂ ಹೌದು. ಕನ್ನಡ ಭಾಷೆಯ ಸಾಧ್ಯತೆಗಳನ್ನೂ, ಚಂಪೂ ರೂಪದ ಸಾಮರ್ಥ್ಯ ಸಮಸ್ತವನ್ನೂ, ಹಾಗೆಯೇ ಆದಿಪುರಾಣ ವಸ್ತುಗರ್ಭದಲ್ಲಡಗಿದ ಸೂಕ್ಷ್ಮ ಶ್ರೀಯನ್ನೂ ಸರಿಸಮನಾಗಿ ಸೂರೆಗೈದ ಮಹಾ ಸಾಹಸಿ ಪಂಪ.[51]

ಈ ಕನ್ನಡ ಆದಿಪು. ಆ ಸಂಸ್ಕೃತ ಪೂರ್ವಪು.ಕ್ಕೆ ಋಣಿ. ಇದರ ವಸ್ತು, ವಿಷಯದ ದೃಷ್ಟಿಯಿಂದ, ಪುರಾತನವಾದುದು, ಜಿನಸೇನರದು, ಪರಂಪರೆಯಿಂದ ಬಂದದ್ದು. ಆದರೆ ಅದನ್ನು ಮಹಾಕಾವ್ಯದ ಸೌಷ್ಠವದಲ್ಲಿ ಪ್ರತಿಪಾದಿಸಿರುವ ಕೌಶಲ, ಉದ್ದಕ್ಕೂ ಮಿಂಚಿರುವ ಕವಿ ಪ್ರತಿಭೆ, ಪಂಪನ ಸ್ವಯಾರ್ಜಿತ ಕೊಡುಗೆ. ಮೂಲ ಶಿಲ್ಪ ಆ ಜಿನಸೇನರದೇ : ಅದರ ಅವಯವ, ಆಭರಣ, ಮಾಟದ ತಿದ್ದಾಣಿಕೆ, ಸೂಕ್ಷ್ಮ ಕುಸುರಿ ಕೆಲಸ–ಇವು ಪಂಪನದು. ಸಂಸ್ಕೃತ ಪೂರ್ವಪು. ದ ಹಳೆಯ ಕಥೆ ಕನ್ನಡದ ಜಾಯಮಾನಕ್ಕೆ ತಕ್ಕಹಾಗೆ ಸೃಜನಾತ್ಮಕವಾಗಿ ಮರುಹುಟ್ಟು ಪಡೆದುಕೊಳ್ಳುವಲ್ಲಿ ಪಂಪನ ಸೃಜನ ಸಾಮರ್ಥ್ಯ ಹೇಗೆ ಪ್ರಕಟವಾಗಿದೆಯೆಂಬುದನ್ನು ವಿವೇಚಿಸುವುದು ತೌಲನಿಕ ಸಾಹಿತ್ಯಕ್ಕೆ ಸೇರಿದ್ದು. ಏಕೆಂದರೆ ಸಂ.ಪೂರ್ವಪು. ಪಂಪನಿಗೆ ವಸ್ತು ಆಕರವೇ ಹೊರತು ಸಮಸ್ತವಲ್ಲ: ವಿಮಾನ ಮೇಲೇರಲು ನೆಲ ಬೇಕು, ಹಾರುವುದು ಆಕಾಶದಲ್ಲಿ. ಪಂಪ ಪೂರ್ವಪು.ದ ಕಥಾ ಭಾಗವನ್ನು ಆಧರಿಸಿದ್ದಾನೆಂಬುದು ನಿಜ. ಆದರೆ ಅದನ್ನು ಉದ್ದಕ್ಕೂ ಯಥಾವತ್ತಾಗಿ ಶಬ್ದಕ್ಕೆ ಶಬ್ದವಿಟ್ಟು ಭಾಷಾಂತರಿಸಿಲ್ಲ[52] ಕ ಆದಿಪು. ಒಂದು ಸ್ವಚ್ಛಂದ ಪರಿವರ್ತನ (Free rendering). ಕವಿಯು ಕಾವ್ಯ ಶಕ್ತಿ ಪ್ರಕಟನೆಗೆ ಇದ್ದ ಅವಕಾಶವನ್ನು ಉಪಯೋಗಿಸಿಕೊಂಡಿದ್ದಾನೆ. ಜತೆಗೆ ಇದು ಪಂಪನ ಸಂಗ್ರಹ ಶಕ್ತಿಗೂ ನಿಕಷ ; ಕತೆಯ ಮೆಯ್ ಕಿಡಲೀಯದೆ ಮಾಡಿರುವ ಈ ಸಂಗ್ರಹ 'ಅದ್ಭುತ' ಎನಿಸುವ ಹಾಗಿದೆಯೆಂದು ವಿಮರ್ಶಕರ ಮುಕ್ತ ಪ್ರಶಂಸೆಯನ್ನು ಪರಿಶೀಲಿಸಬೇಕಾಗುತ್ತದೆ.

ಈ ಹಿನ್ನೆಲೆಯನ್ನು ಅರಿತ ಮೇಲೆ ತೌಲನಿಕ ಅಧ್ಯಯನಕಾರರು ಗುರುತಿಸಬೇಕಾದುದು–ಪಂಪ ಮೂಲವನ್ನು ಎಲ್ಲಿ ಸಂಗ್ರಹಿಸುತ್ತಾನೆ, ವಿಸ್ತರಿಸುತ್ತಾನೆ, ಹಾಗೇಕೆ ಮಾಡಬೇಕಾಯಿತು, ಅದರ ಮಹತ್ವವೇನು, ಸಂಗ್ರಹಿಸಿದ್ದರಿಂದ ಅಥವಾ ಕೈಬಿಟ್ಟಿದ್ದರಿಂದ ಅಥವಾ ಪರಿವರ್ತಿಸಿದ್ದರಿಂದ ಆಗಿರುವ ಪರಿಣಾಮ ಯಾವ ಸ್ವರೂಪದ್ದು–ಇವನ್ನು ಧಾರ್ಮಿಕ ಪರಿಕಲ್ಪನೆಗಳಿಂದ ಕೂಡಿದ ಆದಿಪು. ದ ವಸ್ತುವಿನೊಳಗೇ ಕುಳಿತ ಚೆಲುವಿನ ತಾಣಗಳನ್ನು ಪಂಪ ಮೊದಲು ಪತ್ತೆಹಿಡಿದ. ಅಂಥ ಸೊಗದ ತಾಣಗಳು ಕಾವ್ಯಪ್ರೇಮಿಗಳ ಆಸ್ವಾದನೆಯ ನಲ್‌ದಾಣ ಹಾಗೂ ನಿಲ್‌ದಾಣವಾಗುವಂತೆ ಮಾಡಿದ. ಜತೆಗೆ ಅವನ್ನು ಕನ್ನಡ ಕಾವ್ಯ ಪರಂಪರೆಗೆ ಕಸಿಗೊಳಿಸಿ, ಆ ಮೂಲಕ ಕಥಾ ನಿರೂಪಣೆಗೆ ಒಟ್ಟಂದದ ಸೊಗಸು ತಂದ.

ಮಹಾಪು. ಮತ್ತು ಕ. ಜೈನಪು.ಗಳನ್ನು ತೌಲನಿಕವಾಗಿ ತೂಗಿ ನೋಡುವ ಪ್ರಯತ್ನಗಳು ಪರಿಮಿತ ಪ್ರಮಾಣದಲ್ಲಷ್ಟೇ ನಡೆದಿವೆ. ಜಿನಸೇನರ ಪೂರ್ವಪು. ದೊಂದಿಗೆ ಪಂಪನ ಆದಿಪು. ವನ್ನು ಹೋಲಿಕೆ ಮಾಡಿರುವ ಕೆಲವು ಲೇಖನಗಳಿವೆ.[53] ನೀಲಾಂಜನೆಯ ನಾಟ್ಯ ಪ್ರಕರಣ ಪಂಪನ ನಿರ್ಮಾಪಕ ಗುಣ ಪ್ರದರ್ಶನಕ್ಕೆ ದಿವ್ಯ ಸಾಕ್ಷಿಯೆಂಬುದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಸಹಜವಾಗಿಯೇ ಇದುವರೆಗಿನ ತೌಲನಿಕ ಲೇಖನಗಳೆಲ್ಲ ಬಹುಪಾಲು ನೀಲಾಂಜನೆ ನೃತ್ಯ ಪ್ರಕರಣವನ್ನು ಕೇಂದ್ರವಾಗಿರಿಸಿಕೊಂಡು ಪಂಪನ ಹಿರಿಮೆಯನ್ನು ಕೊಂಡಾಡುವುದರಲ್ಲಿ ಆಸಕ್ತವಾಗಿವೆ.[54] ಇದು ಬಿಟ್ಟರೆ ಭರತ-ಬಾಹುಬಲಿ ಹೋರಾಟ ಪ್ರಸಂಗಕ್ಕೆ ಕೆಲವರು ಗಮನ ಕೊಟ್ಟಿದ್ದಾರೆ;[55] ಜನ್ಮಾಭಿಷೇಕ, ಸ್ವಯಂಬುದ್ಧೋಪದೇಶ, ಲಲಿತಾಂಗ-ಸ್ವಯಂಪ್ರಭೆ ಮತ್ತು ಶ್ರೀಮತಿ-ವಜ್ರಜಂಘರ ಪ್ರಣಯ ಕಥೆ-ಇವನ್ನು ಪ್ರಾಸಂಗಿಕವಾಗಿ ಹೆಸರಿಸಿದ್ದಾರೆ.[56] ಪಂಪನ ಸ್ವೋಪಜ್ಞವೂ ವಿಲಕ್ಷಣವೂ ಅಸಾಧಾರಣವೂ ಆದ ಕಾವ್ಯ ಶಕ್ತಿಯನ್ನು ಪ್ರಕಟಿಸುವ ಇನ್ನೂ ಹತ್ತಾರು ಪ್ರಸಂಗಗಳಿವೆ. ಅವುಗಳಲ್ಲಿ ಒಂದೆರಡನ್ನು ಈ ತೌಲನಿಕ ಲೇಖನದಲ್ಲಿ ಪ್ರಸ್ತಾಪಿಸಲಾಗುವುದು.

ಪ್ರವೇಶ

'ಸಂಸಾರ ಸಾರೋದಯ' ನಾದ ಪಂಪ 'ಕವಿತಾಗುಣಾರ್ಣವ'ನೂ ಆಗಿದ್ದಾನೆ. ಕವಿಯ ಈ ಎರಡೂ ಬಗೆಯ ಸ್ವಭಾವ ಆದಿಪು. ದ ಆರಂಭದಲ್ಲಿಯೇ ಉತ್ಕಟವಾಗಿ ಪ್ರಕಟವಾಗಿದೆ. ಮೋಕ್ಷದೊಂದಿಗೆ ಅರ್ಹತ್ ಪದವಿಯನ್ನೂ ಪಡೆಯುವ ಅರ್ಹತೆಯನ್ನು ಸಂಪಾದಿಸಿಕೊಂಡ ಜೀವದ ವಿಕಾಸವನ್ನು ಹಲವು ಮಜಲುಗಳಲ್ಲಿ ಚಿತ್ರಿಸಲಾಗಿದೆ. ಆ ಬೆಳವಣಿಗೆಯ ರೂಪ ರೇಖೆಗಳೆಲ್ಲ ಜಿನಸೇನರ ಪೂರ್ವಪು. ದಲ್ಲಿವೆ. ಜಿನಸೇನರ ಸುವರ್ಣರೇಖೆಗಳಿಗೆ ಮತ್ತಷ್ಟು ಹೂ-ಬಳ್ಳಿ ಬಿಡಿಸಿ ಚಿತ್ತಾರದಿಂದ ಸಾಲಂಕೃತವನ್ನಾಗಿಸಿ, ಅಲ್ಲಲ್ಲಿ ಉತ್ಕೃಷ್ಟ ಹದಗಳನ್ನು ಕೀಲಿ

ಸುವ ಕುಸುರಿ ಕೆಲಸದ ಕಲಾನೈಪುಣ್ಯ ಪಂಪನದು. ಪೂರ್ವಪು.ಕ್ಕೆ ಸಂವಾದಿಯಾಗಷ್ಟೇ ಸ್ಪಂದಿಸುವುದಕ್ಕೆ ಆದಿಪು. ಸೀಮಿತವಾಗಿಲ್ಲ. ಮೂಲಕ್ಕೆ ನಿಷ್ಠನಾಗಿ ಜಿನಸೇನರೊಡನೆ ಹೆಜ್ಜೆ ಹಾಕುತ್ತಾ ಕಾವ್ಯ ಪಥದಲ್ಲಿ ಪಂಪ ಇನ್ನೂ ಮುಂದೆ ಸಾಗುತ್ತಾನೆ. ಅನೇಕ ಕಡೆ ಸ್ಫೂರ್ತಿಯ ಕ್ಷಣಗಳಲ್ಲಿ ಪಂಪ ಜಿನಸೇನರ ಭುಜವೇರಿ ಕುಳಿತು ಬಿಡುತ್ತಾನೆ. ಹೀಗೆ ಜಿನಸೇನರ ಹೆಗಲು ಹತ್ತಿರುವ ಕಡೆಗಳಲ್ಲಿ ಪಂಪ ಜಿನಸೇನರಿಗಿಂತ ದೂರದವರೆಗೆ ಕಾಣಬಲ್ಲ ಅನುಕೂಲ್ಯ ಪಡೆದಿರುವುದರೊಂದಿಗೆ ಅವರಿಗಿಂತ ಎತ್ತರವಾಗಿಯೂ ಕಾಣಿಸುತ್ತಾನೆ. ಇಂಥ ಎಡೆಗಳಲ್ಲೆಲ್ಲಾ ಧರ್ಮ ಹಿಂದೆ ಸರಿದು ಕಾವ್ಯದ ತೇರು ಮುಂದೆ ಹೋಗುತ್ತದೆ.

ಕಾವ್ಯಾರಂಭದಲ್ಲಿಯೇ ಪಂಪ ತಂದುಕೊಂಡಿರುವ ಸೌಷ್ಠವವೆಂದರೆ ಆದಿತೀರ್ಥಂಕರನ ಭವಾವಳಿಗೆ ಸಾಣೆ ಹಿಡಿದದ್ದು. ಪುರುದೇವನ ಹಿಂದಿನ ಹತ್ತು ಭವಗಳು ಪಂಪನ ಕಲ್ಪನೆಯ ಅಮೃತ ಸ್ಪರ್ಶದಿಂದ ಪರಿಷ್ಕೃತಗೊಂಡು ನವೋಜ್ವಲವಾಗಿವೆ. ಆರಂಭದ ಭವಗಳಲ್ಲಿ ಪ್ರಣಯ ಅಂಕುರಿಸಿ, ಪಲ್ಲವಿಸಿ ಪರಾಕಾಷ್ಠ ಸ್ಥಿತಿಗೇರಿ, ಅನಂತರದ ಭವಗಳಲ್ಲಿ ಭೋಗತೃಷ್ಣೆ ಶಿಖರ ಸ್ಥಿತಿಯಿಂದ ಇಳಿಮುಖವಾಗುತ್ತ ಬಯಲಾಗುವುದನ್ನು ಸ್ವಾರಸ್ಯಪೂರ್ಣವಾಗಿ ಪಂಪ ಪುನರ್ ಸಂಯೋಜಿಸಿದ್ದಾನೆ. ಈ ಆರೋಹಣ ಮತ್ತು ಅವರೋಹಣ ಚಿತ್ರಣ ಅತ್ಯಂತ ಸಹಜವಾಗಿ ಸಂಭವಿಸಿದಂತಿರುವುದು ಪಂಪನ ಸ್ವಾಭಾವಿಕ ಸಾಮರ್ಥ್ಯಕ್ಕೆ ಸಾಕ್ಷಿ. ಆದಿದೇವನ ಮೊತ್ತಮೊದಲಿನ ಭವದಿಂದಲೇ ಪಂಪನ ಈ ಕಾಣ್ಕೆ ಅಡಿಯಿಡತೊಡಗಿದೆ. ಜಯವರ್ಮನಾಗಿದ್ದ ಭವದ ವರ್ಣನೆ ಪೂರ್ವಪು.ದಲ್ಲಿ ಅನಿಶ್ಚಿತ ಅಚಿಂತಿತ ರೀತಿಯಲ್ಲಿ ಬಂದು ಹಾದುಹೋಗುತ್ತದೆ.[17] ಪಂಪ ಅದರ ಜೀವನಾಡಿ ಹಿಡಿದು ಒಳಹೊಕ್ಕು ಅದಕ್ಕೊಂದು ಮರು ಹುಟ್ಟನ್ನು ಕರುಣಿಸಿದ್ದಾನೆ.

"ಶ್ರೀಷೇಣನೆಂಬ ರಾಜನು ಹಿರಿಯಮಗ ಜಯವರ್ಮನನ್ನು ಕೈಬಿಟ್ಟು ಕಿರಿಯ ಮಗನಿಗೆ ಪಟ್ಟ ಕಟ್ಟಿದನು. ಆಮೇಲೆ ಜಯವರ್ಮನು ತನ್ನ ಪಾಪವನ್ನು ನಿಂದಿಸುತ್ತ ಪರಮವೈರಾಗ್ಯಹೊಂದಿ ದೀಕ್ಷೆ ಪಡೆದನು. ನವೀನವಾಗಿ ಮಹಾವ್ರತವನ್ನು ತೆಗೆದುಕೊಂಡ ಈ ಜಯವರ್ಮ ಮುನಿಯು ಆಕಾಶದಲ್ಲಿ ವೈಭವದಿಂದ ಹೋಗುತ್ತಿದ್ದ ಮಹೀಧರನೆಂಬ ವಿದ್ಯಾಧರ ರಾಜನನ್ನು ಕಣ್ಣೆತ್ತಿನೋಡಿ ನಿದಾನವುಳ್ಳವನಾದನು. ಇನ್ನೊಂದು ಜನ್ಮದಲ್ಲಿ ಮಹಾವಿದ್ಯಾಧರನ ಆ ಭೋಗಗಳೆಲ್ಲ ತನಗುಂಟಾಗಲೆಂದು ಧ್ಯಾನಿಸಿದ ಈ ಜಯವರ್ಮಮುನಿಗೆ ಹುತ್ತದಿಂದ ಹೊರಟ ಒಂದು ಭಯಂಕರವಾದ ಸರ್ಪವು ಕಚ್ಚಿತು. ಅವನು ಭೋಗಗಳನ್ನಿಚ್ಛಿಸಿ ಪ್ರಾಣ ಬಿಟ್ಟು ಮಹಾಬಲನಾಗಿ ಹುಟ್ಟಿ ಈಗ ಭೋಗಗಳನ್ನು ಅನುಭವಿಸುತ್ತಿದ್ದಾನೆ" ಎಂದು ಜಿನಸೇನರ ವಿವರಣೆಯಿದೆ.[18] ಜಿನಸೇನರು ಸ್ಥಿತಪ್ರಜ್ಞನೆಲೆಯಲ್ಲಿ ಚಲಿಸುತ್ತಾರೆ. ರಾಗಭಾವ ಜರ್ಝರಿತ ಮಾನವನ ಭಾವಕೋಶವನ್ನು ನಿರ್ಲಿಪ್ತ ನಡಿಗೆ

ಯಲ್ಲಿ ದಾಟಿಸುವುದು ಪಂಪನಿಗೆ ಸರಿಕಾಣಿಸುವುದಿಲ್ಲ. ತನ್ನನ್ನು ಬಿಟ್ಟು ತಮ್ಮನಿಗೆ ಕ್ರಮಪ್ರಾಪ್ತ ರಾಜ್ಯ ಪದವಿಯನ್ನು ಒಪ್ಪಿಸಿದಾಗ ಅಣ್ಣನಲ್ಲುಂಟಾಗಿರಬಹುದಾದ ಪ್ರತಿಕ್ರಿಯೆಯನ್ನು ಸಮರ್ಥ ಮನೋವಿಜ್ಞಾನಿಯಂತೆ ಪಂಪ ಮೆರಗಿನಿಂದ ದಾಖಲಿಸಿದ್ದಾನೆ :

ವ ॥ ಆ ಜಯವರ್ಮನುಮವಮಾನ ಪವಮಾನಾವಧೂತನಾಗಿ ಪೋಗಿ
ಪ್ರಭು ಕಿಱಿಯಾತನಂ ನಿಱಿಸಿ ರಾಜ್ಯದೊಳಿನ್ನನವಸ್ತು ಮಾಡಿ ಪೂ
ಣ್ದಭಿಭವಮಾಗಳೀಭವದೊಳಿಂತಿದು ನೀಗದು ರಾಜ್ಯಲಕ್ಷ್ಮಿಗ
ನ್ಯಭವದೊಳಪ್ಪೊಡಂ ನೆಱೆಯೆ ನೋಂಪೆನೆನುತ್ತೆ ಜಗನ್ನುತ ಸ್ವಯಂ
ಪ್ರಭು ಗುರುಪಾದ ಮೂಲದೊಳೆ ಕೊಂಡನಖಂಡಿತ ಜೈನದೀಕ್ಷೆಯಂ ॥[59]

ಇದು ಪಂಪನ ಸ್ವಯಾರ್ಜಿತ ಸ್ವತ್ತು. ಇಲ್ಲಿಂದ ಮುಂದಿನ ಭಾಗದಲ್ಲಿ ಕೂಡ ಮೂಲಕ್ಕಿಂತ ಪಂಪ ಹೇಗೆ ಮಿಂಚಿದ್ದಾನೆಂಬುದನ್ನು ನೋಡಬಹುದು. ಜಯವರ್ಮನಿಗೆ ಹುತ್ತದಿಂದ ಹೊರಟ ಹಾವು ಕಚ್ಚಿದ್ದೇಕೆಂಬುದು ಪೂರ್ವಪು.ದಲ್ಲಿ ಸಕಾರಣವಾಗಿ ನಿರೂಪಿತವಾಗಿಲ್ಲ. ಹುತ್ತದ ಹತ್ತಿರ ಆತ ಹೋದದ್ದೇಕೆ, ಹಾವು ಕಚ್ಚಿದ್ದೇಕೆ ಎಂಬ ಪ್ರಶ್ನೆಗಳಿಗೆ ಅಲ್ಲಿ ಸಮಾಧಾನ ಸಿಗುವುದಿಲ್ಲ.[60] ಈ ಸೂಕ್ಷ್ಮವನ್ನು ಮನಗಂಡ ಪಂಪ, ಇಲ್ಲಿರುವ ಅಸ್ಪಷ್ಟತೆಯನ್ನು ನಿವಾರಿಸಿ, ಸಂಶಯಗಳಿಗೆ ತೃಪ್ತಿಕರವಾದ ಉತ್ತರವಿತ್ತಿದ್ದಾನೆ. ಅಲ್ಲದೆ ಆಕಾಶದಲ್ಲಿ ಹಾರಿಬರುವ ಚೆಲುವಿನ ವಿಮಾನ ನೋಡಿ ಆಸೆಪಟ್ಟಾದಮೇಲೆ ಹಾವು ಕಚ್ಚಿತೆಂದು ಸಂ.ದಲ್ಲಿರುವುದನ್ನು ಪಂಪ ಸ್ಥಳಾಂತರಿಸಿದ್ದಾನೆ.[61] ಹಾವು ಕಚ್ಚಿದ್ದಾದ ಮೇಲೆ ನೋವಿನ ನಡುವೆ, ಕಣ್ಗಸದಳವಾದ ಲೀಲೆಯಿಂದ ತೇಲುವ ವಿಮಾನ ನೋಡಿ ಹಂಬಲಿಸುತ್ತಾನೆಂಬ ಬದಲಾವಣೆ ಅರ್ಥಗರ್ಭಿತವಾಗಿದೆ ; ಹಾವು ಕಚ್ಚಿ ಸಾಯುತ್ತಿರುವಾಗಲೂ ಇಂದ್ರಿಯಗಳು ಸುಖವನ್ನೇ ಇಚ್ಛಿಸುತ್ತವೆಂಬ ಧ್ವನಿ ಪರಿಭಾವ್ಯವಾಗುತ್ತದೆ :

[ಜಯವರ್ಮಂ] ಅಂತು ಜಾತರೂಪಧರನಾಗಿ ತನ್ನ ಪಱಿದು ಬಿಸುಟ ಸಹಸ್ರ ಕುಂತಳಂಗಳಂ ತೆಮಳ್ದಿಕೊಂಡುಯ್ದು ಮಡಗಿಡಲೆಂದು ಪುತ್ತಿನೊಳಗೆ ಕುತ್ತಿದ ಕಯ್ಯನಾಗಳೆ ಭೋಂಕನೆಗೆತರ್ಪ ಮಹೋರಗಂ ಪಲ್ಗಳೞ್ವಡೆಕೊಂಡುದು ಆ ಪ್ರಸ್ತಾವದೊಳ್

ಎಸೆವವಿಮಾನ ಘಂಟಿಗಳ ಮೆಲ್ಲುಲಿ ಕಿನ್ನರಗೇಯದೊಳ್ ಪೊದ
ೞ್ದಸೆಯೆ ವಿಚಿತ್ರ ಪಾತ್ರ ಪರಿವರ್ತನಮುಣ್ಮುವ ತೂರ್ಯನಾದದೊಳ್
ಪೊಸಯಿಸೆ ಸೋಂಕಿನೊಳ್ ನಲಿವ ನಲ್ಲಳಲಂಪನೊಡರ್ಚೆ ಲೀಲೆ ಕ
ಣ್ಗಸದಳಮಾಗೆ ಪಾಱುವ ಮಹೀಧರನೆಂಬ ವಿಯಚ್ಚರೇಂದ್ರನಂ ॥

ಭೋಂಕನೆ ಕಂಡು ವಿಷಮವಿಷಧರವಿಷಪೂರಿತಶರೀರಮನೊಯ್ಯನೊಯ್ಯನೆ ಆಱಸಿ ಬಂದು ಕಿವಿಯೊಳ್ ಪಳಂಚಲೆರ್ದೆಯುಂ ಪಿಡಿದಲುಗುವ ಸೀಯನಪ್ಪಗೀತತಾತೋದ್ಯನಾದಕ್ಕಮಿದಿರೊಳೆ ಕಣ್ಗೆವಂದು ಬಗೆಯನುಱೆ ಸೆಱೆವಿಡಿದ ವಿದ್ಯಾಧರ ವಿಳಾಸಕ್ಕಂಬೆಕ್ಕಸಂಬಟ್ಟೀಗಳಿನ್ನ ತಪಂಬಟ್ಟ ಫಲಮುಂಟಕ್ಕುಮಪ್ಪೊಡೆ ವಿದ್ಯಾಧರನಪ್ಪೆನಕ್ಕೆಂದಾ ವಿದ್ಯಾಧರ ವಿಮಾನಮಂ ನೋಡಿ

ಅಲ್ಲಿಯೆ ಕಣ್ ಪಳಂಚಿ ಮನಮಲ್ಲಿಯೆ ಕೀಲಿಸೆ ನೆಟ್ಟು ಮೆಚ್ಚುತ
ಳ್ತಲ್ಲಿಯೆ ಸೋಲ್ತು ಪತ್ತೆ ಗತಜೀವಿತನಾಗವಿವೇಕದಿಂ ತಪೋ
ವಲ್ಲಿಯೊಳಪ್ಪನಲ್ಪ ಸುಖಮೆಲ್ಲಿಮನಲ್ಪಸುಖಕ್ಕೆ ಮಾಜಿ ಬಂ
ದಿಲ್ಲಿ ನಿದಾನದಿಂದತಿಬಳಂಗೆ ಮಹಾಬಳನಾಗಿ ಪುಟ್ಟಿದಂ ॥[62]

ಪಂಪನ ಅದ್ಭುತ ಚಿತ್ರಕ ಶಕ್ತಿ ಕೆತ್ತಿದ ಪ್ರತಿಮೆಗಳಂತಿರುವ ಈ ಎರಡು ವೃತ್ತಪದ್ಯಗಳೂ ಮೂಲದ ಅನುಕರಣ ಅಥವಾ ಅನುವಾದವಾಗಿರದೆ, ಕನ್ನಡಕವಿ ಹೊಸ ಭಾವನೆ ಕಲ್ಪನೆಗಳಿಗೆ ಜನ್ಮ ಕೊಡುವ ತಾಯಿ ಆಗುತ್ತಾನೆಂಬುದನ್ನು ಸಾರುತ್ತವೆ. ಜಯವರ್ಮನ ಅಂತರಾಳದೊಳಕ್ಕೆ ಭೋಗ ಜೀವನದ ಪ್ರಬಲವಾದ ಕಾಂಕ್ಷೆ ಬೇರು ಬಿಟ್ಟು ಇಳಿಯುವುದನ್ನು ಪಂಪ ಚಿತ್ರಿಸಿರುವ ರೀತಿ ಅನನ್ಯವಾಗಿದೆ. ಆ ಭವ್ಯಜೀವ ಹೀಗೆ ಜಯವರ್ಮ ಭವದಲ್ಲಿ ಸೆರಗಿಗೆ ಕಟ್ಟಿಕೊಂಡ ಭೋಗದ ಬಯಕೆ ಮತ್ತೆ ಬಿಡಿಸಿಕೊಂಡು ಆರಿ ಆವಿಯಾಗಲು ಆರೇಳು ಜನ್ಮ ಬೇಕಾಯಿತೆಂಬುದು ಮುಂದಿನ ರಮ್ಯ ಕಥಾನಿರೂಪಣೆಯಲ್ಲಿದೆ.

ಜಯವರ್ಮ ಭವದ ಅನಂತರದ ಜನ್ಮವೇ ಮಹಾಬಲಖೇಚರೇಂದ್ರ ಭವ. ಜಿನಸೇನರ ಪೂರ್ವಪು.ದಂತೆ ಪಂಪನ ಆದಿಪು.ವೂ ಅನಾವರಣಗೊಳ್ಳುವುದು ಈ ಮಹಾಬಲನಿಂದ.[63] ಮಹಾಬಲನ ತಂದೆ ಅತಿಬಲರಾಜನು ವೈರಾಗ್ಯಪರನಾದುದನ್ನು ಮೂಲವಲ್ಲಿ ಸಕಾರಣವಾಗಿ ಸ್ಥಾಪಿಸಿಲ್ಲ. ಪಂಪ ಅದನ್ನು ಸರಿಪಡಿಸಿದ್ದಾನೆ. ಇದರಿಂದ ಇಡೀ ಸಂದರ್ಭ ಮೊನಚುಗೊಂಡಿದೆ.[64] ಮಹಾಬಲನ ಆಸ್ಥಾನದಲ್ಲಿ ನಡೆಯುವ ಧಾರ್ಮಿಕ ಚರ್ಚೆ ಕೂಡ ಹೆಚ್ಚು ಮಾರ್ಮಿಕವಾಗಿದೆ. ಪೂರ್ವಪು.ದಲ್ಲಿ 75 ಶ್ಲೋಕಗಳಷ್ಟಿರುವ[65] ಈ ಜೀವಜಿಜ್ಞಾಸೆಯನ್ನು ಪಂಪ ಆರು ಪದ್ಯಗಳಲ್ಲಿ[66] ಮತ್ತು ಒಂದು ಪುಟದ ಗದ್ಯದಲ್ಲಿ ಸಂಗ್ರಹಿಸಿದ್ದಲ್ಲದೆ ಸಪ್ಪೆಯಾದುದೆಲ್ಲ ಸ್ವಾರಸ್ಯವಾಗುವಂತೆ ಕಾಯಕಲ್ಪವೆಸಗಿ ತನ್ನ ಮುದ್ರೆ ಒತ್ತಿದ್ದಾನೆ : ಸ್ವಯಂಬುದ್ಧನ ಉಪದೇಶ ಕೆನೆಗಟ್ಟಿರುವ ಪದ್ಯ ;

ಭವವಾರಾಶಿನಿಮಗ್ನರಂ ದಯೆದಮಂ ದಾನಂ ತಪಂ ಶೀಲಮೆಂ
ಬಿವೆ ಮೆಯ್ಯಾಗಿರೆ ಸಂದ ಧರ್ಮಮೆವಲಂ ಪೊತ್ತೆತ್ತುಗುಂ ಮುಕ್ತಿಪ
ರ್ಯವಸಾನಂಬರಮಾನುಷಂಗಿಕ ಫಲಂ ಭೂಪೇಂದ್ರದೇವೇಂದ್ರರಾ
ಜ್ಯವಿಳಾಸಂ ಪೆಱತಲ್ತು ನಂಬು ಖಚರಕ್ಷ್ಮಾಪಾಲ ಚೂಡಾಮಣೀ ।

ಸದ್ಧರ್ಮೋಪದೇಶ ಪ್ರಸಂಗದಲ್ಲೂ ಪಂಪನ ಕವಿತ್ವ ಬತ್ತುವುದಿಲ್ಲ. ವಿಜೃಂಭಿಸುತ್ತದೆ. ದಯೆ, ದಮ, ತಪ, ದಾನ, ಶೀಲ–ಈ ಗುಣಾವಳಿಯನ್ನು ಜಿನಸೇನರು ಹೇಳಿರುವ ರೀತಿಗೂ[67] ಪಂಪನ ಪ್ರತಿಪಾದನೆಗೂ ಅಜಗಜಾಂತರವಿದೆ. ಪಂಪನ ಅಕ್ಷಯ ಪ್ರತಿಭಾ ಸ್ಪರ್ಶದಿಂದ ನಿರೂಪಣೆ ಹೃದಯಸ್ಪರ್ಶಿಯಾಗಿರುವುದರ ಜತೆಗೆ ಧರ್ಮದ ವ್ಯಾಖ್ಯೆಗೆ ವ್ಯಾಪ್ತಿಯೂ ಬಂದಿದೆ. ಇದು ಜಿನಧರ್ಮದ ಸಾರ ಮಾತ್ರವಲ್ಲ, ಇಡೀ ಮಾನವ ಧರ್ಮಕ್ಕೆ ಹೊಂದುವ ಹಿತನುಡಿಯಾಗಿದೆ. ವಿತಂಡವಾದಗಳನ್ನು

ಮಂಡಿಸುವವರ ಪರವಾಗಿ ಕವಿಯೇ ಮುಖಂಡತ್ವ ವಹಿಸಿನಿಂತಷ್ಟು ಹೊಸಜೀವಕಳೆ ತಂದಿದ್ದಾನೆ :

ಒಡಲೊಳಿ ಜೀವಮಿರ್ದುಗಡ ಸಂಚಿಸುತಿರ್ಪುದು ಪುಣ್ಯಪಾಪಮಂ
ಗಡ ಬೞಿಕತ್ತ ಬೇಱೆ ಪೆಱತೊಂದೊಡಲೊಳ್ಗಡ ತಾನೆ ನಿಂದೊಡಂ
ಬಡುವುದು ಧರ್ಮ ಕರ್ಮ ಫಲಮಂ ಗಡ ಸತ್ತನೆ ಮತ್ತೆ ಪುಟ್ಟುವಂ
ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ ।

ತಲೆವಱಿದುಟ್ಟುದಿಕ್ಕಿ ಸುರಲೋಕ ಸುಖಂಗಳನುಣ್ಬೆವೆಂಬ ಬ
ತ್ತಲೆಗರ ಮಾತುಗೇಳದಿರು ಬಾೞ್ವಿನಮಿಂದ್ರಿಯವರ್ಗದಿಚ್ಛೆಯಂ
ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ
ನಲಿವುದು ಕಂಡರಾರ್ ಮಱುಭವಂಗಳನಿಲ್ಲಿ ವಿಯಚ್ಚರೇಶ್ವರಾ ।[68]

ಜಿನಸೇನರಲ್ಲಿ ವರದಿರೂಪದಲ್ಲಿ ನೀರಸವಾಗಿ ಸಾಗುವ ಲೋಕಾಯತಿಕ, ಯೋಗಾಚಾರ ಮತ್ತು ಮಾಧ್ಯಮಿಕ ಮತಗಳ ವಾದಗಳನ್ನು ಇಲ್ಲಿ ಸರಸಗೊಳಿಸಲು ಸಾಧ್ಯವಾಗಿರುವುದು ಪಂಪ ಈ ಸಂನಿವೇಶಕ್ಕೆ ದೇಸಿಯ ಕಸಿ ಮಾಡಿರುವುದರಿಂದ ನಾಟಕೀಯತೆಯ ಜತೆಗೆ ಆತ್ಮೀಯತೆಯೂ ಬೆರೆತು ಇಡೀ ಸಂದರ್ಭ ಸಾವಯವತೆಯಿಂದ ಹಿತವಾಗಿದೆ. ಧಾರ್ಮಿಕ ಸಾಹಿತ್ಯದ ಮರಳುಗಾಡಿನಲ್ಲಿ ಇಂಥ ಕೆಲವು ನೀರ್ಮನೆಗಳೂ ಸಿಗುತ್ತವೆ.

ಮಹಾಬಲ ಖೇಚರನು ಅನಲ್ಪಸುಖಸನ್ನಿಧಿಯಾದ ಈಶಾನ ಕಲ್ಪದಲ್ಲಿ ಲಲಿತಾಂಗ ದೇವನಾಗಿ ಹುಟ್ಟಿದ್ದನ್ನು ಜಿನಸೇನರು ವಿಸ್ತಾರವಾಗಿಯೇ ಸೂಚಿಸಿದ್ದಾರೆ:

ದೇಹಭಾರಮಥೋತ್ಸೃಜ್ಯ ಲಘೂಭೂತ ಇವಕ್ಷಣಾತ್
ಪ್ರಾಪತ್ಸ ಕಲ್ಪಮೈಶಾನ ಮನಲ್ಪ ಸುಖ ಸನ್ನಿಧಿಂ ॥[69]
ನವಯೌವನ ಪೂರ್ಣೋಸಾ ಸರ್ವಲಕ್ಷಣಸಂಭೃತಃ
ಸುಪ್ತೋತ್ಥಿತೊ ಯಥಾಭಾತಿ ತಥಾ ಸೋಂತರ್ಮುಹೂರ್ತತಃ ।।[70]
ಪುಷ್ಪವೃಷ್ಟಿಸ್ತದಾಪಪ್ತನ್ಮುಕ್ತಾ ಕಲ್ಪದ್ರುಮೈಃ ಸ್ವಯಂ
ದುಂದುಭಿಸ್ತನಿತಂ ಮಂದ್ರಂ ಜಜೃಂಭೇರುದ್ಧ ದಿಕ್ತಟಂ ।।[71]

ಇದನ್ನು ಪಂಪ ಯಥೋಚಿತವಾಗಿ ಅಳವಡಿಸಿಟ್ಟಿದ್ದಾನೆ :

ಆತ್ಮೀಯ ಶರೀರಭಾರಮನಿೞಿಪಿ ತತ್ಸಮಯದೊಳನಲ್ಪಸುಖನಿವಾಸಮೆನಿಸಿದೀಶಾನ ಕಲ್ಪದೊಳ್...ದಿವ್ಯತಳ್ಪದ ಪೊರೆಯೊಳಗೆ...ಜೌವನಂ ನೆಱೆದಿರೆ ದಿವ್ಯಮೂರ್ತಿ ಸಹಜಾಂಬರ ಭೂಷಣ ದಿವ್ಯಮಾಲೆಗಳೊಡವುಟ್ಟೆ ಮುನ್ನೆ ಮಱಲುಂದಿದ ನೆಟ್ಟಱುವಂತೆ ಪುಟ್ಟಿದಂ.[72]

ಇದು ಸುಖದೊಂದು ತುತ್ತತುದಿ ರಾಗದ ಮೊತ್ತಮೊದಲ್ ನಿರಂತರಾ
ಭ್ಯುದಯದ ಸಾಗರಂ ವಿಭವದಾಗರಮೀ ದಿವಿಜೇಂದ್ರರುಂದ್ರಲೋ
ಕದೊಳಮಿದೊಂದೆ ಸಾರಮಿದುಜ್ಜಿನ ಪದಾಬ್ಜವರ ಪ್ರಸಾದದಾ
ದುದು ನಿನಗಪ್ಪ ಕಾರಣದಿನೀಗಳೆ ಪೂಜಿಸು ಚೈತ್ಯರಾಜಿಯಂ ।[73]

ಈ ಪದ್ಯದಲ್ಲಿ ಕಡೆಯ ಒಂದು ಪಾದ ಮಾತ್ರ ಮೂಲದ ಅನುವಾದದಂತಿದ್ದರೂ,[74] ಉಳಿದ ಮೂರು ಸಾಲು ಪಂಪನ ಸ್ವಂತ ಸೃಷ್ಟಿ, ಇದರಿಂದ ಪದ್ಯದ ಭಾವ ಪುಷ್ಟಗೊಂಡಿದೆ. ಭೋಗ ಭೂಮಿಜರಂತೆ ಪ್ರಣಯ ಕೇಳಿರತರಾದ 'ಲಲಿತಾಂಗ-ಸ್ವಯಂಪ್ರಭೆ' ಯರ ಈ ಪ್ರಕರಣವನ್ನು ಈ ಇಬ್ಬರೂ ಕವಿಗಳು ನಿರೂಪಿಸಿರುವ ರೀತಿಯಿಂದ ಸಂ. ಮತ್ತು ಕ. ಕಾವ್ಯಗಳಲ್ಲಿರುವ ಅಂತರದ ತರತಮವನ್ನೂ ಆಸ್ವಾದಿಸಬಹುದು. ಪಂಪನಲ್ಲಿ ಪ್ರಣಯದ ಕಥೆ ಮತ್ತಷ್ಟು ಮನೋಜ್ಞವಾಗಿದೆ, ಇಲ್ಲಿರುವುದು ರಮ್ಯಾತಿಶಯದ ಉಜ್ವಲರಾಗಸಂಪನ್ನ ಚಿತ್ರಣ.[75]

ಈ ಲಲಿತಾಂಗನ ಪ್ರಣಯದೇವತೆಯಾಗಿ ಮೆರೆವ ಸ್ವಯಂಪ್ರಭೆಯ ವಿಚಾರವಾಗಿ ಪೂರ್ವಪು. ದಲ್ಲಿರುವುದು ಬೆರಳ ರೇಖೆಗಳು ; "ಇವನ ಪುಣ್ಯೋದಯದಿಂದ ಸ್ವಯಂ ಪ್ರಭಾದೇವಿಯು ಹುಟ್ಟಿ ಪ್ರಾಣವಲ್ಲಭೆಯಾದಳು. ಆ ಮೇಲೆ ಕಾಂತಿಯಿಂದ ಚಲಿಸುತ್ತಿರುವ ಶರೀರವುಳ್ಳ ಆ ಸ್ವಯಂ ಪ್ರಭಾದೇವಿಯು ಅಲಂಕಾರಮಾಡಿಕೊಂಡು ಪತಿಯ ತೊಡೆಯಮೇಲೆ ಕುಳಿತು, ಸ್ತ್ರೀ ರೂಪವನ್ನು ಧರಿಸಿದ ಈಶಾನ ಕಲ್ಪದ ಲಕ್ಷ್ಮೀದೇವಿಯೋ ಎಂಬಂತೆ ಶೋಭಿಸಿದಳು. ನೂತನವಾದ ಮಾವಿನ ಹೂವಿನ ಗೊಂಚಲು ಭ್ರಮರಕ್ಕೆ ಪ್ರಿಯವಾಗಿರುವಂತೆ, ಈ ಸ್ವಯಂ ಪ್ರಭಾದೇವಿಯು ಲಲಿತಾಂಗ ದೇವನಿಗೆ ಬಹುಕಾಲದವರೆಗೆ ಬಹಳ ಪ್ರೀತಿಪಾತ್ರಳಾಗಿದ್ದಳು. ಇವನು ಅವಳ ಮುಖವನ್ನು ನೋಡುವುದರಿಂದಲೂ, ಶರೀರ ಸ್ಪರ್ಶದಿಂದಲೂ ಆನಂದ ಪಡುತ್ತ, ಹೆಣ್ಣಾನೆಯಲ್ಲಿ ಆಸಕ್ತವಾದ ಗಂಡಾನೆಯಂತೆ ಬಹುಕಾಲದವರೆಗೆ ಸ್ತ್ರೀ ವಿಷಯ ಸುಖವನ್ನನುಭವಿಸಿದನು. ಭ್ರಮರಗಳೂ, ಕೋಗಿಲೆಗಳೂ ಧ್ವನಿ ಮಾಡುತ್ತಿರುವ ನಂದನವನಗಳಿಂದ ಕೂಡಿರುವುದೂ, ಮನೋಹರವಾದ ಚಂದ್ರಕಾಂತ ಶಿಲೆಗಳುಳ್ಳುದೂ ಆದ ದೊಡ್ಡ ಪರ್ವತಗಳಲ್ಲಿಯೂ, ತಪ್ಪಲುಪ್ರದೇಶಗಳಲ್ಲಿಯೂ ದ್ವೀಪಗಳಲ್ಲಿಯೂ ಸಮುದ್ರಗಳಲ್ಲಿಯೂ ಭೋಗಭೂಮಿ ಮೊದಲಾದ ಪ್ರದೇಶಗಳಲ್ಲಿಯೂ ಕ್ರೀಡಿಸುವವನಾಗಿ ಸುಖವಾಗಿದ್ದನು.[76]

ಪೂರ್ವಪು. ದ ಈ ಶಾಬ್ದಿಕ ವಿವರಣೆಯಲ್ಲಿರದ ಜೀವಂತಿಕೆಯ ಬೆಳಗಿನ ಹೊಸ ಕಳೆಯನ್ನು ಪಂಪ ತನ್ನ ಕಾವ್ಯದಲ್ಲಿ ಸೃಷ್ಟಿಸಿದ್ದಾನೆ. ಮೊದಲೇ ರತಿಸುಖಾಸಕ್ತನಾದ ಲಲಿತಾಂಗ ದೇವನನ್ನು ಭೋಗ ಸುಭಗೆಯೂ ಸಖ್ಯಶೀಲಳೂ ಆದ ಸ್ವಯಂ ಪ್ರಭೆ ರತಿಕ್ರೀಡೆಗೆ ಹುರಿದುಂಬಿಸುವ ಮಾಟದ ಬೊಂಬೆಯಾದಳೆಂಬುದನ್ನು ಪಂಪ ಪ್ರತಿಭಾತಿಶಯತೆಯಿಂದ ಸಮೀಕರಿಸಿ ಪೂರ್ತ ಹೊಸದೆನಿಸುವಂತೆ ಸಂಯೋಜಿಸಿದ್ದಾನೆ. ಕಲ್ಪನೆಯ ವೈಭವಕ್ಕೂ ಶೈಲಿಯ ಪ್ರಫುಲ್ಲತೆಗೂ ವಿಖ್ಯಾತವಾಗಿರುವ ಪದ್ಯಗಳಿವು :

ಅಭಿನವ ಪಾರಿಜಾತ ಕುಸುಮಾಸವಮೊರ್ಮೊದಲುಣ್ಮೆ ದೇವದಂ
ದುಭಿ ನಭದೊಳ್ ಪೊದಳ್ದೆಸೆಯ ಕಣ್ಗೆಸೆದಿರ್ಪ ನಿಜಾಂಗ ಸಂಗತ
ಪ್ರಭೆ ಸುರಲೋಕಮಂ ಬೆಳಗೆ ವಿಸ್ಮಯಮಪ್ಪಿನಮಾಗಳಾ ಸ್ವಯಂ
ಪ್ರಭೆ ಲಲಿತಾಂಗನಳ್ಳೆರ್ದೆಗೆ ತೊಟ್ಟನೆ ಬೇಂಟಮ ಪುಟ್ಟೆ ಪುಟ್ಟಿದಳ್ |

ಅದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾ
ಟ್ಮೊದಲದು ಚಿತ್ತಜಂಗೆ ಕುಲದೈವಮದಂಗಜ ಚಕ್ರವರ್ತಿಗೆ
ತ್ತಿದ ಪೊಸವಟ್ಟಮಂತದು ಮನೋಜನ ಕೈಪಿಡಿಯೆಂದು ಮಾಣ್ದೆನಾ
ಸುದತಿಯ ರೂಪನಿಂ ಪೆಱತನೆಂದೊಡೆ ಚೀಕರಮೊಗ್ಗನಾಗೆನೇ |

ನೆಗಟ್ದಮರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇ
ಸೆಗೆ ನಿಮಿರ್ವೊಂದು ಪುರ್ವಿನ ನಯಕ್ಕಮದೊಂದುದಗುಂತಿಗೊಂದು ಭಂ
ಗಿಗೆ ನೆಗಳ್ವೊಂದು ಮೆಲ್ಪಿನ ತೊದಳ್ನುಡಿಗಪ್ಪುಡಮೆಯ್ದೆವಾರವೇ
ನೊಗಸುಗಮೆಂದು ತಳ್ತಗಲನಾಕೆಯನಾ ಲಲಿತಾಂಗ ವಲ್ಲಭಂ ।

ವ್ರತದಿಂದಂ ಪಡೆದಿಂದ್ರಲೋಕ ವಿಭವಂ ಮುನ್ನಾದ ದೇವಾಂಗ ನಾ
ತತಿಯಿಂದಿನಿತಿಂಪನೀಯದು ಮನಕ್ಕಾಹ್ಲಾದಮಂ ಮಾಳ್ಪ ತ
ತ್ಸತಿಯಿಂ ನೆಟ್ಟನೆ ಸಾರಮಾದುದು ಗಡಂ ತತ್ಕಲ್ಪಜಂಗೆಂದೊಡಾ
ಜಿತ ವಿದ್ಯುತ್ಪ್ರಭೆಯಂ ಸ್ವಯಂಪ್ರಭೆಯನಿನ್ನೇವಣ್ಣಿಪೆಂ ಬಣ್ಣಿಪೆಂ ।[77]

ಇದಿಷ್ಟೂ ಮೂಲವನ್ನು ಅವಲಂಬಿಸಿಲ್ಲದ ಹೊಸಬೆಳೆ, ಉದಾಹೃತ ಪದ್ಯಗಳೆಲ್ಲ ಪಂಪನ ನವನಿರ್ಮಾಣ. ಇಂಥ ಚೆಲುವಿನ ಪುತ್ಥಳಿ ಲಲಿತಾಂಗನ ಒಲವಿನರಸಿಯಾಗಿ ವಿಜೃಂಭಿಸಿದ್ದು ಅತಿಶಯವಲ್ಲವೆಂದು ಓದುಗರ ಬುದ್ಧಿ ಭಾವಗಳಿಗೆ ಹೃದ್ಯವಾಗುವಂತೆ ತನ್ನ ಸಹಜಶಕ್ತಿಯಿಂದ ಪಂಪ ರಸಪೂರ್ಣವಾಗಿ ನಿರೂಪಿಸಿದ್ದಾನೆ. ಸ್ವಯಂಪ್ರಭಾ ಲಲಿತಾಂಗರು ಸನ್ಮನಃಪ್ರಣಯ ಮಾನಸರಾಗಿ ಪ್ರತಿಕ್ಷಣವೂ ಸಂತತವಾಗಿ ದಿವ್ಯಸುಖದಲ್ಲಿ ತಣಿದರೆಂದು ತಲ್ಲೀನತೆಯಿಂದ ವರ್ಣಿಸಿದ್ದಾನೆ. ಪಂಪನ ಮನೋಧರ್ಮವೂ ಈ ಭಾವಪೂರದಲ್ಲಿ ಬೆರೆತದ್ದರಿಂದ ಈ ಭಾಗದಲ್ಲಿ ಆರ್ದ್ರತೆಯೂ ತಾಜಾತನವೂ ಪ್ರಕಟವಾಗಿದೆ.

ದೇವಲೋಕದ ವೈಭೋಗವೂ ಅಧ್ರುವವಾದದ್ದೆ. ಲಲಿತಾಂಗನ ಅನಂತ ಆಯುರವಧಿಗೂ ಒಂದು ಅಂತವಿದೆ. ಅವನೂ ಅಂತಕನ ಅತಿಥಿಯಾಗುವ ಕಾಲ ಸಮೀಪಿಸಿತು. ಸಾವಿನ ಮನೆಗೆ ಸಾಗುವ ಸಿದ್ಧತೆ ಮಾಡಿಕೊಳ್ಳಲು ಸೂಕ್ತ ಸೂಚನೆಗಳು ವ್ಯಕ್ತವಾದುವು :

ಸೂಡಿದ ಪಾರಿಜಾತದ ನವೇರುವ ಬಾಸಿಗವೊಯ್ಯನೊಯ್ಯನಿ
ರ್ಪೋಡಿದುದಂದಿನಂಗರುಚಿ ಕಣ್ಣಟುದಾಯ್ತು ವಿಭೂಷಣಂಗಳೊಳ್
ತೀಡುವ ರಶ್ಮಿಗಳ್ ಮಸುಳ್ದವಾಗುಳಿಯಾಯ್ತನಿತುಬ್ಬೆಗಂ ಮೊಗಂ
ಬಾಡೆ ತಗುಳ್ದು ಸೂಚಿಸಿದುವಾ ದಿವಿಜಂಗವಸಾನಕಾಲಮಂ ।[78]

ಇದು ಪೂರ್ವಪು.ದ ಭಾವಾನುವಾದವಾದರೂ[79] ಅಲ್ಲಿಗಿಂತ ಇಲ್ಲಿ ಭಾವಪೂರ್ಣವಾಗಿದೆ, ಯುವಮನ ನೆರಳಲ್ಲಿ ನಿಂತಂತೆ ದುಃಖಭಾವದ ಅಂಕುರ ಅನುಭವವಾಗುತ್ತದೆ. ಇದರ ಮುಂದಿನ ಪದ್ಯಗಳು ಪಂಪನ ಪ್ರತಿಭಾಮೂಸೆಯಲ್ಲಿ ಮಿಂದುಬಂದವು. ಪ್ರೇರಣೆ ಜಿನಸೇನಾಚಾರ್ಯರದು, ನಿಜ. ಆದರೆ ಜಿನಸೇನರ ಪ್ರಭಾವವನ್ನು

ಜೀರ್ಣಿಸಿಕೊಂಡು, ಮೂಲವನ್ನು ಮೀರಿಸಿ ತೋರಿಸಿರುವ ಸ್ವಂತಿಕೆಯಲ್ಲಿದೆ ಪಂಪನ ಮಹತ್ವ. ಇಂದ್ರಿಯೋಪಭೋಗದ ವಿಷಯ ಲಾಲಸೆಯನ್ನು ಬೆಚ್ಚಗಿರುವ ಉತ್ಸಾಹಕರ ಜೀವನವನ್ನಾಗಿಸಿದ ಸ್ವಯಂ ಪ್ರಭಾಬಾಹುಬಂಧನ, ಸುತ್ತಲ ಪ್ರೋತ್ಸಾಹಕರ ಹಿತದ ಪರಿಸರ, ಸಮುದಾಯ ಶೋಭೆಯ ಭೋಗಶಯ್ಯೆಯಿಂದ ಕೆಳಗಿಳಿಯುವ ಆಲೋಚನೆಯನ್ನು ಕೂಡ ಮಾಡಲಾರದ ಸ್ಥಿತಿಯಲ್ಲಿರುವ ಲಲಿತಾಂಗನಲ್ಲಾಗುವ ಅಲ್ಲೋಲಕಲ್ಲೋಲವನ್ನು ಪ್ರತಿಭೆಯ ಹೊನಲು ಬೆಳಕು ಹಾಯಿಸಿ ಪಂಪ ಬಿಂಬಿಸಿದ್ದಾನೆ;

ಸುರತರುನಂದನಂಗಳಿರ ರತ್ನಪಿನದ್ಧ ವಿಮಾನ ಕುಟ್ಟಿಮಾಂ
ತರ ಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತ ಸೌಂ
ದರ ಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ
ರ್ನೆರಮೆಳೆದುಯ್ಯೆ ಬಾರಿಸದೆ ಕಿಮ್ಮನುಪೇಕ್ಷಿಸಿ ನೋಡುತಿರ್ಪಿರೇ ।80

ಎಂದು ಸೈರಿಸದೆ ಕಾಮಸಾಮ್ರಾಜ್ಯ ಸರ್ವಸ್ವ ಭೂತೆಯಪ್ಪ ತನ್ನ ನಲ್ಲಳ ಮೊಗಮಂ ನೋಡಿ

ಸಂತಸದಂತನೆಯ್ದೆ ಸುರತಾಮೃತದೊಳ್ ತಣಿದಟ್ಟ್ಯೆಜಂ ಜಗಿ
ಲ್ತಂತಿರೆ ಪತ್ತಿ ಮೆಯ್ಗಳೆರಡಾದೊಡಮೇನಸುವೊಂದೆ ನೋಟ್ಪೊಡಂ
ಬಂತಿರೆ ಕೂಡಿ ನಿನ್ನೊಡನೆ ಭೋಗಿಸಲೀಯದೆ ಕಿಮ್ಮನೆನ್ನನು
ಯ್ವಂತಕನೆಂಬ ಬೂತನೆಲೆ ಮಾಣಿಸಲಾಗದೆ ಪೇಳ್ ಸ್ವಯಂಪ್ರಭೇ ।81

ಇಲ್ಲಿನ ಉತ್ಕಟತೆ, ತೀವ್ರತೆ ಪಂಪನಿಗೇ ಸಾಕ್ಷಾತ್ತಾಗಿ ಬಂದಷ್ಟು ಸಹಜವಾಗಿದೆ. ಮನುಷ್ಯನನ್ನು ಕಾಡುವ ಎರಡು ಪ್ರಧಾನ ಭಾವಗಳೆಂದರೆ ಪ್ರೀತಿ ಮತ್ತು ಮೃತ್ಯು. ಒಂದು ಗಾಳಿಯಲ್ಲಿ ತೇಲಿಸಿದರೆ ಇನ್ನೊಂದು ಪಾತಾಳಕ್ಕೊಯ್ಯುತ್ತದೆ. ಮರಣ ಭೀತಿಯಿಂದ ಒಂದು ಜೀವ ಹೇಗೆ ತಲ್ಲಣಿಸುತ್ತದೆಂಬುದರ ಪ್ರತೀಕ ಲಲಿತಾಂಗನ ಈಗಿನ ಸ್ಥಿತಿ. ಸಾವು ಬಂದು ಬಾಗಿಲು ಬಡಿಯುತ್ತಿರುವಾಗಿನ ಅವನ ಹಳವಂಡ, ಹುಯಿಲು ಅರ್ಥಪೂರ್ಣವಾಗಿದೆ. ಮೇಲಿನ ಎರಡೂ ಪದ್ಯಗಳು ಸ್ವತಂತ್ರವಾಗಿ ಆಲೋಚಿಸುವ ಪಂಪನ ಸ್ರಷ್ಟಾರ ಗುಣಕ್ಕೆ ರನ್ನಗನ್ನಡಿಯಾಗಿವೆ. ಲಲಿತಾಂಗನ ಪ್ರಲಾಪದಲ್ಲಿ ಕಾವ್ಯಧ್ವನಿಯೂ ಬೆರೆತಿದೆ. ತನ್ನಿಂದ ತಡೆಯಲಾಗದ ಅಂತಕನ ಧಾಳಿಯನ್ನು ತನಗಾಗಿ ಇತರರಾದರೂ ಪ್ರತಿಭಟಿಸಬೇಕೆಂದು ಅಂಗಲಾಚುತ್ತಾನೆ. ಆಗ ಅವನಿಗೆ ಋಜುಮಾರ್ಗ ತೋರಿಸಿ ವಿವೇಕ ನುಡಿಯುವ ಮುಂದಿನ ಎರಡು ಪದ್ಯಗಳು ಜಿನಸೇನರ ಪೂರ್ವ ಪು. ದ ಗುಹಾಧ್ವನಿ.[82]

ನಿನಗೀರ್ವಾಣಂಗಲ್ಲವಸ್ಥಾಂತರಮುಮಂ ಜನಕ್ಕೆಲ್ಲಮೀ ಪಾಂಗೆ ಕಾರು
ಣ್ಯನಿನಾದಂ ನಿನ್ನನಾಡಂ ನಗಿಸುಗುಮೆಟಿಸಿದುಯ್ಯಂತಕಂಗಿಲ್ಲ ದೇವಾಂ
ಗನೆಯರ್ ಮಾಜಾಂಪರೇ ಪೇಟಿ ಜನನಮೃತಿಜರಾಂತಕಶೋಕಾಗ್ನಿಯಿಂದಾ
ವನುಮೀ ಸಂಸಾರದೊಳ್ ಬೇಯದನೊಳನೆ ಶರಣ್ಧರ್ಮದಿಂದೊಂದುವಂಟೇ |

ಜಿನಚೈತ್ಯವ್ರಾತಮಂ ಬಂಧಿಸು ಜಿನಪದಪದ್ಮಂಗಳಂ ದಿವ್ಯಮಪ್ಪ
ರ್ಚನೆಯಿಂದಂ ಭಕ್ತಿಯಿಂದರ್ಚಿಸು ಜಿನನ ನಮಸ್ಕಾರಮಂತ್ರಂಗಳೊಳ್ ಭಾ
ವನೆಯಂ ತಾಳ್ದಟಿಷ್ಟಿಯಿಂದಂ ಜಿನಮಹಿಮೆಗಳಂ ಮಾಡು ನೀಂ ಭವ್ಯನೈಮ
ತ್ತಿನ ಮಿಥ್ಯಾಜ್ಞಾನಿವೋಲ್ ನೀಂತರಳತೆವೆರಸಿಂತೇಕೆ ವಿಭ್ರಾಂತನಪ್ಪೈ ||

ಈಶಾನಕಲ್ಪದ ಸಾಮಾನಿಕ ದೇವತೆಗಳು ಲಲಿತಾಂಗನನ್ನು ಸಾಂತ್ವನಗೊಳಿಸುತ್ತಾರೆ, ಸಮಾಧಾನಪಡಿಸುವುದರೊಂದಿಗೆ ವಿವೇಕ ಹೇಳಿ, ಧೈರ್ಯತುಂಬಿ ಮುಂದಿನ ಹೆಜ್ಜೆಗಳನ್ನಿಡಬೇಕಾದ ದಾರಿ ತೋರಿಸುತ್ತಾರೆ. ತನ್ನೊಂದು ಇಂದ್ರಿಯ ಲಾಲಸೆಗೆ ವಶವಾದ ಭೋಗ ಪ್ರವೃತ್ತಿಯಿಂದ ನಾಲ್ಕು ಜನರೆದುರು ನಗೆಗೆ ಈಡಾಗಬೇಕಾಯಿತೆಂಬ ಅರಿವು ಮರುಕಳಿಸುತ್ತದೆ. ಸಿಗ್ಗಾಳಿಯಾದ ಲಲಿತಾಂಗ ವಿಷಯಾಭಿಮುಖತೆಯಿಂದ ವಿಮುಖನಾಗಿ ಧರ್ಮದತ್ತ ಹೆಜ್ಜೆ ಹಾಕುತ್ತಾನೆ. ಯಥಾ ಪ್ರಕಾರ ಪೂರ್ವಪು.ಕ್ಕಿಂತ ಪಂಪನ ವಿವರಣೆ ಉಜ್ವಲತರವಾಗಿದೆ. ಮೂಲದಲ್ಲಿ ಇರುವ ಪ್ರಮಾಣಕ್ಕೂ ಮೀರಿ ಭೋಗದ ಬಾಳು ಇನ್ನಷ್ಟು ನಿರ್ಭರವಾಗಿ ಢಾಳವಾಗಿ ಕಾಣುವಂತೆ ಪಂಪ ವೈಭವೀಕರಿಸಿರುವುದು ಅಂತಿಮ ಪರಿಣಾಮ ತೀವ್ರತೆಗಾಗಿ. ವೈದೃಶ್ಯಗಳ ಬೆಳಕಿಗೆ ಹಿಡಿದು ನಿಜಬಣ್ಣಗಳು ಬಿಡುವಂತೆ ಮಾಡಿದ್ದಾನೆ. ಭೋಗವೇ ಪರಮವೆಂದು ಅದರಲ್ಲಿ ಮುಳುಗಿ ಓಲಾಡುತ್ತಿರುವಾಗಲೇ, ಅದರ ಅಂಚಿನಲ್ಲೇ ಹೊಂಚುಹಾಕಿ ಕುಳಿತ ವಿವೇಕ ಭೋಗದ ಅಧ್ರುವತೆ-ಅಸಾರತೆಯನ್ನು ದರ್ಶನ ಮಾಡಿಸುತ್ತದೆ; ಇದು ಮುಂದಿನ ಭವದಲ್ಲಿ ಈ ಜೀವಕ್ಕೆ ಇನ್ನೂ ಗಾಢತರವಾಗಿ ನಾಟುವಂತೆ ಕವಿ ನಾಟಕೀಯವಾಗಿ ಸಂಯೋಜಿಸಿದ್ದಾನೆ. ಲಲಿತಾಂಗಜೀವ ಒಂದು ವಜ್ರಜಂಘನಾಗಿ ಬೆಳೆದು ಯೌವನ ತುಂಬಿದಾಗಲೂ ಹಿಂದಿನ ಸ್ವಯಂಪ್ರಭಾದೇವಿಯಲ್ಲಿದ್ದ ಅನುರಾಗದಿಂದಲೋ ಎಂಬಂತೆ ಬೇರೆ ಸ್ತ್ರೀಯರಲ್ಲಿ ನಿಸ್ಪೃಹನಾಗಿದ್ದನು, ಎಂದು ಜಿನಸೇನರಲ್ಲಿದೆ.[84] ಈ ಸೂಚನೆಯನ್ನು ಸ್ವೀಕರಿಸಿ ಪರಿಭಾವಿಸಿದ ಪಂಪ ಇದನ್ನು ತನ್ನ ಪ್ರತಿಭೆಯ ಮೂಸೆಯಲ್ಲಿ ಕರಗಿಸಿ ಕಾವ್ಯದ ಕಮಾನು ಕಟ್ಟಿದ್ದಾನೆ :

ಕುಡುಮಿಂಚಂ ಮುಸೆದನ್ನರಪ್ಪ ಪಲರೊಳ್ವೆಂಡಿರ್ ಮನಂಗೊಂಡು ಬಂ
ದೂಡಮಾ ರಾಜಕುಮಾರನೊಲ್ಲನೆ ದಳನ್ಮಂದಾರಿಕಾ ಮಾಲೆಯೊಳ್
ಕಡುಗಂಪಂ ಸವಿದೊಂದು ತುಂಬಿ ಪಸಿವಿಂ ಮೆಳ್ಪಟ್ಟು ಬಂದುಣ್ಣದಿ
ರ್ಪೊಡಮಿರ್ಕುಂ ಬಿಟಿಕೆಂತುಮನ್ಯ ಕುಸುಮಾಮೋದಕ್ಕೆ ಮೆಯ್ವರ್ಕುಮೇ ।

ಲಲಿತಾಂಗನ ಪರೋಕ್ಷ ಜೀವನ ಸ್ವಯಂಪ್ರಭೆಗೆ ನೀರಿನಿಂದ ಹೊರಗೆಸೆದ ಮೀನಿನಂತಾಯಿತು. ಇದನ್ನು ಜಿನಸೇನಾಚಾರ್ಯರು ಚಿತ್ರಿಸಿರುವುದು ಹೀಗೆ : 'ಅವನ

ವಿಯೋಗದಿಂದ, ಪತಿಯಿಲ್ಲದ ಹೆಣ್ಣು ಚಕ್ರವಾಕ ಪಕ್ಷಿಯಂತೆ, ಬಹುಕಾಲದವರೆಗೆ ದುಃಖಿತಳಾಗಿದ್ದಳು. ಗ್ರೀಷ್ಮ ಋತುವಿನಲ್ಲಿ ಭೂಮಿಯು ಕಾದು ತೇಜೋರಹಿತವಾಗಿರುವಂತೆ ಈ ಸ್ವಯಂಪ್ರಭಾದೇವಿಯು ಶೋಕದಿಂದ ಸಂತಾಪವುಳ್ಳವಳಾಗಿ ಕಾಂತಿರಹಿತಳಾದಳು. ವರ್ಷಾಕಾಲದಲ್ಲಿ ಹೆಣ್ಣು ಕೋಗಿಲೆಯು ಮಧುರವಾದ ಆಲಾಪವನ್ನು ಬಿಟ್ಟುಬಿಡುವಂತೆ ಮಧುರಭಾಷಣವನ್ನು ಬಿಟ್ಟಳು. ಉತ್ತಮವಾದ ಔಷಧವಿಲ್ಲದಿದ್ದರೆ ಸಹಿಸಲಶಕ್ಯವಾದ ರೋಗಗಳು ಪೀಡಿಸುವಂತೆ ಸಹಿಸಲು ಅಶಕ್ಯ ಮನೋವ್ಯಥೆಗಳು ಬಹಳವಾಗಿ ಪೀಡಿಸಿದುವು".[86] ಜಿನಸೇನರ ಅಭಿವ್ಯಕ್ತಿ ಸಾರವನ್ನು ಹೀರಿ ಪುಷ್ಟಿ ಪಡೆದ ಪಂಪ, ಅಸ್ಥಿಪಂಜರಕ್ಕೆ ಕಾವ್ಯದ ಹಂದರ ಹಬ್ಬಿಸಿ, ಮೂಳೆಗಳು ಸಪ್ರಾಣಗೊಂಡು ಕಳಕಳಿಸುವಂತೆ ಮಾಡಿದ ಶ್ರೇಯಸ್ಸು ಕನ್ನಡ ಕವಿಯದು :

ಅಲಕಂ ಮಂದಾರ ಶೂನ್ಯಂ ಕದಪು ಮಕರಿಕಾಪತ್ರ ಶೂನ್ಯಂ ಲಲಾಟಂ
ತಿಲಕಾಲಂಕಾರಶೂನ್ಯಂ ಘನಕುಚಯುಗಳಂ ಹಾರಶೂನ್ಯಂ ನಿತಂಬಂ
ಕಲಕಾಂಚೀದಾಮಶೂನ್ಯಂ ಚರಣಯುಗಳಮುಂ ನೂಪುರಾಳಾಪಶೂನ್ಯಂ
ಲಲಿತಾಂಗಂ ಪೋದೊಡಾಯ್ತಾಕೆಗೆ ದಿವಮುಮಿತುಂ ನಿರ್ಜರಾರಣ್ಯಶೂನ್ಯಂ ।

ಮುರಿದೆಂದುಮಯ್ಯ ನಿನ್ನನಿರದಂತಕನಾಂ ನಡೆ ನೋಡೆ ನೋಡೆ ನಿಂ
ಕರಗಿದೆಯೆಂತುಮೆನ್ನ ಸುಶರೀರದೊಳಿರ್ದುದು ಜೀವಮಾಯೊಡಲ್
ಕರಗಿದುದಿಲ್ಲವೆನ್ನ ಬಸಮಲ್ಲೊಡಲಿಂದೆಮ ಶೋಕದೊಳ್ ಮನಂ
ಕರಗಿದುದೆಯ್ದೆ ವಾರದಿರೆಯಿರ್ದಡೆಯಿಂ ಲಲಿತಾಂಗ ವಲ್ಲಭಾ ।

ಮದನನ ಕೈದುವೆಲ್ಲಿದನನಂಗನ ಕೈಪೊಡೆಯೆಲ್ಲಿದಂ ವಿಳಾ
ಸದ ಕಣಿಯೆಲ್ಲಿದಂ ಚದುರಂ ಪುಟ್ಟಿದನೆಲ್ಲಿದನೆಲ್ಲಿದಂ ವಿನೋ
ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದ ನಿಟ್ಟೆಯಾಣ್ಮನೆ
ಲ್ಲಿದನೆರ್ದೆಯಾಣ್ಮನೆನ್ನರಸನೆಲ್ಲಿದನೋ ಲಲಿತಾಂಗ ವಲ್ಲಭಂ ।[87]

ಪಂಪನ ಚಿತ್ರಕ ಶಕ್ತಿ ಪಾರಮ್ಯಕ್ಕೆ ಈ ಪದ್ಯಗಳು ಕನ್ನಡಿ ಹಿಡಿಯುತ್ತವೆಯಲ್ಲದೆ ಪ್ರತ್ಯೇಕ ವ್ಯಾಖ್ಯಾನ ನಿರಪೇಕ್ಷಕವಾಗಿವೆ. 'ಶೂನ್ಯ'ವೆಂಬುದರ ಪರಿಣಾಮ ತೀವ್ರತೆ ಶಿಲಾಲೇಖವಾಗಿ ನಿಲ್ಲುತ್ತದೆ. ಛಂದಸ್ಸಿನಲ್ಲೂ ಭಾಷೆಯಲ್ಲೂ ಅಧ್ರುವತೆಯನ್ನು ಮಹಾಕವಿ ಸ್ಥಾಪಿಸಿರುವುದು ಗಮನಾರ್ಹವಾಗಿದೆ. 'ಶೂನ್ಯ' ಶಬ್ದವನ್ನು ಒಂದೇ ಪದ್ಯದೊಳಗೆ ಹಲವು ಸಲ ಬಳಸಿ, ಪುನರಾವೃತ್ತಿಯ ಪರಿಣಾಮವನ್ನು ದುಡಿಸಿಕೊಂಡಿದ್ದಾನೆ.

ಪಂಪ ಹೇಗೆ ಚಿತ್ರಗಳನ್ನು ಬಿಡಿಸುತ್ತಾನೆ, ಪಾತ್ರಗಳನ್ನು ಕೆತ್ತುತ್ತಾನೆ, ಹಾಗೂ ಸನ್ನಿವೇಶಗಳನ್ನು ಕಂಡರಿಸುತ್ತಾನೆಂಬುದಕ್ಕೆ ಇದರ ಮುಂದಿನ ಶ್ರೀಮತಿ ಮತ್ತು ವಜ್ರಜಂಘರ ಕಥಾಪ್ರಸಂಗ ದಿವ್ಯಸಾಕ್ಷಿಯಾಗಿದೆ. ಕಲ್ಲಿನಿಂದ ಬೇರ್ಪಟ್ಟ ತನಿ ಹೊನ್ನು ಸಮರ್ಥನಾದ ಸುವರ್ಣಕಾರನ ನೈಪುಣ್ಯ ಕಲೆಗಾರಿಕೆಯಲ್ಲಿ ಹಾದು

ಮಾಟದ ಆಭರಣವಾಗಿ ಅಲಂಕಾರಗೊಂಡು ಮಿರಿ ಮಿಂಚುವಂತೆ ಇಲ್ಲಿಯೂ ಪಂಪ ಪೂರ್ವ ಪು. ದ ಗಣಿಯಿಂದ ಹೆಕ್ಕಿ ತೆಗೆದ ಪ್ರಸಂಗವನ್ನು ಪಂಪ ಕುಶಲ ಕಲೆಗಾರಿಕೆಯಿಂದ ರಂಗೇರಿಸಿದ್ದಾನೆ. ಶ್ರೀಮತಿ–ವಜ್ರಜಂಘರ ಮದುವೆಯ ಒಸಗೆ ಮುಗಿದು ಮಗಳನ್ನು ಗಂಡನ ಮನೆಗೆ ಕಳಿಸುವಾಗ ತಂದೆ ಹೇಳುವ ಬುದ್ಧಿವಾದ ರೂಪದ ಪದ್ಯಗಳು ಬಹುಕಾಲ ಚಿತ್ತದಲ್ಲಿ ಅಚ್ಚೊತ್ತಿ ನಿಲ್ಲುತ್ತವೆ.[88] ಇದರಲ್ಲಿ ಕಾಲಿದಾಸನ ಪ್ರಭಾವವಿದ್ದರೂ[89] ಅದನ್ನು ಅರಗಿಸಿ ತನ್ನದನ್ನಾಗಿಸಿ, ಇಡೀ ಪ್ರಸಂಗ ಮಾರ್ದವ ಗುಣದಿಂದ ಮಿಡಿಯುವಂತೆ ರಸಾರ್ದ್ರಗೊಳಿಸಿದ್ದಾನೆ. ಪಂಪನ ಟಂಕಸಾಲೆಯಲ್ಲಿ ತಯಾರಾದ

> ಪೊಡೆವಡುವಪ್ಪಿಕೊಳ್ವ ನೆನೆಯುತ್ತಿರಿಮೆಂಬ ಸಮಸ್ತ ವಸ್ತುವಂ
> ಕುಡುವ ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ ಬುದ್ಧಿವೇಳ್ವ ಕೈ
> ಯೆಡೆ ನಿಮಗೆಂದೊಡಂಬಡಿಪ ನಲ್ಲರಗಲ್ಕೆಕೆ ಕಣ್ಣನೀರ್ಗಳಂ
> ಮಿಡಿವ ಬಹು ಪ್ರಕಾರಜನಸಂಕಟಮೊಪ್ಪಿದುದಾ ಪ್ರಯಾಣದೊಳ್ ।[90]

ಎಂಬ ಪದ್ಯ ಹೊಸ ಸೂಜಿಕಲ್ಲಿನಂತಿದೆ; ಸಂಸಾರ ಸಾರೋದಯನೆಂಬ ತನ್ನ ಬಿರುದನ್ನು ಪಂಪ ಇಂಥ ಕಡೆಗಳಲ್ಲಿ ನೆನಪಿಸಿಕೊಟ್ಟು ಸಾರ್ಥಕಪಡಿಸುತ್ತಿರುತ್ತಾನೆ. ಇದರ ಬೆನ್ನಿಗೇ ಬರುವ ಇನ್ನೊಂದು ಮಾರ್ಮಿಕ ಪ್ರಸಂಗ ಶ್ರೀಮತಿ-ವಜ್ರಜಂಘರ ಸಹ ಮರಣದ ಅಪೂರ್ವ ಚಿತ್ರಣ. ಇಲ್ಲಿ ಕಥೆ ಘಟನೆ ಎಲ್ಲ ಮೂಲಕ್ಕೆ ನಿಷ್ಠವಾಗಿ ಸಾಗಿದೆಯಾದರೂ ಅಲ್ಲಿನ ಬೋಳು ಬೋಳಾದ ಬಯಲು ಇಲ್ಲಿ ವಸಂತೋದ್ಯಾನವಾಗಿ ಪರಿವರ್ತಿತವಾಗಿದೆ. ಪೂರ್ವಪು.ದಲ್ಲಿಯೂ ಇದು ವಿಸ್ತಾರವಾದ ಭೂಮಿಕೆಯ ಮೇಲೆ ಗಟ್ಟಿಯಾಗಿ ನಿಂತಿದೆ[91] ಜಿನಸೇನರದು ಗೊಮ್ಮಟ ಶಿಲ್ಪ, ಪಂಪನದು ಶಿಲಾಬಾಲಿಕೆಯನ್ನು ಬಿಡಿಸುವ ಸೂಕ್ಷ್ಮ ಕೆತ್ತನೆ. ಪಂಪನಲ್ಲಿ ಭವ್ಯತೆಯೊಂದಿಗೆ ಲಾಲಿತ್ಯವೂ ವ್ಯಕ್ತವಾಗಿದೆ.

ಇದುವರೆಗಿನ ತೌಲನಿಕ ಸಮೀಕ್ಷೆಯಿಂದ ತಿಳಿದು ಬರುವಂತೆ ಜಿನಸೇನರ ಪೂರ್ವಪುದಲ್ಲಿ ಉದ್ದಕ್ಕೂ ಸುವರ್ಣ ರೇಖೆಯಾಗಿ ಮಿಂಚುವ ವಿಸ್ಮಯಾದ್ಭುತಗಳನ್ನು ಉಳಿಸಿಕೊಂಡಿರುವ ಪಂಪ, ಒಂದು ಕೈಮಿಗಿಲಾಗುವಂತೆ ಅದಕ್ಕೆ ನಯ ನುಣುಪು ಕೊಟ್ಟಿದ್ದಾನೆ. ಪಂಪ ಒಂದು ಯುಗದ ಕವಿಯೂ ಆದ್ದರಿಂದ ಅಲ್ಲಲ್ಲಿ ಮೌಲ್ಯಗಳನ್ನೂ ಧ್ವನಿಸಿದ್ದಾನೆ. ಸಂಸ್ಕೃತದಿಂದ ಪೂರ್ವಪು.ವನ್ನು ಕನ್ನಡಕ್ಕೆ ತರುವಲ್ಲಿ, ಸ್ಥೂಲನೋಟಕ್ಕೆ ಮೂಲವನ್ನು ಸಾಕಷ್ಟು ನಿಷ್ಠೆಯಿಂದ ಅನುಸರಿಸಿರುವ ಹಾಗೆ ತೋರುತ್ತದೆ. ಕೇವಲ ತೌಲನಿಕ ಸ್ವರೂಪದ ಸೂಕ್ಷ್ಮಾವಲೋಕನದಿಂದ ಪಂಪ ಹಲವಾರು ಮಾರ್ಪಾಟು ಮಾಡಿಕೊಂಡಿರುವುದು ಸ್ಪಷ್ಟವಾಗುತ್ತದೆ :

1. ಕೆಲವು ಸಲ ಮೂಲವನ್ನು ಬಿಡುತ್ತಾನೆ.
2. ಒಮ್ಮೊಮ್ಮೆ ಪೂರ್ತಿ ಹೊಸದನ್ನು ಸೇರಿಸುತ್ತಾನೆ : ಭರತನ ರಾಣಿಯರ ಪುಷ್ಪಾಪಚಯ.

3. ಮೂಲದಲ್ಲಿರುವುದನ್ನು ಅಲ್ಲಲ್ಲಿ ಸಂಗ್ರಹಿಸುತ್ತಾನೆ.
4. ಅಪರೂಪಕ್ಕೆ ಮೂಲದಲ್ಲಿರುವುದನ್ನು ಲಂಬಿಸುತ್ತಾನೆ.
5. ಮೂಲದಲ್ಲಿರುವ ಸಂಸ್ಕೃತ ಶಬ್ದಗಳನ್ನು ಹಾಗೇ ಉಳಿಸಿಕೊಂಡು ಕನ್ನಡಕ್ಕೆ ಅಳವಡಿಸುವುದುಂಟು.
6. ಮೂಲದ ಸಂಸ್ಕೃತಕ್ಕೆ ಪರ್ಯಾಯವಾಗಿ ಕನ್ನಡ ಮಾತುಗಳನ್ನು ಬಳಸುವುದುಂಟು.
7. ಇಡೀ ಪದ್ಯ/ಗದ್ಯ ಮೂಲದ ಮಾರ್ದನಿಯಾಗಿರುವಾಗಲೂ, ಒಮ್ಮೊಮ್ಮೆ ಪದ್ಯದ ಒಡಲಲ್ಲೊಂದು ಹೊಸ ಅಭಿಪ್ರಾಯದ ಪುಟ್ಟ ಮಾತು ಸೇರುವುದುಂಟು.

ವಾಸ್ತವವಾಗಿ ಈ ಅಂಶಗಳಲ್ಲಿ ಕೆಲವು ಒಂದಕ್ಕೊಂದು ಹೊಂದಿಕೊಂಡಿರುತ್ತವೆ; ಸಂಕ್ಷೇಪಿಸುವಾಗ ಕೆಲವನ್ನು ಬಿಡಬೇಕಾಗುತ್ತದೆ, ವಿಸ್ತರಿಸುವಾಗ ಹೊಸದನ್ನು ಸೇರಿಸಬೇಕಾಗುತ್ತದೆ. ಪಂಪನ ಸಂಕ್ಷೇಪಿಸುವಿಕೆಯ ಸ್ವರೂಪ ಎಂತಹುದೆಂಬುದನ್ನು ಆದಿಪುರಾಣದ ಆರಂಭದಲ್ಲಿಯೇ ಕಾಣಬಹುದು. ಜಿನಸೇನರ ಪೂರ್ವ ಪುರಾಣದಂತೆ ಪಂಪನ ಆದಿಪುರಾಣವೂ ಆದಿದೇವನ ಎರಡನೆಯ ಭವವಾದ ಮಹಾಬಲನಿಂದ ಪ್ರಾರಂಭವಾಗುತ್ತದೆ, ಇದರಲ್ಲಿ ವ್ಯತ್ಯಾಸವಿಲ್ಲ. ವ್ಯತ್ಯಾಸವೆಲ್ಲ ಅದುವರೆಗಿನ ಆರಂಭದ ನಿರೂಪಣೆಯನ್ನು ಪಂಪ ಮೊಟಕುಗೊಳಿಸಿದ್ದರಲ್ಲಿದೆ. ಪೂರ್ವಪುರಾಣದಲ್ಲಿ ಜಿನಸೇನರು ಮಹಾಬಲನ ಕಥೆಗೆ ತೊಡಗುವುದು ನಾಲ್ಕನೆಯ ಪರ್ವದ ಉತ್ತರಾರ್ಧದಲ್ಲಿ.[32] ಆ ವೇಳೆಗೆ 3½ ಪರ್ವಗಳೂ 743 ಶ್ಲೋಕಗಳೂ ಮುಗಿದಿರುತ್ತವೆ. ಪಂಪ ತನ್ನ ಕಾವ್ಯಾರಂಭದಲ್ಲಿಯೇ ಮಹಾಬಲನ ಚರಿತೆಗೆ ತೊಡಗುತ್ತಾನೆ.[33] ಸಂಸ್ಕೃತ ಪೂರ್ವ ಪುರಾಣಕ್ಕೆ ಆ ಬಗೆಯ ವಿಸ್ತಾರವಾದ ಪೂರ್ವ ಪೀಠಿಕೆಯ ಅಗತ್ಯವಿತ್ತು. ಏಕೆಂದರೆ ಅದು ತ್ರಿಷಷ್ಟಿ ಶಲಾಕಾ ಪುರುಷರ ಇಡೀ ಮಹಾಪುರಾಣಕ್ಕೆ ಪ್ರಾರಂಭವಾಗಿ ನಿಲ್ಲುವಂತಹುದು. ಕನ್ನಡದಲ್ಲಿ ಈ ಸುದೀರ್ಘ ಕಥನದ ಆವಶ್ಯಕತೆಯಿಲ್ಲ. ಕನ್ನಡ ಆದಿಪು. ಕೇವಲ ಒಬ್ಬ ತೀರ್ಥಂಕರನ ಚರಿತೆ. ಇಲ್ಲಿಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಂಡು, ಉಳಿದ ದೊಡ್ಡ ಹೊರೆಯನ್ನು ತಗ್ಗಿಸುವಲ್ಲಿ ಪಂಪನ ಸಂಗ್ರಹಗುಣ ಸಾಮರ್ಥ್ಯದ ಜತೆಗೆ ಔಚಿತ್ಯಜ್ಞಾನವೂ ಪ್ರಕಟವಾಗಿದೆ. ಇದರೊಂದಿಗೇ ತೌಲನಿಕ ವಿಮರ್ಶಕರು ಮುಖ್ಯವಾಗಿ ಗಮನಿಸಬೇಕಾದುದು ಪಂಪನಿಗೆ ಕಾವ್ಯವಸ್ತುವಿನ ಮೇಲಿರುವ ಪ್ರಚಂಡ ಹಿಡಿತ. ಜಿನಸೇನಾಚಾರ್ಯ ವಿರಚಿತ ಹತ್ತು ಸಾವಿರ ಶ್ಲೋಕ ಪ್ರಮಾಣದ ಪೂರ್ವ ಪುರಾಣದ ಬೃಹತ್ತನ್ನು ಪಂಪ 1630 ಪದ್ಯಗಳಿಗೆ ಮತ್ತು ಗದ್ಯಕ್ಕೆ ಅಳವಡಿಸಿದ್ದಾನೆ. ಪೂರ್ವ ಪುರಾಣದ ಸಾರ ಮತ್ತು ಸ್ವಾರಸ್ಯ ಕೆಡದಂತೆ ಈ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ.

ಸಮಗ್ರ ಕಥೆಯ ಕಲ್ಪನೆ ಮತ್ತು ಪ್ರಭುತ್ವ ಇದ್ದಾಗ ಈ ಕೆಲಸ ಸುಗಮವಾಗುತ್ತದೆ; ಇದರಲ್ಲಿ ಪಂಪನ ಪ್ರತಿಭೆಯೊಂದಿಗೆ ಪಾಂಡಿತ್ಯದ ಸಾಹಚರ್ಯವೂ ಸಪ್ತಪದಿ ಹಾಕಿದೆ.

ಪಂಪ ಮೂಲ ಕಥೆಯನ್ನು ಹೇಗೆ ಲಂಬಿಸುತ್ತಾನೆಂಬುದಕ್ಕೆ ನೀಲಾಂಜನೆಯ ನೃತ್ಯಪ್ರಸಂಗ ತಕ್ಕ ನಿದರ್ಶನವಾಗಿದೆ. ಪೂರ್ವ ಪು.ದಲ್ಲಿ "ಒಂದು ದಿನ ಮಹಾ ಸಭಾ ಮಧ್ಯದಲ್ಲಿ ಅನೇಕ ರಾಜರಿಂದ ಸುತ್ತುವರಿದ ಆದಿನಾಥನು ಸೂರ್ಯನು ನಿಷಧ ಪರ್ವತದ ತಪ್ಪಲನ್ನು ಹೊಂದುವಂತೆ ಸಿಂಹಾಸನದಲ್ಲಿ ಕುಳಿತನು[93] ಎಂದು ಒಂದೇ ಒಂದು ಶ್ಲೋಕದಲ್ಲಿ ಹೇಳಿರುವುದನ್ನು ಪಂಪ ಎಂಟು ಪದ್ಯಗಳಿಗೆ ವಿಸ್ತರಿಸಿ ಸುಂದರ ವಾದ ಭೂಮಿಕೆ ನಿರ್ಮಿಸಿದ್ದಾನೆ;[94] ಇವರಲ್ಲಿ ಸಮಕಾಲೀನ ರಾಜಾಸ್ಥಾನದ ಕಟ್ಟು ಪಾಡುಗಳನ್ನು ಕೂಡ ಕೊಟ್ಟಿದ್ದಾನೆ.[95] ಪೂರ್ವ ಪುರಾಣದಲ್ಲಿ ಆದಿದೇವನ ಒಡ್ಡೋಲಗಕ್ಕೆ ಬಂದ ದೇವೇಂದ್ರನು ಸ್ವಯಿಚ್ಛೆಯಿಂದ ಮೊದಲು ಅಪ್ಸರ ಸ್ತ್ರೀಯರ ನೃತ್ಯವನ್ನು ಪ್ರಯೋಗಿಸಿ, ಸ್ವಾಮಿಯ ಮನಸ್ಸಂತೋಷಪಡಿಸುತ್ತಾನೆ; ಅನಂತರ ಆದಿದೇವನಿಗೆ ವೈರಾಗ್ಯವನ್ನುಂಟುಮಾಡಲು 'ಸ್ವಲ್ಪ ಆಯುಷ್ಯವುಳ್ಳ ಸ್ತ್ರೀಪಾತ್ರ ವನ್ನು ನರ್ತನಕ್ಕೆ ಪ್ರಯೋಗಿಸಿದನು' ಎಂದು ತೀರ ವಾಚ್ಯವಾಗಿಸಿದ ನಿರೂಪಣೆ ಯಿದೆ.[96] ಅತಿ ವ್ಯಕ್ತವಾದ, ವರದಿ ರೂಪದ ಈ ವಿವರಣೆ ಹುಟ್ಟು ಕವಿಯಾದ ಪಂಪನಿಗೆ ಹಿಡಿಸಲಿಲ್ಲ. ಪೂರ್ವ ಪುರಾಣದ ತಿರುಳನ್ನು ತಿದ್ದಿ ತೀಡಿ ಪ್ರಬಲವಾದ ಅಭಿವ್ಯಕ್ತಿಯಾಗುವಂತೆ ರೂಪುಗೊಳಿಸಿದ್ದಾನೆ; ಜತೆಗೆ ವೈರಾಗ್ಯಕ್ಕೆ ಅವಧಾರಣೆ ಕೊಟ್ಟು ಇಡೀ ಸಂನಿವೇಶಕ್ಕೆ ನಾಟಕದ ಕಳೆ ಕಟ್ಟಿದ್ದಾನೆ. ಎರಡು ಸಲ ನೃತ್ಯ ನಡೆ ಯುವುದನ್ನು ತಪ್ಪಿಸಿ, ಒಂದೇ ಸಲ ನೃತ್ಯ ಕಾರ್ಯಕ್ರಮ ನಡೆದಂತೆ ಪಂಪ ಬದಲಾ ಯಿಸಿದ್ದಾನೆ; ಈ ನಾಟ್ಯವನ್ನು ಏರ್ಪಡಿಸುವ ಮೊದಲು ಇಂದ್ರನು ಆದಿದೇವನಲ್ಲಿ ಅಪ್ಪಣೆ ಬೇಡಿ ಒಪ್ಪಿಗೆ ಪಡೆಯುತ್ತಾನೆ.[97] ಪಂಪ ಕೊಟ್ಟಿರುವ ಈ ತಿರುವು ಕೂಡ ಉಚಿತವಾಗಿದೆ. ಇದಕ್ಕಿಂತ ಇನ್ನೂ ಮಹತ್ತರವಾದ ಪಂಪನ ಮಾರ್ಪಾಟೆಂದರೆ, ನೀಲಾಂಜನೆ ಅಲ್ಪಾಯುವಾಗಿದ್ದಳೆಂಬುದನ್ನು ಪೂರ್ವ ಪುರಾಣದಲ್ಲಿ ಆಕೆಯ ನಾಟ್ಯ ಪ್ರವೇಶಕ್ಕೂ ಮೊದಲೇ ಹೇಳಿರುವುದನ್ನು ತಪ್ಪಿಸಿ, ನೃತ್ಯಾವಸರದ ಆಯುತ ವೇಳೆ ಯಲ್ಲಷ್ಟೇ ಸೂಚಿಸಿರುವುದು. ಕರ್ಮಯೋಗಿಯಾದ ಜಿನಸೇನರಿಗೂ, ಕಾವ್ಯಯೋಗಿ ಯಾದ ಪಂಪನಿಗೂ ಇರುವ ಸೃಜನ ಶಕ್ತಿಯ ಅಂತರವನ್ನು ಈ ಮಾರ್ಪಾಟು ಹರಳು ಗೊಳಿಸಿದೆ. ಪೂರ್ವಪು.ದಲ್ಲಿ ಆರು ಶ್ಲೋಕಗಳಲ್ಲಿರುವ[98] ಈ ನೃತ್ಯ ವರ್ಣನೆ ಯನ್ನು ಪಂಪ ಮೂವತ್ತು ಪದ್ಯಗಳಲ್ಲಿ ರಸಭಟ್ಟಿಯಿಳಿಸಿದ್ದಾನೆ.[99] ಪಂಪ ಹಲವು ಕಲೆಗಳಲ್ಲಿ ಅಭಿಜ್ಞ, ಲಲಿತ ಕಲೆಗಳಲ್ಲಿ ಪರಿಶ್ರಮವುಳ್ಳಾತ. ನೃತ್ಯ ಸಂಗೀತ ಶಿಲ್ಪಾದಿ ವಿದ್ಯೆಗಳಲ್ಲಿ ಆತನಿಗಿದ್ದ ಪ್ರವೇಶ ಎಷ್ಟು ಸೂಕ್ಷ್ಮ ಹಾಗೂ ತಲಸ್ಪರ್ಶಿಯಾಗಿತ್ತೆಂಬುದು ಇಲ್ಲಿ ನಿಚ್ಚಳವಾಗಿದೆ.

ಯಾವುದೇ ಭಾಷೆಯ ಯಾವ ಮಹಾಕವಿಗೂ ಇರುವ ಏಕೈಕ ಅಭಿವ್ಯಕ್ತಿ ಮಾಧ್ಯಮ ಭಾಷೆ. ಕವಿಯ ಎಲ್ಲ ಸೃಜನ ಸಾಮರ್ಥ್ಯವೂ ಆಯಾ ಭಾಷೆಯಲ್ಲೇ ಸಂಭವಿಸಬೇಕು. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಬಿಗಿ ಬನಿ ಬಿಬ್ಬೋಕ ಮೊನಚು ಮತ್ತು ಬಾಗು ಬಳುಕುಗಳನ್ನು ಪಂಪ ದುಡಿಸಿಕೊಂಡು ಸೂರೆ ಮಾಡಿರುವ ರೀತಿ ಅನನ್ಯವೆನಿಸುವಂತಹುದು. ಹಿತಮಿತವಾದ ಪ್ರಸನ್ನ ಮಾತುಗಾರಿಕೆಯ ಮೂಲಕ ಕನ್ನಡ ನುಡಿ ಜಾಣ ಪಂಪ ದೊಡ್ಡದನ್ನು ಸಾಧಿಸಿರುವುದು ಕನ್ನಡದ ಭಾಗ್ಯ. ಸಂಪೂರ್ಣ ಪು.ಕ ಆದಿಪುವಾಗಿ ಅವತರಿಸುವಂತೆ ತನ್ನ ಸೃಜನ ಶಕ್ತಿಯನ್ನು ಅದಕ್ಕೆ ಪಂಪ ಒಡ್ಡಿದ ರೀತಿ ಪರಿಭಾವ್ಯವಾದುದು. ಪೂರ್ವಪು.ದ ವಿಸ್ತೃತವಾದ ಕಥೆಯನ್ನು ಸಂಸ್ಕೃತದಿಂದ ಕನ್ನಡಕ್ಕೆ ಹೊರಳಿಸುವಾಗ ಪಂಪಕವಿ ಸ್ವಾರಸ್ಯದೊಂದಿಗೆ ಸೊಗಸನ್ನೂ ಹೊಳೆಯಿಸಿರುವ ಭಾಗಗಳಲ್ಲಿ ಬಾಹುಬಲಿಯ ವೈರಾಗ್ಯ ಪ್ರಸಂಗ ಪ್ರಮುಖವಾದುದು. ಹೊಳಪಿನೊಂದಿಗೆ ಹೊಸತನವನ್ನೂ ಪ್ರಕಟಿಸಿರುವ ಪದ್ಯಗಳನ್ನು ಮಾತ್ರ ಗಮನಿಸಿದರೆ ಸಾಕು, ಈ ಅಂಶಕ್ಕೆ ಪಂಜು ಹಿಡಿದಂತಾಗುತ್ತದೆ.

'ರೆಪ್ಪೆ ಹೊಡೆಯದಿರುವುದೂ ಶಾಂತವೂ ಗಂಭೀರವೂ ಆದ ದೃಷ್ಟಿಯನ್ನು ಹೊಂದಿರುವ ಭುಜಬಲಿಯು ದೃಷ್ಟಿಯುದ್ಧದಲ್ಲಿ ಶೀಘ್ರವಾಗಿ ಜಯವನ್ನು ಹೊಂದಿದನು' ಎಂದು ಪೂರ್ವಪು.ದ ವಿವರಣೆ (36–51). ಈ ಭಾವವನ್ನು ಪಂಪ ಪ್ರತಿಬಿಂಬಿಸಿರುವುದು ಹೀಗೆ :

ಲಲಿತಮುಖಸರಸಿಜಂ ನಿ
ಶ್ಚಳಪಕ್ಷ್ಮಂ ಸ್ತಿಮಿತ ತಾರಕಂ ಭುಜಬಲಿ ಕ
ಣ್ಣೊಳೆ ತವೆ ಪೀರ್ವವೊಲೇ ನಿ
ಶ್ಚಳತನು ನಡೆ ನೋಡೆ ಭರತರಾಜಂ ಸೋಲ್ತಂ ॥ 14-105

ನಿರ್ನಿಮೇಷಾಂ ಎಂಬುದಕ್ಕೆ ನಿಶ್ಚಳ ಪಕ್ಷ್ಮಂ ಎಂಬ ಸಮಾನಾರ್ಥಕ ಸಂಸ್ಕೃತ ಪರ್ಯಾಯ ಶಬ್ದ ಬಳಕೆಯಾಗಿರುವುದನ್ನು ಬಿಟ್ಟರೆ ಇಡೀ ಪದ್ಯ ಬೇರೆ ಆಕಾರ ತಳೆದಿದೆ. 'ಬಾಹುಬಲಿ ಜಯ ಪಡೆದನು' (ಜಯಂ ಪ್ರಾಪ) ಎಂಬ ವಿಜಯೋಕ್ತಿಗೆ ಬದಲಾಗಿ ಪಂಪ ಇಲ್ಲಿ 'ಭರತರಾಜ ಸೋತನು' ಎನ್ನುತ್ತಾನೆ. ಇಡೀ ಪದ್ಯಕ್ಕೆ ಹಣತೆ ಹಚ್ಚಿಟ್ಟಂತಿರುವ 'ಕಣ್ಣೊಳೆ ತವೆ ಪೀರ್ವವೊಲ್' ಎಂಬ ನುಡಿ ನಾಣ್ಯ ಪಂಪನ ಟಂಕಸಾಲೆಯಿಂದ ಬಂದದ್ದು.

ಪೂರ್ವ ಪು. : ಜಲಯುದ್ಧದಲ್ಲಿ ಗರ್ವಿಷ್ಠರಾಗಿ ಸರೋವರ ಹೊಕ್ಕು ದಿಗ್ಗಜಗಳಂತೆ ಉದ್ದತೋಳುಗಳಿಂದ ಜಲಸೇಚನೆ ಮಾಡಿಕೊಂಡರು (36-53)

ಆದಿ ಪು. : ಸಲಗಗಳೆರಡು ಸರೋವರದ ನೀರನ್ನು ವಿಲಾಸದಿಂದ ಹೊಗುವಂತೆ ಅವರದಿಂದ ಹೊಕ್ಕು, ಕಮಲಕೇಸರ

ರಜದಿಂದ ಪೊಂಬಣ್ಣವಾದ ತಿಳಿನೀರನ್ನು ಎರಚಾಡಿದರು (14–106)

ಮೂಲದಲ್ಲಿಲ್ಲದಿದ್ದರೂ ಪಂಪ ತನ್ನ ಪ್ರತಿಭಾಕಮ್ಮಟದಲ್ಲಿ ಸೃಷ್ಟಿಸಿದ್ದು ಇಲ್ಲಿದೆ: 'ಭರತನ ಮುಖದಲ್ಲಿ ಹಬ್ಬಿದ ಉಗ್ರವಾದ ಕೋಪಾಗ್ನಿಯನ್ನು ನಂದಿಸಲೋ ಎಂಬಂತೆ ಮರಕತಮಣಿ ವರ್ಣದ ಬಾಹುಬಲಿ ಆನೆಯ ಸೊಂಡಿಲಂತಿದ್ದ ಕೈಗಳಿಂದ ತಿಳಿನೀರನ್ನು ಒಡನೊಡನೆ ತುಳುಕಾಡಿದನು' (14–107); ಭರತೇಶ್ವರನು 500 ಬಿಲ್ಲುಗಳಷ್ಟು ಎತ್ತರವುಳ್ಳವನು, ಬಾಹುಬಲಿ 525 ಬಿಲ್ಲುಗಳೆತ್ತರದವನು (14–107ವ).

ಪೂರ್ವ ಪು. : ಭರತೇಶ್ವರನು ಎರಚಿದ ನೀರು ಉನ್ನತವಾದ ಬಾಹುಬಲಿಯ ಮುಖವು ದೂರವಾಗಿದ್ದುದರಿಂದ ಅದನ್ನು ಹೊಂದದೆ ಸಮೀಪದಲ್ಲಿ ಬಿದ್ದಿತು (36–55).

ಆದಿ ಪು. : (ಭರತನು) ವೇಗದಿಂದ ತುಳುಕಿದ ನೀರು ಬಾಹುಬಲಿಯ ಎದೆಯಮೇಲೆ ಮುತ್ತಿನ ಹಾರದ ಕಿರಣಗಳ ಕಾಂತಿಯನ್ನು ವಹಿಸಿತು. ದುರ್ಧರವಾದ ಜಲಯುದ್ಧವೂ ಭರತ ಚಕ್ರವರ್ತಿಗೆ ವಿಶೇಷವಾಗಿ ಪರಿಭವವನ್ನೂ ತಂದಿತು. (14–108)

ರಾಜ್ಯಮೋಹಾವಿಷ್ಟನಾಗಿ ಒಡಹುಟ್ಟಿದವನ ಮೇಲೂ ಚಕ್ರರತ್ನವನ್ನು ಭರತ ಪ್ರಯೋಗಿಸಿದಮೇಲೆ ಬಾಹುಬಲಿ ಅಂತರ್ಮುಖಿಯಾಗಿ ಚಿಂತಿಸುತ್ತಾನೆ. ಈ ಸ್ವಗತ ಲಹರಿಯಲ್ಲಿ ಪಂಪ ಮೂಲದ ಚಿನ್ನದ ಒಡವೆಗೆ ಕೆಲವು ಹೊಸ ವಜ್ರದ ಹರಳುಗಳನ್ನು ಕೂಡಿಸಿದ್ದಾನೆ. ಅವುಗಳಲ್ಲಿ 14–121, 122, 132, 133 ಮೊದಲಾದ ಪದ್ಯಗಳು ವಿಶಿಷ್ಟವಾಗಿದ್ದು ಪಂಪನಿಗೆ ಮಹಾಕವಿ ಪಟ್ಟವನ್ನು ಗಟ್ಟಿಯಾಗಿಸುತ್ತವೆ, ಇಲ್ಲಿರುವ ವಿನೂತನ ಸ್ವೋಪಜ್ಞ ಕಲ್ಪನೆಯ ಶ್ರೀಮಂತಿಕೆ ಪಂಪನ ಪ್ರತಿಭೆಯ ಅತ್ಯುನ್ನತಿಯನ್ನು ಸಾರುವಂತಹುದಾಗಿದೆ.

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸವಂ ನೆಗಟ್ದುದೆಂಬಾಶಂಕೆಯಂ ಮಾಡಿದಂ । 100

ಈ ಪದ್ಯ ಗರ್ಭೀಕರಿಸಿಕೊಂಡಿರುವ, ಪರಿಭಾವಿಸಿದಷ್ಟೂ ಮಾಸದ ಚೆಲುವಿನ ಚಿತ್ರ ಯಾವುದೇ ಕವಿಗೆ ಗೌರವ ತರುವಂತಹುದಾಗಿದೆ.

ಆದಿಪು.ದಲ್ಲಿ ತುಂಬ ಜನಪ್ರಿಯವಾಗಿರುವ ಪದ್ಯಗಳಲ್ಲೊಂದು 14-130ನೆಯ ಪದ್ಯ. ಇದಕ್ಕೆ ಪೂರ್ವಪು.ದ 36-97ನೆಯ ಪದ್ಯ (ಶ್ಲೋಕ) ಸ್ಫೂರ್ತಿ ಕೊಟ್ಟಿದ್ದರೂ ಪಂಪ ಅದಕ್ಕೆ ಬಾಣವಾಣಿಯ ಬಣ್ಣಕಟ್ಟಿ ಇಡೀ ಪದ್ಯ ಹೊಸ ಅರ್ಥಕೋಶದಿಂದ ತುಂಬಿಕೊಳ್ಳುವಂತೆ, ಚಿಂತಿಸಿದಂತೆಲ್ಲಾ ಅರ್ಥ ಸುರುಳಿ ಬಿಚ್ಚಿಕೊಳ್ಳುತ್ತಾ ಹೋಗುವಂತೆ ಕಾಯಕಲ್ಪವೆಸಗಿದ್ದಾನೆ.

ಸಮಾರೋಪ :

ಈಗಾಗಲೇ ಹೇಳಿರುವಂತೆ ಪೂರ್ವಪು.ವು ಉನ್ನತವಾದ ಕಾವ್ಯವೇ.[101] 18 ವರ್ಣನೆಗಳು, ಅಲಂಕಾರ, ಛಂದಸ್ಸು, ರೀತಿ, ಪಾತ್ರಚಿತ್ರಣ—ಸುವ್ಯವಸ್ಥಿತವಾಗಿದೆ. ಜಿನಸೇನರಿಗೆ ಕಾವ್ಯದ ಪರಿಕಲ್ಪನೆಯೂ ಸ್ಪಷ್ಟವಾಗಿದೆ; ಇದಕ್ಕೆ ಅವರ ಹೇಳಿಕೆಗಳು ದಿಕ್ಸೂಚಿಯಾಗಿವೆ. ಪೂರ್ವಪು.ದ ಮೊದಲನೆಯ ಪರ್ವದಲ್ಲಿ ಶ್ಲೋಕ 61 ರಿಂದ 106ರವರೆಗೆ ಬರುವ 45 ಶ್ಲೋಕಗಳು ಕವಿ-ಕಾವ್ಯ ಜಿಜ್ಞಾಸೆಗೆ ಮೀಸಲು. ಪೂರ್ವಪು.ದ ಇನ್ನೂ ಅನೇಕ ಶ್ಲೋಕಗಳಲ್ಲಿ ಇಂಥ ಅಭಿಪ್ರಾಯ ಮೊಳಗುಗೊಟ್ಟಿದೆ. ಒಟ್ಟಾರೆ ಜಿನಸೇನರು ಪೂರ್ವಪು.ವನ್ನು ಕಾವ್ಯವನ್ನಾಗಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ. ಆದರೆ ಜಿನಸೇನರ ದಾರಿ ಗುರಿ ಧೋರಣೆ ಮನೋಧರ್ಮ ಬೇರೆ ನೆಲೆಗೆ ಸೇರಿದ್ದು. ಅವರ ಕೇಂದ್ರಪ್ರಜ್ಞೆ ಕ್ರಿಯಾಶೀಲವಾಗುವುದು ಕಾವ್ಯೇತರ ಕಾರಣದ ಭಿನ್ನಭೂಮಿಕೆಯಲ್ಲಿ. ಅವರ ಕಣ್ಮುಂದೆ ಇರುವುದು ವ್ಯಾಸ, ವಾಲ್ಮೀಕಿ, ಕಾಳಿದಾಸರಂಥವರ ಕಾವ್ಯಗಳಲ್ಲ. ಜಿನಸೇನರು ಕೃತಿರಚನೆ ಮಾಡುತ್ತಿರುವುದು ಜಿನಾಗಮಪ್ರೇಮಿಗಳಾದ ಭವ್ಯಜನಸ್ತೋಮಕ್ಕೆ. ಆದರಿಂದಾಗಿ ಪೂರ್ವಪು.ದಲ್ಲಿ ಕಾವ್ಯವಿದ್ದರೂ ಅದು ಎರಡನೆಯ ಪಾತಳಿಯಲ್ಲಿ ಚಲಿಸುತ್ತದೆ. ಅಂದರೆ ಸೈದ್ಧಾಂತಿಕ ಒಲವಿನಿಂದಾಗಿ ಧರ್ಮಪ್ರಚಾರಕ ಧ್ವನಿ ಬೇಗ ಕೇಳುತ್ತದೆ. ಆದರೆ ತೌಲನಿಕ ವಿಮರ್ಶಕರು ಪಂಪನನ್ನು ಮೇಲೆತ್ತುವ ಭರದಲ್ಲಿ ಜಿನಸೇನರನ್ನು ಕೆಳಕ್ಕೆತ್ತಿ ಹಾಕುವ ಅಪಾಯವಿರುತ್ತದೆ. ಸಂಸ್ಕೃತ ಪ್ರಾಕೃತಗಳಲ್ಲಿ ನಿಷ್ಣಾತರಾದ ಜಿನಸೇನರು ರಸಋಷಿ; ಅವರು ಪ್ರಾಯಃ ಕನ್ನಡವನ್ನೂ ಬಲ್ಲವರಾಗಿದ್ದರು. ಅಂಥ ಪ್ರತಿಷ್ಠಿತರಿಂದ ರಚಿತವಾದ ಕೃತಿಯನ್ನು ಅರಿಸಿಕೊಂಡಿದ್ದರಿಂದ ಪಂಪನಿಗೆ ಸಿಂಹ ಅರಣ್ಯ ಹೊಕ್ಕಂತಾಗಿದೆ.

ಆದರೂ ಜಿನಸೇನರ ಶ್ಲೋಕಗಳ ಬೆಳಕಿನೆದುರು ಒಮ್ಮೊಮ್ಮೆ ಪಂಪನ ಪದ್ಯಗಳು ಮ್ಲಾನವಾಗುವುದುಂಟು. ಪಂಪನ ಕಾವ್ಯ ಪೂರ್ವಪು. ದೆದುರು ಮಸುಳಿಸಿರುವ ಕೆಲವು ಭಾಗಗಳುಂಟು. ಆ ಅಂಶವನ್ನೂ ಸಂತೋಷಿಸಿಯಾದರೂ ಇಂಥ ಸಂಪ್ರಬಂಧದಲ್ಲಿ ಹೇಳಬೇಕಾದುದು ಯೋಗ್ಯವೆಂಬ ಪರಿಗ್ರಹಿಕೆಯಿಂದ ಮೂರು ನಿದರ್ಶನಗಳನ್ನು ಹೆಸರಿಸುತ್ತೇನೆ :

1. ಭರತ-ಬಾಹುಬಲಿ ಒಡಹುಟ್ಟಿದವರು, ಇಬ್ಬರೂ ಸಮಶಕ್ತಿಯ ಯುದ್ಧವೀರರು. ಅವರಿಬ್ಬರ ಪರಾಕ್ರಮಾದಿ ಬಲ ಪ್ರದರ್ಶನವನ್ನು ಜಿನಸೇನರು ತಟಸ್ಥ ಭೂಮಿಕೆಯಲ್ಲಿ ನಿಂತು ವಿವರಣೆ ಕೊಟ್ಟಿದ್ದಾರೆ; ಅವರ ತಾಟಸ್ಥ್ಯವನ್ನು 36–57, 58 ಮೊದಲಾದ ಶ್ಲೋಕಗಳು ಬಿಂಬಿಸಿವೆ. ಸೋದರರಿಬ್ಬರ ಗುಣಾವಗುಣಗಳನ್ನು ನಿರ್ವಿಕಾರ ದಿಂದ ನಿರೂಪಿಸಿದ್ದಾರೆ. ಬಾಹುಬಲಿ ಭರತನನ್ನು ಗೆದ್ದ ಉರುಬಿನಲ್ಲಿ ಅನೇಕ ಸ್ತುತಿ ನಿಂದೆಯ ಮಾತುಗಳನ್ನಾಡಿದನೆಂದು ಪೂರ್ವಪು.ದಲ್ಲಿದೆ (36–91 ರಿಂದ 98). ಮನುಷ್ಯ ಸ್ವಭಾವದ ಪಾತಳಿಗಳನ್ನೂ ಸಂಕೀರ್ಣತೆಯನ್ನೂ ಬಲ್ಲ ಮಹಾ ಕವಿಗಳು ಮಹಾತ್ಮರ ಪಾತ್ರಗಳ ಲ್ಲಿರುವ ಕಪ್ಪು-ಬಿಳುಪನ್ನು ಹೀಗೆ ವಸ್ತುನಿಷ್ಟದೃಷ್ಟಿಯಿಂದ ವಿವರಿಸು ತ್ತಾನೆ.

ಪಂಪನಿಗೆ ಈ ಪ್ರಸಂಗದಲ್ಲಿ ನಿರ್ಲಿಪ್ತ ನಿರೂಪಣೆ ಸಾಧ್ಯವಾಗಿಲ್ಲ. ಸೋದರರಿಬ್ಬರನ್ನೂ ಸಮಾನವಾಗಿ ಕಂಡಿಲ್ಲ. ಆದಿಪು.ದ ಈ ಭಾಗದಲ್ಲಿ ಮಲಿನತೆಯ ಚುಕ್ಕಿಗಳು ಕಾಣುತ್ತವೆ. ಚಕ್ರವರ್ತಿ ಭರತನ ಪಾತ್ರವನ್ನು ಕಳಂಕಿತಗೊಳಿಸಿ, ಬಾಹುಬಲಿಯ ಪಾತ್ರವನ್ನು ವೈಭವೀಕರಿಸಿದ್ದಾನೆ. ಪೂರ್ವಗ್ರಹ ಪೀಡಿತನಾದ ಪಂಪ, ಬಾಹುಬಲಿಯನ್ನು ಉದಾತ್ತೀಕರಿ ಸಲು ಬೇಕಾದ, ಪೋಷಕ ಭಾವಪುಷ್ಟಿಗೆ ಮುತುವರ್ಜಿ ತೋರಿದ್ದಾನೆ; ಭರತನ ಮೇಲ್ಮೆಯನ್ನೂ ಸಾರುವ ಪೂರ್ವಪು.ದ ಶ್ಲೋಕಗಳನ್ನು ತೇಲಿಸಿದ್ದಾನೆ. ಬಹುಶಃ ಪಂಪನ ಈ ಅಪಚಾರಕ್ಕೆ ಉತ್ತರವೋ ಎಂಬಂತೆ ರತ್ನಾಕರ ವರ್ಣಿ 'ಭರತೇಶ ವೈಭವ' ವನ್ನು ರಚಿಸಿ ಬಾಹು ಬಲಿಯನ್ನು ಕೆಳಕ್ಕಿಸಿದ್ದಾನೆ.

ಈ ಬಗೆಯ ಪಕ್ಷಪಾತ ಧೋರಣೆಯಿಂದ ಪಂಪ ವರ್ತಿಸಿರುವುದ ರಲ್ಲಿ ಏನಾದರೂ ಚಾರಿತ್ರಿಕ ಧ್ವನಿಯಿದೆಯೆ? ಚಕ್ರವರ್ತಿಯನ್ನು ಬೀಳುಗಳೆದು ಸಾಮಂತನನ್ನು ಮೇಲೆಳೆದಿರುವುದರ ಹಿಂದೆ ಪ್ರವರ್ತಿ ಸಿರುವ ಆಶಯ ಯಾವುದು? ಪಂಪನ ಎದೆಯಾಳದಲ್ಲಿ ಅಂದಿನ ರಾಷ್ಟ್ರಕೂಟ ಚಕ್ರವರ್ತಿಯ ಆಸ್ಥಾನದಲ್ಲಿ ಎಡೆ ಸಿಗಲಿಲ್ಲವೆಂಬ ಭಾವನೆ ಹೆಡೆಯೆತ್ತಿದೆಯೆ?

2. ಪೂರ್ವಪು.ದಲ್ಲಿ ಭರತನ 36–64 ನೆಯ ಶ್ಲೋಕದ ಚಿತ್ರ ಪಂಪನಲ್ಲಿ ಇಲ್ಲ 36–54 ರಲ್ಲಿರುವ ಭರತನ ಮಹಿಮೆಯನ್ನು ಪಂಪ ಅನಾಮತ್ತಾಗಿ ಮತ್ತು ನಿರ್ದಯನಾಗಿ ಬಾಹುಬಲಿಗೆ ವರ್ಗಾಯಿ

ಸಿದ್ದಾನೆ (14–108). ಅದೇ ರೀತಿ 36–59ರ ಚಿತ್ರ ಪಂಪನಲ್ಲಿ ಸಪ್ಪೆಯಾಗಿದೆ.

3. ಜಿನಶಿಶುವಿನ ಸ್ನಾನ ತೀರ್ಥದಲ್ಲಿ ರವಿ ಚಂದ್ರ ತಾರೆಗಳು ತೇಲುತ್ತಿದ್ದ ಚಿತ್ರ ಮುಂತಾದ ಮನೋಜ್ಞವಾದ ವಿವರಗಳು ಪೂರ್ವಪು.ದಲ್ಲಿ ಹೃದ್ಯವಾಗಿವೆ; 13–123 ರಿಂದ 169 ರವರೆಗೆ ಶ್ಲೋಕಗಳಲಿ ಜಿನಸೇನರು ತಲ್ಲೀನತೆಯಿಂದ ಈ ವರ್ಣನೆ ಕೊಟ್ಟಿದ್ದಾರೆ. ಪಂಪ ಇದರ ಚೆಲುವನ್ನು ಗ್ರಹಿಸಿಲ್ಲ. ತೀರ ಕಿರಿದಾಗಿ ಹಾರಿಸಿಬಿಟ್ಟಿದ್ದಾನೆ.

ಈ ಬಗೆಯ ಇನ್ನೂ ಕೆಲವು ದೃಷ್ಟಾಂತಗಳೊಂದಿಗೆ ಜಿನಸೇನರು ಮೇಲುಗೈ ಪಡೆದಿರುವುದನ್ನೂ ತೋರಿಸಬಹುದು. ಮನುಷ್ಯ ಜಾತಿ ತಾನೊಂದೆ ವಲಂ ಎಂಬ ಪಂಪನ ಪ್ರಸಿದ್ಧೋಕ್ತಿಯೂ ಜಿನಸೇನರ ಪ್ರತಿಧ್ವನಿಯೇ ಆಗಿದೆ. ಜಿನಸೇನರ ಹೆಗಲಿಂದ ಕೆಳಗಿಳಿಸಿ ನೆಲದಮೇಲೆ ನಿಲ್ಲಿಸಿದಾಗ ಪಂಪ ಗಿಡ್ಡನಾಗಿ ಕಾಣುತ್ತಾನೆ; ಆದರೆ ಪಂಪ ಕೆಳಗಿಳಿಯುವುದು ಕಡಮೆ. ಜಿನಸೇನರ ಪೂರ್ವಪು. ಸೊಗಸಾದ, ಗಂಭೀರವಾದ ಸಂಸ್ಕೃತ ಶೈಲಿಯಲ್ಲಿ ರಚಿತವಾಗಿದೆ. ಕಿರಿದರಲ್ಲಿ ಹಿರಿದನ್ನು ಕಾಣಿಸುವ ಆ ಪಾರದರ್ಶಕ ಶೈಲಿಯನ್ನು ಮೆಚ್ಚದಿರಲು ಸಾಧ್ಯವಿಲ್ಲ. ಪೂರ್ವಪು.ದಲ್ಲಿ ಕಾವ್ಯಶಕ್ತಿಯೇ ಅಲ್ಲದೆ, ಅಗಾಧವಾದ ಶಾಸ್ತ್ರಜ್ಞಾನ, ಲೋಕಜ್ಞಾನ ಇತಿಹಾಸ ಪ್ರಜ್ಞೆ ಮಾನವೀಯ ಮೌಲ್ಯ ಪ್ರತಿಪಾದಿತವಾಗಿದೆ. ಹೀಗಾಗಿ ಅದು ಧಾರ್ಮಿಕ ಹಿರಿಮೆಯೊಂದಿಗೆ ಸಾಂಸ್ಕೃತಿಕ ಮಹತ್ವವನ್ನೂ ಪಡೆದಿದೆ. ಪ್ರಾಚೀನ ಪರಂಪರೆಯ ಭವ್ಯ ಪ್ರತೀಕವಾಗಿರುವ ಇಂಥ ಮಹಾಕೃತಿಗಳನ್ನು ತನ್ನ ದೇಶ ಕಾಲ ಆವರಣಗಳಿಗೆ ಇಳಿಸಿಕೊಳ್ಳುವ ಹೊಣೆಗಾರಿಕೆಯ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಮಹಾಸಾಮರ್ಥ್ಯ ಬೇಕಾಗುತ್ತದೆ. ಈ ಬಗೆಯ ಪ್ರಾಕ್ ಪರಂಪರೆಯನ್ನು ವಿಜಯಿಯಾಗಿ ರೂಢಿಸುವ ಅಲಭ್ಯ ಭಾಗ್ಯ ಪಂಪನಿಗೆ ದೊರೆಯಿತು. ಜಿನಸೇನ ಪ್ರಣೀತವಾದ ವಿಸ್ತಾರವಾದ ಮೂಲ ಕಥೆಯನ್ನು ಉತ್ತಮ ರೀತಿಯಲ್ಲಿ ಸಂಗ್ರಹಿಸುತ್ತಾ ಪುನರ್ ಸೃಜಿಸಿದ ಮೊತ್ತ ಮೊದಲಿಗನೆಂಬುದು ಪಂಪನಿಗೆ ದೊರೆತ ಮನ್ನಣೆ. ಸಂಸ್ಕೃತದಲ್ಲಿರುವ ಮೂಲ ಮಹಾಪ್ರತಿಭೆ ಮತ್ತೆ ಜನ್ಮಗೊಂಡುದಲ್ಲದೆ, ಕನ್ನಡದ ಚೈತನ್ಯವನ್ನೂ ಅದು ಧಾರಣ ಮಾಡಿಕೊಂಡು ಮತ್ತಷ್ಟು ಪುಷ್ಟಿಯಾಗಿದೆ. ಮೂಲಕಥೆ ಬದಲಾವಣೆಗೊಂಡಿಲ್ಲ, ಪರಿಣಾಮಗೊಂಡಿದೆ, ಸಾಣೆಗೊಂಡು ಪುನರ್ಘಟಿಸಿದೆ. ಜಿನಸೇನರಲ್ಲಿ ಅಂತರ್ಗತವಾಗಿದ್ದ ಜೀವಸ್ವರೂಪ ದರ್ಶನ ಪಂಪನ ಪ್ರತಿಭಾ ಮೂಸೆಯಲ್ಲಿ ಇನ್ನೂ ಹರಳುಗೊಂಡು ಕನ್ನಡಕ್ಕೆ ಅವತರಿಸಿದೆ. ಪಂಪನಲ್ಲಿ ಅದು ಪಡೆದ ಮರುಹುಟ್ಟು, ಹರಿತ, ಹೊಳಪು ಯಾವ ಸ್ವರೂಪದ್ದೆಂದು ತೋರಿಸುವುದು ಈ ತೌಲನಿಕ ಪ್ರಬಂಧದ ಪ್ರೇರಣೆ.

ಪಂಪನ ಆದಿಪು.ದಲ್ಲಿ ಶಾಸ್ತ್ರ-ಧರ್ಮ ಇಲ್ಲವೆಂದಲ್ಲ; ಅದರ ವಸ್ತುವೇ ಹಾಗಿರುವುದರಿಂದ ಧಾರ್ಮಿಕ ಪ್ರಕ್ರಿಯೆ ಸಮೃದ್ಧವಾಗಿದೆ. ಆದರೆ ಜಾಣ ಕವಿ ಪಂಪನ ನಿರ್ವಹಣೆಯ ಸೊಗಸಿನಿಂದಾಗಿ ಇಲ್ಲಿ ಶಾಸ್ತ್ರದ ಸ್ಥಾನ ಗೌಣವಾಗಿ ಕಾವ್ಯ ಪ್ರಧಾನವಾಗಿದೆ. ಧರ್ಮ ಮತ್ತು ಕಾವ್ಯಗಳ ನಡುವಣ ಅಂತರದ ಸ್ಪಷ್ಟ ತಿಳಿವಳಿಕೆ ಪಂಪನಿಗಿತ್ತು. ಇವೆರಡು ಧ್ರುವಗಳನ್ನೂ ಕೂಡಿಸುವ, ಸೇತುವೆ ಕಟ್ಟುವ ಕೆಲಸದ ಅಗತ್ಯ ಮತ್ತು ಮಹತ್ವವನ್ನು ಪಂಪ ಮನಗಂಡಿದ್ದಾನೆಂಬುದು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಮುಖ್ಯವಾಗುತ್ತದೆ. ಕವಿಯ ಈ ಅರಿವಿನ ಫಲವಾಗಿ ಕನ್ನಡಕ್ಕೊಂದು ಉತ್ಕೃಷ್ಟ ಕಾವ್ಯ ದೊರೆಯಿತು :

> ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂ
> ತಳಕೆ ಸಮಸ್ತ ಭಾರತಮುಮಾದಿ ಪುರಾಣಮುಮೆಂದು ಮುಯ್ಯುಸುಂ
> ಗೊಳುತಿರೆ ಪೂಣ್ದು ಪೂಣ್ದ ತೆಱದೊಂದಱುದಿಂಗಳೊಳೊಂದು ಮೂಱು ತಿಂ
> ಗಳೊಳೆ ಸಮಾಪ್ತಿಯಾದುದನೆ ಬಣ್ಣಿಸಿದಂ ಕವಿತಾಗುಣಾರ್ಣವಂ ।[102]

ಈ ಗಂಡಬೇರುಂಡ ಪ್ರಜ್ಞೆ ವಿಶಿಷ್ಟವಾದುದು. ಪಂಪನ ಎದುರು ಜಿನವಾಣಿ ಆಲಿಸುವವರೇ ಅಲ್ಲದೆ ಕವಿವಾಣಿ ಕೇಳುವವರೂ ಕುಳಿತಿದ್ದಾರೆ. ಅತ್ತ ಜಿನನ ಉಪಾಸಕರನ್ನೂ ಇತ್ತ ಕಾವ್ಯೋಪಾಸಕರನ್ನೂ ಏಕಕಾಲದಲ್ಲಿ ತಣಿಸುವ ಹೊಣೆ ಪಂಪನದು. ಅವರಿಂದ ತನ್ನ ಕಾವ್ಯವನ್ನು ಉದ್ಘಾಟಿಸುವಾಗಲೇ ಈ ಅಂಶವನ್ನು ನಿಚ್ಚಳವಾಗಿ ಸಾರಿದ್ದಾನೆ :

> ಇದುವೆ ಸುಕವಿಪ್ರಮೋದ
> ಪ್ರದಮಿದುವೆ ಸಮಸ್ತ ಭವ್ಯಲೋಕ ಪ್ರಮದ
> ಪ್ರದಮೆನೆ ನೆಗೞ್ದದಿ ಪುರಾ
> ಣದೊಳಱಿವುದು ಕಾವ್ಯಧರ್ಮಮುಂ ಧರ್ಮಮುಮಂ ।[103]

ಪಂಪನ ಈ ಆಶಯ ಬಹುಮಟ್ಟಿಗೆ ಈಡೇರಿದೆ. ಓದುಗರಿಗೆ ತೀರ್ಥಯಾತ್ರೆಯೊಂದಿಗೆ ಕಾವ್ಯಲೋಕ ಪರ್ಯಟನದ ಅನುಭವವೂ ಒಮ್ಮೆಗೇ ವೇದ್ಯವಾಗುತ್ತದೆ. ಆದಿಪು.ವನ್ನು ಅಭ್ಯಸಿಸಿದ ಶ್ರದ್ಧಾಳುವಿಗೆ ಹೃದಯದಲ್ಲಿ ಕಾವ್ಯ ಅಚ್ಚೊತ್ತಿ ನಿಲ್ಲುವಂತೆ ಜೈನಪುರಾಣ ಲಕ್ಷಣಗಳು ಮತ್ತು ಪರಿಭಾಷೆ ಅಂಗೈ ಮೇಲಿನ ನೆಲ್ಲಿಕಾಯಿ ಆಗಿರುತ್ತದೆ. ಧರ್ಮ ಘನತೆಗೆ ತಿಲಾಂಜಲಿ ಕೊಡದೆ ಕಾವ್ಯದ ಮೇಲ್ಮೆ ಸ್ಥಾಪಿಸಿದ್ದಾನೆ. ಧರ್ಮ–ಕಾವ್ಯ ಧರ್ಮ ಪರಸ್ಪರ ವಿರುದ್ಧವೆನಿಸದೆ ಅವು ಒಂದಕ್ಕೊಂದು ಪೂರಕ–ಪ್ರೇರಕ ಪೋಷಕವಾಗಿ ಹೊಂದಿಕೆಯಿಂದ ಬದುಬಾಳುವುದು ಸಾಧ್ಯ ಎಂಬುವನ್ನು ಪಂಪ ತೋರಿಸಿಕೊಟ್ಟಿದ್ದಾನೆ. ಧರ್ಮ ಸಾಹಿತ್ಯಕ್ಕೆ ಒಡ್ಡುವ ಮಿತಿಗಳನ್ನು ಮಹಾಕವಿಗಳು ಹೇಗೆ ಜೀರ್ಣಿಸಿಕೊಂಡು ದಾಟಬಲ್ಲರೆಂಬುದಕ್ಕೊಂದು ದಿವ್ಯ ಸಾಕ್ಷಿ ಆದಿಪು. ಈ ಲಘಿಮಾ ಕೌಶಲ, ನಿಮಜ್ಜನ ಚಾತುರ್ಯ ಪಂಪ-ಕುಮಾರವ್ಯಾಸರಂಥವರಿಗೆ

ಅನಾಯಾಸವಾಗಿ ಸಿದ್ಧಿಸುತ್ತದೆ. ಜಿನಧರ್ಮದೊಂದಿಗೆ ಕಾವ್ಯಧರ್ಮವನ್ನು ಮೇಳೈಸಿ ಒಂದು ಅಪೂರ್ವ ಸಮನ್ವಯ ಸಾಧಿಸಿದ ಅಗ್ಗಳಿಕೆ ಕವಿತಾಗುಣಾರ್ಣವನದು. ಪ್ರೇರಣೆ ಪುಷ್ಟಿ ಪಡೆದದ್ದು ಜಿನಸೇನರ ಸಮ್ಯಗ್ ದೃಷ್ಟಿಯ ಕೃತಿರತ್ನದಿಂದ ಎಂಬುದೂ ನಿಜ. ಜಿನಸೇನಾಚಾರ್ಯರು ಧರ್ಮಗುರು, ಪಂಪ ಕಾವ್ಯಗುರು, ಒತ್ತು ಬೀಳುವಿಕೆಯ ಸ್ಥಳ ಅದಲು ಬದಲಾಗಿದೆ; ಅಲ್ಲಿ ಧಾರ್ಮಿಕದತ್ತ ಒಲವು, ಇಲ್ಲಿ ಅದೆಲ್ಲ ಕಾವ್ಯದತ್ತ ಹರಿಗೊಳ್ಳುತ್ತದೆ; ಇಲ್ಲಿಯದು ನೇರ ಹೃದಯ ಸಂವಾದ. ಜಿನಸೇನರ ಸೌಭಾಗ್ಯಶ್ರೀಯನ್ನು ಮೀರಿ ಸೂರೆಮಾಡಿದ ತ್ರಿವಿಕ್ರಮ ಪಂಪ.

ಮಹಾಕವಿಯಾದವನು ಮಹಾಕಾವ್ಯಕ್ಕೆ ತಕ್ಕುದಾದ ವಸ್ತುವಿಗೆ ತೆಕ್ಕೆ ಬೀಳುತ್ತಾನೆ. ಪಂಪ ತಾನು ರಚಿಸಿದ ಎರಡು ಕಾವ್ಯಗಳ ವಸ್ತುವನ್ನು ಎರಡು ಮಹಾಕೃತಿಗಳಿಂದ ಆರಿಸಿಕೊಂಡಿದ್ದಾನೆ. ಒಂದು ಕಡೆ ವ್ಯಾಸರ ಮಾನಸ ಪುತ್ರನಾಗಿ ವಿಕ್ರಮಾರ್ಜುನ ವಿಜಯವನ್ನು ಪುನರ್ ಸೃಷ್ಟಿಸಿದ್ದಾನೆ. ಇನ್ನೊಂದು ಕಡೆ ಜಿನಸೇನರ ಔರಸ ಪುತ್ರನಾಗಿ ಆದಿಪುರಾಣವನ್ನು, ಪ್ರಾಕ್ ಕಥಾಶರೀರವನ್ನು ಪುನರ್ ಸೃಜಿಸಿದ್ದಾನೆ. ಆದಿಪು. ಕೇವಲ ಸನಾತನವಾಗಿರದೆ ಪಿನೂತನವೂ ಆಗಿದೆ. ಪಂಪನ ಪ್ರತಿಭಾಸ್ಪರ್ಶದಿಂದ ಮರುಹುಟ್ಟು ಪಡೆದು ಹೊಸ ಮೆಯ್ಯಾಂತು ಬಂದ ಆದಿಪು. ಅಜೈನರಿಗೂ ಪ್ರಿಯವಾಗಿರುವುದು ಅದರ ಮಹಿಮೆ-ಹಿರಿಮೆಗಳನ್ನು ಸಾರುತ್ತದೆ. ಜಿನಸೇನರವರೆಗೆ ಹರಿದು ಬಂದ ಒಂದು ಸಿದ್ಧ ಶ್ರವಣ ಸಂಪ್ರದಾಯದ ಕಥಾವಸ್ತುವನ್ನು ಕನ್ನಡಕ್ಕೆ ಪಂಪ ಬರಮಾಡಿಕೊಂಡಿರುವ ಬಗೆ ಚಿಂತನೀಯವಾದುದು. ಸಿದ್ಧ ವಸ್ತುವಿನ ಸಾತತ್ಯವನ್ನು ಅದ್ಯತನಕ್ಕೆ ಒಗ್ಗಿಸಿ ಬಗ್ಗಿಸಿ ಬಳಸಿಕೊಳ್ಳುವಲ್ಲಿ ಪಂಪನ ವೈಶಿಷ್ಟ್ಯ ಮತ್ತು ಸ್ವೋಪಜ್ಞತೆ ಎಲ್ಲೆಲ್ಲಿ ಕಾಣಿಸಿಕೊಂಡಿದೆಯೆಂಬುವನ್ನು ತಕ್ಕ ಮಟ್ಟಿಗೆ ಈ ಸಂಪ್ರಬಂಧದಲ್ಲಿ ಗುರುತಿಸಲಾಗಿದೆ. ಪೂರ್ವಪು.ದಲ್ಲಿರುವ ಮಹತ್ವವನ್ನೂ ಸೋದಾಹರಣವಾಗಿ ಮನಗಾಣಿಸಲಾಗಿದೆ. ಒಟ್ಟಾರೆ ಇಂಥ ತೌಲನಿಕ ವಿಮರ್ಶೆಯನ್ನು ಇನ್ನೂ ಸಮಗ್ರವಾಗಿ ಮುಂದುವರಿಸುವುದರ ಅಗತ್ಯವನ್ನು ತೋರಿಸಲಾಗಿದೆ.

ಅಡಿಟಿಪ್ಪಣಿಗಳು

1 i. ಮಹಾಪುರಾಣ : ಜಿನಸೇನ ಗುಣಭದ್ರ ; ಸ್ಯಾದ್ವಾದ ಗ್ರಂಥಮಾಲಾ, ಇಂದೂರ್, 1973-75

ii. ಮಹಾಪುರಾಣ : ಹಿಂದಿ ಅನುವಾದ ಸಹಿತ, ಭಾರತೀಯ ಜ್ಞಾನಪೀಠ, ಕಾಶಿ, ಭಾಗ 1-3, 1951-54

iii. ಮಹಾಪುರಾಣ : ಕನ್ನಡ ಅನುವಾದ ಸಹಿತ ; (ಅನು.) ಆಸ್ಥಾನ ವಿದ್ವಾನ್. ಎ. ಶಾಂತಿರಾಜ ಶಾಸ್ತ್ರಿ, (ಪ್ರ. ಮು. 1933), (ದ್ವಿ. ಮು.) ಕ ಸಾ ಪ

1980-1981, 4 ಸಂಪುಟಗಳಲ್ಲಿ; ಇನ್ನು ಮುಂದೆ ಈ ಸಂಪ್ರಬಂಧದುದ್ದಕ್ಕೂ ಕೊಡುವ ಉಲ್ಲೇಖಗಳೆಲ್ಲ ಈ ಆವೃತ್ತಿಗೆ ಸಂಬಂಧಿಸಿರುತ್ತವೆ.

2 ಈ ಹೇಳಿಕೆಯ ವಾಸ್ತವತೆ ಮತ್ತು ಮಹತ್ವವನ್ನು ಮನಗಾಣಲು ಒಂದೊಂದೇ ಜೈನ ಪುರಾಣವನ್ನು ತನಿಯಾಗಿ ತೆಗೆದುಕೊಂಡು ಸಂತುಲನ ಕಾರ್ಯ ನಡಸಬೇಕಾಗುತ್ತದೆ.

3 ಮಹಾಪುರಾಣ ; ಪೂರ್ವೋಕ್ತ ; (ದ್ವಿ.ಮು.) ಮುನ್ನುಡಿ. ಪುಟ xviii

4 ಈ ಅಂಶಕ್ಕೆ ಇದುವರೆಗಿನ ವಿಮರ್ಶಕರು ಗಮನ ಹರಿಸಿರುವುದು ಕಡಮೆ.

5 ಗುಣದಲ್ಲೂ-ಗಾತ್ರದಲ್ಲೂ ಈ ಮಹಾಪುರಾಣ ಆ ಮಹಾಕಾವ್ಯಗಳ ಸಮಕ್ಕೆ ಬರುತ್ತದೆ.

6 ಹಿಂದಿ, ಇಂಗ್ಲಿಷ್, ಮತ್ತು ಕನ್ನಡ ಭಾಷೆಗಳಲ್ಲಿ ಇದುವರೆಗೆ ಮಹಾಪುರಾಣ ಕುರಿತ ವಿಮರ್ಶೆ ಗಣನಾರ್ಹವಾಗಿಲ್ಲ. ಪ್ರಕಟಿತ ಲೇಖನಗಳಲ್ಲೂ ಚರ್ವಿತ ಚರ್ವಣ ಹೇಳಿಕೆಗಳಿವೆ. ಸಮಗ್ರ ಭಾರತೀಯ ಹಾಗೂ ಜಾಗತಿಕ ಸಾಹಿತ್ಯದ ಹಿನ್ನೆಲೆಯಲ್ಲಿ ಮಹಾಪುರಾಣವನ್ನು ವಿವೇಚಿಸುವ ಬರವಣಿಗೆ ಇನ್ನೂ ಆಗಬೇಕಾಗಿದೆ.

7 ವಾಸ್ತವವಾಗಿ ಇದು ಒಂದು ಪಿಎಚ್.ಡಿ. ಮಹಾಪ್ರಬಂಧಕ್ಕೆ ವಸ್ತುವಾಗುವ ವ್ಯಾಪಕತೆ ಪಡೆದಿರುವ ವಿಷಯುವೆಂಬ ಸ್ಪಷ್ಟ ಪರಿಗ್ರಹಿಕೆ ನನಗಿದೆ ; ಆದರಿಂದ ಆಯ್ದ ಕೆಲವು ಭಾಗಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಸಂತುಲನ ಕಾರ್ಯ ಕೈಗೊಳ್ಳಲಾಗಿದೆ. ಆದರೆ ಇದುವರೆಗೆ ಈ ಪ್ರಮಾಣದ ತೌಲನಿಕ ಲೇಖನ ಪ್ರಕಟವಾಗುತ್ತಿರುವುದು ಇದೇ ಮೊದಲೆಂದು ವಿನಮ್ರವಾಗಿ ನಿವೇದಿಸುತ್ತಿದ್ದೇನೆ.

8 ಮಹಾಪುರಾಣ ; ಪೂರ್ವೋಕ್ತ ; ಪೂರ್ವ ಪುರಾಣ (ಸಂಪುಟ 1,2), ಉತ್ತರ ಪುರಾಣ ಸಂಪುಟ 3,4)

9 ಜಿನಸೇನರು-ಗುಣಭದ್ರರು ಮಹಾಪುರಾಣದಲ್ಲಿ ಆದಿಯಿಂದ ಅಂತ್ಯದವರೆಗೆ, 1 ರಿಂದ 77ರ ವರೆಗೆ ಪರ್ವಗಳ ಸಂಖ್ಯೆ ಕೊಟ್ಟಿದ್ದಾರೆ ; ಪರ್ವಗಳೊಳಗೆ (ಮಹಾಭಾರತದಲ್ಲಿರುವ ಹಾಗೆ) ಅಧ್ಯಾಯ ಅಥವಾ ಸಂಧಿಗಳಿಲ್ಲ.

10 ಮಹಾಪುರಾಣ ; ಪೂರ್ವೋಕ್ತ, 3-239, ಪುಟ 109 ; 'ಪುಣ್ಯಮಾದ್ಯಂ ಪುರಾಣಂ ಕಥಯಿತುಂ' ಮೊದಲನೆಯ ಪುಣ್ಯ ಪುರಾಣ ಎಂಬರ್ಥದಲ್ಲೂ, ಆದಿದೇವನ ಪುರಾಣ ಎಂಬರ್ಥದಲ್ಲೂ 'ಆದಿಪುರಾಣ' ವೆಂಬ ಹೆಸರು ಅರ್ಥಪೂರ್ಣವಾಗಿ ಹೊಂದಿಕೊಳ್ಳುತ್ತದೆ.

11 ಮಹಾಪುರಾಣ ; ಪೂರ್ವೋಕ್ತ ; ಪ್ರತಿಪರ್ವಾಂತ್ಯದಲ್ಲೂ ಇದನ್ನು ಜಿನಸೇನರು ಸ್ಪಷ್ಟಪಡಿಸಿದ್ದಾರೆ- 'ತ್ರಿಷಷ್ಟಿ ಲಕ್ಷಣ ಮಹಾಪುರಾಣ ಸಂಗ್ರಹೇ-' ಎಂದಿದ್ದಾರೆ.

12 i) ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ ; ಪಂ. ಕೆ. ಭುಜಬಲಿಶಾಸ್ತ್ರಿ, 1971, ಪುಟ 5. ii) ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ ; 1971, ಪುಟ 206-207 ; ಡಾ. ಹೀರಾಲಾಲ್ ಜೈನ್

13 ಹರಿವಂಶ ಪುರಾಣ : i) ಜಿನಸೇನ ; ಭಾಗ I-II, ಮಾಣಿಕಚಂದ್ ದಿಗಂಬರ ಜೈನ ಗ್ರಂಥಮಾಲೆ, ಮುಂಬಯಿ ; 2) ಹಿಂದಿ ಅನುವಾದ ಸಹಿತ, ಭಾರತೀಯ ಜ್ಞಾನ ಪೀಠ, ಕಾಶಿ, 1962 3) ಕನ್ನಡ ಗದ್ಯಾನುವಾದ ಮಾತ್ರ, ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ; ಶ್ರೀ ಜೈನ ಮಠ, ಹುಂಚ, 1987

14 ಮಹಾಪುರಾಣ ; ಪೂರ್ವೋಕ್ತ, 77-2,3

15 ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ ; ಪಂ. ಕೆ. ಭುಜಬಲಿಶಾಸ್ತ್ರಿ, ಪೂರ್ವೋಕ್ತ ; ಪುಟ 76-85 ;

16 ಅದೇ ; ಪುಟ 64-65

16 a ಅದೇ ; ಪುಟ 86–91 ; ಮೇಲ್ಕಂಡ ಅ. ಟಿ. 15-17 ರಲ್ಲಿ ತೋರಿಸಿರುವ ಪುಟಗಳಲ್ಲಿ ಪ(ಂಡಿತ). ಕೆ. ಭುಜಬಲಿಶಾಸ್ತ್ರಿಗಳು ಅತ್ಯಂತ ಉಪಯುಕ್ತವಾದ ಮಾಹಿತಿಗಳನ್ನು ಒದಗಿಸಿದ್ದಾರೆ.

17 1) ಕರ್ನಾಟಕ ಪರಂಪರೆ : ಸಂಪುಟ I, 1970, ಪುಟ 279-318
2) Rashtrakutas and their Times A. D. Altekar
3) ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ ; 1971 (ಡಾ. ಹೀರಾಲಾಲ ಜೈನ್), ಪುಟ 48-49

17 a 1) ಮಹಾಪುರಾಣ ; ಪೂರ್ವೋಕ್ತ 77-9
2) ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ ; ಪೂರ್ವೋಕ್ತ ; ಪುಟ 77-78

18 ಅದೇ ; ಪುಟ 83-84 ; "ಈ ಟೀಕೆಯು ಸಂಸ್ಕೃತ ಪ್ರಾಕೃತ ಮಿಶ್ರವಾಗಿದ್ದು ಪದಾರ್ಥಗಳ ಸೂಕ್ಷ್ಮಾತಿ ಸೂಕ್ಷ್ಮವಾದ ವಿವೇಚನೆಯನ್ನೊಳಗೊಂಡಿದೆ. ಟೀಕೆಯ ಶೈಲಿ ಅತ್ಯಂತ ಸುಂದರವಾಗಿರುವುದರಿಂದ ವಾಚಕರಿಗೆ ಬೇಸರವನ್ನುಂಟುಮಾಡುವುದಿಲ್ಲ" ಪಂ.(ಡಿತ). ಕೆ. ಭುಜಬಲಿಶಾಸ್ತ್ರಿ, ಪು. 84

19 ಪಾರ್ಶ್ವಾಭ್ಯುದಯ ; 1. ಯೋಗಿರಾಜ ಟೀಕಾ ಸಹಿತ, ಮುಂಬಯಿ 1909
2. ಪಾಠಕ್ ಕೃತ ಇಂಗ್ಲಿಷ್ ಅನುವಾದ ಸಹಿತ, ಪುಣೆ 1916

20 1) ಮಹಾಪುರಾಣ : ಪೂರ್ವೋಕ್ತ : ಸಂಪುಟ 1-2
2) ಸಂಸ್ಕೃತ ವಾಙ್ಮಯಕ್ಕೆ ಜೈನಕವಿಗಳ ಕಾಣಿಕೆ ; ಪೂರ್ವೋಕ್ತ ಪುಟ 79–80

21 ಮಹಾಪುರಾಣ ; ಪೂರ್ವೋಕ್ತ ; 43-10,11

22 ಅದೇ

23 ಅದೇ ; 77-14

24 ಆತ್ಮಾನು ಶಾಸನ; 1) ಪ್ರಭಾ ಚಂದ್ರ ಟೀಕಾ, ಇಂಗ್ಲಿಷ್-ಹಿಂದಿ ಪ್ರಸ್ತಾವನೆ ಮತ್ತು ಹಿಂದಿ ಅನುವಾದ ಸಹಿತ : ಅಜಿತಾಶ್ರಮ, ಲಖನೌ, 1928
2) ವಂಶೀಧರ ಕೃತ ಹಿಂದಿ ಟೀಕಾ ಸಹಿತ; ಜೈನ ಗ್ರಂಥಮಾಲಾ, ರತ್ನಾಕರ ಕಾರ್ಯಾಲಯ, ಮುಂಬಯಿ, 1919
3) ಕನ್ನಡ ಅನುವಾದ ; ಶ್ರೀ ಅತಿಬಲ ಗ್ರಂಥಮಾಲೆ ಗ್ರಂಥ-೩ ; (ಸಂ) ಎಸ್. ಚಂದ್ರರಾಜಶಾಸ್ತ್ರಿ ಮೂಡಬಿದ್ರಿ, 1951

26 ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ ; ಪೂರ್ವೋಕ್ತ ; ಪುಟ 90-91

27 ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ ; (ಮೂಲ) ಡಾ. ಹೀರಾಲಾಲ ಜೈನ್ (ಕನ್ನಡ ಅನು.) ವಿ.ಜಿ. ಅಣ್ಣಾರಾಯ ; ಜೀವರಾಜ ಜೈನ್ ಗ್ರಂಥಮಾಲಾ, ಸೊಲ್ಲಾಪುರ 1971, ಪುಟ. 208

28 ಅದೇ ; ಪುಟ 208-209

28 a) ಅದೇ ; ಪುಟ 53

29 ಅದೇ ; ಪುಟ 6೯–100 ; ಡಾ. ಹೀರಾಲಾಲ ಜೈನ್ ಅವರು ಅನೇಕ ಐತಿಹಾಸಿಕ ಮೂಲಾಧಾರಗಳಿಂದ ಈ ಅಂಶವನ್ನು ಪ್ರತಿಪಾದಿಸಿದ್ದಾರೆ.

30 ಚಾವುಂಡರಾಯ ಪುರಾಣಂ ; (ಸಂ) ಕಮಲಾ ಹಂಪನಾ. ಕೆ. ಆರ್. ಶೇಷಗಿರಿ, ಕ ಸಾ ಪ, ಬೆಂಗಳೂರು, 1983, ಪುಟ. 7

31 ಅದೇ ; ಪದ್ಯ 24
31a ಅದೇ :
32 ಅದೇ ; ಪದ್ಯ 25
33 ತ್ರಿಸಟ್ಠಿ ಮಹಾಪುರಿಸ ಗುಣಾಲಂಕಾರ (ತ್ರಿಷಷ್ಠಿ ಮಹಾಪುರುಷ ಗುಣಾಲಂಕಾರಂ) ; ಪುಷ್ಪದಂತ ; (ಸಂ) ಡಾ. ಪಿ. ಎಲ್. ವೈದ್ಯ ; ಮಾಣಿಕಚಂದ್ ದಿಗಂಬರ ಜೈನ ಗ್ರಂಥಮಾಲಾ. ಬಾಂಬೆ, 1937
34 ಮಹಾಪುರಾಣ : ಪೂರ್ವೋಕ್ತ ; 1–19. ಪುಟ 6
35 ಅದೇ ; 1-35, ಪುಟ 9
36 ಅದೇ ; 1-60. ಪುಟ 13
37 ಕನ್ನಡ ವಿಶ್ವಕೋಶ ಸಂಪುಟ 8 ; ಮೈಸೂರು ವಿಶ್ವವಿದ್ಯಾಲಯ, 1975 ಜೈನ ಪುರಾಣಗಳು. ಹಂಪನಾ, ಪುಟ 353-355
38 ಪ್ರಾಚೀನ ಸಾಹಿತ್ಯದ ಬಹುಪಾಲು ಧರ್ಮಸಂಬಂಧಿಯಾದ ರಚನೆಯಾಗಿದೆ.
39 ಜೈನ ಧರ್ಮ ; ಮಿರ್ಜಿ ಅಣ್ಣಾರಾಯ
40 ಮಹಾಪುರಾಣ ; ಪೂರ್ವೋಕ್ತ ; ಶ್ಲೋಕ 1-20
41 ಅದೇ ; ಸಂಪುಟ 3 ಮತ್ತು 4
42 ಪಂಪ ತನ್ನ ಧರ್ಮಗುರು ದೇವೇಂದ್ರ ಮುನೀಂದ್ರರ ಮೂಲಕವೇ ಅಲ್ಲದೆ ಸ್ವಾಧ್ಯಾಯದಿಂದಲೂ ಸಂಪಾದಿಸಿಕೊಂಡ ಧಾರ್ಮಿಕ ಸಿದ್ಧತೆಯ ಸ್ವರೂಪವನ್ನು ಆದಿಪು. ದಲ್ಲಿ ಕಾಣುತ್ತೇವೆ.
43 ಆದಿಪುರಾಣ ; i. (ಸಂ) ಎಸ್. ಜಿ. ನರಸಿಂಹಾಚಾರ್. 1900
ii (ಸಂ) ಕೆ. ಜಿ. ಕುಂದಣಗಾರ್, ಎ. ಪಿ. ಚೌಗಲೆ. 1953
iii ಗದ್ಯಾನುವಾದ ಸಹಿತ. ಕೆ. ಎಲ್. ನರಸಿಂಹಶಾಸ್ತ್ರಿ. ಕ ಸಾ ಪ, 1980
ಈ ಸಂಪ್ರಬಂಧದಲ್ಲಿನ ಉಲ್ಲೇಖಗಳು ಕಸಾಪ ಆವೃತ್ತಿಯನ್ನು ಅವಲಂಬಿಸಿವೆ. ಪ್ರಸ್ತುತ ಉದ್ಧೃತ ಪದ್ಯ 1-35. ಪುಟ 69
44 ವಿಕ್ರಮಾರ್ಜುನ ವಿಜಯಂ; (ಪಂಪ ಭಾರತ); ಗದ್ಯಾನುವಾದ ಸಹಿತ, (ಸಂ) ಎನ್. ಅನಂತರಂಗಾಚಾರ್. ಕ ಸಾ ಪ 1977; 14-60
45 –ಅದೇ–; ಅನುಶಾಸನಪರ್ವ, ಸ್ವರ್ಗಾರೋಹಣಪರ್ವ ಇತ್ಯಾದಿ.
46 i. ತಪೋನಂದನ; ಕುವೆಂಪು; ಪಂಪನಲ್ಲಿ ಭವ್ಯತೆ ಲೇಖನ; ii. All depends upon the subject: choose a fitting action, penetrate Yourself with the feeling of its situations, this done everything else, will follow"–Aristotle.
47 ಪರಂಪರೆ; ಸುಜನಾ; ಮೈತ್ರೀ ಪ್ರಕಾಶನ, ಮೈಸೂರು. 1982. ಪುಟ 87–88
48 ವಿಕ್ರಮಾರ್ಜುನ ವಿಜಯಂ; ಪೂರ್ವೋಕ್ತ, 14–60
49 ಅನುಪಲಬ್ಧ ಶೂದ್ರಕ, ಹರಿವಂಶಗಳನ್ನು ಹೆಸರಿಸಬಹುದು ; ಕವಿರಾಜಮಾರ್ಗ ಹೇಳುವ ಗದ್ಯ ಪದ್ಯ ಕವಿಗಳನ್ನು ನೆನೆಯಬಹುದು.
50 ಸಂಸ್ಕೃತ ಭಾಷೆಯಲ್ಲಿ ಪಂಪನಿಗಿರುವ ಪ್ರಗಲ್ಭ ಪಾಂಡಿತ್ಯವನ್ನು ಆದಿಪು. ದಲ್ಲೇ ಅಲ್ಲದೆ ವಿ. ವಿ. ದಲ್ಲೂ ಕಾಣಬಹುದು.
51 What is classic; T. S. Eliot
52 ಬಾಣನ ಕಾದಂಬರಿಯನ್ನು ಕನ್ನಡಿಸಿದ ನಾಗವರ್ಮನಿಗಿಂತ ಪಂಪ ಹೆಚ್ಚು ಸ್ವಾತಂತ್ರ್ಯ ವಹಿಸಿದ್ದಾನೆ. ಹಾಗೆ ನೋಡುವುದಾದರೆ ಜೈನರಾಮಾಯಣ ರಚಿಸಿದ ಕನ್ನಡ ಕವಿಗಳೆಲ್ಲ ಈ ಬಗೆಯ ಕಾರ್ಯನಿರ್ವಹಿಸಿದ್ದಾರೆ.

53 ಪಂಪ ಒಂದು ಅಧ್ಯಯನ: ಕನ್ನಡ ಅಧ್ಯಯನ ಕೇಂದ್ರ ಮಾಲೆ 41, ಬೆಂ.ವಿ.ವಿ 1974. ಆದಿಪುರಾಣದ ವಸ್ತು ವಿನ್ಯಾಸ ಲೇಖನ, ಎಂ. ವಿ. ಶ್ರೀನಿವಾಸ ಮೂರ್ತಿ, ಪುಟ 181–198

54 ನೀಲಾಂಜನೆಯ ನೃತ್ಯ ಪ್ರಕರಣವನ್ನು ತನಿಯಾಗಿ ತೆಗೆದುಕೊಂಡು ವಿವೇಚಿಸಿರುವ ಆರೇಳು ಲೇಖನಗಳು ಪ್ರಕಟವಾಗಿವೆಯಲ್ಲದೆ ಆದಿಪು. ವನ್ನು ಕುರಿತು ಬರೆದ ಇತರ ಬರವಣಿಗೆಯಲ್ಲೂ ಈ ಅಂಕದ ಪ್ರಶಂಸೆ ಕಂಡುಬರುತ್ತದೆ.

55 i ಭರತೇಶನ ನಾಲ್ಕು ಚಿತ್ರಗಳು; ಮುರ್ಜ ಅಣ್ಣಾರಾಯ, 1954
ii ಪಂಪನ ಭರತ–ಭಾಹುಬಲಿ: (ಸಂ) ಜಿ. ಬ್ರಹ್ಮಪ್ಪ, ಕೆ. ಎಂ. ಕೃಷ್ಣರಾವ್ 1952

56 ಪಂಪನು ಜಿನಸೇನಾಚಾರ್ಯರನ್ನು ಅನುಸರಿಸಿದ್ದಾನೆ; ಲೇಖನ; ಕೆ. ಜಿ. ಕುಂದಣಗಾರ್. ವಿವೇಕಾಭ್ಯುದಯ (ಮಾಸ ಪತ್ರಿಕೆ) 16–4

57 ಪೂರ್ವಪು; ಪೂರ್ವೋಕ್ತ; 5–205.206: ಪುಟ 182 (ಸಂಪುಟ 1)

58 ಅದೇ–; ಸಂಪುಟ 1; 5–207 ರಿಂದ 211 (ಐದು ಶ್ಲೋಕಗಳು). ಪುಟ 183

59 ಆದಿಪುರಾಣ; ಪೂರ್ವೋಕ್ತ; 2-38ವ. 39; ಪುಟ 109

60 ಪೂರ್ವಪುರಾಣ: ಪೂರ್ವೋಕ್ತ; 5–210. ಪುಟ 183

61 ಪಂಪ ಹೀಗೆ ಘಟನೆಗಳ ವಿವರಗಳಲ್ಲಿ ಕೆಲವನ್ನು ಸ್ಥಳಾಂತರಿಸುವುದುಂಟು. ಬಾಹುಬಲಿಯ ಮೇಲೆ ಭರತ ಚಕ್ರ ಪ್ರಯೋಗಿಸಿದ್ದು ಯಾವಾಗ ಎಂಬುದನ್ನು ಸ್ಥಳಾಂತರಿಸಿದ್ದಾನೆ ಪಂಪ.

62 ಆದಿಪು.; ಪೂರ್ವೋಕ್ತ; 2–40ವ. 41.42

63 ಪೂರ್ವಪು.; ಪೂರ್ವೋಕ್ತ; 4–133. ಪುಟ 134; ಆದಿಪು.; ಪೂರ್ವೋಕ್ತ 1–74 ಪುಟ 82

64 ಆದಿಪು.; ಪೂರ್ವೋಕ್ತ; 1-79, ಪುಟ 84

65 ಪೂರ್ವಪು.; ಪೂರ್ವೋಕ್ತ; 5-13 ರಿಂದ 5–88, ಪುಟ 148-163

66 ಆದಿಪು.; ಪೂರ್ವೋಕ್ತ: 2-6 ರಿಂದ 2–11; ಪುಟ 89-96

67 ಪೂರ್ವಪು.; ಪೂರ್ವೋಕ್ತ 5-21. 22; ಪುಟ 149

68 ಆದಿಪು.; ಪೂರ್ವೋಕ್ತ; 2-8. 9; ಪುಟ 89-90

69 ಪೂರ್ವಪು.; ಪೂರ್ವೋಕ್ತ; 5-253. ಪುಟ 190

70 -ಅದೇ-; 5-256. ಪುಟ 191

71 –ಅದೇ-; 5–261. ಪುಟ 192

72 ಆದಿಪು.; ಪೂರ್ವೋಕ್ತ; 2-61ವ. 62; ಪುಟ 118–119

73 -ಅದೇ-; 2–69, ಪುಟ 121

74 ಪೂರ್ವಪು.; ಪೂರ್ವೋಕ್ತ; 5–273. ಪುಟ 194: 'ಪೂಜಾಂ ಜಿನೇಂದ್ರಾಣಾಂ ಕುರು'

75 ಆದಿಪು. ವಿರಲಿ, ವಿ.ವಿ. ವಿರಲಿ ಪಂಪ ಇಂಥ ವರ್ಣನೆ ಬಂದಾಗ 'ಸಂಸಾರ ಸಾರೋದಯನಾಗಿ ವಿಜೃಂಭಿಸುತ್ತಾನೆ; ಅತ್ತ ಜಿನಸೇನರನ್ನೂ ಇತ್ತ ವ್ಯಾಸರನ್ನೂ ಮೀರಿಸುತ್ತಾನೆ

76 ಪೂರ್ವಪು; ಪೂರ್ವೋಕ್ತ; 5-286 ರಿಂದ 5-292; ಪುಟ 196–197

77 ಆದಿಪು.; ಪೂರ್ವೋಕ್ತ; 2–73 ರಿಂದ 2-76: ಪುಟ 123-124

78 ಅದೇ-; 3-3. ಪುಟ 127

79 ಪೂರ್ವಪು; ಪೂರ್ವೋಕ್ತ; 6-1 ರಿಂದ 6–5. ಪುಟ 199-200

80 ಆದಿಪು; ಪೂರ್ವೋಕ್ತ; 3-4, ಪುಟ 128

81 ಅದೇ–; ಪುಟ 128
82 ಪೂರ್ವಪು; ಪೂರ್ವೋಕ್ತ; 6- 9ರಿಂದ 6-22, ಪುಟ 200–202
83 ಆದಿಪು; 3–6, 7, ಪುಟ 129
84 ಪೂರ್ವಪು; ಪೂರ್ವೋಕ್ತ; 6–18, ಪುಟ 207
85 ಆದಿಪು.; ಪೂರ್ವೋಕ್ತ; 3–12, ಪುಟ 132
86 ಪೂರ್ವಪು; ಪೂರ್ವೋಕ್ತ; 6-50 ರಿಂದ 6-52, ಪುಟ 207
87 ಆದಿಪು.; ಪೂರ್ವೋಕ್ತ; 3-13 ರಿಂದ 3–15, ಪುಟ 132-133
88 ಅದೇ-; 4-55 ರಿಂದ 56, ಪುಟ 197
89 i) ಅಭಿಜ್ಞಾನ ಶಾಕುಂತಲ ನಾಟಕಂ; 4-19 ಶುಶ್ರೂಷಸ್ವ ಗುರೂನ್ಕುರು ಪ್ರಿಯ ಸಖೀವೃತ್ತಿಂ
ii) ಕರ್ಣಾಟಕ ಶಾಕುಂತಲ ನಾಟಕಂ; ಬಸವಪ್ಪಶಾಸ್ತ್ರಿ; ಪದ್ಯ 96; ಹಿರಿಯರ ಸೇವೆಗೆಯ್
90 ಆದಿಪು.; ಪೂರ್ವೋಕ್ತ; 4–57, ಪುಟ 198
91 ಪೂರ್ವಪು.; ಪೂರ್ವೋಕ್ತ; 9-26 ರಿಂದ 9-31, ಪುಟ 336-337
92 -ಅದೇ–; 4–133, ಪುಟ 134
93 ಆದಿಪು.; ಪೂರ್ವೋಕ್ತ; 1-73, ರಿಂದ ಪುಟ 82
93ಅ ಪೂರ್ವಪು; ಪೂರ್ವೋಕ್ತ, 1–71, ಪುಟ 654
94 ಆದಿಪು.; ಪೂರ್ವೋಕ್ತ; 9-1 ರಿಂದ 9–8 ಪುಟ 392–393
95 –ಅದೇ-; 9-6, ಪುಟ 393 : 'ಸ್ಥಳದಲ್ಲಿ ಸರಿಯಾಗಿ ಕುಳಿತುಕೊಳ್ಳಿ, ಗಟ್ಟಿಯಾಗಿ ಮಾತಾಡಬೇಡಿ ನೀವು ಕುಳಿತಲ್ಲೇ ಕುಳಿತಿರಿ. ಎಚ್ಚರಿಕೆಗಳನ್ನು ಮೀರಿ ನಡೆದರೆ ಏನಾಗುವುದೆಂದು ಗೊತ್ತಾಗುವುದು, ಎಂದು ಕೋಲುಗಳನ್ನು ಹಿಡಿದ ಅಧಿಕಾರಿಗಳು ಹೇಳುತ್ತಿದ್ದರು.
96 ಪೂರ್ವಪು; ಪೂರ್ವೋಕ್ತ; 17-4,5-ಪುಟ 652
97 ಆದಿಪು' ಪೂರ್ವೋಕ್ತ; 9-10ರಿಂದ–9-12, ಪುಟ 394.395
98 ಪೂರ್ವಪು, ಪೂರ್ವೋಕ್ತ; 17-6ರಿಂದ 17.11. ಪುಟ 52-53
99 ಆದಿಪು; ಪೂರ್ವೋಕ್ತ; 9-14 ರಿಂದ 9-44, ಪುಟ 395-403
100 ಅದೇ-;14-133, ಪುಟ 647
101 ಅದೇ:
102 ವಿಕ್ರಮಾರ್ಜುನ ವಿಜಯಂ; ಪೂರ್ವೋಕ್ತ, 14-60
103 ಆದಿಪು. ;ಪೂರ್ವೋಕ್ತ, 1-38, ಪುಟ 70

ಸಂಕೇತ ಸೂಚಿ

ಅದೇ ಮೇಲೆ ಉದಾಹರಿಸಿರುವುದೇ, Ibid
ಆದಿಪು: ಆದಿಪುರಾಣ
ಉಪು: ಉತ್ತರ ಪುರಾಣ
ಕ: ಕನ್ನಡ
ಪೂರ್ವಪು: ಪೂರ್ವಪುರಾಣ
ಪೂರ್ವೋಕ್ತ: ಹಿಂದೆ ಉದಾಹರಿಸಲಾದ oppcit
ಮಹಾಪು: ಮಹಾಪುರಾಣ
ವಿ ವಿ ವಿಕ್ರಮಾರ್ಜುನ ವಿಜಯಂ (ಪಂಪಭಾರತ)
ಸಂ : ಸಂಸ್ಕೃತ

ಶಕ್ತಿಪೂಜೆ ಮತ್ತು ಭೂತಾರಾಧನೆಗಳ ಅಭೇದ

ವಸಂತಕುಮಾರ ಪೆಲನ್

ತುಳುನಾಡಿನಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿರುವ ಶಕ್ತಿಪೂಜೆ ಮತ್ತು ಭೂತಾರಾಧನೆ ಅದರ ಆರಂಭದೆಸೆಯಲ್ಲಿ ಅಭಿನ್ನವಾಗಿದ್ದಂತೆ ತೋರುತ್ತದೆ. ಮೇಲ್ನೋಟಕ್ಕೆ ಇವೆರಡು ಆರಾಧನಾ ಪದ್ಧತಿಗಳಲ್ಲಿ ತುಸು ಭಿನ್ನತೆಗಳು ಕಂಡು ಬರುತ್ತವೆಯಾದರೂ ಇವೆರಡೂ ಒಂದೇ ಮೂಲದಿಂದ ಹುಟ್ಟಿದವು ಮತ್ತು ಇವೆರಡು ಆರಾಧನಾ ಪದ್ಧತಿಗಳ ಹಿಂದಿನ ಚಿಂತನೆ ಒಂದೇ ಆಗಿದೆ ಎಂಬುದು ಅವಗಳೊಳಗಿರುವ ಹಲವಾರು ಹೋಲಿಕೆಗಳಿಂದ ಕಂಡುಬರುತ್ತದೆ. ಶಕ್ತಿ ಮತ್ತು ಭೂತ ಎರಡೂ ಆರಂಭದಲ್ಲಿ ಒಂದೇ ಆಗಿದ್ದು ಕಾಲಾಂತರದಲ್ಲಿ ಈ ಎರಡು ಆರಾಧನಾ ಪದ್ಧತಿಗಳಲ್ಲಿ ಭಿನ್ನತೆ ತಲೆದೋರುತ್ತ, ಒಂದೇ ನಾಣ್ಯದ ಎರಡು ಮುಖಗಳಾಗಿ ಅವು ಪರಿವರ್ತನೆಗೊಂಡ ಪ್ರಕ್ರಿಯೆ ತೀರ ಕುತೂಹಲದಾಯಕವಾಗಿದೆ.

ಭೂತಾರಾಧನೆಯನ್ನು ಶಕ್ತಿಯ ಆರಾಧನೆ (spirit worship) ಎನ್ನಲಾಗುತ್ತದೆ. ಭೂತಸ್ಥಾನಗಳಿಗೆ ಶಕ್ತಿ ಸ್ಥಾನ ಎಂದೂ ಕರೆಯುತ್ತಾರೆ. ಶಕ್ತ್ಯಾರಾಧನೆಯಲ್ಲಿ (ಅಥವಾ ದೇವಿಯ ಆರಾಧನೆಯಲ್ಲಿ) ಶಕ್ತಿಯ ಸೌಮ್ಯ ಮತ್ತು ಸೂಕ್ಷ್ಮ ರೂಪವನ್ನು ಗುರುತಿಸಿದ್ದರೆ, ಭೂತಾರಾಧನೆಯಲ್ಲಿ ಶಕ್ತಿಯ ವಿರಾಟತೆಗೆ ಮತ್ತು ಅದರ ಒರಟು ಹಾಗೂ ರೂಕ್ಷ ಮನೋಧರ್ಮಕ್ಕೆ ಪ್ರಾಮುಖ್ಯ ಕೊಡಲಾಗಿದೆ. ವೈದಿಕ ಮತದವರ ಸೌಮ್ಯ ಮತ್ತು ಸಾತ್ವಿಕ ಮನೋಭಾವಕ್ಕೆ ತಕ್ಕಂತೆ ಅವರು ಶಕ್ತಿಯ ಸೌಮ್ಯ ಸ್ವರೂಪಕ್ಕೆ ಒತ್ತು ಕೊಟ್ಟಿದ್ದರೆ ಅವೈದಿಕ ವರ್ಗದವರ ತಾಮಸ ಗುಣಕ್ಕನುಗುಣವಾಗಿ ಶಕ್ತಿಯ ಪ್ರಾಕೃತಿಕ ವಿರಾಟತೆಗೆ ಹಾಗೂ ಒರಟು ರೂಪದ ಭೀಷಣ ಗುಣಕ್ಕೆ ಪ್ರಾಧಾನ್ಯತೆ ಸಿಕ್ಕಿದೆ

ಭೂತ ಎಂದರೆ ಆಗಿಹೋದದ್ದು (past) ಎಂಬುದು ಒಂದು ಅರ್ಥ. ಆದರೆ ಇಲ್ಲಿ, ಅವ್ಯಕ್ತವಾದದ್ದು - ಭೂಮವಾದದ್ದು - ಅಭೇದ್ಯವಾದದ್ದು - ಭೂಮಿಯ ಒಂದು ಬೃಹತ್ ಶಕ್ತಿ ವಿಶೇಷ ಎಂಬ ಅರ್ಥ ಅನ್ವಯವಾಗುತ್ತದೆ (ಭೂತಾಕಾರ ಎಂಬಲ್ಲಿ ಈ ಪದದ ಅರ್ಥ ಸ್ಪಷ್ಟತೆಯನ್ನು ಕಾಣಬಹುದು).

ತುಳುನಾಡು ಶಕ್ತಿಪೂಜೆಯ ಒಂದು ಪ್ರಮುಖ ತಾಣವಾಗಿತ್ತು ಎಂಬುದಕ್ಕೆ ತುಳುನಾಡಿನ ಉದ್ದಗಲಗಳಲ್ಲಿ ಹರಡಿಕೊಂಡಿರುವ ಶಕ್ತಿಸ್ಥಾನಗಳು ಮತ್ತು ಇವತ್ತಿಗೂ ತುಳುವರಲ್ಲಿ ವ್ಯಾಪಕವಾಗಿರುವ ಶಕ್ತಿಪೂಜೆ ನಿದರ್ಶನವಾಗಿದೆ.

ತುಳುನಾಡಿನ ಪ್ರಾಚೀನ ಶಕ್ತಿಸ್ಥಾನಗಳಲ್ಲೊಂದು ಸುಬ್ರಹ್ಮಣ್ಯದ ಸಮೀಪ ಬಳ್ಪ ಎಂಬಲ್ಲಿ ಕಾಣದೊರೆಯುತ್ತದೆ. ಕ್ರಿಸ್ತಶಕಾರಂಭಕ್ಕೆ ಕೆಲವು ಶತಮಾನಗಳ ಹಿಂದೆಯೇ ಈ ಶಕ್ತಿಸ್ಥಾನ ಅಸ್ತಿತ್ವದಲ್ಲಿತ್ತು ಎಂದು ಕರ್ನಾಟಕ ಗ್ಯಾಝೆಟಿಯರ್ ತಿಳಿಸುತ್ತದೆ. ಇಲ್ಲಿನ ಶಕ್ತಿದೇವತೆ ತ್ರಿಶೂಲಿನೀ. ಹಿಂದೆ ಇಲ್ಲಿ ಪ್ರಾಣಬಲಿ ನಡೆಯುತ್ತಿತ್ತು ಎನ್ನುವುದಕ್ಕೆ ಆಧಾರಗಳಿವೆ.

ಸುಮಾರು ಕ್ರಿ. ಶ. 4 ರಿಂದ 6 ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ಕದಂಬರು ಬಳ್ಪದ ಶಕ್ತಿ ದೇವತೆಗೆ ಪೂಜೆ ಸಲ್ಲಿಸುತ್ತಿದ್ದರು ಎಂದು ತಿಳಿದು ಬರುತ್ತದೆ.

ಕಾಳಿಗೆ (ಮಾರಿ ಅಥವಾ ಶಕ್ತಿ) ಹಿಂದೆ ಪ್ರಾಣಿ ಬಲಿಯ ಮೂಲಕ ಪೂಜಾ ಸೇವೆ ಸಲ್ಲುತ್ತಿತ್ತು. ಮಹಿಷಮರ್ದಿನಿ ಎಂಬ ಹೆಸರನ್ನು ಅನ್ವರ್ಥಗೊಳಿಸಲೆಂಬಂತೆ ಮಹಿಷವನ್ನೇ ಆಕೆಯ ಪ್ರೀತ್ಯರ್ಥವಾಗಿ ಬಲಿಕೊಡಲಾಗುತ್ತಿತ್ತು ಎಂದು ತೋರುತ್ತದೆ. "ಪೊಳಲಿಯಲ್ಲೂ ಒಂದು ಕಾಲದಲ್ಲಿ ಮಹಿಷನನ್ನು ಬಲಿಕೊಡುತ್ತಿದ್ದರೆಂದು ಯೂಪಸ್ತಂಭ ಹೇಳುತ್ತದೆ"[1] ಎಲ್ಲ ಶಕ್ತಿಸ್ಥಾನಗಳಲ್ಲೂ ಬಲಿ ಕಲ್ಲನ್ನು ಇಂದಿಗೂ ಕಾಣಬಹುದು. ಇಂದು ಪ್ರಾಣಿ ಬಲಿ ಪ್ರಚಲಿತದಲ್ಲಿ ಇಲ್ಲದಿದ್ದರೂ ಅದರ ಅವಶೇಷವಾಗಿ ಈ ಕಲ್ಲುಗಳು ಉಳಿದುಕೊಂಡಿವೆ. ಭೂತಕ್ಕೂ ಪ್ರಾಣಿಬಲಿಯ ಮೂಲಕ ಪೂಜೆ ನೆರವೇರಿಸಲಾಗುತ್ತದೆ. ಭೂತಕ್ಕೆ ಕೋಳಿ ಕುಯ್ಯುವ ಸಂಪ್ರದಾಯ ಇಂದಿಗೂ ಇದೆ.

ತುಳುನಾಡಿನಲ್ಲಿ ಹೆಜ್ಜೆ ಹೆಜ್ಜೆಗೂ ಶಕ್ತಿಸ್ಥಾನಗಳು ಕಂಡುಬರುವುದರಿಂದ ಅಲ್ಲಿ ಹಿಂದೆ ಶಾಕ್ತೇಯರು ಪ್ರಬಲರಾಗಿದ್ದಂತೆ ತೋರುತ್ತದೆ. ಬಳ್ಪದ ಪ್ರಸ್ತಾಪ ಹಿಂದೆಯೇ ಬಂತು. ಇದಲ್ಲದೆ, ಇವತ್ತು ಶಕ್ತಿ ಆರಾಧನೆಯ ಪ್ರಮುಖ ಕೇಂದ್ರಗಳಾಗಿ ಉಳಿದುಕೊಂಡಿರುವ ಹಾಗೂ ಜಿಲ್ಲೆಯ ಖ್ಯಾತ ದೇವಾಲಯಗಳೆಂದು ಪ್ರಸಿದ್ಧವಾಗಿರುವ ಕೊಲ್ಲೂರು, ಮಂದರ್ತಿ, ಇಡಗುಂಜಿ, ಬಪ್ಪನಾಡು, ಪೊಳಲಿ, ಕಟೀಲು, ಉದ್ಯಾವರ, ಮಂಗಳಾದೇವಿ. ಮುಲ್ಲ, ಅಗಲ್ಪಾಡಿ, ತೈರೆ–ಇನ್ನೂ ಮುಂತಾದ ನೂರಾರು ಶಕ್ತಿಸ್ಥಳಗಳು ಹಾಗೂ ತುಳುನಾಡಿನಾದ್ಯಂತ ಕುಟುಂಬ,ಗ್ರಾಮ ಮತ್ತು 'ಮಾಗಣೆ'ಯ (ಕೆಲವು ಗ್ರಾಮಗಳ ಒಕ್ಕೂಟ) ಭೂತಗಳಾಗಿ ಪ್ರಚಲಿತವಿರುವ ಭೂತಾರಾಧನೆಯು, ಹಿಂದೆ ತುಳುನಾಡು ಶಕ್ತ್ಯಾರಾಧನೆಯ ಕೇಂದ್ರವಾಗಿತ್ತು ಎಂಬ ಸಂಗತಿಯನ್ನು ಶ್ರುತಪಡಿಸುತ್ತದೆ. ಅನಂತಾಡಿ ಹಾಗೂ ಕಾಸರಗೋಡು ಸಮೀಪದ ಕೊರಕ್ಕೋಡು ಎಂಬಲ್ಲಿ ಶಕ್ತಿ ಮತ್ತು ಭೂತದ ಅಭೇದ ಕಲ್ಪನೆ ಇದೆ.

---

1 ಲೀಲಾಭಟ್ 'ಭೂತನಾಗರ ನಡುವೆ' ಪುಟ 129.

ತುಳುನಾಡಿನ ವೈದಿಕ ಮತಸ್ಥರ ಬಹುತೇಕ ಕುಟುಂಬಗಳಲ್ಲಿ ದುರ್ಗೆ, ಅಮ್ಮ, ಶಕ್ತಿ–ಎಂಬಿತ್ಯಾದಿ ರೂಪಗಳಲ್ಲಿ 'ಶಕ್ತಿ' ಪೂಜೆಗೊಳ್ಳುತ್ತಾಳೆ. ಸಮೃದ್ಧಿ ಮತ್ತು ಫಲದಾಯಕವಾದ ಶರತ್ಕಾಲದ ಮಧ್ಯಭಾಗದಲ್ಲಿ (ಮಹಾನವಮಿ ಸಂದರ್ಭದಲ್ಲಿ) 'ದುರ್ಗಾ ನಮಸ್ಕಾರ' ಎಂಬ ಶಕ್ತಿಪೂಜೆಯಲ್ಲಿ ಬ್ರಾಹ್ಮಣರ ಮನೆಗಳಲ್ಲಿ ವಿಶೇಷವಾಗಿ ಇಂದಿಗೂ ನಡೆಸಲಾಗುತ್ತದೆ. ಈ ಪೂಜೆಯಲ್ಲಿ 'ಕಸ್ಕಾರ' ಎಂಬ ಕೆಂಪು ಬಣ್ಣದ ಒಂದು ಹೂವಿಗೆ ಪ್ರಮುಖ ಸ್ಥಾನವಿದೆ. ದುರ್ಗಾ ನಮಸ್ಕಾರ ಪೂಜೆಗೆ ಈ ಹೂ ಬೇಕೇಬೇಕು. ಕೆಂಪು ಬಣ್ಣದ ಈ ಹೂ ರಕ್ತಬಲಿಯನ್ನು ಪ್ರತಿನಿಧಿಸುತ್ತಿರುವಂತಿದೆ.

ದಕ್ಷಿಣ ಕನ್ನಡದ ಬ್ರಾಹ್ಮಣರ 'ತರವಾಡು' (ಮೂಲ) ಮನೆಗಳಲ್ಲಿ 'ದೇವಕಾರ್ಯ' ಎಂಬೊಂದು ಶಕ್ತಿಪೂಜೆಯನ್ನು ಮಾಡಲಾಗುತ್ತದೆ. ಮೊದಲು ಇದಕ್ಕೆ ದೇವಿಕಾರ್ಯ ಎಂದು ಹೆಸರಿದ್ದು, ಅನಂತರ ದೇವಕಾರ್ಯ ಎಂದು ಹೆಸರು ಬದಲಾದಂತೆ ಕಂಡುಬರುತ್ತದೆ. ಇದನ್ನು ಸುವಾಸಿನೀ ಪೂಜೆ ಎಂದೂ ಕರೆಯುತ್ತಾರೆ.

ಈ ಪೂಜೆಯನ್ನು ಹಲವು ವರ್ಷಗಳ ಹಿಂದೆ ಮಧ್ಯರಾತ್ರಿ ಕಳೆದ ಬಳಿಕ ಮಾಡುತ್ತಿದ್ದರು. ಮಕ್ಕಳು ಈ ಪೂಜೆಯನ್ನು ನೋಡಬಾರದೆಂಬ ಉದ್ದೇಶದಿಂದ ಅವರನ್ನು ಬೇಗ ಉಣ್ಣಿಸಿ ಮಲಗಿಸಲಾಗುತ್ತಿತ್ತು. ಈಗಲೂ ದೇವಕಾರ್ಯವನ್ನು ರಾತ್ರಿವೇಳೆ ಮಾತ್ರ ನೆರವೇರಿಸುತ್ತಾರೆ. ಈ ಪೂಜೆಯನ್ನು ರಾತ್ರಿ ಬೇಗ ನೆರವೇರಿಸುವುದಾದರೆ ಮಕ್ಕಳನ್ನು ಕೆಲವರು ಒಂದು ಕೋಣೆಯಲ್ಲಿ ಕೂಡಿಹಾಕುವುದೂ ಇದೆ!

'ದೇವಕಾರ್ಯ'ದಲ್ಲಿ ನೈವೇದ್ಯಕ್ಕೆ ಮದ್ಯ ಮತ್ತು ಮಾಂಸ ತೀರ ಅಗತ್ಯ. ಕೆಲವು ವರ್ಷಗಳ ಹಿಂದೆ ಕೋಳಿ ಮಾಂಸವನ್ನು ಪಚ್ಚಾಗಿ ನೈವೇದ್ಯ ಮಾಡಲಾಗುತ್ತಿದ್ದರೂ ಇತ್ತೀಚೆಗೆ ಕೋಳಿಮೊಟ್ಟೆ ಆ ಜಾಗವನ್ನು ಆಕ್ರಮಿಸಿಕೊಂಡಿದೆ. ಅಂದರೆ ರಕ್ತಬಲಿಯ ಸಂಕೇತವಾಗಿ ಕೋಳಿ ಮಾಂಸ ಅಥವಾ ಕೋಳಿಮೊಟ್ಟೆ ನೈವೇದ್ಯದ ಒಂದು ಭಾಗವಾಗಿ ಉಳಿದುಕೊಂಡಿದೆ.

ಪೂಜೆಯ ಕೊನೆಯಲ್ಲಿ ಒಂದೊಂದು ಚಮಚೆ ಮದ್ಯವನ್ನು ಪ್ರಸಾದವಾಗಿ ನೆರೆದವರಿಗೆ ಕೊಡಲಾಗುತ್ತದೆ. ಇಲ್ಲೂ ಮಹಿಳೆಗೆ ಮೊದಲ ಪ್ರಾಶಸ್ತ್ಯ. ಮನೆ ಯಜಮಾನಿತಿ ಆರಂಭವಾಗಿ ಪೂಜೆಯಲ್ಲಿ ಪಾಲ್ಗೊಂಡ ಮಹಿಳೆಯರಿಗೆ ಮೊದಲು ಪ್ರಸಾದ ವಿತರಿಸಬೇಕೆಂಬ ಶಾಸ್ತ್ರ ಇದೆ.

ದೇವಕಾರ್ಯ ಪೂಜೆಗೆ ಕೆಂಪು ಬಣ್ಣದ ಹೂಗಳು ಬೇಕೇ ಬೇಕು. ದಾಸವಾಳ ಅಥವಾ ಕಿಸ್ಕಾರ ಹೂ ಬೇಕಾದಷ್ಟು ಸಿಗುವುದರಿಂದಾಗಿ ಅವಕ್ಕೆ ಪ್ರಾಶಸ್ತ್ಯ ಕೊಡಲಾಗುತ್ತದೆ.

ಅರ್ಚಕ ಮತ್ತು ಪೂಜೆ ನೆರವೇರಿಸುವಾತ ಪೂಜೆಯ ಮಧ್ಯದಲ್ಲೇ ಊಟ ಮಾಡುವುದು ಈ ಪೂಜೆಯ ಇನ್ನೊಂದು ವೈಶಿಷ್ಟ್ಯ. ಊಟ ಮುಗಿದ ಮೇಲೆ ಪೂಜೆ ಮತ್ತೆ ಮುಂದುವರಿಯುತ್ತದೆ.

ವರ್ಷಕ್ಕೊಮ್ಮೆ ಈ ಪೂಜೆ ನೆರವೇರಿಸುವ ಸಂಪ್ರದಾಯ ಇದೆಯಾದರೂ, ಹರಕೆ ಹೇಳಿದರೆ ಒಂದಕ್ಕಿಂತ ಹೆಚ್ಚು ಬಾರಿ ನಡೆಯುವುದೂ ಇದೆ.

ಪೂಜೆಯ ಆರಂಭದಲ್ಲಿ ಅರ್ಚಕ ಮನೆ ಯಜಮಾನಿತಿಯ ಪಾದ ತೊಳೆದು ಅರ್ಚನೆ ಮಾಡಬೇಕಾಗುತ್ತದೆ; ಮನೆಗೆ ಯಜಮಾನಿತಿ ಇಲ್ಲದಿದ್ದರೆ ಪೂಜೆಗೆ ಆಗಮಿಸಿದ ಇತರ ವಿವಾಹಿತ ಮಹಿಳೆಯಾದರೂ ಆಗಬಹುದು. ಇದು ದೇವೀ ಆರಾಧನೆಯಾದ 'ದೇವಕಾರ್ಯ'ದ ಒಂದು ಅಂಗ.

ಮಂಡಲ ಬರೆದು ಕೆಂಪು ಹೂಗಳಿಂದ ಅರ್ಚಿಸುವ ಈ ಪೂಜೆಯ ಬಹುಭಾಗವನ್ನು ಮಂತ್ರಕ್ಕಿಂತ ತಂತ್ರ ಆಕ್ರಮಿಸಿಕೊಂಡಿದೆ. ಅಂದರೆ, ಈ ಪೂಜೆ ಶಾಕ್ತ ಪಂಥದ ತಂತ್ರ ಪೂಜೆಯ ಅವಶೇಷವಾಗಿರುವಂತೆ ಕಂಡುಬರುತ್ತದೆ.

ದೇವಿಯ ಪೂಜಾ ವಿಚಾರಗಳಲ್ಲಿ ಭಕ್ತರು ಕೆಂಪು ಬಣ್ಣಕ್ಕೆ ವಿಶೇಷ ಪ್ರಾಶಸ್ತ್ಯ ಕೊಡುತ್ತಾರೆ. ಶಕ್ತಿ ದೇವಾಲಯಗಳಲ್ಲಿ 'ದೇವಿ'ಗೆ ತೊಡಿಸುವ ಬಟ್ಟೆ ಬರೆಗಳಲ್ಲಿ ಕೆಂಪು ವಸ್ತ್ರಗಳು ಧಾಳಾಗಿ ಕಾಣುತ್ತವೆ.

ವಿವಿಧ ಮತ–ಪಂಥಗಳಾಗಿ ಒಡೆದು ಹೋಗಿದ್ದ ಹಿಂದೂ ಧರ್ಮವನ್ನು ಒಗ್ಗೂಡಿಸುವ ದೃಷ್ಟಿಯಿಂದ, ಎಲ್ಲ ದೇವರು ಒಂದೇ ಎಂಬ ತತ್ತ್ವಾನುಸರಣೆಗಾಗಿ ಸು. ಕ್ರಿ.ಶ. 6ನೇ ಶತಮಾನದಲ್ಲಿ ಶಂಕರಾಚಾರ್ಯರು ಪಂಚಬ್ರಹ್ಮರ[2] ಪೂಜೆಯನ್ನು ಪ್ರಸ್ತುತಪಡಿಸಿದರು. ಪಂಚಬ್ರಹ್ಮರ ಪೂಜೆಯಲ್ಲಿ ದುರ್ಗೆಗೆ ವಿಶೇಷವಾದ ಸ್ಥಾನವಿದೆ. ದಕ್ಷಿಣಾಮ್ನಾಯ ಪೀಠ ಶೃಂಗೇರಿಯಲ್ಲಿ ಶ್ರೀ ಶಾರದಾ ಮಾತೆಯನ್ನು ಶ್ರೀ ಶಂಕರರು ಅಧಿಷ್ಟಿಸಿದ್ದಕ್ಕೆ ಈ ಪ್ರಾಂತದಲ್ಲಿ ಶಾಕ್ತಪಂಥ ಪ್ರಬಲವಾಗಿದ್ದುದು ಕಾರಣವೆಂದು ತೋರುತ್ತದೆ.[3]

ಭೂತ 'ನುಡಿಗಟ್ಟು' ಹೇಳುವ ಸಂದರ್ಭದಲ್ಲಿ ಹಾಗೂ ಅಭಯ ಕೊಡುವಾಗ 'ಅಮ್ಮ'ನ ಸ್ಥಾನದ ಪ್ರಸ್ತಾಪ ಬರುತ್ತದೆ. ''ಪೆರ್ದ್ದಂಡ ಅಪ್ಪೆ ಆದ್ ಮಿರೆನೊರ್ದು,

2. ದುರ್ಗೆ, ಗಣಪತಿ, ಸೂರ್ಯ, ಶಿವ ಮತ್ತು ವಿಷ್ಣು ಇವರನ್ನು ಪಂಚಬ್ರಹ್ಮರೆಂದು ಕರೆಯಲಾಗುತ್ತದೆ. ತುಳುನಾಡಿನ ವೈದಿಕರಲ್ಲಿ ಪಂಚಬ್ರಹ್ಮರ ಪೂಜೆ ವ್ಯಾಪಕವಾಗಿ ಪ್ರಚಾರದಲ್ಲಿದೆ.

3. ಆ ಕಾಲದಲ್ಲಿ ಶಾಕ್ತಪಂಥ ತುಳುನಾಡಿನಲ್ಲಿ ಮಾತ್ರವಲ್ಲದೆ ಹೊರಗಡೆಯೂ ಪ್ರಾಬಲ್ಯವಾಗಿದ್ದಿರಬೇಕು.

ತಾಂಕ್‌ಂಡ ತಮ್ಮಲೆ ಆದ್' ಬುದ್ಧಿ ನೀತಿ ಪಂಡ್‌ದ್, ಪತ್ತಪ್ಪೆ ಬಾಲೆಲೆನ್ ಒಂಜಪ್ಪೆ ಬಾಲೆಲೆಕ ತಾಂಕೊಂದ್, ನಂಬಿ ಇಡೀ ರಾಜ್ಯೊನ್ ಪೂತ್ತ ಜಿತ್ರ್‌ಲ್‌ದ ಲೆಕ ತೂವೊನ್ವೆ, ನಂಬುಲೆ'' (ಹೆತ್ತರೆ ತಾಯಿಯಂತೆ ಎದೆ ಹಾಲು ಕೊಟ್ಟು, ಸಾಕಿದರೆ ಮಾವನಂತೆ ಬುದ್ಧಿ-ನೀತಿ ಹೇಳಿ, ಹತ್ತು ತಾಯಿಯ ಮಕ್ಕಳನ್ನು ಒಬ್ಬ ತಾಯಿಯ ಮಕ್ಕಳಂತೆ ಸಾಕಿಕೊಂಡು, ನಂಬಿದ ಇಡೀ ರಾಜ್ಯವನ್ನು ಹೂವಿನ ತೋಟದ ಹಾಗೆ ನೋಡಿಕೊಳ್ಳುತ್ತೇನೆ, ನಂಬಿಕೊಳ್ಳಿ) ಎಂದು ಭೂತ ಉಗ್ಗಡಿಸುತ್ತದೆ. ಇಲ್ಲಿ ಮಾತು ಮಾತಿಗೆ ತಾಯಿಯ (ಅಮ್ಮನ ಅಥವಾ ಶಕ್ತಿಯ) ಪ್ರಸ್ತಾಪ ಬರುತ್ತದೆ.

ಅಮ್ಮನವರ ಪ್ರಸಾದ ಕುಂಕುಮವಾದರೆ ಭೂತದ ಪ್ರಸಾದ ಅರಿಶಿನ. ಇವೆರಡೂ ಫಲಪತ್ತತೆ, ಸೃಷ್ಟಿ ಮತ್ತು ಸಮೃದ್ಧಿಯ ಸಂಕೇತಗಳು. ಕುಂಕುಮ ರಕ್ತಬಲಿಯನ್ನು ಪ್ರತಿನಿಧಿಸುತ್ತಿದ್ದರೂ ಇರಬಹುದು. ಹಾವಿನ ಹೆಡೆಮಣಿಯ ಹಾಗೆ, ಸೌಂದರ್ಯ ಮತ್ತು ಸೃಷ್ಟಿ ಶಕ್ತಿಯ ಜೊತೆಗೆ ದಮನ ಹಾಗೂ ನಾಶ ಇರುವುದರ ಕಲ್ಪನೆಯೂ ಇರಬಹುದು. ಭೂತವು ಜೀವಕೋಟಿಯ ಸಂರಕ್ಷಣೆಗಾಗಿ ಮತ್ತು 'ಸತ್ಯ'ದ ಕಾಯುವಿಕೆಗಾಗಿ ಇದೆ ಎಂಬುದು ತುಳುನಾಡವರ ನಂಬಿಕೆ. ಸತ್ಯ ಎಂದರೆ, ಸತ್‌ಶಕ್ತಿ ಆಗಿದೆ. ಭೂತಕ್ಕೆ ಹರಕೆ ಹೇಳುವುದನ್ನು 'ಸತ್ಯಕ್ಕೆ ನಡೆದು ಕೊಳ್ಳುವುದು' ಎನ್ನುತ್ತಾರೆ[5] 'ನಡೆ' ಎಂದರೆ ಹಾದಿ ಅರ್ಥಾತ್ 'ಸತ್ಯದ ಹಾದಿ', ಭೂತವು ತುಳುನಾಡ ಜನರನ್ನು ಸತ್ಯದ ಹಾದಿಯಲ್ಲಿ ನಡೆಯಲು ಕಟ್ಟಳೆ ವಿಧಿಸುತ್ತದೆ. ಶಕ್ತಿಸ್ಥಾನಗಳಲ್ಲೆಲ್ಲ 'ನಡೆ'[6] ಇದ್ದೇ ಇರುತ್ತದೆ.

ಭೂತವು ಯಜಮಾನನೊಂದಿಗೆ 'ಮದಿಪು' (ಯಜಮಾನನೊಂದಿಗೆ ಸಂಭಾಷಣೆ ಮತ್ತು ನ್ಯಾಯ ತೀರ್ಮಾನ) ಮಾಡುವಾಗ ಹಾಗೂ 'ಅಭಯ' ಕೊಡುವಾಗ ಪ್ರತಿ ಮಾತಿನಲ್ಲೂ 'ಸತ್ಯ'ದ ಬಗೆಗೆ ಉಗ್ಗಡಿಸುತ್ತದೆ. ಭೂತಕ್ಕೆ ನಡೆದುಕೊಳ್ಳುವವನನ್ನು ಅಥವಾ ಭೂತಾರಾಧನೆ ನಡೆಯಿಸುವವನನ್ನು ಭೂತವು 'ಕರ್ತುರ್‌ಕುಳೇ' (ಕರ್ತೃಗಳೇ) ಎಂದು ಕರೆಯುತ್ತದೆ. ಕರ್ತುರ್‌ಕುಳೇ ಎಂದರೆ ಕಾರಣೀಭೂತನಾದವನು, ಕಾರ್ಯ ಮಾಡುವವನು. ಯಜಮಾನ ಎಂದು ಅರ್ಥ ಇದು

---

4. ತುಳುನಾಡಿನಲ್ಲಿ 'ಅಳಿಯ ಕಟ್ಟು' ಪದ್ಧತಿ ಇರುವುದರಿಂದ "ತಮ್ಮಲೆ"ಯ (ಮಾವನ) ಪ್ರಸ್ತಾವ ಬರುತ್ತದೆ.
5. ಅಡಿ ಟಿಪ್ಪಣಿ ನೋಡಿ.
6. ದೇವಸ್ಥಾನಗಳಲ್ಲಿರುವ 'ನಡೆ'ಗೆ ದೇವರು ಸಾಗುವ ಹಾದಿ ಎಂಬ ಅರ್ಥವೂ ಇದೆ : ಜಾತ್ರೆ ಸಂದರ್ಭದಲ್ಲಿ ಉತ್ಸವ ಮೂರ್ತಿಯನ್ನು 'ಬಲಿ' (ಸುತ್ತು) ತರುವುದರಿಂದಾಗಿ ಈ ಅರ್ಥ ಬಂದಿದೆ. ಆದರೆ, ಇಲ್ಲಿಯೂ ಮೂಲ ಅರ್ಥ 'ಸತ್ಯದ ನಡೆ' ಎಂದೇ ಆಗಿದೆ.

ಸ್ತ್ರೀಯು ಪುರುಷನನ್ನು ಉದ್ದೇಶಿಸಿ ಮಾಡುವ ಸಂಬೋಧನಾ ವಾಚಕದಂತಿದೆ. ಅಂದರೆ, ಇದು ಭೂತವು ಶಕ್ತಿ ಅಥವಾ ಸ್ತ್ರೀ ಮೂಲವನ್ನು ಸೂಚಿಸುತ್ತದೆ.

ಸತ್ಯದಿಂದ ನಡೆದುಕೊಳ್ಳಬೇಕೆಂಬ ವಾಗ್ದಾನವನ್ನು ಮಾತು ಮಾತಿಗೂ ತೆಗೆದು ಕೊಳ್ಳುವ ಭೂತವು 'ದರ್ಶನ' ತೆಗೆದುಕೊಂಡು ಮಾತಾಡುವಾಗ "ಸತ್ಯೊದ ರಾಜ್ಯ ಉಂಡು, ಸತ್ಯೊದ ಐಂದಾಳು ನಿಕುಳು, ಸತ್ಯೊದ ಮಣ್ಣ್ ಉಂಡು, ಸತ್ಯೊದ ಮಾಯೆಕಾರೆಯಾನ್, ಈ ರಾಜ್ಯೊಡ್ ಸತ್ಯೊ ಅತ್ತಂದೆ ಅಸತ್ಯೊ ಕೋಡಿ ಮಂಟ್ಯೆರೆ ಬಂಡ್ಚೀಂದ್ ಪನ್ಪಾದ್ ಕೊರ್ಪೆ. ಸತ್ಯೊ ನಂಬೊನ್ಲೆ" (ಸತ್ಯದ ರಾಜ್ಯ ಇದು, ಸತ್ಯದ ಜನ ನೀವು, ಸತ್ಯ ನಂಬಿ ನಡೆವವರು ನೀವು, ಸತ್ಯದ ಮಣ್ಣು ಇದು, ಸತ್ಯದ ಮಾಯೆ ನಾನು, ಈ ರಾಜ್ಯದಲ್ಲಿ ಸತ್ಯ ಅಲ್ಲದೆ ಅಸತ್ಯ ಗೆಲ್ಲಲಿಲ್ಲ ಎಂಬುದನ್ನು ಮಾಡಿ ತೋರಿಸುತ್ತೇನೆ, ಸತ್ಯ ನೀವು ನಂಬಿಕೊಳ್ಳಿ) ಎಂದು ಅಭಯ ಕೊಡುತ್ತದೆ.

'ಸತ್ಯದ ಮಾಯೆ' ಎಂದರೆ ಶಕ್ತಿ ದೇವತೆ ಅಥವಾ ಭೂತವೇ ಆಗಿದೆ.

ಶಕ್ತಿಯ ಆರಾಧನೆಗೂ, ತುಳುನಾಡಿನಲ್ಲಿ ಮಾತೃ ಪ್ರಧಾನ ಕುಟುಂಬ ಪದ್ಧತಿ ಇರುವುದಕ್ಕೂ ಒಂದಕ್ಕೊಂದು ಸಂಬಂಧ ಇದೆ. ಬಂಟರ ಜಾತಿಯಲ್ಲಿ ಇದನ್ನು 'ಅಳಿಯಕಟ್ಟು' ಎಂಬುದಾಗಿ ಹೇಳುತ್ತಾರೆ.

ಸಪ್ತಮಾತೃಕೆಯರ[7] ಪೂಜೆ ಕೂಡ ತುಳುನಾಡಿನಲ್ಲಿ ಪ್ರಸಿದ್ಧವಾದುದ್ದಾಗಿವೆ. ಇವರೆಲ್ಲ ಶಕ್ತಿ ಸ್ವರೂಪಿಣಿಯರಾಗಿದ್ದಾರೆ.

ಶಕ್ತ್ಯಾರಾಧನೆ ಮತ್ತು ಭೂತಾರಾಧನೆ ಎರಡೂ ಒಂದೇ ಆಗಿದೆ. ಒಂದು, ವೈದಿಕರು (ಶಾಕ್ತಪಂಥ ?) 'ನಡೆದುಕೊಂಡು' ಬಂದ ಪದ್ಧತಿಯಾದರೆ ಇನ್ನೊಂದು ಅವೈದಿಕರು 'ನಡೆದುಕೊಂಡು' ಬಂದ ಪೂಜಾ ವಿಧಾನವಾಯಿತು.

ಇವತ್ತು ದೇವಾಲಯದ ಸ್ವರೂಪ ಪಡೆದುಕೊಂಡು ಮತ್ತು 'ಕಾರಣಿಕ' ಗಳಿಸಿ ಕೊಂಡಿರುವ ಶಕ್ತ್ಯಾರಾಧನೆಯ ಸ್ಥಳಗಳು ವೈದಿಕರ ಪ್ರಭಾವದಿಂದ 'ಭೂತ' ರೂಪಿ ನಿಂದ ಮುಕ್ತಿಹೊಂದಿ ದೇವಾಲಯದ ರೂಪ ಪಡೆದದ್ದಿರಬಹುದು.[8]

---

7 ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿ-ಇವರನ್ನು ಸಪ್ತಮಾತೃಕೆಯರೆಂದು ಕರೆಯಲಾಗುತ್ತದೆ.

8 ಇಂತಹ ಶಕ್ತಿಸ್ಥಾನಗಳಿಂದಲೇ ಯಕ್ಷಗಾನ ಮೇಳಗಳು ಆರಂಭವಾದದ್ದು. ಮೊದ ಮೊದಲು ಯಕ್ಷಗಾನ ಪ್ರಸಂಗಗಳೆಂದರೆ ದೇವೀ ಮಹಾತ್ಮೆಯೇ ಪ್ರಧಾನವಾಗಿತ್ತು. ಹೀಗಾಗಿ, ಯಕ್ಷಗಾನವು ಶಕ್ತಿಮಹಾತ್ಮೆಯನ್ನು ಪ್ರಚುರಪಡಿಸುವ ಸಾಧನವಾಗಿ ಮತ್ತು ಭೂತದ ಕಲ್ಪನೆಯಿಂದಲೇ ಹುಟ್ಟಿಕೊಂಡದ್ದಾಗಿ ಕಂಡುಬರುತ್ತದೆ.

ಭೂತ ಕಟ್ಟುವವರು ನಲಿಕೆ, ಪಂಬದ, ಪರವ, ಪಾಣಾರ, ಮುಗೆಯ ಮುಂತಾದ ಸಾಮಾಜಿಕವಾಗಿ ನಿಮ್ನ ವರ್ಗದವರು ಮತ್ತು ಭೂತದ ಭಕ್ತಾದಿಗಳಲ್ಲಿ ಅವೈದಿಕರು ಹೆಚ್ಚು. ಈ ಅಚ್ಚ ದ್ರಾವಿಡ ದೈವದ ಆರಾಧನೆ ನಡೆಯುವುದೂ ಹೆಚ್ಚಾಗಿ ಗುಡ್ಡ, ಬೆಟ್ಟ (ಅನಂತರದ ಕಾಲದಲ್ಲಿ ಬಯಲು, ಗದ್ದೆ) ಮುಂತಾದ ಗುಡ್ಡಗಾಡು ಜನ ವಾಸ ಮಾಡುವ ವನಪ್ರದೇಶಗಳಲ್ಲಿ. ಇವತ್ತು ಕೂಡ ಭೂತದ ಗುಡಿಗಳಿರುವುದು ಇಂತಹ ಕಡೆಗಳಲ್ಲಿಯೇ. ಆರಂಭ ಕಾಲದಲ್ಲಿ, ಭೂತಾರಾಧನೆಯ ನುಡಿಗಟ್ಟುಗಳು ಇನ್ನೂ ರೂಪುಗೊಳ್ಳದೇ ಇದ್ದ ಸಂದರ್ಭದಲ್ಲಿ ವೇಷಭೂಷಾದಿಗಳ ಮತ್ತು ವರ್ಣವೈಭವಗಳ ಹೊರ ಆಕೃತಿ ಮುಖ್ಯವಾಗಿ ತನ್ಮೂಲಕ ಭೀತಿಪೂರ್ವಕ ಭಕ್ತಿಯುಕ್ತ ಶಕ್ತಿಪೂಜೆ ಆಚರಣೆಗೆ ಬಂದಿರಬೇಕು. ಭೂತದ 'ನುಡಿಗಟ್ಟು' ಗಳು ಆರಂಭದಲ್ಲಿ ಒರಟುರೂಪದ ಮಾತುಗಳಾಗಿದ್ದದ್ದು ಕಾಲಕ್ರಮೇಣ ಒಂದು ಸ್ಪಷ್ಟ ರೂಪ ಪಡೆದುಕೊಂಡಿರಬೇಕು.

ಆದರೆ ಇಂದು ಕಾಣಬರುತ್ತಿರುವ ಅಮ್ಮನವರ ಪೂಜೆ ಮತ್ತು ಭೂತಾರಾಧನೆ ಎರಡು ಕವಲುಗಳಾಗಿ ಯಾವಾಗ ಬೇರ್ಪಡಲಾರಂಭಿಸಿತು ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಬಹುಶಃ ತುಳುನಾಡಿಗೆ ಆರ್ಯ ವೈದಿಕರು ಆಗಮಿಸಿ, ಧಾರ್ಮಿಕ ಕೊಡುಕೊಳ್ಳುವ ಪ್ರಕ್ರಿಯೆಯಲ್ಲಿ ನಿಧಾನವಾಗಿ ಈ ಭಿನ್ನತೆ ತಲೆದೋರಿರುವ ಸಾಧ್ಯತೆ ಇದೆ.

ತುಳುನಾಡಿನಲ್ಲಿರುವ ಬ್ರಾಹ್ಮಣರು, ಅದರಲ್ಲೂ ಮುಖ್ಯವಾಗಿ 'ಹವ್ಯಕ' ರು ಕಾಶಿ ಸಮೀಪದ ಅಹಿಚ್ಛತ್ರಪುರದಿಂದ ಸುಮಾರು ಮೂರು ಸಾವಿರ ವರ್ಷಗಳ ಹಿಂದೆ ವಲಸೆ ಬಂದವರೆಂದು ಹೇಳಲಾಗಿದೆ. ಪರಶುರಾಮನ ಸಂಗಡ ಇವರು ದಕ್ಷಿಣದ ಗೋಕರ್ಣ ಮಂಡಲಕ್ಕೆ ಬಂದು ಆಸುಪಾಸಿನಲ್ಲಿ ನೆಲಸಿದರೆಂದು ಹೇಳುತ್ತಾರೆ.

ಹವ್ಯಕರ ವಿವಾಹ ಸಮಾರಂಭದ ಆಚರಣೆಗಳಲ್ಲಿ ನೂತನ ವಧೂವರರು 'ಮೀನು ಹಿಡಿಯುವ' ಒಂದು ಸಂಪ್ರದಾಯ ಇದೆ. ಇದು ಮೂಲ ನಿವಾಸಿಗಳೊಂದಿಗೆ ಅವರು ವಿವಾಹ ಸಂಬಂಧ ಮಾಡಿಕೊಂಡರು ಎಂಬುದರ ಒಂದು ಸಂಕೇತ ಎಂದು ತೋರುತ್ತದೆ. ವಿವಾಹಾದಿ ಸಂಬಂಧಗಳ ಮೂಲಕ ಸ್ಥಳೀಯರ ಜೊತೆ ಅವರ ಕೊಡು ಕೊಳ್ಳುವಿಕೆ ಹೆಚ್ಚಾದಾಗ ವೈದಿಕರಾದ ಹವ್ಯಕರು ಜಪತಪ ಹೋಮ ಹವನಾದಿಗಳೊಂದಿಗೆ ಜೀವನೋಪಾಯವನ್ನೂ ಅರಿತಿರಬೇಕು ಎಂಬ ಉದ್ದೇಶದಿಂದ ಸ್ಥಳೀಯರು ಕೆಲವು ಷರತ್ತುಗಳನ್ನು ವಿಧಿಸಿದರೆಂದು ತೋರುತ್ತದೆ. ಹೀಗೆ ಹವ್ಯಕರು ಮೀನು ಹಿಡಿಯುವ (ಅರ್ಥಾತ್ ಆಹಾರ ಸಂಪಾದಿಸಿಕೊಳ್ಳುವ' ವಿದ್ಯೆಯನ್ನು ಕಲಿಯಬೇಕಾಗಿ ಬಂತು ಎಂದು ಊಹಿಸಬಹುದು.

ಶಿವಳ್ಳಿ ಬ್ರಾಹ್ಮಣರಲ್ಲಿ ಇವತ್ತಿಗೂ ಹೆಂಗಸರು ಮತ್ತು ಹುಡುಗಿಯರು ದೇವರ ಪೂಜೆಗೆ ಹೂ ಕೊಯ್ಯಕೂಡದೆಂಬ ನಿಷೇಧ ಇದೆ[9] ಇದು ಆಗಿನ ವೈದಿಕರು ಸ್ಥಳೀಯ ಅವೈದಿಕ ಜನರೊಂದಿಗೆ ವಿವಾಹಾದಿ ಸಂಬಂಧಗಳನ್ನು ಬೆಳಸಿಕೊಂಡರು ಎಂಬುದರ ಸೂಚನೆಯಾಗಿ ಕಾಣುತ್ತದೆ.

ಅಲ್ಪಸಂಖ್ಯಾತರಾಗಿದ್ದ ಬ್ರಾಹ್ಮಣರು ಸ್ಥಳೀಯರ (ದ್ರಾವಿಡರ) ಪ್ರಭಾವ ದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗಿರಲಿಲ್ಲ. ಪರಸ್ಪರ ಸಂಬಂಧ ಬೆಳೆದ ಹಾಗೆ ಕೊಳುಕೊಡೆಯೂ ಅಧಿಕವಾಗುತ್ತಹೋಯಿತು. ಹಾಗೆಯೇ ಸ್ಥಳೀಯರ ಭೂತಾರಾಧನೆಯನ್ನು ಅವರು ಸ್ವೀಕರಿಸಲೇಬೇಕಾಯಿತು ; ಅದು ಕೂಡ ಒಲ್ಲದ ಮನಸ್ಸಿನಿಂದ ಎಂದು ತೋರುತ್ತದೆ. ಯಾಕೆಂದರೆ, ವೈದಿಕರಲ್ಲಿ ಭೂತದ 'ಭಂಡಾರ' (ಅಟ್ಟೆ, ಗಗ್ಗರ, ಖಡ್ಗ ಇತ್ಯಾದಿ ಭೂತದ ವಸ್ತುಗಳು) ಮನೆಯಿಂದ ಪ್ರತ್ಯೇಕವಾಗಿ ಹೊರಗೆ ಇರುತ್ತದೆಯಲ್ಲದೆ ಮನೆಯೊಳಗೆ ಇರುವುದಿಲ್ಲ.[10] ಹೀಗಾಗಲು ಕಾರಣ ಬಹುಶಃ ವೈದಿಕರು ಭೂತವನ್ನು ನಿಮ್ನ ಜಾತಿಯವರ ದೈವ ಎಂದು ಪರಿಗಣಿಸಿದ್ದರಿಂದ ಇರಬೇಕು. ದೇವರಿಗೆ ಅಡ್ಡಬೀಳುವ ಹಾಗೆ, ವಂದಿಸುವ ಹಾಗೆ ವೈದಿಕರು ಭೂತಕ್ಕೆ ಅಡ್ಡಬೀಳುವುದಿಲ್ಲ, ತಲೆಬಾಗಿ ವಂದಿಸುವುದಿಲ್ಲ. ಭೂತ ಪೂಜೆಯನ್ನು ಅವರು ಇತರರ ಮೂಲಕ ನೆರವೇರಿಸುತ್ತಾರಾದರೂ ತಾವೇ ಸ್ವತಃ ಭೂತಾರಾಧನೆ ಮಾಡುವುದಿಲ್ಲ.

ಭೂತಾರಾಧನೆ ಹಾಗೂ ನಾಗಾರಾಧನೆ[11] ದ್ರಾವಿಡ ಜನಾಂಗದವರ ಪದ್ಧತಿ ಯಾದರೂ ಆರ್ಯರೂ ಅದನ್ನು ಸ್ವೀಕರಿಸಿದ್ದು ಆಕಾಲದಲ್ಲಿ ಸಂಭವಿಸಿದ ಧಾರ್ಮಿಕ

---

9 ಇದಕ್ಕೆ ಪೂರಕವಾಗಿ ಇನ್ನೊಂದು ಅಂಶವನ್ನು ಇಲ್ಲಿ ಹೇಳಬಹುದು. ಒಂದು ತಲೆ ಮಾರಿನ ಹಿಂದಿನವರೆಗೆ ಕಾಸರಗೋಡು, ವಿಟ್ಲ ಭಾಗದ ಕೆಲವು ಬ್ರಾಹ್ಮಣವಟುಗಳು ಕೇರಳದಲ್ಲಿರುವ ದೇವಸ್ಥಾನಗಳಿಗೆ 'ಶಾಂತಿ' ಕಾರ್ಯಕ್ಕೆ (ಪೂಜೆಗೆ) ಹೋಗುತ್ತಿದ್ದರು. ಪ್ರಬಲ ನಾಯಮ್ಮಾರರೆಂಬ ಕುಲದವರು ನಡೆಸುವ ದೇವಸ್ಥಾನಗಳಿಗೆ 'ಶಾಂತಿ' ಕಾರ್ಯಕ್ಕೆ ಹೋದವರಿಗೆ ಆ ಕುಲದ ಹೆಣ್ಣೊಬ್ಬಳನ್ನು ಕೂಡಲು ಅವಕಾಶ ಮಾಡಿ ಕೊಡಲಾಗುತ್ತಿತ್ತು. ಹೀಗೆ ಹುಟ್ಟುವ ಮಕ್ಕಳನ್ನು ಆ ನಾಯಮ್ಮಾರ ಮನೆಯವರೇ ಸಾಕಿ ಬೆಳಸುತ್ತಿದ್ದರು. ಇದು ಅವರ ವಂಶವನ್ನು ಉತ್ತಮ ಪಡಿಸಿಕೊಳ್ಳುವ ಉದ್ದೇಶದಿಂದ ಕೂಡಿರುವಂಥದ್ದು. ಬ್ರಾಹ್ಮಣ ವಟುವನ್ನು ವರಿಸಿದಷ್ಟಕ್ಕೆ ನಾಯಮ್ಮಾರ ಹುಡುಗಿ ಬ್ರಾಹ್ಮಣತಿಯಾಗುತ್ತಿದ್ದಿಲ್ಲ ಹಾಗೂ ದೇವಸ್ಥಾನದ ಯಾವುದೇ ಪೂಜಾ ಚಟುವಟಿಕೆಗಳಲ್ಲಿ ಆಕೆ ಭಾಗವಹಿಸುವಂತಿರಲಿಲ್ಲ. ಆಕೆ ಅಸ್ಪೃಶ್ಯಳಂತೆ ದೂರ ಇರಬೇಕಾಗುತ್ತಿತ್ತು. ಇಂತಹ ನಿಜಘಟನೆಯೊಂದನ್ನಾಧರಿಸಿ 'ಭಾರತೀಸುತ' ಅವರು 'ಗಿಳಿಯು ಪಂಜರದೊಳಿಲ್ಲ' ಎಂಬ ಕಾದಂಬರಿ ಬರೆದಿದ್ದಾರೆ.

10 ಜೈನರಲ್ಲಿ ಮತ್ತು ಬಂಟರಲ್ಲಿ ಭೂತದ 'ಭಂಡಾರ' ಮನೆಯೊಳಗೆ ಇರುತ್ತದೆ.

11 ನಾಗ ಮತ್ತು ದೇವಿ (ಶಕ್ತಿ) ಅಭಿನ್ನ ಎಂದು ಶಕ್ತಿಯ ಬಗ್ಗೆ ಸಂಶೋಧನೆ ನಡೆಸಿದ ಲೀಲಾಭಟ್ ಹೇಳಿದ್ದಾರೆ.

ಸಮನ್ವಯಕ್ಕೆ ಉದಾಹರಣೆ. ಆದರೆ ಈ ಸಮನ್ವಯವೂ ಧಿಡೀರಾಗಿ ಆಗಲಿಲ್ಲ. ದೀರ್ಘಕಾಲದ ಮೌನಸಂಘರ್ಷದ ಮೂಲಕವೇ ಆಗಿರಬೇಕು.

ಆದರೆ, ಅನಂತರದ ಕಾಲದಲ್ಲಿ ವೈದಿಕರನ್ನೂ ತನ್ನ ತೆಕ್ಕೆಗೆ ಸೇರಿಕೊಂಡು, ಗ್ರಾಮವನ್ನು ಒಂದು ಕೂಡುಕಟ್ಟಿನಾಗಿ ಭೂತವು ಎಲ್ಲರನ್ನೂ 'ಸತ್ಯ'ದ ಹಾದಿಯಲ್ಲಿ ಮುನ್ನಡೆಸಿಕೊಂಡು ಬಂದ ಬೆಳವಣಿಗೆಯ ಹಾದಿಯ ಅಧ್ಯಯನ ನಿಜಕ್ಕೂ ರೋಮಾಂಚಕಾರಿಯಾದದ್ದು.

ಅಡಿ ಟಿಪ್ಪಣಿ (5)

5 ಸತ್ಯಕ್ಕೆ ನಡೆದುಕೊಳ್ಳುವುದನ್ನು 'ಹೊಯ್ಲು' ಎಂದೂ ಕರೆಯುತ್ತಾರೆ. ಹೊಯ್ಲು ಎಂದರೆ ಮೊರೆ (ಕೂಗು) ಎಂದರ್ಥ. ಇದು ದೇವರು ನ್ಯಾಯದಾನ ಮಾಡುವ ಒಂದು ವಿಶಿಷ್ಟ ಸಂಪ್ರದಾಯ. ಮನುಷ್ಯನಿಗೆ ಬೇರೆಲ್ಲಿಯೂ ನ್ಯಾಯ ದೊರಕದೇ ಇದ್ದಾಗ ಅಂತಿಮವಾಗಿ ದೈವಕ್ಕೆ ಶರಣಾಗುವ ವಿಧಾನ ಇದು. ಹೊಯ್ಲನ್ನು 'ಅಮ್ಮ'ನೂ ಸ್ವೀಕರಿಸುತ್ತಾಳೆ ; ಭೂತವೂ ಸ್ವೀಕರಿಸುತ್ತದೆ. ಭೂತ ಮತ್ತು ಅಮ್ಮ ಒಂದೇ ಎಂಬುದನ್ನು ಈ ಸಂಪ್ರದಾಯ ತೋರಿಸಿ ಕೊಡುತ್ತದೆ.

ಧರ್ಮಸ್ಥಳದಲ್ಲಿ ಅಣ್ಣಪ್ಪನ 'ಸತ್ಯಕ್ಕೆ ನಡೆದುಕೊಳ್ಳುವುದು' (ಅಥವಾ ಹೊಯ್ಲು) ಎಷ್ಟು ಪ್ರಸಿದ್ಧವೋ ಕುಂದಾಪುರದ ಕೋಡಿ ಅಮ್ಮನವರ ಹೊಯ್ಲು ಹಾಗೂ ಅನಂತಾಡಿ ಹೊಯ್ಲು ಕೂಡ ಅಷ್ಟೇ ಕಾರಣಿಕದ್ದು. ಎಲ್ಲ ಅಮ್ಮನವರ ದೇವಸ್ಥಾನಗಳಲ್ಲೂ ಭೂತಸ್ಥಾನಗಳಲ್ಲೂ 'ಹೊಯ್ಲು' ಇರುತ್ತಿತ್ತು. ಕಾಲಕ್ರಮೇಣ ಕೆಲವದರ ಶಕ್ತಿಗುಂದುವುದು ಮತ್ತು ಕೆಲವದರ ಶಕ್ತಿ ಹೆಚ್ಚುವುದು ಲೋಕರೂಢಿ ! ದೈವಗಳ ಮಟ್ಟಿಗೂ ಈ ಏಳುಬೀಳುಗಳು ಸಾಮಾನ್ಯ. ಇವತ್ತೂ ಎಷ್ಟೋ ಅಮ್ಮನವರ ದೇವಸ್ಥಾನಗಳಲ್ಲಿ ಮತ್ತು ಭೂತಸ್ಥಾನಗಳಲ್ಲಿ 'ಹೊಯ್ಲು' ಸಂಪ್ರದಾಯ ರೂಢಿಯಲ್ಲಿದೆ. ಆದರೆ ದಕ್ಷಿಣ ಕನ್ನಡದಲ್ಲಿ ಧರ್ಮಸ್ಥಳದಷ್ಟು 'ಸತ್ಯ'ದ ಪ್ರಸಿದ್ಧಿ ಬೇರಾವ ದೇವಸ್ಥಾನಕ್ಕೂ ಇದ್ದಂತಿಲ್ಲ. ಭಾರತದಲ್ಲೇ 'ದೇವರ ನ್ಯಾಯ' ಪದ್ಧತಿ ಬಹು ಅಪೂರ್ವ ಎನ್ನಲಾಗುತ್ತದೆ. ಧರ್ಮಸ್ಥಳ ಬಿಟ್ಟರೆ ಒರಿಸ್ಸಾದ ಸಾಕ್ಷಿಗೋಪಾಲ ದೇವಾಲಯದಲ್ಲಿ ಮಾತ್ರ ಸಿವಿಲ್ ವ್ಯಾಜ್ಯಗಳನ್ನು ಬಗೆಹರಿಸುವ ಪದ್ಧತಿ ಇದೆಯೆಂದು ದಕ್ಷಿಣ ಕನ್ನಡ ಜಿಲ್ಲಾ ಗಜೆಟಿಯರ್ ಹೇಳುತ್ತದೆ.

ಭೂತ ಮುಖಾಮುಖಿ ನ್ಯಾಯತೀರ್ಮಾನ ಮಾಡುತ್ತದಾದರೆ, ಅಮ್ಮನವರ ದೇವಸ್ಥಾನಗಳಲ್ಲಿ ಪಾತ್ರಿ ಅಥವಾ ಅರ್ಚಕ ನ್ಯಾಯತೀರ್ಮಾನ ಮಾಡುತ್ತಾನೆ. (ಇದರ ಹೆಚ್ಚಿನ ವಿವರಕ್ಕೆ, ಪ್ರೊ॥ ಎಚ್. ವಿ. ನಾಗೇಶ್ ಅವರ "ಹೊಯ್ಲು : ಗ್ರಾಮೀಣ ನ್ಯಾಯದಾನದ ಒಂದು ವಿಶಿಷ್ಟ ರೂಪ" ಲೇಖನ ಓದಿ. 'ಹರತಿಸಿರಿ' ಸ್ಮೃತಿ ಸಂಪುಟ. ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ. 1987. ಪುಟ 824–849)

'ಮಧುರಾ ವಿಜಯ'ದ ನಾಯಕ 'ಕಂಪಣ'ನೋ 'ಕೆಂಪಣ್ಣ'ನೋ? ಒಂದು ವಿವೇಚನೆ

ಎನ್. ಆರ್. ಲೀಲಾ

ಕ್ರಿ.ಶ. 1360–65ರ ಕಾಲಕ್ಕೆ ರಚಿತವಾದ ಗಂಗಾದೇವಿಯ 'ಮಧುರಾ ವಿಜಯಂ' ಅಥವಾ 'ವೀರಕಂಪರಾಯಚರಿತಮ್' ಎಂಬ ಸಂಸ್ಕೃತ ಐತಿಹಾಸಿಕ ಮಹತ್ವವುಳ್ಳ ಕಾವ್ಯದ ನಾಯಕ 'ಕಂಪಣ' ವಿಜಯನಗರ ಸಾಮ್ರಾಜ್ಯಶಿಲ್ಪಿ ಬುಕ್ಕರಾಯನ ಮಗ. ಇವನು ಹುಟ್ಟಿದಾಗ, ಅವನು ಮುಂದೆ ಶತ್ರುಗಳನ್ನು ನಡುಗಿಸುವಂಥಾ ರಣವೀರನಾಗುವುದನ್ನು ಮನಗಂಡನೋ ಎಂಬಂತೆ ತಂದೆ ಅವನಿಗೆ 'ಕಂಪನ' ಎಂದು ಹೆಸರಿಟ್ಟನೆಂದು ಗಂಗಾದೇವಿ ಬರೆಯುತ್ತಾಳೆ.

ಅಕಂಪಯಿಷ್ಯತ್ಯಯ ಮೇಕವೀರಃ
ಸಂಗ್ರಾಮರಂಗೇ ಸಕಲಾನರಾತೀನ್
ಇತ್ಯೇವ ನಿಶ್ಚಿತ್ಯ ಸದೀರ್ಘದರ್ಶೀ
ನಾಮ್ನಾಸುತಂ ಕಂಪನ ಇತ್ಯಕಾರ್ಷೀತ್ ।। 3.34

ವಾಣಿಜ್ಯ, ಸಂಸ್ಕೃತಿಗಳ ತವರೂರಾಗಿದ್ದ ಪಾಂಡ್ಯ ರಾಜಧಾನಿ ಮಧುರೆಯಲ್ಲಿ ನೆಲೆಯೂರಿ ಅಲ್ಲಿ ಹೇಳಲಸದಳವಾದ ದುಷ್ಕೃತ್ಯಗಳಿಂದ ಜನರನ್ನು ಹಿಂಸಿಸುತ್ತಿದ್ದ ಕ್ರೂರ ಮುಸಲ್ಮಾನರ[1] ಆಳ್ವಿಕೆಯನ್ನು ಕೊನೆಗಾಣಿಸಿದ ಕಂಪರಾಯನ ಕೊಡುಗೆ ಕೇವಲ ವಿಜಯನಗರ ಸಾಮ್ರಾಜ್ಯ ದೃಷ್ಟಿಯಿಂದಷ್ಟೇ ಅಲ್ಲ, ಆ ಭಾಗದ ದ್ರಾವಿಡರ ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಬಹು ಮಹತ್ತರವಾದುದು. ಗಂಗಾದೇವಿಯ ಈ ವರ್ಣನೆಯಲ್ಲಿ ಕಿಂಚಿತ್ತು ಅತಿಶಯವಿಲ್ಲವೆಂಬುದು ತಜ್ಞರ ಅಭಿಪ್ರಾಯ.[2]

ವಿಜಯನಗರ ಸಾಮ್ರಾಜ್ಯವನ್ನಾಳಿದ ಮೊದಲನೆಯ ವಂಶವಾದ ಸಂಗಮ ವಂಶದ ಮೂವರು 'ಕಂಪಣ್ಣ'ರ ಬಗ್ಗೆ ಬರೆಯುತ್ತಾ ಡಾ. ವಸುಂಧರಾ ಫಿಲಿಯೋಜ[3] ಅವರು 'ಕಂಪಣ' ಹೆಸರಿನ ಬಗ್ಗೆ ಹೀಗೆ ಹೇಳುತ್ತಾರೆ. ಇದು 'ಕಂಪಣ' ಅಲ್ಲ ಇದರ ಮೂಲ ಕನ್ನಡ ರೂಪ 'ಕೆಂಪಣ್ಣ' ಎಂದು. ಕನ್ನಡದ 'ಕೆಂಪಣ್ಣ'ದ ವಿಕೃತ ರೂಪವೇ 'ಕಂಪಣ' ಎಂದಾಗಿದೆ. ಇನ್ನು ಗಂಗಾದೇವಿಯಂತೂ ಸಂಸ್ಕೃತಕ್ಕೆ ಒಗ್ಗುವಂತೆ 'ಕಂಪನ' ಎಂದು ಮಾರ್ಪಡಿಸಿದ್ದಾಳೆ. ಆಕೆ 'ಕಂಪನ' ಶಬ್ದಕ್ಕೆ ಕೊಡುವ ವ್ಯುತ್ಪತ್ತಿ ಸುಂದರವಾಗಿಯೇನೋ ಇದೆ. ಆದರೆ ಅದು ಕೇವಲ ಕವಯಿತ್ರಿಯ

ಕಲ್ಪನೆಯೇ ಹೊರತು ವಾಸ್ತವಿಕವಾಗಲಾರದು ಎನ್ನುತ್ತಾರೆ. ಅಲ್ಲದೆ 'ಕೆಂಪಣ್ಣ' ಎಂಬುದೇ ಸರಿಯಾದದ್ದೆಂದು ಹೇಳಲು ಪುಷ್ಟಿಯೊದಗುವಂತೆ 'ಕಂಪಣ'ನ ಬೆಂಗಳೂರಿನಲ್ಲಿ ದೊರೆತಿರುವ ಶಾಸನ[4]ವೊಂದನ್ನು ಉಲ್ಲೇಖಿಸುತ್ತಾರೆ.

ಡಾ. ವಸುಂಧರಾ ಅವರ ಈ ಅಭಿಪ್ರಾಯ ಎಷ್ಟರಮಟ್ಟಿಗೆ ಸಾಧುವಾದದ್ದು; 'ಕೆಂಪಣ್ಣ' ಮಾತ್ರ ಕನ್ನಡ ಶಬ್ದವೇ ? 'ಕಂಪಣ' ಅಲ್ಲವೆ ? ಎಂಬುದನ್ನು ವಿವೇಚಿಸುವುದೇ ಈ ಲೇಖನದ ಉದ್ದೇಶ.

ಮೊದಲಿಗೆ 'ಕಂಪಣ' ಶಬ್ದದೊಡನೆ ಶ್ರುತಿಸಾಮ್ಯ ಹೊಂದಿರುವ ಹಲವಾರು ಪ್ರಸಿದ್ಧ ಹೆಸರುಗಳನ್ನು ಗಮನಿಸೋಣ. ವಿಜಯನಗರ ಕಾಲದವರೇ ಆದ ಋಗ್ ಭಾಷ್ಯಕಾರರಾದ ಸಾಯಣಾಚಾರ್ಯರು ಗೌರವ ಸೂಚಕ 'ಆಚಾರ್ಯ'ದಿಂದ ಬೇರ್ಪಡಿಸಿದರೆ ಉಳಿಯುವುದು 'ಸಾಯಣ' ಮಾತ್ರ. ಇವರ ಮೂರು ಮಕ್ಕಳ ಹೆಸರು ಕ್ರಮವಾಗಿ ಕಂಪಣ, ಮಾಯಣ ಮತ್ತು ಸಿಂಗಣ. ಸಂಗಮ ಸೋದರರಲ್ಲಿ ಒಬ್ಬನಾದ 'ಕಂಪಣ (1ನೇ ಕಂಪಣ)ನ ಮಂತ್ರಿಯಾಗಿದ್ದ ಸಾಯಣರು, ಅವನನ್ನು ಬಹುವಾಗಿ ಗೌರವಿಸುತ್ತಿದ್ದರು. ತಮ್ಮ ಮಗನಿಗೆ ತನ್ನ ಪೋಷಕನ ಹೆಸರನ್ನೇ ಇಟ್ಟಿರುವುದರಿಂದ ಅದು ವ್ಯಕ್ತವಾಗುತ್ತದೆಂದು ಡಾ. ಕೆ. ಕೃಷ್ಣಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ.[5] ಅಂದರೆ ಸಂಗಮ ಸೋದರನ ಹೆಸರು 'ಕಂಪಣ', 'ಕೆಂಪಣ್ಣ' ಅಲ್ಲ ಎಂದಾಗುತ್ತದೆ. ಎರಡನೇ ಮಗ ಮಾಯಣ ಎಂಬುದು ತಾತನ ಹೆಸರನ್ನು ಮೊಮ್ಮಗನಿಗಿಡುವ ಪದ್ಧತಿಯಿಂದ ಬಂದದ್ದು. ಸಾಯಣರ ತಂದೆ 'ಮಾಯಣ'ರು ಎಂಬುದು ತಿಳಿದ ವಿಷಯವೇ (ತಾಯಿ ಶ್ರೀಮತಿ)

ಇನ್ನು ತೆಲುಗು ಸಾಹಿತ್ಯದಲ್ಲಿನ ಕೆಲವು ಪ್ರಸಿದ್ಧ ಹೆಸರುಗಳಾದ ತಿಕ್ಕನ, ಪೆದ್ದನ, ವೇಮನ, ಪೋತನ, ಗಾಜನ, ಎರ್ರನ, ಗೌರನ ಎಂಬವುಗಳನ್ನು ಗಮನಿಸಬಹುದು. ಈ ಹೆಸರುಗಳಲ್ಲಿ ಕಡೆಯ 'ಣ'ಕಾರ 'ನ' ಕಾರವಾಗಿರುವುದೂ ಗಮನಾರ್ಹ. ಕನ್ನಡ ಶಾಸನಗಳಲ್ಲೂ 'ನ'ಕಾರಾಂತವಾದ ಇಂತಹ ಅನೇಕ ಹೆಸರುಗಳನ್ನು ಕಾಣಬಹುದಾಗಿದೆ. ಉದಾ :–ನಾಗನ[6] ಚೆಂಗನ[7] ಇತ್ಯಾದಿ. ದಕ್ಷಿಣ ಭಾರತದ ಕನ್ನಡ ಮತ್ತು ತೆಲುಗು ಪ್ರದೇಶಗಳಲ್ಲೆಲ್ಲಾ ಇಂತಹ ಹೆಸರುಗಳು ಬಹು ಪ್ರಚಾರದಲ್ಲಿದ್ದುವು. ಅಷ್ಟೇ ಅಲ್ಲ, ಪ್ರಾಚೀನ ಕನ್ನಡಿಗರಿಗೆ ತುಂಬ ಪ್ರಿಯವಾದ ಹೆಸರುಗಳಲ್ಲಿ ಈ 'ಣ' ಕಾರಾಂತವಾದವುಗಳೆಂದು ಶಾಸನಗಳ ಅವಲೋಕನದಿಂದ ದೃಢಪಡಿಸಬಹುದು. ನಾರಣ[9], ನಾರಣದೇವ[9], ಬಸವಣ[10] ಸಂಕಣ[11] ಮೋಹಣ ಪಂಡಿತ[12] ರೇಚಣ ಭಟ್ಟ[13] ಇತ್ಯಾದಿ. ವಿಜಯನಗರದರಸುಗಳಾದ ಕೃಷ್ಣದೇವರಾಯ, ಅಚ್ಯುತದೇವರಾಯ ಇವರುಗಳ ಶಾಸನಗಳನ್ನು ರೂವಾರಿಗಳಾಗಿ ಒಂದೇ ಮನೆತನಕ್ಕೆ ಸೇರಿದ ವೀರಣಾಚಾರ್ಯ, ಮಲ್ಲಣಾಚಾರ್ಯ, ಅಪ್ಪಣಾಚಾರ್ಯ[14] ಮುಂತಾದವರು ಪ್ರಸಿದ್ಧರಿದ್ದಾರೆ. ಇನ್ನು ಗದುಗಿನ ಭಾರತದ ಕರ್ತೃ ನಾರಣಪ್ಪನ

ಹೆಸರನ್ನು ಕೇಳದವರೇ ಇಲ್ಲ. ಇನ್ನು ಜಕಣ, ಡಕಣ, ಜೊಪ್ಪಣ, ದೇವಣ ಇವುಗಳನ್ನು ಗಮನಿಸಬಹುದು. ಈ ಹೆಸರುಗಳು ಎಷ್ಟು ಜನಪ್ರಿಯವಾಗಿತ್ತೆಂದರೆ ಬ್ರಾಹ್ಮಣರಾದಿಯಾಗಿ ಎಲ್ಲ ವರ್ಣ, ವೃತ್ತಿಗಳವರೂ ಇದನ್ನು ಬಳಸುತ್ತಿದ್ದ ಭಟ್ಟ, ದೇವ, ಪಂಡಿತ, ಅಪ್ಪ, ಆರ್ಯ, ಆಚಾರ್ಯ, ಇತ್ಯಾದಿ ಉಪಾಧಿಗಳೊಡನೆ ಇವು ಸಕಲಜನಮಾನ್ಯವಾಗಿದ್ದವು. 'ಣ' ಕಾರಾಂತಗಳೊಡನೆ 'ಮ' ಕಾರಾಂತವಾದ ಹೆಸರುಗಳೂ ಕೇಳಿಬರುತ್ತವೆ. ಯಾಚಮ[15] ಮಾದಿಮ, ಸಂಗಮ ಮುಂತಾದವು. ಆದರೆ ಮೊದಲೆರಡಕ್ಕೆ ಹೋಲಿಸಿದರೆ ಈ ಹೆಸರುಗಳ ಪ್ರಾಬಲ್ಯ ಕಮ್ಮಿಯೆಂದೇ ಹೇಳಬಹುದು.

ಮೇಲೆ ಹೇಳಿದ ಕೆಲವು ಹೆಸರುಗಳ ಮೂಲವನ್ನು ಗುರುತಿಸಬಹುದಾಗಿದೆ. ಉದಾ :–

ನಾರಾಯಣ ... ನಾರಣ
ಮಲ್ಲಿನಾಥ ... ಮಲ್ಲಣ
ಸೋಮನಾಥ ... ಸೋಮನ
ನಾಗನಾಥ ... ನಾಗನ
ಗೋಪಾಲ ... ಗೋಪಣ ಇತ್ಯಾದಿ

ಮಾಯಣ ಎಂಬುದು 'ಮಾಧವ'ದ ಕನ್ನಡ ರೂಪವೆಂದು ಡಾ|| ಕೆ. ಕೃಷ್ಣಮೂರ್ತಿಯವರು ಬರೆದಿದ್ದಾರೆ.[16] ಇದರಿಂದ ತಿಳಿಯುವುದೇನೆಂದರೆ, ಮಾಯಣ, ನಾರಣ, ದೇವಣ, ಇತ್ಯಾದಿಗಳು ಕನ್ನಡದ ಸಹಜ ರೂಪಗಳೆಂದು. ರೇಚಣ, ಮೂಕಣ, ಬಸವಣ ಇತ್ಯಾದಿಗಳಿಗಂತೂ ಯಾವುದು ಮೂಲವೆಂದು ತಿಳಿಯುವುದು ಕಷ್ಟ. ಈ ವ್ಯಕ್ತಿವಾಚಕ ಶಬ್ದಗಳೊಡನೆ ಅಚ್ಚಕನ್ನಡದ ದಿಕ್ಸೂಚಕ ಪದಗಳನ್ನೂ ಹೋಲಿಸಿ ನೋಡಬಹುದು. ಪಡುವಣ, ಮೂಡಣ, ತೆಂಕಣ, ಬಡಗಣ ಇತ್ಯಾದಿ. ಇವುಗಳಿಗಿರುವ ಸಮಾನ ಶ್ರುತಿ ಆಶ್ಚರ್ಯಗೊಳಿಸುವಂತಿದೆ. 'ಣ' ಕಾರಾಂತವಾದ 'ಕಂಪಣ' ಇತ್ಯಾದಿಗಳು ಅಚ್ಚಕನ್ನಡ ಪದಗಳೆಂಬುದಕ್ಕೆ ಬೇರೆ ಪ್ರಮಾಣವೇ ಬೇಕಿಲ್ಲವೇನೋ ಎಂಬಷ್ಟು ಸ್ಫುಟವಾಗಿದೆ. ಸಾಮಾನ್ಯವಾಗಿ ಮೂರಕ್ಷರವಿರುವ ನಾಮವಾಚಕಗಳಲ್ಲಿ ಮತ್ತೊಂದು ವೈಶಿಷ್ಟ್ಯ ತಾನೇ ತಾನಾಗಿ ಒಡೆದು ಕಾಣುತ್ತದೆ. ಕೆಲವದರಲ್ಲಿ ಮೂರೂ ಅಕ್ಷರಗಳೂ ಅಸಂಯುಕ್ತವಾಗಿ ಮೃದುವಾದ ಜಾರಿಕೆಯ ಉಚ್ಚಾರದಿಂದ ಕೂಡಿದೆ, ಉದಾ :– ನಾರಣ, ನಾಯಣ, ಮಾಯಣ, ರೇಚಣ, ವೀರಣ, ಬಾವಣ, ಮೂಕಣ ಮುಂತಾದುವು. ಮತ್ತೆ ಕೆಲವದರಲ್ಲಿ ಒತ್ತು ಬಿದ್ದಿರುವುದು ಎರಡನೆಯಕ್ಷರದ ಮೇಲೆಯೇ ಎಂಬುದನ್ನು ಗಮನಿಸಬಹುದು. ಉದಾ :–ಕಪ್ಪಣ[17] ಹಬ್ಬಣ,[18] ಮಲ್ಲಣ, ಅಪ್ಪಣ, ಆರ್ಯಣ,[19] ಬೊಪ್ಪಣ,[20] ಮುದ್ದಣ[21] ಇತ್ಯಾದಿ. ಅಂದಮಾತ್ರಕ್ಕೆ ಕಡೆಯ 'ಣ'ಕಾರ ಯಾವಾಗಲೂ ಒತ್ತಕ್ಷರವಾಗಿಲ್ಲವೆಂದಲ್ಲ. 14ನೇ

ಶತಮಾನದಿಂದ ಈಚೆಗಿನ ಶಾಸನಗಳಲ್ಲಿ ಕಡೆಯಕ್ಷರದ ಒತ್ತು ಎದ್ದುಕಾಣುತ್ತದೆ. ಉದಾ ;- ಮುದ್ದಣ್ಣ,[22] ಬುಕ್ಕಣ, ಸೋವಣ. ಕಂಪಣ[23]. ವಿಜಯನಗರ ಕಾಲೀನ ಶಾಸನಗಳಲ್ಲಿ ಕಡೆಯಕ್ಷರದ ಒತ್ತು ಅನೇಕ ಬಾರಿ ಬಳಕೆಯಾಗಿದೆ. ಆದರೆ ಡಾ॥ ವಸುಂಧರಾ ಅವರು ಎತ್ತಿ ತೋರಿಸಿರುವ ಬೆಂಗಳೂರಿನ ಒಂದು ಶಾಸನ ಬಿಟ್ಟರೆ ಎಲ್ಲೂ 'ಕೆಂಪಣ್ಣ' ಎಂದು ಪ್ರಯುಕ್ತವಾಗಿಲ್ಲ, ಕಂಪಣ[24] ಅಥವಾ ಕಂಪಣ ಎಂದೇ ಕಂಡುಬರುತ್ತದೆ. ಈ ಬೆಂಗಳೂರು ಶಾಸನದ 'ಕಂಪಣ' ಮೂಲ 'ಕಂಪಣ'ನ ಅಥವಾ 'ಕಂಪನ'ನ ವಿಕೃತಿಯೆಂದು ಸ್ಪಷ್ಟಪಡಿಸಲೂ ಶಾಸನಾಧಾರಗಳಿವೆ. ಏಕೆಂದರೆ 'ಕಂಪಣ' ಎಂಬುದನ್ನು ಹ್ರಸ್ವಗೊಳಿಸಿ 'ಕಂಪ' 'ಕಂಪರಾಯ'ಎಂದೂ ಬಳಸಲಾಗಿದೆ. ಬದಲಾಗಿ 'ಕೆಂಪ' ಎಂದಾಗಲೀ, 'ಕೆಂಪರಾಯ' ಎಂದಾಗಲೀ ಅಲ್ಲ.

ಮೇಲ್ಕಾಣಿಸಿದ ವಿವರಗಳಿಂದ ಹೊರಡುವ ಖಂಡಿತಾರ್ಥವೆಂದರೆ ಇಷ್ಟು.

1) ಜಾರಿಕೆಯ ಮೃದು ಉಚ್ಚಾರವಿರುವ ಕಂಪಣ, ಸಾಯಣ, ಮಾಯಣ, ಜೀವಣ ಇತ್ಯಾದಿ ನಾಮವಾಚಕಗಳು ಕನ್ನಡದ ಜಾಡಿಗೆ ಹೊಂದುವ ಸಹಜರೂಪಗಳು.

2) ಇವು ಕೆಲವು ಬಾರಿ ಸಂಸ್ಕೃತದ ಹೆಸರುಗಳ ವಿಕೃತಿಗಳಾಗಿರಬಹುದು, ಆಗಿಲ್ಲದೆಯೂ ಇರಬಹುದು.

3) ಮೂರಕ್ಷರವುಳ್ಳ ಈ ನಾಮಪದಗಳು 2ನೇ ಅಥವಾ ಮೂರನೇ ಅಕ್ಷರಗಳ ಮೇಲೆ ಆಗಾಗ ಒತ್ತು ಬಿದ್ದಿರುವುದೂ ಉಂಟು. ಉದಾ :- ಕಂಪಣ - ಕಂಪಣ್ಣ, ಗೋಮಟ–ಗೊಂಮಟ ಇತ್ಯಾದಿ.

4) ಕಂಪಣ ಎಂಬುದು ಕೆಂಪಣ್ಣ ಎಂಬುದರ ವಿಕೃತ ಎಂದು ವಾದ ಮಾಡಿದಲ್ಲಿ ಆಗುವ ಆಭಾಸ ವಿಪರೀತ. ಅದೆಂದರೆ 'ಸಾಯಣ'–'ಸೈಯ್ಯಣ್ಣ'ದಿಂದ 'ಸಿಂಗಣ' - ಸೆಂಗಣ್ಣ, ದಿಂದ ಎಂಬೆಲ್ಲಾ ಅಸಂಬದ್ಧಗಳನ್ನು ಒಪ್ಪಬೇಕಾಗುತ್ತದೆ.

5) ಈ ನಾಮ ಪದಗಳು ಕೆಲವು ಬಾರಿ 'ನ' ಕಾರಾಂತವಾಗಿಯೂ, ಅನೇಕ ಬಾರಿ 'ಣ' ಕಾರಾಂತವಾಗಿಯೂ ಉಚ್ಚರಿತವಾಗುತ್ತಿತ್ತು. ಉದಾ :- ನಾಗನ - ನಾಗಣ, ಕಂಪನ - ಕಂಪಣ.

6) ಹೀಗೆ ಶಾಸನಾಧಾರಿತ ವಿಮರ್ಶೆಯ ಬೆಳಕಿನಲ್ಲಿ ನೋಡಿದಾಗ, ಗಂಗಾದೇವಿ 'ಕಂಪನ' ಎಂದಿರುವುದು ಕನ್ನಡವನ್ನು ಸಂಸ್ಕೃತೀಕರಿಸಿ ಅಲ್ಲ. ಬದಲಾಗಿ ಇರುವ ಕನ್ನಡ ಪದವನ್ನೇ ಅರ್ಥಪೂರ್ಣವಾಗಿ, ಸಂದರ್ಭ ಸೊಗಸುವಂತೆ ಬಳಸಿದ್ದಾಳೆ. ಇದಕ್ಕೆ ಸಮರ್ಥನೆಯಾಗಿ ಕ್ರಿ.ಶ.1356ರ

ಎರಡನೇ ಸಂಗಮನ ಕಾಲದ (ಮೊದಲನೇ ಕಂಪಣನ ಮಗ) ಚಿತ್ರಗುಂಟ ಶಾಸನ[26].

ಕೆಳಕಂಡ ಪದ್ಯವನ್ನು ಉದಾಹರಿಸಬಹುದಾಗಿದೆ.

ತಸ್ಯಾನುಜಶ್ಚಿರಮಶಾದ್ಧಾ ತ್ರೀಂ ಕಂಪಭೂಪತಿಃ ।
ಯಾಥಾರ್ಥ್ಯಮಭಜನ್ನಾಮ ಯಸ್ಯ ಕಂಪಯಿತುರ್ದ್ವಿಷಾಮ್ ।।

'ಶತ್ರುಗಳನ್ನು ನಡುಗಿಸುತ್ತಿದ್ದ 'ಕಂಪ' ರಾಜನ ಹೆಸರು ಯಥಾರ್ಥವಾಯಿತು.

ಈ ಶಾಸನ ಗಂಗಾದೇವಿಗಿಂತ 5-6 ವರ್ಷಕಾಲ ಹಿಂದಿನವು. ಆದ್ದರಿಂದ ಗಂಗಾದೇವಿ 'ಕಂಪನ' ಪದಕ್ಕೆ ಕೊಟ್ಟಿರುವ ವ್ಯುತ್ಪತ್ತಿ ಸಕಪೋಲ ಕಲ್ಪಿತವಲ್ಲ.

ಕರ್ನಾಟಕದ ಹಲವು ಭೌಗೋಲಿಕ ಭಾಗಗಳಲ್ಲಿ ಬಾಸೂರ 'ಕಂಪಣ' ಗುತ್ತೊಳಲ 'ಕಂಪಣ'[27] ಮುಂತಾದುವಿದ್ದವು. ಈ ಎಲ್ಲ ಆಧಾರಗಳಿಂದ 'ಕಂಪನ' ಮತ್ತು 'ಕಂಪಣ'ಎರಡೂ ಕನ್ನಡ ಪದಗಳೇ ಎಂಬುದು ನಿರ್ವಿವಾದವಾಯಿತು.

ಟಿಪ್ಪಣಿಗಳು

1 ಕಂಪಣನ ದಾಳಿಗೆ ಸಿಕ್ಕಿ ಸೋತ 'ಖುರ್‌ಬತ್ ಹಸನ್ ಗಂಗು'
2 ನೋಡಿ: ಟಿ. ಎ. ಗೋಪಿನಾಥರಾವ್ 'ಮಧುರಾ ವಿಜಯಂ' ಪ್ರಸ್ತಾವನೆ.
3 Three 'Kampannas' ; Nilakantha Sastry Felicitation ; Vol: P–59
4 ಎ.ಓ. ಕ. ಸಂ. 9 ಬೆಂ. 67 ಪು.–17
5 ಸುಭಾಷಿತ ಸುಧಾನಿಧಿ, ಪ್ರಸ್ತಾವನೆ, ಪು. 8
6 ಸಾ. ಇಂ. ಇ. ಸಂ. 11, Pt.i. ಪು. 42
7 ಎಪಿ. ಕ. ಸಂ. 4, ಕೊಗಾ. 63 ಪು. 441
8 ನೋಡಿ : ಕನ್ನಡ ಸಾಹಿತ್ಯ ಚರಿತ್ರೆ, ಪು. 219
9 ಅದೇ, ಪು. 242
10 ಅದೇ, ಪು. 226
11 ಅದೇ, ಪು. 248
12 ಅದೇ, ಪು. 253
13 ಅದೇ, ಪು. 256
14 ನೋಡಿ : ಶಾಸನ ವ್ಯಾಸಂಗ ಪು. 44-45
15 ವಿಜಯನಗರದರಸು ವೆಂಕಟಪತಿರಾಯನ ಮಂತ್ರಿ
16 ಸುಭಾಷಿತ ಸುಧಾನಿಧಿ, ಪ್ರಸ್ತಾವನೆ, ಪು. 9
17 ಕನ್ನಡ ಸಾಹಿತ್ಯ ಚರಿತ್ರೆ, ಪು. 219
18 ಅದೇ, ಪು. 262

19 ಶಾಸನ ವ್ಯಾಸಂಗ, ಪು. 49

20 ಗೊಮ್ಮಟಸ್ತುತಿಯ ಕರ್ತೃ

21 ರಾಮಾಶ್ವಮೇಧದ ಕರ್ತೃ. ಇಲ್ಲಿ ವ್ಯಕ್ತಿ ಈಚಿನವನಾದರೂ ಹೆಸರು ಪ್ರಾಚೀನವಾದದ್ದು.

22 ಎಪಿ.ಕ. ಸಂ. 3. ನಂ. ಗೂ. 152

23 ಎಪಿ.ಕ. ಸಂ. 6. ಶೃಂ. 1

24 ಎಪಿ.ಕ. ಸಂ. 3. ಗುಂಪೇ. 132. ಪು. 95 ಮತ್ತು ಸಂ. 4 ಕೊ. ಗಾ. 62. ಪು. 440

25 ಪೂರ್ವೋಕ್ತ ಶಾಸನಗಳು

26 ಎಪಿ. ಇಂ. 3. ಪು. 32

27 ಶಾಸನ ಸಂಗ್ರಹ. ಪು. 28

ಆಧಾರ ಗ್ರಂಥಗಳು

1 ಅಣ್ಣಿಗೇರಿ ಎಂ. ಎಂ.
ಶೇಷಶಾಸ್ತ್ರಿ ಆರ್. } ಸಂ : ಶಾಸನ ಸಂಗ್ರಹ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

2 ಎಪಿ. ಇಂಡಿ. ಸಂ. 3

3 ಎಪಿ. ಕರ್ನಾ, ಸಂ.ಗಳು 3, 4, 8, 9, 10.

4 ಕಲಬುರ್ಗಿ, ಎಂ. ಎಂ. ಶಾಸನ — ವ್ಯಾಸಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1974

5 ಗಂಗಾದೇವಿ
"ಮಧುರಾವಿಜಯಮ್ ಅಥವಾ ಕಂಪರಾಯ ಚರಿತಮ್" ತ್ರಿವೇಂಡ್ರಮ್, 1916

6 ಸಾಯಣಾಚಾರ್ಯ, ಸುಭಾಷಿತ ಸುಧಾನಿಧಿ.
ಸಂ. ಡಾ॥ ಕೆ. ಕೃಷ್ಣಮೂರ್ತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968

7 ಸಾ. ಇಂ. ಇನ್ಸ್, ಸಂ : 11

8 ಲೇಖನ : ಡಾ॥ ವಸುಂಧರಾ ಫಿಲಿಯೋಜಾ
'The three Kampannas'
ನೀಲಕಂಠಶಾಸ್ತ್ರಿ ಅಭಿನಂದನ ಗ್ರಂಥ, ಮದರಾಸು, 1973

9 ಕನ್ನಡ ಸಾಹಿತ್ಯ ಚರಿತ್ರೆ
ಡಾ॥ ಹಾ. ಮಾ. ನಾಯಕ
ಡಾ॥ ಟಿ. ವಿ. ವೆಂಕಟಚಲಶಾಸ್ತ್ರಿ } ಸಂ.
ಮೈಸೂರು, 1976

ಘಾರಿಕತೆ-ಸೋಡಚೀಟಿ

ಪ್ರಭು ಖಾನಾಪೂರೆ

ಮದುವೆ ಮಾನವನ ಬದುಕಿನ ಒಂದು ಮಹತ್ವದ ಘಟ್ಟ. ವಿವಿಧ ನಾಗರಿಕತೆಗೆ ಸೇರಿದ ವ್ಯಕ್ತಿಗಳು ಒಂದಿಲ್ಲೊಂದು ರೀತಿಯಲ್ಲಿ ಮದುವೆಯ ವ್ಯವಸ್ಥೆಯನ್ನು ಒಪ್ಪಿಕೊಂಡು, ಅದನ್ನು ಆಚರಿಸುತ್ತ ಬಂದಿದ್ದಾರೆ. "ಮದುವೆಯ ವ್ಯವಸ್ಥೆಯಾಗಲಿ, ಅದರ ಕಲ್ಪನೆಯಾಗಲಿ ಇರದ ಜನ ಸಮುದಾಯವೇ ಜಗತ್ತಿನಲ್ಲಿ ಇಲ್ಲ. ಇದು ಮಾನವನಲ್ಲಿ ಅಷ್ಟೇ ಅಲ್ಲ, ಕೆಲವು ವಾನರ ವರ್ಗಗಳಲ್ಲಿ, ಪ್ರಾಣಿ, ಪಕ್ಷಿಗಳಲ್ಲಿಯೂ ಮದುವೆಯಂಥ ಒಂದು ವ್ಯವಸ್ಥೆಯನ್ನು ಗುರುತಿಸಲು ಸಾಧ್ಯವಿದೆ"[1]

ಸಾಮಾಜಿಕ ಜೀವನದಲ್ಲಿ ಮದುವೆಗೊಂದು ಪ್ರತ್ಯೇಕ ಸ್ಥಾನವಿದೆ. ಇದು ಒಂದು ಅಪೂರ್ವವಾದ, ಬಿಡಿಸಲಾರದ ಮತ್ತು ಪವಿತ್ರವಾದ ಸಂಬಂಧವೆಂದು ಜಗತ್ತಿನ ಬಹುತೇಕ ಸಮಾಜಗಳು ತಿಳಿದುಕೊಂಡಿವೆ. ಒಮ್ಮೆ ಏರ್ಪಟ್ಟ ಈ ಸಂಬಂಧದಿಂದ ಹೊರಬೀಳುವುದು ಜೀವನದಲ್ಲಿ ಸಾಧ್ಯವಿಲ್ಲವೆಂದು ಭಾವಿಸಿಕೊಂಡಿವೆ. ಗಂಡ-ಹೆಂಡತಿಯಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯ, ಬಂದರೂ ಮದುವೆಯ ಸಂಬಂಧ ಮುರಿದು ಹಾಕುವಂತಿಲ್ಲ. "ಹಿಂದು ಸಮಾಜದ ಕೆಲವೊಂದು ಪಂಗಡಗಳಲ್ಲಿ ವಿವಾಹ ವಿಚ್ಛೇದನ ಪದ್ಧತಿ ಇದೆಯಾದರೂ ಶಾಸ್ತ್ರೀಯವಾಗಿ ವಿವಾಹ ವಿಚ್ಛೇದನ ನಿಷಿದ್ಧವಾಗಿದೆ"[2] ಏಕೆಂದರೆ ವಿವಾಹ ವಿಚ್ಛೇದನ ಅತ್ಯಂತ ಪಾಪದ ಕೆಲಸವೆಂಬ ಭಾವನೆ ಹಿಂದೂಗಳಲ್ಲಿದೆ. "ಆಯಾ ಮತಗಳಲ್ಲಿ ಸಾಂಪ್ರದಾಯಿಕವಾಗಿ ಬಂದಿದ್ದರೆ, ಹಿಂದೂಗಳಲ್ಲಿ ವಿಚ್ಛೇದನಕ್ಕೆ ಅವಕಾಶವಿರಲಿಲ್ಲ. ಸಂಪ್ರದಾಯವಿದ್ದರೂ ಪತ್ನಿಯು ಪತಿಯನ್ನು ತ್ಯಜಿಸಿ ಅವನ ಅನುಮತಿಯಿಲ್ಲದೆ ಮತ್ತೊಬ್ಬ ಪುರುಷನನ್ನು ವಿವಾಹವಾಗುವಂತಿಲ್ಲ. ಆದರೆ 1866 ರಲ್ಲಿ ಬ್ರಿಟಿಷ ಸರಕಾರವು ಸ್ಥಳೀಯ ಮತಾಂತರ ವಿವಾಹ ವಿಚ್ಛೇದನ ಶಾಸನವೊಂದನ್ನು (Native Converts marriage Dissolution act 1866) ರೂಪಿಸಿ ಹಿಂದುಗಳಲ್ಲಿ ಪತಿ ಅಥವಾ ಪತ್ನಿ ಕ್ರೈಸ್ತಮತಕ್ಕೆ ಮತಾಂತರ ಹೊಂದಿದರೆ ಅವರ ದಾಂಪತ್ಯ ವಿಚ್ಛೇದನಕ್ಕೆ ಅವಕಾಶ

---

1. ವಿವಾಹ ಕುಟುಂಬಕ್ಕೆ ಹೆಬ್ಬಾಗಿಲು, ಪ್ರೊ : ಎಸ್. ಕೆ. ರಾಮಚಂದ್ರರಾವ್, ಸುಧಾ ಯುಗಾದಿ ಸಂಚಿಕೆ 1982, ಪುಟ. 5.
2. ಭಾರತೀಯ ಸಾಮಾಜಿಕ ಸಂಸ್ಥೆ, ಪ್ರೊ : ಎಂ. ನಂಜಮ್ಮಣ್ಣ, ಪು. 196.

ಕೊಟ್ಟಿತು”[3]. ಮುಂದೆ 1920ರಲ್ಲಿ ವಿವಾಹ ವಿಚ್ಛೇದನದ ಕಾಯ್ದೆಯನ್ನು ಮೊಟ್ಟ ಮೊದಲಿಗೆ ಜಾರಿಗೆ ತಂದ ಯಶಸ್ಸು ಕೊಲ್ಹಾಪುರಕ್ಕೆ ಸೇರುತ್ತದೆ”[4]. ನಂತರ ಅಲ್ಪಸ್ವಲ್ಪ ಬದಲಾವಣೆಗಳ ಜೊತೆಗೆ 1942ರಲ್ಲಿ ಬರೋಡ ಸಂಸ್ಥಾನದಲ್ಲಿ, 1947ರಲ್ಲಿ ಮುಂಬಯಿ ಸರಕಾರದಲ್ಲಿ ಮತ್ತು 1949ರಲ್ಲಿ ಮದ್ರಾಸಿನಲ್ಲಿ, (Madras Hindu Bigamy Prevention Divorce a ct), 1952ರಲ್ಲಿ ಸೌರಾಷ್ಟ್ರದಲ್ಲಿ (Sowrastra Hindu Divorce act), ಹಿಂದೂ ವಿವಾಹ ವಿಚ್ಛೇದನ ಶಾಸನಗಳು (1955ರಲ್ಲಿ) ಜಾರಿಗೆ ಬಂದವು. ಬಹು ಪತ್ನಿತ್ವ ನಿಷೇಧ ಮತ್ತು ವಿವಾಹ ವಿಚ್ಛೇದನಕ್ಕೆ ಸೇರಿದ ಹಿಂದೂ ವಿವಾಹ ಶಾಸನ (Hindu marriage act 1955) ಜಾರಿಗೆ ಬಂದಿತು. ಇದು ಇಡೀ ದೇಶದ (ಜಮ್ಮು-ಕಾಶ್ಮೀರ ಬಿಟ್ಟು) ಹಿಂದುಗಳಿಗೆ ಅನ್ವಯಿಸುತ್ತದೆ. ಈ ಶಾಸನ ಜಾರಿಗೆ ಬಂದ ಬಳಿಕ ಮುಂಬಯಿ, ಮದ್ರಾಸು, ಸೌರಾಷ್ಟ್ರಗಳ ಶಾಸನಗಳು ರದ್ದಾಗಿ ಅವುಗಳ ಸ್ಥಾನದಲ್ಲಿ ದೇಶಕ್ಕೆಲ್ಲ ಅನ್ವಯಿಸುವ ಒಂದೇ ಶಾಸನ ಜಾರಿಗೊಂಡಿದೆ”[5].

ಹೀಗೆ ವಿವಾಹ ವಿಚ್ಛೇದನವನ್ನು ಸರಕಾರವು ಕಾನೂನುಗಳ ಮುಖಾಂತರ ಹಂತ ಹಂತವಾಗಿ ಜಾರಿಗೆ ತರಲು ಪ್ರಯತ್ನಿಸಿತು. ಇನ್ನೊಂದೆಡೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ನಾಗರಿಕರಲ್ಲಿ ಮಾನಸಿಕ ಬದಲಾವಣೆಯಾಗಿ ವಿಚ್ಛೇದನಗಳು ಈಗ ಸಾಮಾನ್ಯವಾಗಿಬಿಟ್ಟವೆ.

“ಆದಿ ವಾಸಿಗಳಲ್ಲಿ ವಿವಾಹ ವಿಚ್ಛೇದನ ಸರ್ವೇಸಾಮಾನ್ಯವಾಗಿದೆ. ಇದು ಔಪಚಾರಿಕವಾಗಿ ನಡೆಯುತ್ತದೆ. ಸಂತಾಲರಲ್ಲಿ ಇಡೀ ಗ್ರಾಮದ ಜನರ ಸಮಕ್ಷಮದಲ್ಲಿ ಇದು ನೆರವೇರುತ್ತದೆ”[6]. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ” ಆದಿವಾಸಿ ಕೊರಗರಲ್ಲಿ ಒಮ್ಮೆ ಮದುವೆಯಾದ ನಂತರ ಹೆಂಡತಿಗೆ ಇತರ ಜಾತಿಗಳಲ್ಲಿರುವಂತೆ ಬಿಡುಗಡೆ ಪಡೆಯುವ ಹಕ್ಕಿಲ್ಲ”[7].

ಪ್ರಾಚೀನ ಕಾಲದ ವಿವಾಹ ವಿಚ್ಛೇದನ ಕುರಿತು ನಮಗೆ ಯಾವುದೇ ರೀತಿಯ ಉಲ್ಲೇಖನಗಳು ದೊರೆಯುವುದಿಲ್ಲ. ವೇದ ಸಾಹಿತ್ಯದಲ್ಲೆಲ್ಲೂ ವಿವಾಹ ವಿಚ್ಛೇದನದ ಪ್ರಸ್ತಾಪವಿಲ್ಲ. ಧರ್ಮಶಾಸ್ತ್ರಗಳು ಮದುವೆಯ ಬಂಧನದ ಶ್ರೇಷ್ಠತೆಯನ್ನು ಕುರಿತು ಸಾರಿ ಹೇಳಿವೆ ಹೊರತು ಮದುವೆಯ ಬಿಡುಗಡೆ ಕುರಿತು ಹೇಳಿಲ್ಲ. ಗೃಹ್ಯಸೂತ್ರವು “ಗೃಹಸ್ಥಾಶ್ರಮ ಅನಿವಾರ್ಯವೂ, ಪರಮ ಪವಿತ್ರವೂ ಆದುದರಿಂದ

---

3. ಹಿಂದೂ ವಿವಾಹ ಶಾಸನ ಪು. 18, ಎಚ್. ಗಂಗಾಧರನ್
4. ಭಾರತೀಯ ಸಾಮಾಜಿಕ ಸಂಸ್ಥೆಗಳು, ಎಂ. ನಂಜಮ್ಮಣ್ಣಿ, ಪು. 196.
5. ಭಾರತೀಯ ಸಾಮಾಜಿಕ ಸಂಸ್ಥೆಗಳು, ಎಂ. ನಂಜಮ್ಮಣ್ಣಿ, ಪು. 196.
6. ಭಾರತೀಯ ಸಾಮಾಜಿಕ ಸಂಸ್ಥೆಗಳು, ಎಂ. ನಂಜಮ್ಮಣ್ಣಿ ಪುಟ. 196
7. ಸುಧಾ ಯುಗಾದಿ ಸಂಚಿಕೆ — 1982. ಪುಟ 21. ಪ್ರೊ : ಎಸ್. ಜಿ. ಮೇದಾ.

ಆದರ ನಿಯಮಗಳನ್ನು ಯಾವ ಕಾರಣಕ್ಕೂ ಮೀರುವಂತಿಲ್ಲವೆಂದು ಅಭಿಪ್ರಾಯ ಪಟ್ಟಿದೆ"[8]. ಅಂದರೆ ವಿವಾಹ ವಿಚ್ಛೇದನ ಮಾಡುವಂತಿಲ್ಲವೆಂದರ್ಥ. "ವಿವಾಹ ಸಂಸ್ಕಾರದಲ್ಲಿ ಸಪ್ತಪದಾ ವಿಧಿಯಲ್ಲಿ ಮಂತ್ರವು ಗೆಳತಿಯಾಗೆಂದು ಹೇಳುವುದರಿಂದ ಆ ಬಳಿಕ ವಿಚ್ಛೇದನವಿಲ್ಲ. ವಿವಾಹ ದೃಢವಾದ ಸಂಸ್ಕಾರ, ಬ್ರಹ್ಮ ಸೃಷ್ಟಿಯ ಧರ್ಮವೆಂದೂ ಮತ್ತು ವಿವಾಹ ವಿಚ್ಛೇದನವು ಮೃಗಜೀವನವೆಂದು, ಸಜ್ಜನ ಸಮ್ಮತವಲ್ಲವೆಂದು"[9] ಮನು ಹೇಳುತ್ತಾನೆ. ಕೌಟಿಲ್ಯನು ವಿವಾಹ ವಿಚ್ಛೇದನಕ್ಕೆ ಅವಕಾಶ ಕೊಟ್ಟಿದ್ದಾನೆ. ಪರಸ್ಪರ ದ್ವೇಷಿಸುವ ಸತಿ ಪತಿಯರು ಬೇರೆ ಬೇರೆಯಾಗಿ ಬಾಳಬಹುದೆಂದಿದ್ದಾನೆ. ಆದರೆ ತಂದೆಯ ಒಪ್ಪಿಗೆ ಪಡೆದ ಬ್ರಹ್ಮ, ದೈವ, ಆರ್ಷ ಮತ್ತು ಪ್ರಜಾಪತ್ಯ ಪದ್ಧತಿಯ ವಿವಾಹ ವಿಚ್ಛೇದನ ಸಾಧ್ಯವಿಲ್ಲವೆಂದು"[10] ಹೇಳಿದ್ದಾನೆ.

ಕನ್ನಡ ಕಾವ್ಯಗಳಲ್ಲಿ ಮದುವೆಯ ವಿಷಯ ಪ್ರಸ್ತಾಪವಿದ್ದರೂ, ವಿಚ್ಛೇದನದ ಬಗ್ಗೆ ಎಲ್ಲಿಯೂ ಹೇಳಿಲ್ಲ. ಜನಪದ ಸಾಹಿತ್ಯದಲ್ಲಿ ವಿವಾಹ ವಿಚ್ಛೇದನದ ಬಗೆಗೆ ಸ್ಪಷ್ಟವಾದ ನಿದರ್ಶನಗಳು ದೊರೆಯುವುದಿಲ್ಲ. ತಪ್ಪು ಮಾಡಿದ ಹೆಣ್ಣಿಗೆ ಅತ್ಯಂತ ಕಠಿಣ ಶಿಕ್ಷೆ ಕೊಟ್ಟ ವಿಷಯಗಳು ಸಾಕಷ್ಟು ದೊರೆಯುತ್ತವೆ. ನೀತಿಗೆಟ್ಟ ಹೆಣ್ಣಿನ ದೇಹದ ಅಂಗಾಂಗಳಾದ ಮೂಗು, ಮೊಲೆ, ಮತ್ತು ಕಿವಿ ಕತ್ತರಿಸಿದ ಹಾಗೂ ತುರುಬಾ ಕೊಯ್ದ ಜನಪದ ಕಥೆಗಳು, ಗೀತೆಗಳು ದೊರೆಯುತ್ತವೆ. ಗಂಡ ಒಂದಕ್ಕಿಂತ ಹೆಚ್ಚು ಮದುವೆಯಾದ ಅನೇಕ ನಿದರ್ಶನಗಳು ಸಿಗುತ್ತವೆ. ಆದರೆ ಮೊದಲನೆಯ ಹೆಂಡತಿಗೆ ವಿಚ್ಛೇದನ ಕೊಟ್ಟ ಪ್ರಸ್ತಾಪ ಬರುವುದಿಲ್ಲ. ಹೆಂಡತಿ ನೀತಿಗೆಟ್ಟಾಗ ಶಾಪಕೊಟ್ಟ, ಸಿಟ್ಟಿನ ಭರದಲ್ಲಿ ಕೊಂದ ಇಲ್ಲವೆ ಕೊಲ್ಲಿಸಿದ ಪ್ರಸಂಗಗಳುಂಟು. ಉದಾಹರಣೆಗೆ, ಮಹರ್ಷಿ ಗೌತಮನಿಲ್ಲದ ಸಮಯದಲ್ಲಿ, ದೇವೇಂದ್ರನು ಋಷಿಯ ವೇಷದಲ್ಲಿ ಬಂದು ಅಹಲ್ಯಳನ್ನು ಭೋಗಿಸುವನು, ಮನೆಯಿಂದ ಹೋಗುವಷ್ಟರಲ್ಲಿ ಗೌತಮಋಷಿ ಬರುವರು. ತಮ್ಮ ದಿವ್ಯದೃಷ್ಟಿಯಿಂದ ಎಲ್ಲವನ್ನು ಅರಿತು ಅಹಲ್ಯಳಿಗೆ ಶಾಪಕೊಡವರು. ಗಂಡನ ಕಾರ್ಯದಲ್ಲಿ ಅನಾಸ್ಥೆ ತೋರಿ, ಅಪ್ಸರೆಯ ರತಿಕ್ರೀಡೆಯನ್ನು ನೋಡುತ್ತ ನಿಂತ ರೇಣುಕಾಗೆ ಜಮದಗ್ನಿ, ಮಗ ಪರಶುರಾಮನಿಂದ ಕೊಲ್ಲಿಸಿದ, ಹೆಂಡತಿ ತನ್ನ ಮೇಲಿನ ಮನಸ್ಸು ತೆಗೆದು ಪರಪುರುಷನ ಜತೆ ರತಿಕ್ರೀಡೆ ಮಾಡುವುದನ್ನು ಕಣ್ಣಾರೆ ಕಂಡ ಯಶೋಧರ ಅಮೃತಮತಿಯನ್ನು ಶಿಕ್ಷಿಸದೆ, ತಾನೆ ಸಂಸಾರದಲ್ಲಿ ವಿರಕ್ತಿ ಹೊಂದಲು ನಿರ್ಧರಿಸುತ್ತಾನೆ. ಇಂಥಲ್ಲೆಲ್ಲ ವಿಚ್ಛೇದನ ಗೊಳಿಸಿದ ಪ್ರಸ್ತಾಪವಿಲ್ಲ.

---

8. ಭಾರತೀಯ ಸಾಮಾಜಿಕ ಅಧ್ಯಯನ : ಪ್ರೊ॥ ಬಿ. ಆರ್. ಕೃಷ್ಣ, ಪು. 65.
9. ಮನುಸ್ಮೃತಿ ಪುಟ. 339.
10. ಭಾರತೀಯ ಸಾಮಾಜಿಕ ಸಂಸ್ಥೆಗಳು, ಎಂ. ನಂಜಮ್ಮಣ್ಣಿ ಪುಟ. 202.

ಪಾರ್ಸಿಗಳು ವಿವಾಹ ವಿಚ್ಛೇದನದ ಹಕ್ಕು ಪಡೆದಿದ್ದಾರೆ. ಕ್ರಿಶ್ಚಿಯನರ ಪೈಕಿ ರೋಮನ ಕ್ಯಾಥೊಲಿಕ್ಕರನ್ನುಳಿದು ಇತರ ಪಂಗಡಕ್ಕೆ ಸೇರಿದವರು ವಿವಾಹ ವಿಚ್ಛೇದನದ ಹಕ್ಕು ಪಡೆದಿದ್ದಾರೆ.[10] "ವಿವಾಹ ವಿಚ್ಛೇದನಕ್ಕೆ ಕುರಾನ್ ಮಾನ್ಯತೆ ನೀಡಿದೆ. ಕುರಾನದ 'ಅಲ್‌ಬಕರ್' ಭಾಗದ 227 ರಿಂದ 245 ಆಯತಗಳು 'ತಲಾಖ್' ಕುರಿತು ಹೇಳಿವೆ" 'ತಲಾಖ್' ವಿಧಿಪೂರ್ವಕವಾಗಿ ನಡೆಯುತ್ತದೆ. "ಮುಸ್ಲಿಮರಲ್ಲಿ ಎರಡು ಬಗೆಯ ವಿಚ್ಛೇದನಗಳಿವೆ. 1) ಖುಲ್ 2) ತಲಾಖ್. ಮೊದಲನೆಯದರ ಪ್ರಕಾರ ಗಂಡ ಹೆಂಡರಿಬ್ಬರ ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನ ನಡೆಯುವುದು. ಎರಡನೆಯದರ ಪ್ರಕಾರ ಗಂಡನು 'ತಲಾಖ್' ಎಂದು ಮೂರು ಸಲ ಹೇಳಿ ತನ್ನ ಹೆಂಡತಿಯನ್ನು ವಿಚ್ಛೇದಿಸಬಹುದು"[12] ವಿವಾಹ ಸಮಯದಲ್ಲಿ 'ನಿಕಾನಾಮ್' ಬರೆದುಕೊಂಡಂತೆ 'ತಲಾಖ್' ಹೇಳಿದ ಮೇಲೆ 'ತಲಾಖ್ ನಾಮಾ' ಎಂಬ ಪತ್ರ ಕೊಡುವರು. ಮುಸ್ಲಿಂರಲ್ಲಿ ವಿವಾಹ ವಿಚ್ಛೇದನವು ಮೌಲ್ವಿಎದುರುಗಡೆ ವಿಧಿಪೂರ್ವಕವಾಗಿ ಮಾಡುವರು.

2

ದಾಂಪತ್ಯ ಜೀವನವೆಂದರೆ, ಸರಸ–ವಿರಸ, ಸಿಹಿ–ಕಹಿ ಅನುಭವಗಳ ಅನ್ಯೋನ್ಯ ಸಂಬಂಧ. ಬದುಕಿನಾದ್ಯಂತ ಬರಿ ವಿರಸಗಳೆ ತುಂಬಿಕೊಂಡು "ಎತ್ತು ಏರಿಗೆ ಕೋಣ ಕೆರೆಗೆ" ಎಂಬಂತೆ ಗಂಡ ಹೆಂಡತಿಯರ ಜೀವನವಾದರೆ, ಅದು ಬಹಳ ದಿನಗಳು ಹೊಂದಿಕೊಂಡು ಹೋಗುವುದು ಸಾಧ್ಯವಿಲ್ಲ. ವೈವಾಹಿಕ ಜೀವನ ಅಸ್ತವ್ಯಸ್ತಗೊಂಡು ಸಂಬಂಧಗಳು ಕಡಿದುಹೋಗುವ ಪ್ರಸಂಗಗಳು ಬರುವುವು. ಇಂಥ ಪ್ರಸಂಗಗಳನ್ನು ನಮ್ಮ ಜನಪದರು ಸಲೀಸಾಗಿ ತಿಳಿದುಕೊಳ್ಳದೆ ಶತ ಪ್ರಯತ್ನ ಮಾಡಿ ಸಂಬಂಧ ಕೂಡಿಸಲು ಹವಣಿಸುತ್ತಾರೆ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಹಿರಿಯರು ಮನಸ್ಸಿಲ್ಲದ ಮನಸ್ಸಿನಿಂದ ಸಂಬಂಧ ಮುರಿದುಹಾಕುವರು. ಸಂಬಂಧ ಕೂಡಿಸುವಾಗ ಎಷ್ಟು ವಿಚಾರ ಮಾಡುವರೋ ಅದಕ್ಕಿಂತ ಹೆಚ್ಚು ವಿಚಾರ ಮಾಡಿ ಸಂಬಂಧ ಕಡಿದು ಸೋಡ ಚೀಟಿ ಬರೆದು, ಫಾರಿಕತಿ ಕೊಡುವರು. ಫಾರಿಕತಿ ಕೊಟ್ಟು ಇಲ್ಲವೆ ಪಡೆದ ನಂತರವೇ ಮರು ಮದುವೆಗೆ ಅಥವಾ ಉಡಿಕೆಗೆ ಅವಕಾಶ, ಇಲ್ಲವಾದರೆ ಇಲ್ಲ. ಗಂಡ ಹೆಂಡತಿಯರಲ್ಲಿ ಹೊಂದಿಕೆಯಾಗದಿದ್ದರೆ, ಹೆಂಡತಿ ಬೇರೆ ಪುರುಷನ ಜತೆಗೆ ಅನೈತಿಕ ಸಂಬಂಧವಿಟ್ಟುಕೊಂಡರೆ, ಸಮಾಜದ ಮುಂದೆ ನೀತಿಗೆಟ್ಟ ವಿಷಯ ಸಾಬೀತುಪಡಿಸಿದರೆ, ನಪುಂಸಕರಿದ್ದರೆ ದಾಂಪತ್ಯದ ಸಂಬಂಧ ಕಡಿದುಹಾಕುವರು. ಆವಾಗ ಫಾರಿಕತಿ ಕೊಡುವ ಇಲ್ಲವೆ ಪಡೆಯುವ ಪ್ರಸಂಗ

---

11. ದಿವ್ಯ ಕುರಾನ್ — 1978 ಅನುವಾದಕರು: ದಿವ್ಯಕುರಾನ ಅನುವಾದಕ ಮಂಡಲಿ.
12. ಭಾರತೀಯ ಸಾಮಾಜಿಕ ಸಂಸ್ಥೆಗಳು, ಎಂ. ನಂಜಮ್ಮಣ್ಣಿ ಪುಟ: 200

ಬರುವುದು. ಗಂಡ ಮದುವೆಯು ಹೆಂಡತಿಯಿಂದ ಸಂಬಂಧ ಕಡಿದುಕೊಂಡು ಮರು ಮದುವೆಯಾಗಬಯಸಿದರೆ ಫಾರಿಕತಿ ಕೊಟ್ಟಿರಬೇಕು. ಒಂದರ್ಥದಲ್ಲಿ ಫಾರಿಕತಿ ಯೆಂದರೆ ಪುನರ್ವಿವಾಹಕ್ಕೆ ಅಥವಾ ಉಡಿಕಿ ಮಾಡಿಕೊಳ್ಳಲಿಕ್ಕೆ ಪರವಾನಗಿ ಕೊಟ್ಟಂತೆ. ಫಾರಿಕತಿ ಇಲ್ಲದೆ ಮರು ಮದುವೆ ಅಥವಾ ಉಡಿಕೆ ಮಾಡಿಕೊಳ್ಳಲು ಯತ್ನಿಸಿದರೆ ಮದುವೆಯು ಹೆಂಡತಿ ಅಥವಾ ಗಂಡ ಬಂದು ಕಾರ್ಯ ನಡೆಯದಂತೆ ತಡೆಯುವರು. ಅಪಮಾನಗೊಳಿಸಿ, ಸಮಾರಂಭದಿಂದ ಹಿಡಿದು, ಎಳೆದುಕೊಂಡು ಹೋದ ಉದಾಹರಣೆಗಳು ದೊರೆಯುವವು. ಫಾರಿಕತಿ ಇಲ್ಲದೆ ಉಡಿಕೆ ಮಾಡಿಕೊಳ್ಳುವುದು ಸಮಾಜದ ದೃಷ್ಟಿಯಲ್ಲಿ ಅಪರಾಧ. ಅದನ್ನು ಜನಪದರು ಒಪ್ಪುವುದಿಲ್ಲ.

ಮದುವೆಯ ನಂತರದ ದಂಪತಿಗಳು ತಮ್ಮ ವೈವಾಹಿಕ ಸಂಬಂಧ ಕಡಿದುಕೊಳ್ಳುವ ವ್ಯವಹಾರವೇ ಫಾರಿಕತಿ ಅಥವಾ ವಿವಾಹ ವಿಚ್ಛೇದನ. ನಿಘಂಟುವಿನಲ್ಲಿ 'ಪಾರಿಖತ್ತು' ಎಂಬ ಶಬ್ದವಿದ್ದು ಅದರ ಅರ್ಥ ಕರಾರು ಪತ್ರ (ವಿವಾಹ ವಿಚ್ಛೇದನ ಕುರಿತು ಬಳಕೆಯಾಗಿದ್ದರೆ) ಇದು ಅಷ್ಟೊಂದು ಉಚಿತಾರ್ಥ ಕೊಡುವ ಶಬ್ದವಲ್ಲ. ಏಕೆಂದರೆ ಫಾರಿಖತ್ತಿನ (ಫಾರಿಕತಿ) ಮುಖ್ಯ ಉದ್ದೇಶ ಯಾವುದೆ ಪ್ರಕಾರದ ಕರಾರು ಮಾಡಿಕೊಳ್ಳುವುದಲ್ಲ. ಕೇವಲ ಒಂದು ಪತ್ರ ಬರೆದು ಕೊಡುವುದೂ ಅಲ್ಲ. ಈ ಮೊದಲಿದ್ದ ಒಂದು ಪವಿತ್ರ ಸಂಬಂಧದಿಂದ ಬಿಡುಗಡೆ ಹೊಂದುವುದು. ಇಲ್ಲಿ ಕರಾರು ಪತ್ರ ಮುಖ್ಯವಲ್ಲ. ಬಿಡುಗಡೆ ಮುಖ್ಯ. ಕರಾರು ಪತ್ರವಿಲ್ಲದೆಯೂ ಫಾರಿಕತಿ ಕೊಟ್ಟ ಮತ್ತು ಪಡೆದ ಉದಾಹರಣೆಗಳಿವೆ. ನಾಲ್ಕು ಜನರು ಕೂಡಿ ಸಂಬಂಧ ಮುರಿದು ಹಾಕುವುದಕ್ಕೆ ಫಾರಿಕತ್ತೆಂದು ಸಾಮಾನ್ಯವಾಗಿ ಹೇಳಬಹುದು.

'ಫಾರಿಕತ' ಶಬ್ದವು ಉರ್ದು ಭಾಷೆಯಿಂದ ಕನ್ನಡಕ್ಕೆ ನೇರವಾಗಿ ಬಂದಿದ್ದು. ಗ್ರಂಥಸ್ಥ ಉರ್ದು ಭಾಷೆಯಲ್ಲಿ ವಿವಾಹ ವಿಚ್ಛೇದನಕ್ಕೆ 'ತಲಾಖ್' ಎಂಬ ಶಬ್ದ ಬಳಕೆಯಾದರೆ, ದಖನ್ ಉರ್ದು ಭಾಷೆಯಲ್ಲಿ ಫಾರಿಕತ್ ಎಂಬ ಶಬ್ದ ಬಳಗೊಂಡಿದೆ. ಇದು ಜನಪದರ ಬಾಯಿಯಲ್ಲಿ ಫಾರಿಕತಿ, ಫರಾಕತಿಯೆಂದು ಬದಲಾವಣೆ ಪಡೆದಿದೆ. ಬಿಜಾಪೂರ ಗುಲಬರ್ಗಾ ಜಿಲ್ಲೆಗಳಲ್ಲಿ ಫಾರಿಕತಿಯೆಂದು ಬಳಕೆಯಾದರೆ, ಬೀದರ ಜಿಲ್ಲೆಯಲ್ಲಿ ಫರಾಕತಿಯೆಂದು ಬಳಕೆಗೊಂಡಿದೆ. ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ತುಮಕೂರು, ಬೆಂಗಳೂರು ಕಡೆ ಫಾರಿಕತ್ತು (ಪಾರಿಖತ್ತು) ಶಬ್ದವು ವಿವಾಹ ವಿಚ್ಛೇದನದ ಅರ್ಥದಲ್ಲಿ ಬಳಕೆಯಾಗುವುದಿಲ್ಲ. ಅಣ್ಣ ತಮ್ಮಂದಿರು ಆಸ್ತಿಯನ್ನು ಹಂಚಿಕೊಂಡು ಕಾಗದ ಪತ್ರಗಳನ್ನು ಮಾಡಿಕೊಳ್ಳುವುದಕ್ಕೆ ಬಳಸುವರು. ಉತ್ತರ ಕರ್ನಾಟಕದಲ್ಲಿ ಅದರಲ್ಲಿಯೂ ಮುಸ್ಲಿಂ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಮಾತ್ರ 'ಫಾರಿಕತ' ಶಬ್ದವು ವಿವಾಹ ವಿಚ್ಛೇದನದ ಅರ್ಥ ಪಡೆದು ಬಳಕೆಯಾಗಿದೆ.

ಇದರಿಂದ ಹಿಂದೂಗಳಲ್ಲಿಲ್ಲದ ಈ ಶಬ್ದದ ಜತೆಗೆ, ವಿವಾಹ ವಿಚ್ಛೇದನದ ಪದ್ಧತಿಯೂ ಮುಸ್ಲಿಂ ಸಂಸ್ಕೃತಿಯಿಂದ ಬಂದುದೆಂದು ಊಹಿಸಲು ಅವಕಾಶವಿದೆ.

ಕನ್ನಡ ನಿಘಂಟುವಿನಲ್ಲಿ ಬಳಕೆಯಾದ ಶಬ್ದಗಳನ್ನು ಆಧರಿಸಿ ಫಾರಿಕತಿ ಶಬ್ದದ ನಿಷ್ಪತ್ತಿಯನ್ನು ಎರಡು ರೀತಿಯಿಂದ ವಿವರಿಸಬಹುದು. ಪಾರ, ಪಾರಿ ಮತ್ತು ಪಾರು ಈ ಮೂರು ಶಬ್ದಗಳ ಅರ್ಥ ಗಮನಾರ್ಹವಾಗಿದೆ. 'ಪಾರ' ಎಂದರೆ ಕೊನೆ, ಪಾರಿ ಎಂದರೆ ಸೂಳೆ, ಮತ್ತು ಪಾರು ಎಂದರೆ ಹಾದರ, ಹಾದರಗಿತ್ತಿಯೆಂದು ಅರ್ಥ ಕೊಡುವವು. 1) ಪಾರ + ಖಿತ್ತು—ಪಾರಖಿತ್ತು—ಪಾರಿಖಿತ್ತು—ಪಾರಿಖಿತ್—ಫಾರಿಖಿತ್—ಫಾರಿಕತಿ ಇಲ್ಲಿ 'ಪಾರ' ಎಂದರೆ ಕೊನೆ 'ಖಿತ್ತು' ಎಂದರೆ ಬರವಣಿಗೆ ಕೈಬರಹದ ಕಾಗದ ಪತ್ರವೆಂದು ಅರ್ಥವುಂಟು. ಪಾರಖಿತ್ತು—ಪಾರಿಕತ್ ಎಂದರೆ ಕೊನೆಯ ಪತ್ರವೆಂದು ಅರ್ಥೈಸಲು ಅವಕಾಶವಿದೆ. ಗಂಡ-ಹೆಂಡತಿಯರ ವೈವಾಹಿಕ ಜೀವನದ ಕೊನೆಯ ಪತ್ರ. ಫಾರಿಕತಿ ಕೊಡುವಾಗ ಮತ್ತು ಪಡೆಯುವಾಗ ನಡೆಯುವ ವ್ಯವಹಾರ ನೋಡಿದರೆ, ಈ ಮಾತಿಗೆ ಪುಷ್ಟಿ ದೊರೆಯುತ್ತದೆ. ಗಂಡ ತಾನು ಸಂಬಂಧ ಕಡಿದುಕೊಳ್ಳುವ ಕಾರಣಗಳನ್ನು ಒಂದು ಕಾಗದದಲ್ಲಿ ಬರೆದು (ಬರೆಸಿ) ಹಿರಿಯರ ಸಮ್ಮುಖದಲ್ಲಿ ಹೆಂಡತಿಗೆ ಕೊಡುತ್ತಾನೆ. ಅದರಂತೆ ಹೆಂಡತಿ ಗಂಡನಿಗೆ ಕೊಡುತ್ತಾಳೆ. ಇದು ಅವರ ವೈವಾಹಿಕ ಬದುಕಿನ ಕೊನೆಯ ಪತ್ರ. ನಂತರ ಸಂಬಂಧ ಮುರಿಯುವದು. ಫಾರಿಕತಿ ಎಂದರೆ ಕೊನೆಯ ಪತ್ರ. 2) ಪಾರಿ ಖಿತ್ತು—ಪಾರಿಖಿತ್ತು > ಪಾರಿಕತ > ಫಾರಿಕತ > ಫಾರಿಕತಿ ಇಲ್ಲವೆ ಪಾರು + ಖಿತ್ತು—ಪಾರುಖಿತ್ತು > ಪಾರಿಖಿತ್ತು > ಪಾರಿಕತ್ > ಪಾರಿಕತ > ಫಾರಿಕತ. 'ಪಾರಿ', ಪಾರು, ಎಂದರೆ ಸೂಳೆ, ಹಾದರ, ಹಾದರಗಿತ್ತಿಯೆಂದು ಅರ್ಥ ಪಡೆದ ಈ ಶಬ್ದಗಳಿಗೆ ಖಿತ್ತು ಸೇರಿ ಪಾರಿಖಿತ್ತು > ಫಾರಿಕತಿಯಾಗಿದೆ. ಹಾದರತನ ಮಾಡಿದಾಗ ವೈವಾಹಿಕ ಸಂಬಂಧ ಕಡಿದುಕೊಂಡು ಅದರ ವಿವರಗಳನ್ನು ಬರೆದು ಕೊಡುವ ಪತ್ರವೆ 'ಫಾರಿಖಿತ್ತು' ಎಂದಾಯಿತು. ಅಲ್ಲದೆ ಪ್ರತಿ ಶತ 90 ಫಾರಿಕತಿಗಳು ನೀತಿಗೆಟ್ಟು ಹಾದರತನ ಮಾಡಿದಾಗ ಕೊಟ್ಟಂಥವುಗಳೆಂದು ಕಂಡುಬರುವುದು. ಅಂದರೆ ಹಾದರತನ ಮಾಡಿದಾಗ ಹಾದರಗಿತ್ತಿಯರಿಗೆ ವೈವಾಹಿಕ ಬಂಧ ಕಡಿದು ಬರೆದು ಕೊಡುವ ಪತ್ರ ಫಾರಿಖಿತ್ತು ಎಂಬುದು ಸ್ಪಷ್ಟವಾಗುವುದು. ಹಾದರಗಿತ್ತಿಯೆಂದರೆ ನೀತಿಗೆಟ್ಟವಳು. ಹಾದರತನ ಮಾಡಿದವಳೆಂದು ಸಾಮಾನ್ಯವಾದ ತಿಳುವಳಿಕೆ ಆದರೆ ಹಾದರತನ ಮಾಡಿದವಳು ಹಾದರಗಿತ್ತಿಯಲ್ಲ ಹಾದರತನ ಮಾಡಿ ಗಂಡ ಬಿಟ್ಟವಳು ಅಲ್ಲ. ಯಾವುದೇ ಕಾರಣಕ್ಕಾಗಿ ಗಂಡನನ್ನು ಬಿಟ್ಟವಳಿಗೆ ಹಾದರಗಿತ್ತಿಯೆಂದು ಜನಪದದಲ್ಲಿ ಕರೆಯುವ ವಾಡಿಕೆಯಿದೆ. ಗಂಡ ಸತ್ತ ಹೆಣ್ಣಿಗೆ ರಂಡ ಮುಂಡೆಯನ್ನುವಂತೆ, ಗಂಡ ಬಿಟ್ಟವಳಿಗೆ ಹಾದರಗಿತ್ತಿಯೆನ್ನುವರು, ಅಂದರೆ ಇಲ್ಲಿ ಫಾರಿಕತಿಯೆಂದರೆ ಗಂಡ ಬಿಟ್ಟವಳಿಗೆ ಕೊಡುವ ಪತ್ರವೆಂದು ಅರ್ಥ ಕೊಡುವುದು.

ಮದುವೆ ಸಂಬಂಧದಿಂದ ಬಿಡುಗಡೆ ಹೊಂದಿದಾಗ ಬರೆದು ಕೊಡುವ ಪತ್ರಕ್ಕೆ 'ಸೋಡ ಚೀಟಿ' ಎಂಬ ಶಬ್ದವನ್ನು ನಮ್ಮ ಜನಪದರು ಬಳಸುವರು. ಸೋಡ ಚೀಟಿ ಇದು ಮರಾಠಿ ಭಾಷೆಯಿಂದ ಕನ್ನಡಕ್ಕೆ ಬಂದ ಶಬ್ದ. ಮರಾಠಿ ಪ್ರಭಾವ ವಿರುವ ಎಲ್ಲ ಪ್ರದೇಶಗಳಲ್ಲಿ ಬಳಕೆಗೊಂಡಿದೆ, 'ಸೋಡ' ಎಂದರೆ 'ಬಿಡು', ಚೀಟಿ, ಎಂದರೆ ಪತ್ರ. ಸೋಡ ಚೀಟಿ, ಎಂದರೆ ಬಿಡುಗಡೆ ಪತ್ರ. ಬೀದರ, ಗುಲಬರ್ಗಾ, ಬಿಜಾಪೂರ, ಬೆಳಗಾಂವ ಮತ್ತು ಧಾರವಾಡ ಪ್ರದೇಶಗಳಲ್ಲಿ ಜನಪದರು ಈ ಪದವನ್ನು ಸಲೀಸಾಗಿ, ಬಳಸುತ್ತಾರೆ. ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ಒಪ್ಪಿಗೆ ಪತ್ರ ಅಥವಾ 'ಬಿಡುಗಡೆ ಪತ್ರ' ಎಂಬ ಶಬ್ದವನ್ನು ಚಿತ್ರದುರ್ಗ, ದಾವಣಗೆರೆ ಕಡೆ 'ಸೋಡ ಚೀಟಿ' ಅಥವಾ ಛೋಡ ಚೀಟಿ ಎಂಬ ಶಬ್ದ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಸೋಡಾ ಚೀಟಿ ಎಂಬ ಶಬ್ದ ಬಳಸುವರು. 'ಛೋಡ' ಇದು ಹಿಂದಿ ಶಬ್ದ. ಛೋಡ ಶಬ್ದ ಬಿಡುವೆಂಬ ಅರ್ಥ ಕೊಡುವುದು. ಹೀಗೆ ವೈವಾಹಿಕ ಸಂಬಂಧದಿಂದ ಬಿಡುಗಡೆ ಹೊಂದುವಾಗ ಬರೆದು ಕೊಡುವ ಪತ್ರವೆ ಸೋಡ ಚೀಟಿ.

ಜನಪದರು ಫಾರಿಕತಿ ಮತ್ತು ಸೋಡಚೀಟಿ ಎರಡು ಒಂದೇ ಅರ್ಥದಲ್ಲಿ ಬಳಸುವರು. ವೈವಾಹಿಕ ಸಂಬಂಧದಿಂದ ಬಿಡುಗಡೆ ಹೊಂದುವ ಇಡೀ ವ್ಯವಹಾರ ವನ್ನು ಗಮನಿಸಿದರೆ, ದಂಪತಿಗಳು ಬಿಡುಗಡೆ ಹೊಂದುವ ಸಂಪೂರ್ಣ ವ್ಯವಹಾರಕ್ಕೆ ಫಾರಿಕತಿ ಎಂದು ಈ ಬಿಡುಗಡೆಗೆ ಸಂಬಂಧಿಸಿ ಬರೆಯುವ ಪತ್ರಕ್ಕೆ 'ಸೋಡ ಚೀಟಿ' ಎಂದು ಕರೆಯಬಹುದೆಂದು ತೋರುತ್ತದೆ. ಎಂ. ನಂಜಮ್ಮಣ್ಣಿಯವರು ಪುನರ್ವಿವಾಹಕ್ಕೆ ಉಡಿಕೆ, ಸೋಡ ಚೀಟಿ, ಕೂಡಾವಳಿ ಎಂಬ ಹೆಸರಿದೆ* ಎಂದು ಹೇಳಿದ್ದಾರೆ. ಇದು ವಿಷಯ ಪರಿಜ್ಞಾನದ ಅಭಾವ. 'ಸೋಡ ಚೀಟಿ' ಪುನರ್ವಿವಾಹ ಅಲ್ಲ. ಪುನರ್ವಿವಾಹ ಮಾಡಿಕೊಳ್ಳಲು ಮದುವೆ ಹೆಂಡತಿಗೆ ವೈವಾಹಿಕ ಸಂಬಂಧ ಕಡಿದುಕೊಂಡು ಬರೆದು ಕೊಡುವ ಪತ್ರ ಅಥವಾ ಪುನರ್ವಿವಾಹಕ್ಕೆ ಪರವಾನಿಗೆ

ಸೋಡ ಚೀಟಿಯ ನಮೂನೆಗಳು:–

ಮದುವೆ ಬಂಧನದಿಂದ ಬಿಡುಗಡೆ ಹೊಂದುವ ಫಾರಿಕತಿಯನ್ನು ಕುರಿತು 'ಸೋಡ ಚೀಟಿ' ಬರೆದು ಕೊಡುವ ನಮೂನೆಗಳು ಹಲವಾರು ತರಗಳಿವೆ.

ಸೋಡ ಚೀಟಿ

ಸೋಡ ಚೀಟಿ ಬರೆದು ಕೊಡುವವರು: ಸಿದ್ರಾಮಪ್ಪ ತಂ: ಸಾಯಬಣ್ಣಾ ವಯ: 25 ಸರಸಂಬಾ ತಾ: ಆಳಂದ ಜಿಲ್ಲಾ : ಕಲಬುರ್ಗಿ

---

* ಭಾರತೀಯ ಸಾಮಾಜಿಕ ಸಂಸ್ಥೆಗಳು :

ಸೋಡ ಚೀಟಿ ಬರೆದು ಕೊಳ್ಳುವವರು: ಮಲ್ಲಮ್ಮಾ ತಂ: ಬಸಣ್ಣಾ ವಯ: 21 ಮು: ಸರಸಂಬಾ ತಾ: ಆಳಂದ ಜಿಲ್ಲಾ : ಕಲಬುರ್ಗಿ.

ನನ್ನ ಹೆಂಡತಿ ನನ್ನ ಜತೆಗೆ ಹೊಂದಿಕೊಂಡು ಬಾಳುತ್ತಿಲ್ಲ. ನನ್ನ ಜತೆಗೆ ಅವಳ ವ್ಯವಹಾರ ಸರಿಯಾಗಿಲ್ಲ. ಕಾರಣ ಈಶ್ವರ ಕೃಪಾದಿಂದ ನಾಲ್ಕು ಮಂದಿ ಮುಂದೆ ಇಂದು ತಾರೀಖು 1-1-1972 ರಂದು ಬುದ್ಧಿಯಿಂದ ತಿಳಿದು, ಸ್ವಖುಷಿಲಿಂದ ಸೋಡ ಚೀಟಿ ಬರೆದು ಕೊಡುತ್ತೇನೆ. ಇದಕ್ಕೆ ಯಾವುದೇ ರೀತಿಯ ತಕರಾರಿಲ್ಲ.

ಸಾಕ್ಷಿ	ಸಹಿ
1 ಸಹಿ	ಸಿದ್ರಾಮಪ್ಪ ಸಾಯಬಣ್ಣ
2 ಸಹಿ	
3 ಸಹಿ	ದಸ್ತೂರ : ಸಹಿ

ಇದು ಗಂಡ ಹೆಂಡತಿಗೆ ಬರೆದುಕೊಡುವದು. ಸಾಕ್ಷಿದಾರರು, ಗಂಡನ ಮತ್ತು ದಸ್ತೂರ (ಹಸ್ತಾಕ್ಷರ) ಇವರ ಸಹಿ ಇರಬೇಕು. ಇಂಥದ್ದೆ ಇನ್ನೊಂದು ಚೀಟಿ ಬರೆದು ಒಂದರ ಮೇಲೆ ಗಂಡನ ಸಹಿ, ಇನ್ನೊಂದರ ಮೇಲೆ ಹೆಂಡತಿಯ ಸಹಿ ಮಾಡಿ ಒಬ್ಬರಿಂದ ಒಬ್ಬರಿಗೆ ಕೊಡಿಸುವದು.

ಸೋಡ ಚೀಟಿ

ಸೋಡ ಚೀಟಿ ಬರೆದು ಕೊಡುವವರು : ಮಲ್ಲಮ್ಮಾ ತಂ: ಬಸಣ್ಣಾ ವಯಸ್ಸು 21 ಸರಸಂಬಾ ತಾ: ಆಳಂದ ಜಿ: ಕಲಬುರ್ಗಿ.

ಸೋಡ ಚೀಟಿ ಬರೆದುಕೊಳ್ಳುವವರು: ಸಿದ್ರಾಮ ತಂ: ಸಾಯಬಣ್ಣಾ ವಯಸ್ಸು 25 ಮು: ಸರಸಂಬಾ ತಾ: ಆಳಂದ ಜಿ: ಕಲಬುರ್ಗಿ.

ನನ್ನ ಗಂಡ ನನ್ನ ಜತೆಗೆ ಹೊಂದಿಕೊಂಡು ಬಾಳುತ್ತಿಲ್ಲ. ನನ್ನ ಜತೆಗೆ ಅವನ ವ್ಯವಹಾರ ಸರಿಯಾಗಿಲ್ಲ. ಕಾರಣ ಈಶ್ವರ ಕೃಪಾದಿಂದ ನಾಲ್ಕು ಮಂದಿ ಮುಂದೆ ಇಂದು ತಾ: 1-1-1972 ರಂದು ಬುದ್ಧಿಯಿಂದ ತಿಳಿದು, ಸ್ವಖುಷಿಲಿಂದ ಸೋಡಚೀಟಿ ಬರೆದುಕೊಡುತ್ತೇನೆ. ಇದಕ್ಕೆ ಯಾವುದೇ ರೀತಿಯ ತಕರಾರಿಲ್ಲ.

ಸಾಕ್ಷಿ	ಸಹಿ
1 ಸಹಿ	ಸಹಿ
2 ಸಹಿ	ಮಲ್ಲಮ್ಮಾ ತಂ: ಬಸಣ್ಣ
3 ಸಹಿ	ದಸ್ತೂರ; ಸಹಿ

ಇದು ಹೆಂಡತಿ ಗಂಡನಿಗೆ ಬರೆದು ಕೊಡುವ ಚೀಟಿ.

ಸೋಡ ಚೀಟಿ

ಸೋಡ ಚೀಟಿ ಬರೆದು ಕೊಡುವವರು : ಕರಬಸಪ್ಪ ತಂ: ಮಲ್ಲಪ್ಪ ವಯಸ್ಸು 28 ಮು: ನಾಗಲಗಾಂವ ತಾ: ಆಳಂದ ಜಿಲ್ಲಾ: ಕಲಬುರ್ಗಿ

ಸೋಡ ಚೀಟಿ ಬರೆದು ಕೊಳ್ಳುವವರು : ಶಿವಮ್ಮಾ : ತಂದೆ ಶಂಕರೆಪ್ಪ ವಯಸ್ಸು 23 ಮು: ಸಕ್ಕರಗಾ ತಾ: ಆಳಂದ ಜಿಲ್ಲಾ: ಕಲಬುರ್ಗಿ.

ನಾವು ಗಂಡ ಹೆಂಡತಿಯರಾಗಿದ್ದು, ಇಷ್ಟು ದಿವಸ ಸರಿಯಾಗಿ ಬಾಳುವೆ ಮಾಡಿದ್ದೇವು. ನಾಲ್ಕು ವರ್ಷವಾಯಿತು ನಮಗೆ ಮಕ್ಕಳಾಗಿಲ್ಲ. ಈಗ ಬಿಡುಗಡೆಯಾಗುತ್ತೇವೆ. ನಾವು ಸ್ವಖುಷಿಲಿಂದ, ಸ್ವಂತ ಬುದ್ಧಿಯಿಂದ ವಿಚಾರ ಮಾಡಿ ತಿಳಿದು ಈ ಸೋಡ ಚೀಟಿ ಒಬ್ಬರಿಗೊಬ್ಬರು ಬರೆದು ಕೊಡುತ್ತಿದ್ದೇವೆ. ಇದಕ್ಕೆ ಯಾರದು ತಕರಾರಿಲ್ಲ.

ಸಾಕ್ಷಿ	ಸಹಿ
1 ಸಹಿ	ಸಹಿ
2 ಸಹಿ	ಗಂಡ
3 ಸಹಿ	ಹೆಂಡತಿ

ದಸ್ತುರ: ಸಹಿ

ಇದು ಮಕ್ಕಳಾಗದಿದ್ದಾಗ ಬರೆದು ಕೊಡುವುದು. ಈ ಸೋಡ ಚೀಟಿ ಎರಡು ಪ್ರತಿ ಮಾಡಿ, ಎರಡರಲ್ಲಿ ಗಂಡ ಹೆಂಡತಿಯು ಸಹಿ ಮಾಡಿಸಿ, ಒಬ್ಬರಿಗೊಬ್ಬರು ಕೊಡುವರು.

ಸೋಡ ಚೀಟ

ಸೋಡ ಚೀಡಿ ಬರೆದು ಕೊಡುವವರು: ಶರಣಪ್ಪ ತಂದೆ: ಶಿವಪಾದಪ್ಪ ವಯಸ್ಸು 50 ಮು: ಖಜೂರಿ : ಆಳಂದ ಜಿ: ಕಲಬುರ್ಗಿ ಸೋಡ ಚೀಟಿ ಬರೆದು ಕೊಳ್ಳುವವರು: ತಿಪ್ಪಣ್ಣಾ ತಂದೆ ಗುರಣ್ಣಾ ವಯಸ್ಸು 48 ಮು: ಪಡಸಾವಳಿ ತಾ: ಆಳಂದ ಜಿಲ್ಲಾ: ಕಲಬುರ್ಗಿ.

ಶರಣಪ್ಪ ತಂದೆ ಶಿವಪಾದಪ್ಪನ ಮಗನಾದ ಭೀಮಶಾ (ವಯಸ್ಸು 24) ಇವನಿಗೆ ತಿಪ್ಪಣ್ಣಾ ತಂದೆ ಗುರಣ್ಣಾ ಇವನ ಮಗಳಾದ ಸ[illegible]ಲಾಬಾಯಿ (ವಯಸ್ಸು 20) ಕೊಟ್ಟು ಮದುವೆ ಮಾಡಿತ್ತು. ಈಗ ಗಂಡ ಹೆಂಡತಿಯರಿಗೆ ಹೊಂದಿಕೆಯಾಗುವುದಿಲ್ಲ. ದಿನಾಲು ಜಗಳ ಮಾಡುತ್ತಿದ್ದಾರೆ. ಇವರ ಹೊಂದಿಕೆಯಾಗದ ಸಂಬಂಧ ಕಡಿದು ಹಾಕಿ ಅವರು ಬೇರೆ ಬೇರೆ ಮದುವೆಯಾಗಲು ಅವಕಾಶ ಮಾಡಿ

ಕೊಟ್ಟಿದ್ದೇವೆ. ಹಿರಿಯರಾದ ನಾವು ಮಕ್ಕಳಿಗೆ ಹೇಳಿ ಕೇಳಿ ಅವರ ಒಪ್ಪಿಗೆ ಪ್ರಕಾರ ಸೋಡ ಚೀಟಿ ಬರೆದು ಕೊಟ್ಟಿದ್ದೇವೆ.

1 ಶರಣಪ್ಪ ಶಿವಪಾದಪ್ಪ ಸಹಿ
2 ತಿಪ್ಪಣ್ಣಾ ತಂದೆ ಗುರಣ್ಣಾ ಸಹಿ

ಸಾಕ್ಷಿ

1 ಸಹಿ ದಸ್ತೂರ: ಸಹಿ
2 ಸಹಿ
3 ಸಹಿ

ಹಿರಿಯರೆ ಕೂಡಿ ಪಂಚಾಯತಿ ಮಾಡಿ. ಹಿರಿಯರು ಬರೆದುಕೊಳ್ಳುವ ಸೋಡ ಚೀಟಿ. ಗಂಡ ಹೆಂಡತಿಯರು ಪಂಚಾಯತಿ ಸಮಯದಲ್ಲಿ ಇಲ್ಲದಾಗ ಅವರು ನಾಲ್ಕು ಜನರ ಮುಂದೆ ಬರಲು ಒಪ್ಪದೆ ಇದ್ದಾಗ, ಹೊಂದಿಕೊಂಡು ಹೋಗದ ಗಂಡ ಹೆಂಡತಿಯರ ಪರವಾಗಿ ಅವರವರ ತಂದೆಯರು ಕೂಡಿ ಬರೆದುಕೊಳ್ಳುವ ಸೋಡ ಚೀಟಿ. ಅನಿವಾರ್ಯ ಪ್ರಸಂಗದಲ್ಲಿ ಮಾತ್ರ.

ಹೀಗೆ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಸೋಡ ಚೀಟಿ ಬರೆಯುತ್ತಾರೆ. ಈ ಸೋಡ ಚೀಟಿ ಇದ್ದರೆ ಮಾತ್ರ ಅವರಿಗೆ ಮದುವೆಯಾಗಲು ಮುಂದೆ ಬರುತ್ತಾರೆ. ಇಲ್ಲವಾದರೆ ಇಲ್ಲ.

ತಲೆ ಬರಹ ಸೋಡ ಚೀಟಿಯೆಂದು ಬರೆಯಬೇಕು. ಶ್ರೀ ಎಂದು ಬರೆಯಬಾರದು. ಶ್ರೀ ಶುಭಕಾರ್ಯಗಳಿಗೆ ಬರೆಯುವುದರಿಂದ ಇಲ್ಲಿ ಬರೆಯುವಂತಿಲ್ಲ.

'ಫಾರಿಕತಿ' ಕೊಡುವಾಗ ಮತ್ತು ಸೋಡ ಚೀಟಿ ಬರೆಯುವಾಗ ಕೆಲವು ಪದ್ಧತಿಗಳನ್ನು ಜನಪದರು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಒಂದೊಂದು ಕಡೆ ಒಂದೊಂದು ರೀತಿಯಿದೆ. ಕೆಲವೊಂದು ಹಳ್ಳಿಗಳಲ್ಲಿ ಬರೆಯುವುದೇ ಇಲ್ಲ. ಬರೆಯಲು ಮುಂದೆ ಬಂದರೆ ಹಿರಿಯರು ಅವಕಾಶ ಕೊಡುವುದಿಲ್ಲ. ಕೆಲವು ಜನ ಸಂಪ್ರದಾಯಸ್ಥರು 'ಫಾರಿಕತಿ' ಎಂಬ ಶಬ್ದವು ಬಾಯಿಯಿಂದ ಉಚ್ಚರಿಸುವುದಿಲ್ಲ. ಇನ್ನು ಕೆಲವರು ಫಾರಿಕತಿ ಕೊಟ್ಟ ಮತ್ತು ಸೋಡಚೀಟಿ ಬರೆದ ವಿಚಾರ ಕುರಿತು ಮಾತನಾಡುವುದೇ ಇಲ್ಲ. ಇದಕ್ಕೆ ಮುಖ್ಯ ಕಾರಣ ಜನ ಸಾಮಾನ್ಯರ ದೃಷ್ಟಿಯಲ್ಲಿ ಫಾರಿಕತಿ ಕೊಡುವುದು ಅತ್ಯಂತ ಪಾಪದ ಕೆಲಸ, ಕ್ಷಮಿಸಲಾರದ ಅಪರಾಧ, ಅದಕ್ಕಾಗಿ ಯಾರೂ 'ಸೋಡ ಚೀಟಿ' ಬರೆಯುವ ಗೋಜಿಗೆ ಹೋಗುವುದಿಲ್ಲ. 'ಸೋಡ ಚೀಟಿ'ಯನ್ನು ಒಬ್ಬ ವಿಶಿಷ್ಟ ವ್ಯಕ್ತಿ, ಒಂದು ವಿಶೇಷ ದಿನದಲ್ಲಿ, ನಿರ್ದಿಷ್ಟ ಸಮಯದಲ್ಲಿ ನಿರ್ಜನ ಜಾಗದಲ್ಲಿ ಬರೆಯುವನು. ಜಂಗಮ ಇಲ್ಲವೆ ವಿಧುರ ಗಂಡುವಾರಗಳಾದ ಬುಧವಾರ ಮತ್ತು ಶನಿವಾರ ಮಾತ್ರ ಸಾಯಂಕಾಲ ಸೂರ್ಯಾಸ್ತ ಸಮಯದಲ್ಲಿ, ಊರಿನ

ಪಶ್ಚಿಮ ದಿಕ್ಕಿನಲ್ಲಿ, ಊರ ಮುಂದಿನ ಹಳ್ಳದ ದಂಡೆಯಲ್ಲಿ ಅಥವಾ ಸೀಮೆ ಸರಹದ್ದಿನ ಮೇಲೆ ಕುಳಿತು ಬರೆಯುವರು. ಮೂರು ಅಥವಾ ನಾಲ್ಕು ಜನರು ಮಾತ್ರ ಇರುವರು. ಗಂಡ ಹೆಂಡತಿ, ಸೋಡ ಚೀಟಿ ಬರೆಯುವವನು ಅದನ್ನು ಹರಿಯುವವನು. ಹರಿಯುವವನೆಂದರೆ ಸೋಡ ಚೀಟಿ ಹರಿಯುವುದಿಲ್ಲ. ಚೀಟಿಯ ತಲೆಯಲ್ಲಿ ಸ್ವಲ್ಪ ಭಾಗ ಮಾತ್ರ ಹರಿಯುವನು, ಇಲ್ಲವೆ ಸಂಬಂಧ ಮುರಿದು ಹೋದ ಸಂಕೇತಕ್ಕೆ ಒಂದು ಕಡ್ಡಿಯನ್ನು ತೆಗೆದುಕೊಂಡು ಮುರಿದು ಹಾಕುವನು. ಪ್ರಕ್ಕಟಿಯಾಗಿ ಬರೆಯುವುದಿಲ್ಲ. ಇದು ಪಾಪದ ಕೆಲಸವಾಗಿರುವುದರಿಂದ ಇದರ ತಪ್ಪುಮ ತೆಗೆದುಕೊಳ್ಳುವರು. ಬರೆದವನು ಮೂರು ರೂಪಾಯಿಗಳು, ಹರಿದವನು ಆರು ರೂಪಾಯಿಗಳು ತೆಗೆದುಕೊಳ್ಳುವರು. ಇದರಿಂದ "ಬರೆದವನಿಗೆ ಮೂರು ಹರಿದವನಿಗೆ ಆರು" ಎಂಬ ಗಾದೆ ಪ್ರಚಲಿತವಲ್ಲಿದೆ. ಶುಭ ದಿನಗಳಲ್ಲಿ ಬರೆಯುವುದಿಲ್ಲ. ಸೋಡ ಚೀಟಿ ಬರೆಯುವುದು ಮುಗಿದ ಮೇಲೆ ಪೆನ್ನಿನ ಪತ್ತಿ ಮುರಿದು ಹಾಕುವರು, ಇಲ್ಲವೆ ಪೆನ್ನು ಬಿಸಾಕುವರು ಮತ್ತು ಫಾರಿಕತಿಯನ್ನು ಕೊಡುವಾಗ ಹೆಣ್ಣಿಗೆ ಅಪಮಾನವಾಗುವಂತೆ ಕಠಿಣವಾಗಿ ವರ್ತಿಸುತ್ತಾರೆ. ಏಕೆಂದರೆ ಹೆಣ್ಣು ಫಾರಿಕತಿ ಪಡೆಯಲು ಮುಂದಾಗಬಾರದು ಎಂಬುದೆ ಮುಖ್ಯ ಉದ್ದೇಶ. ಸೂಳಿ ಪಾಪ ಸನ್ಯಾಸಿಗ, ಎಂಬ ಗಾದೆಯನ್ನು ಗಮನಿಸಿದರೆ, ಫಾರಿಕತಿ ಕೊಡುವ ಮತ್ತು ಸೋಡ ಚೀಟಿ ಬರೆಯುವ ಕೆಲಸ ಜಂಗಮನೆ ಮಾಡುವನು ಎಂಬುದು ಸ್ಪಷ್ಟವಾಗುತ್ತದೆ. ಸಣ್ಣ ಪುಟ್ಟ ಬದಲಾವಣೆಯೊಂದಿಗೆ ಮೇಲೆ ಹೇಳಿದ ಪದ್ಧತಿಯಂತೆ ಫಾರಿಕತಿ ಕೊಡುವರು. ''ಜನಪದರು ಫಾರಿಕತಿ ಹರಕ್ಕೊಂಡು ಬಂದ್ಯಾ'' ಎಂದು ಕೇಳುವುದು ನೋಡಿದರೆ ಫಾರಿಕತಿ ತರುವುದಕ್ಕೆ ಹರಕ್ಕೊಂಡು ಬರುವುದು ಎಂದು ಹೇಳುತ್ತಾರೆ. ಊರ ಹೊರಗಡೆ ಇರುವ ಹನುಮಂತ ದೇವರ ಗುಡಿಯಲ್ಲಿ ಅಥವಾ ಮಠದಲ್ಲಿ ಇಲ್ಲವೆ ಹೆಣ್ಣಿನ ತವರೂರಿರುವ ದಿಕ್ಕಿನಲ್ಲಿ ಕುಳಿತು ಸೋಡ ಚೀಟಿ ಬರೆಯುವರು. ದಕ್ಷಿಣ ದಿಕ್ಕಿಗೆ ಮತ್ತು ರಾಹು ಇರುವ ದಿಕ್ಕಿಗೆ ಮುಖ ಮಾಡಿ ಕುಳಿತು ಬರೆಯುವುದಿಲ್ಲ. ಅಕ್ಷರಸ್ಥರಾಗಿದ್ದರೆ ಗಂಡ ಹೆಂಡತಿಯರ ಕೈಯಿಂದ ಬರೆಸುತ್ತಾರೆ. ಅನಕ್ಷರಸ್ಥರಾಗಿದ್ದರೆ ಬೇರೆಯವರಿಂದ ಬರೆಸುತ್ತಾರೆ. ಫಾರಿಕತಿ ಕೊಡುವುದು ಮುಗಿದ ನಂತರ ಗಂಡ. ಊರ ಮುಂದಿನ ಬಾವಿಯಲ್ಲಿ ಇಲ್ಲವೆ ಹಳ್ಳದಲ್ಲಿ ಸ್ನಾನ ಮಾಡುವನು. ಹರಿದು ತಂದ ತಾಳಿ, ಕಾಲುಂಗರ, ಮಾರುವರು ಇಲ್ಲವೆ ಬಾವಿಯಲ್ಲಿ ಎಸೆಯುವರು ಅಥವಾ ಜಂಗಮರಿಗೆ ದಾನ ಮಾಡುವರು. ಹನುಮಂತ ದೇವರಿಗೆ ಕಾಯಿ ಕರ್ಪೂರ ಮಾಡಿ, ಮನೆಗೆ ಬಂದು ಸ್ವಲ್ಪ ಬೆಲ್ಲ ತಿನ್ನುವರು. ಅಂದರೆ ಇಂದಿನಿಂದ ಇವನ ಪಾಲಿಗೆ ಹೆಂಡತಿ ಸತ್ತಂತೆ. ಹೆಣ್ಣು ತವರಿಗೆ ಹೋಗಿ ಸ್ನಾನ ಮಾಡುವಳು. ಸೋಡ ಚೀಟಿ ಬರೆದವನು, ಅವನ್ನು ಹರಿದವನು ಸ್ನಾನ ಮಾಡುವರು.

ಫಾರಿಕತಿಯಾದ ಗಂಡಿಗಾಗಲಿ, ಹೆಣ್ಣಿಗಾಗಲಿ ಸಮಾಜ ಪುರಸ್ಕರಿಸುವುದಿಲ್ಲ. ಮದುವೆ ಮುಂಜಿಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಪೂಜಾ ಸಮಾರಂಭಗಳಲ್ಲಿ, ಪವಿತ್ರ ಸ್ಥಳಗಳಲ್ಲಿ ಮತ್ತು ಮಂಗಳ ಕಾರ್ಯಕ್ರಮಗಳಲ್ಲಿ ಪ್ರವೇಶವಿಲ್ಲ. ಸಮಾಜ ಜೀವನದಿಂದ ಬಹಿಷ್ಕಾರವಿದ್ದಂತೆ.

— 3 —

ಈಗ ಫಾರಿಕತಿ ಕೊಡುವಾಗಿನ ಸಂಪೂರ್ಣ ವ್ಯವಹಾರ ಒಂದೊಂದಾಗಿ ನೋಡೋಣ. ಇದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ.

(1) ಊರಿನ ಕೆಲವು ಪ್ರಮುಖರು ಕೂಡಿ, ಗಂಡ ಹೆಂಡತಿಯರನ್ನು ವಿಚಾರಿಸಿ, ತಪ್ಪು ಯಾರ ಕಡೆಯಿದೆ ಎಂಬುದನ್ನು ನೋಡುತ್ತಾರೆ. ಮದುವೆಯಲ್ಲಿ ಮಾಡಿದ ಖರ್ಚು ಬಾಬತ್ತಿನ ಲೆಕ್ಕ ಮಾಡುತ್ತಾರೆ. ಸರಿಹೊಂದುವಷ್ಟು, ತಪ್ಪಿದ್ದವರಿಗೆ ತಪ್ಪು ದಂಡ ಕಟ್ಟುತ್ತಾರೆ. ದಂಡದ ಹಣ ಕೊಟ್ಟ ನಂತರ ಸೋಡ ಚೀಟಿ ಬರೆದು ಆ ಊರಿನ ಪದ್ಧತಿಯಂತೆ ಮನೆಯಲ್ಲಿ, ಮನೆಯ ಕಟ್ಟೆಯ ಮೇಲೆ ಇಲ್ಲವೆ ಊರ ಗೌಡನ ಮನೆಯಲ್ಲಿ ಕುಳಿತು ಸೋಡ ಚೀಟಿ ಬರೆಯುವರು. ಇದರಲ್ಲಿ ಗಂಡ ಹೆಂಡತಿಯರು ತಂದೆ ಮತ್ತು ಊರ ಪ್ರಮುಖರು ಸಹಿ ಮಾಡುವರು. ನಂತರ ಹೆಣ್ಣುಮಗಳು ತಾಳಿ ಕಡಿದು ಕೊಡುವಳು. ಗಂಡನಿಗೆ ಒಂದು ಹೆಂಡತಿಗೆ ಒಂದು ಚೀಟಿ ಕೊಡುವರು. ಇದು ಅತಿ ಸರಳ ಪದ್ಧತಿ.

(2) ಪಂಚಾಯತಿ ಮಾಡಿ ಮುಗಿಸಿ, ತಪ್ಪು ದಂಡ ಬಂದ ನಂತರ, ಊರ ಅಗಸಿ ಬಾಗಿಲಿನ ಹೊರಗಡೆ ಒಂದು ಕಡೆ ಕುಳಿತುಕೊಂಡು, ಗಂಡ ಹೆಂಡತಿಯರ ಸಮ್ಮುಖದಲ್ಲಿ ಜಂಗಮ ಇಲ್ಲವೆ ವಿಧುರ ಸೋಡ ಚೀಟಿ ಬರೆಯುವನು. ಗಂಡನ ಮುಖ ಊರ ಕಡೆಯಾಗುವಂತೆ, ಗಂಡ ಹೆಂಡತಿಯರನ್ನು ಎದುರು ಬದುರಾಗಿ ನಿಲ್ಲಿಸುವನು. ಹೆಂಡತಿ ಕೈ ಬಳೆ ಒಡೆದುಕೊಂಡು, ಕುಂಕುಮ ಅಳಿಸಿಕೊಂಡು, ಕಾಲುಂಗುರ ಮತ್ತು ಕೊರಳಿನ ತಾಳಿ ಕಡಿದು ಕೈಯಲ್ಲಿ ಹಿಡಿಯುವಳು. ಗಂಡ ರಸ್ತೆಯಲ್ಲಿಯ ಮೂರು ಹಿಡಿ ಇಲ್ಲವೆ ಬೊಗಸೆ ಮಣ್ಣು ತೆಗೆದುಕೊಂಡು ಹೆಂಡತಿ ತಲೆಯ ಮೇಲೆ ತೂರುವನು. ಹೆಂಡತಿ ಕಾಲುಂಗುರ ಮತ್ತು ತಾಳಿ ಗಂಡನಿಗೆ ಕೊಡುವಳು; ಇದಾದ ಮೇಲೆ ಜಂಗಮ ಗಂಡನಿಗೊಂದು, ಹೆಂಡತಿಗೊಂದು ಚೀಟಿ ಕೊಡುವನು. ಗಂಡ ಸ್ನಾನ ಮಾಡಿ ಮನೆಗೆ ಹೋಗುವನು. ಹೆಂಡತಿ ತವರು ಮನೆಗೆ ಹೋಗುವಳು. ಸೋಡ ಚೀಟಿ ಬರೆದ ನಂತರ ಪೆನ್ನಿನ ಪತ್ತಿ ಮುರಿದು ಹಾಕುವನು. ಇಲ್ಲವೆ ಅದನ್ನು ಅಲ್ಲೆ ಬಿಸಾಕಿ ಬರುವನು.

(3) ಫಾರಿಕತಿ ಕೊಡುವುದು ಮತ್ತು ಸೋಡ ಚೀಟಿ ಬರೆಯುವುದು ಪಾಪದ ಕೆಲಸವೆಂದು ನಂಬಿಕೆಯಿದ್ದ ಬಹಳಷ್ಟು ಜನ ಇವರ ಗೋಜಿಗೆ ಹೋಗುವುದಿಲ್ಲ.

ಸಂಬಂಧ ಕಡಿದು ದಂಡದ ಹಣವನ್ನು ಕಯ್ಯಾರೆ ತೆಗೆದುಕೊಳ್ಳಲು ಯಾರು ಒಪ್ಪುವು ದಿಲ್ಲ. ಅಲ್ಲದೆ ಸೋಡ ಚೀಟಿಯ ಮೇಲೆ ಸಹಿ ಮಾಡಲು ಹಿರಿಯರು ನಿರಾಕರಿ ಸುವರು. ಇಂಥ ಸಮಯದಲ್ಲಿ ಊರ ಮಧ್ಯಸ್ಥಿಕೆ ಇಲ್ಲದೆ ಗಂಡ ಹೆಂಡತಿಯರ ಕೈಯಿಂದ ಬಗೆಹರಿಸುವರು. ಊರ ಹೊರಗಡೆ ಬಯಲಿನಲ್ಲಿ ಗಂಡ ದಂಡದ ಹಣ ಕೈಯಲ್ಲಿ ಹಿಡಿದುಕೊಂಡು ನಿಲ್ಲುವನು; ಅವನ ಮುಂದೆ ಹೆಂಡತಿ ಮುಡಿ ಬಿಚ್ಚಿ ಕೊಂಡು, ಬಳೆ ಒಡೆದುಕೊಂಡು ಕುಂಕುಮ ಅಳುಕಿಸಿಕೊಂಡು, ತಾಳಿ ಮತ್ತು ಕಾಲುಂಗುರ ತೆಗೆದುಕೊಂಡು ಕೈಯಲ್ಲಿ ಹಿಡಿದು ನಿಲ್ಲುವಳು. ಗಂಡ ಹಣ ಅವಳ ಉಡಿಯಲ್ಲಿ ಹಾಕುವನು. ಅವಳು ತಾಳಿ, ಕಾಲುಂಗರ ಗಂಡನಿಗೆ ಕೊಡುವಳು. ನಂತರ ಒಬ್ಬರಿಗೊಬ್ಬರು ಮುಖ ನೋಡದೆ ಹೋಗುವರು. ಇಂಥ ಪ್ರಸಂಗದಲ್ಲಿ ಸೋಡ ಚೀಟಿ ಬರೆಯುವುದಿಲ್ಲ. ಇದೇ ಫಾರಿಕತಿ. ಪಂಚಾಯತಿ ಮಾಡಿದ ನಾಲ್ಕು ಜನರೇ ಸಾಕ್ಷಿ.

(4) ಸಂಬಂಧ ಮುರಿದು ಕೊಡುವ–ಕೊಳ್ಳುವ ಕೆಲಸ ಮುಗಿಸಿ ಹೆಣ್ಣಿನ ಕಡೆ ಪಂಚಾಯತಿಗೆ ಬಂದ ಹಿರಿಯರು ಗಂಡ ಹೆಂಡತಿ, ಸೋಡ ಚೀಟಿ ಬರೆಯುವವ ಮತ್ತು ಅದನ್ನು ಹರಿಯುವವ ಇವರೆಲ್ಲರೂ ಕೂಡಿ ಗಂಡುವಾರಗಳಾದ ಬುಧವಾರ ಇಲ್ಲವೆ ಶನಿವಾರ ದಿವಸ ಮಾತ್ರ ಪಶ್ಚಿಮ ದಿಕ್ಕಿನಲ್ಲಿ, ಸಾಯಂಕಾಲ ಸಮಯದಲ್ಲಿ, ಊರಿನ ಸೀಮೆಗೆ ಬರುವರು. ಜತೆಗೆ ಬಂದ ಜನರು ದೂರ ಇರುವರು. ಗಂಡ ಹೆಂಡತಿಯ ತಲೆಯ ಮೇಲಿನ ನಾಲ್ಕೈದು ಕೂದಲುಗಳನ್ನು ಕಿತ್ತುವನು, ಬಳೆ ಒಡೆದು, ಸೀರೆಯ ಸೆರಗು ಹರಿದು ಸ್ವಲ್ಪ ಬಟ್ಟೆಯನ್ನು ತೆಗೆದುಕೊಳ್ಳುವನು. ಸೀಮೆಯ ಮಣ್ಣನ್ನು ತಲೆಯ ಮೇಲೆ ತೂರಿ, ಎಡಗೈ ಕಿರುಬೆರಳಿನಿಂದ ಕುಂಕುಮ ಅಳುಕಿಸಿ ಹೆಂಡಿ (ಸೆಗಣಿ) ಹಚ್ಚುವನು. ನಂತರ ಕೊರಳಲ್ಲಿನ ತಾಳಿಯನ್ನು ಕಡಿದು ಹಾಕುವನು. ಇದಾದ ನಂತರ ಜಂಗಮನು ತನ್ನ ಮಾಮೂಲು ಪಡೆದು ಎರಡು ಸೋಡ ಚೀಟಿಗಳನ್ನು ಬರೆಯುವನು. ಅವನು ಹರಿಯುವವನ ಕೈಯಲ್ಲಿ ಕೊಡು ವನು. ಇಲ್ಲಿ ಒಂದು ವಿಚಿತ್ರ ಪದ್ಧತಿಯಿದೆ. ಚೀಟಿ ಬರೆಯುವವನು ಮತ್ತು ಹರಿಯುವವನು ಬೆನ್ನಿಗೆ ಬೆನ್ನು ಹಚ್ಚಿ ಕುಳಿತುಕೊಳ್ಳುವರು. ಚೀಟಿ ಬರೆದವನು ಚೀಟಿಯನ್ನು ಎಡಗೈಯಲ್ಲಿ ಹಿಡಿದು, ಕೈಯನ್ನು ಬೆನ್ನ ಹಿಂದೆ ಮಾಡಿಕೊಡುವನು. ಅದರಂತೆ ಚೀಟಿ ಹರಿಯುವವನು, ತನ್ನ ಎಡಗೈಯನ್ನು ಬೆನ್ನ ಹಿಂದೆ ಒಯ್ದು ಹಿಂದಿನಿಂದಲೆ ತೆಗೆದುಕೊಂಡು ಅದರ ತಲೆಯಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಹರಿಯುವನು. ಚೀಟಿ ಕೊಡುವುದು ಮತ್ತು ತೆಗೆದುಕೊಳ್ಳುವುದು ನೋಡಬಾರದು. ಒಂದೊಂದು ಕಡೆ ಚೀಟಿಗೆ ಬದಲಾಗಿ ಒಂದು ಕಡ್ಡಿಯನ್ನು ತೆಗೆದುಕೊಂಡು ಮುರಿದು ಹಾಕುವರು. ಗಂಡನಿಗೊಂದು ಹೆಂಡತಿಗೊಂದು ಚೀಟಿ ಕೊಡುವರು. ಹೆಂಡತಿ ತವರೂರಿಗೆ, ಗಂಡ ತನ್ನ ಮನೆಗೆ ಹೋಗುವರು. ಕೂದಲು, ಸೀರೆ ತುಂಡು, ತಾಳಿ,

ಬಳಿಚೂರು ತಂದು ಊರ ಮುಂದಿನ ಬಾವಿಯಲ್ಲಿ ಅಥವಾ ಹಳ್ಳದಲ್ಲಿ ಒಗೆದು ಮೈಮೇಲಿನ ಬಟ್ಟೆ ಸಹಿತ ಸ್ನಾನ ಮಾಡುವನು. ಮನೆಗೆ ಹೋಗಿ ಬಟ್ಟೆ ಬದಲಾಯಿಸಿ ಒಂದು ಚೂರು ಬೆಲ್ಲ ತಿಂದು ನೀರು ಕುಡಿಯುವನು. ಅಂದರೆ ಶವಸಂಸ್ಕಾರ ಮಾಡಿದಾಗ ಮಾಡುವಂತೆ ಮಾಡುವರು. ನಂತರ ಹನುಮಂತ ದೇವರಿಗೆ ಹೋಗಿ ಕಾಯಿ ಕರ್ಪೂರ ಸಲ್ಲಿಸಿ ಬರುವರು. ಜನಪದರು ಇದನ್ನೆಲ್ಲವನ್ನು ಕಟ್ಟುನಿಟ್ಟಾಗಿ ಆಚರಿಸುವರು. ಇಷ್ಟೆಲ್ಲ ಮಾಡುವರಿಗೆ ಅವನಿಗೆ ಯಾರು ಮಾತನಾಡಿಸುವುದಿಲ್ಲ. ಹೆಣ್ಣಿನವರು ಘಾರಿಕತಿ ಕೇಳಿದರೆ ಈ ರೀತಿ ಮಾಡುವರು. ಆದರೆ ಗಂಡಿನವರು ಕೇಳಿದರೆ ಮಾಡುವುದಿಲ್ಲ. ಸೋಡ ಚೀಟಿ ಬರೆದವನು, ಹರಿದವನು ಸ್ನಾನ ಮಾಡುವರು.

ಹೆಂಡತಿ ಗುಣಪಡಿಸಲಾರದ ರೋಗದಿಂದ ಬಳಲುತ್ತಿದ್ದರೆ, ಮಕ್ಕಳಾಗದಿದ್ದರೆ, ವಂಶಾಭಿವೃದ್ಧಿಗೆ ಮಕ್ಕಳಾಗದಿದ್ದರೆ ಮರು ಮದುವೆಗೆ ಸಮಾಜವು ಒಪ್ಪಿಗೆ ನೀಡುವುದು. ಇಂಥ ಸಮಯದಲ್ಲಿ ಹೆಂಡತಿಯೆ ಮುಂದಾಗಿ ಗಂಡನಿಗೆ ಮರು ಮದುವೆ ಮಾಡುವಳು. ಇಂಥ ಪ್ರಸಂಗಗಳಲ್ಲಿ ಸೋಡ ಚೀಟಿ ಬರೆಯುವ ಅವಶ್ಯಕತೆ ಬೀಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಸೋಡ ಚೀಟಿ ಬರೆಯುವುದಿಲ್ಲ. ಪಾಪದ ಕೆಲಸವೆಂಬ ನಂಬಿಕೆ ಇರುವುದರಿಂದ, ಯಾರು ಬರೆಯಲು ಸಿದ್ಧರಿರುವುದಿಲ್ಲ. ಆಗ ಪಂಚಾಯತಿ ಮಾಡಿದ ಪಂಚರ ಮಾತೇ ಸಾಕ್ಷಿ. ಇದನ್ನು ಮೀರಿ ಯಾರೂ ನಡೆಯುವುದಿಲ್ಲ. ಇಲ್ಲಿ ನಾವು ಗಮನಿಸಬೇಕಾದ ವಿಷಯುವೆಂದರೆ, ಜನಪದರ ಸಾಮೂಹಿಕ–ಬದುಕು, ಸಾಂಘಿಕ ಜೀವನ, ವ್ಯಕ್ತಿಯ ಅಪರಾಧಿ ಮನೋಭಾವ ನಿಯಂತ್ರಿಸುವ ರೀತಿ. ಅಪರಾಧಿ ಮನೋಭಾವ ಹತ್ತಿಕ್ಕಲು ಕಾನೂನು ಮತ್ತು ಲಿಖಿತ ದಾಖಲೆಗಳಿಗಿಂತ ಹೆಚ್ಚಾಗಿ ಜನಪದ ಸಾಂಘಿಕ ಜೀವನದ ವ್ಯವಸ್ಥೆ ಮಾಡಿದೆ.

ಗ್ರಂಥಋಣ :

1. ಭಾರತೀಯ ಸಾಮಾಜಿಕ ಸಂಸ್ಥೆಗಳು : ಎಂ ನಂಜಮ್ಮಣ್ಣಿ. ಕ. ಅ. ಸ. ಮೈಸೂರು ವಿಶ್ವವಿದ್ಯಾಲಯ, 1976.
2. ಹಿಂದೂ ವಿವಾಹ ಶಾಸನ: ಎಚ್. ಗಂಗಾಧರನ್, ಗೃಹ ಸರಸ್ವತಿ ಗ್ರಂಥಮಾಲೆ.
3. ಸಾಮಾಜಿಕ ಚಿಂತನೆ ಇತಿಹಾಸ, ಎ. ಆರ್. ಕಟ್ಟಿ. ವಿದ್ಯಾನಿಧಿ ಪ್ರಕಾಶನ, ಗದಗ.
4. ಮನುಸ್ಮೃತಿ, ಅನುವಾದಕರು : ಚಕ್ರಕೋಟಿ ಈಶ್ವರ ಶಾಸ್ತ್ರಿ. ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ-1.
5. ದಿವ್ಯ ಕುರಾನ್: ಅನುವಾದಕರು. ದಿವ್ಯ ಕುರಾನ್ ಅನುವಾದಕ ಮಂಡಳಿ, 1978. ಇಲ್ಲಾಮಿಾ ಸಾಹಿತ್ಯ ಪ್ರಕಾಶನ, 63, ಮೋತಿನಗರ, ಬೆಂಗಳೂರು.
6. ಸುಧಾ ಯುಗಾದಿ, 1982.
7. ಭಾರತೀಯ ಸಾಮಾಜಿಕ ಅಧ್ಯಯನ : ಪ್ರೊ॥ ಬಿ. ಆರ್. ಕೃಷ್ಣ. ವಿದ್ಯಾನಿಧಿ ಪ್ರಕಾಶನ, ಗದಗ, 1981.

ಕಾರ್ನಾಡರ "ತುಘಲಕ"—ಒಂದು ವಿವೇಚನೆ

ದಿವಸ್ಪತಿ ಹೆಗಡೆ

ಗಿರೀಶ ಕಾರ್ನಾಡರ 'ತುಘಲಕ'ದ ಕುರಿತಾಗಿ ಮುಖ್ಯವಾಗಿ ಎರಡು ಅಭಿಪ್ರಾಯಗಳು ನಮ್ಮ ಗಮನ ಸೆಳೆಯುತ್ತವೆ. ಮೊದಲನೆಯದಾಗಿ, ಇದು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡದಲ್ಲಿ ಬಂದ ನಾಟಕಗಳಲ್ಲಿ ಅತಿ ಪ್ರಮುಖವಾದದ್ದು, ಸಾಹಿತ್ಯಿಕ ಮೌಲ್ಯದಿಂದ ಕೂಡಿದ್ದು, ಹಾಗೂ ಎಲ್ಲ ರೀತಿಯಿಂದ ಒಂದು ಮೈಲುಗಲ್ಲು ಎಂಬುದು. ಎರಡನೆಯದಾಗಿ ಇದು ಪೂರ್ತಿಯಾಗಿ ಎರವಲು ಕೃತಿ, ತುಘಲಕನ ವೇಷದಲ್ಲಿ ಕಾಫ್ಕನ 'ಕಾಲಿಗುಲ'ನನ್ನು ಭಟ್ಟಿಯಿಳಿಸಿದ್ದು, ಭಾಷೆಯು ಬಿಗುವಿಲ್ಲದ, ಅನವಶ್ಯಕ ಹೊಗಳಲ್ಪಟ್ಟ ಒಂದು ಸಾಮಾನ್ಯ ನಾಟಕ ಎಂಬುದು. ಪರಸ್ಪರ ಪೂರ್ತಿ ವಿರೋಧಿಯಾದ ಎರಡೂ ಅಭಿಪ್ರಾಯಗಳು ಹೊಂದಿಕೊಳ್ಳಲಾರವು. ಇದರಲ್ಲಿ ಯಾವುದು ಸರಿ ಎಂದು ಕೆದಕಿದಾಗ ನನಗೆ ಹೆಚ್ಚಾಗಿ ಕಂಡಿದ್ದು ಎರಡನೆಯ ಅಭಿಪ್ರಾಯದಲ್ಲಿನ ದೋಷಗಳೇ. ತುಘಲಕ ನಾಟಕದ ಬಗ್ಗೆ ಇಂತಹ ಅಭಿಪ್ರಾಯ ಬರಲು ಬಹುಶಃ ಇತಿಹಾಸದ ತುಘಲಕನ ಬಗ್ಗೆ ಬಹು ಜನರಿಗಿರುವ ಅರೆಜ್ಞಾನ ಅಥವಾ ತಪ್ಪು ಕಲ್ಪನೆಯೇ ಕಾರಣವೆಂದು ನನ್ನ ಭಾವನೆ.

ಸುಮಾರು ಮೂವತ್ತು ವರ್ಷಗಳ ಹಿಂದೆ ಭಾರತದ ಇತಿಹಾಸ ಓದಿದ ವಿದ್ಯಾರ್ಥಿಗೆ ತುಘಲಕನ ಬಗ್ಗೆ ಗೊತ್ತಿರುವ ಮುಖ್ಯ ಅಂಶಗಳೆಂದರೆ ಅವನು ತನ್ನ ರಾಜಧಾನಿಯನ್ನು ಕಾರಣವಿಲ್ಲದೆ ದಿಲ್ಲಿಯಿಂದ ದೌಲತ್ತಾಬಾದಿಗೆ, ಮತ್ತೆ ದೌಲತ್ತಾಬಾದಿನಿಂದ ದೆಹಲಿಗೆ ಬದಲಾಯಿಸಿದ ಹುಚ್ಚ, ಬಂಗಾರದ ನಾಣ್ಯಗಳ ಬದಲು ಚರ್ಮದ ನಾಣ್ಯಗಳನ್ನು ಬಳಕೆಯಲ್ಲಿ ತಂದ ಮೂರ್ಖ ಎಂಬುದು ಮಾತ್ರ. ಅದನ್ನೇ 'ತುಘಲಕನ ದರಬಾರು' ಎಂದು ಆಡಿಕೊಳ್ಳುತ್ತೇವೆ. ಅಂದಿನ ಇತಿಹಾಸ ಪುಸ್ತಕಗಳೂ ಅದನ್ನೇ ಹೇಳಿವೆ.

ಈ ಹುಚ್ಚ ಮಹಮ್ಮದನಿಗೂ ಕಾರ್ನಾಡರ ತುಘಲಕನಿಗೂ ಬಹಳ ಅಂತರವಿದೆ. ನಾಟಕದ ಮಹಮ್ಮದ ಮಹಾ ಮೇಧಾವಿ, ತನ್ನ ಕಾಲಕ್ಕೆ ಮೀರಿದ ವಿಚಾರಗಳನ್ನು ಬಿಂಬಿಸಲು, ಬದುಕಲು ಯತ್ನಿಸಿದ ಸಾಹಸಿ, ಯತ್ನಿಸಿ ಸೋತು ಹತಾಶನಾದವ, ಬದುಕಿನ–ರಾಜತ್ವದ–ಅಧಿಕಾರದ–ಆದರ್ಶದ–ಧರ್ಮದ ಅರ್ಥ ತಿಳಿಯಲು–ತಿಳಿಸಲು ಹೋರಾಡಿ ಸೋತ ಮಹಾನಾಯಕನಾಗಿದ್ದಾನೆ. ಹಾಗಾಗಿ ಈ ದುರಂತ ನಾಯಕ ಇತಿಹಾಸದ ತುಘಲಕನಿಂದ ಬೇರೆ ಎಂಬ ಸಂಶಯಕ್ಕೆ ಎಡೆಯಾಗಿ ಈ ನಾಯಕನಿಗೆ

ರೂಪದರ್ಶಿಯನ್ನು ಹುಡುಕಹೋದವರಿಗೆ 'ಕಾಲಿಗುಲ' ಸುಲಭದ ಉತ್ತರವಾಗಿ ಬಂದಂತೆ ಕಾಣುತ್ತದೆ.

ಕಾರ್ನಾಡರು ಏನನ್ನು ಎಲ್ಲಿಂದ ಎರವಲು ಪಡೆದಿರಬಹುದು ಎಂಬುದನ್ನು ನಿರ್ಣಯಿಸುವ ಮೊದಲು ಅವರಿಗೆ ದೊರೆತ ಮೂಲವಸ್ತು ಯಾವುದು ಎನ್ನುವದನ್ನು ವಿವೇಚಿಸುವದು ಅನಿವಾರ್ಯವಾಗುತ್ತದೆ. ಇದಕ್ಕೆ ಸೂಚನೆ ಸಿಗುವದು 1967ರ ಫೆಬ್ರುವರಿ 15 ಸಂಕ್ರಮಣ (16) ಸಂಚಿಕೆಯಲ್ಲಿ ಸುಮತೀಂದ್ರ ನಾಡಿಗರು ಗಿರೀಶ ಕಾರ್ನಾಡರೊಡನೆ ನಡೆಸಿದ ಸಂದರ್ಶನದಲ್ಲಿ.

ಕಾರ್ನಾಡರು ಹೇಳುವಂತೆ ಈ ನಾಟಕಕ್ಕೆ ಪೂರ್ವತಯಾರಿಯಾಗಿ ಅವರು ಅಭ್ಯಾಸ ಮಾಡಿದ್ದು The History of Qarauna Turks ಎಂಬ ಈಶ್ವರೀ ಪ್ರಸಾದರ ಪುಸ್ತಕ, The Cambridge History of India, ತುಘಲಕನ ಆಸ್ಥಾನದಲ್ಲಿದ್ದ ಬರನಿಯ ಬರಹಗಳ, ಪ್ರವಾಸಿಯಾಗಿ ಬಂದ ಇಬ್ನ ಬತೂತನ ಪ್ರವಾಸಿ ಲೇಖನಗಳು ಅಲ್ಲದೆ ಇಸ್ಲಾಮ ಧರ್ಮದ ಮೇಲೆ ಹಲವಾರು ಗ್ರಂಥಗಳು. ಮೇಲೆ ಅವರು ಹೆಸರಿಸಿದ ಗ್ರಂಥ ಯಾ ಲೇಖನಗಳಿಂದ ತುಘಲಕನ ಬಗ್ಗೆ ದೊರೆಯುವ ಮೂಲವಸ್ತುಗಳಿಷ್ಟು:

ಮಹಮ್ಮದ್ ಬಿನ್ ತುಘಲಕ 1325 ರಿಂದ 27 ವರ್ಷಗಳ ಕಾಲ ದೆಹಲಿಯ ಸುಲ್ತಾನನಾಗಿದ್ದ.(ನಾಟಕದಲ್ಲಿ ಐದು ವರ್ಷಗಳ ಅವಧಿ ಮಾತ್ರ ಬರುತ್ತದೆ). ಬರನಿ ಒಬ್ಬ ತತ್ವಜ್ಞಾನಿ, ಇತಿಹಾಸಕಾರ. ಆಸ್ಥಾನದಲ್ಲಿ 17 ವರ್ಷಗಳ ಕಾಲ ಇದ್ದ. ಇಬ್ನ ಬತೂತ ಒಬ್ಬ ಪ್ರವಾಸಿಯಾಗಿ ಬಂದರೂ ಹಲವಾರು ವರ್ಷಗಳ ಕಾಲ ತುಘಲಕನ ರಾಜ್ಯದಲ್ಲಿ ಸಂಚರಿಸಿ ತಾನು ಕಂಡದ್ದನ್ನು ಕೇಳಿದ್ದನ್ನು ಲೇಖಿಸಿದ.

ತುಘಲಕ ಸ್ವತಃ ಪಂಡಿತ, ಕಾವ್ಯಪ್ರೇಮಿ, ಪರ್ಶಿಯನ್ ಕಾವ್ಯಗಳನ್ನು ಓದಿದ್ದ, ಅವರ ಮುಸಾಮುಷ್ಟೋ ಎನ್ನುವಂತೆ ತನ್ನ ಮಾತುಗಳಲ್ಲಿ ಉಪಮಾನ, ಉಪಮೆ ಇನ್ನಿತರ ಅಲಂಕಾರಗಳನ್ನು ಬಳಸುವದನ್ನು ಅಭ್ಯಾಸ ಮಾಡಿಕೊಂಡಿದ್ದ. ತರ್ಕ, ತತ್ವಜ್ಞಾನ, ಗಣಿತ, ಖಗೋಳಶಾಸ್ತ್ರ ಹಾಗೂ ಇತರ ಭೌತಿಕ ವಿಜ್ಞಾನ ವಿಷಯಗಳಲ್ಲಿ ಅವನಿಗೆ ಅಪಾರ ಪರಿಶ್ರಮವಿತ್ತು. ಧಾರ್ಮಿಕ ವಿಷಯಗಳನ್ನೂ ಅವನು ಆಳವಾಗಿ ಅಭ್ಯಾಸ ಮಾಡಿದ್ದ. ಕುರಾನದ ಶ್ಲೋಕಗಳನ್ನು ಕಂಠಪಾಠ ಹೇಳಬಲ್ಲ. ಪ್ರಾರ್ಥನೆಯ ನಿಯಮಗಳನ್ನು ತಾನೂ ಪಾಲಿಸುವದಲ್ಲದೆ ಇತರರೂ ಪಾಲಿಸಬೇಕೆಂದು ಅಧಿಕಾರದಿಂದ ಒತ್ತಾಯಿಸುತ್ತಿದ್ದ. ಇಸ್ಲಾಂ ಧರ್ಮದ ಅಭಿಮಾನಿಯಾದರೂ ಪರಧರ್ಮ ಸಹಿಷ್ಣು. ಆದರೆ ಅವನ ಸ್ವಾಭಿಮಾನ ಎಷ್ಟಿತ್ತೆಂದರೆ ತಾನು ಸರಿಯೆಂದು ತಿಳಿದುದರ ವಿರುದ್ಧ ಆಡಿದರೆ ಧರ್ಮಗುರುಗಳನ್ನೂ ಲೆಕ್ಕಿಸುತ್ತಿರಲಿಲ್ಲ. ಇದರಿಂದಾಗಿ ಧರ್ಮಗುರುಗಳ ಅವಕೃಪೆಗೆ ಪಾತ್ರನಾದ.

ಧರ್ಮಗುರುಗಳು ಆಡಳಿತದಲ್ಲಿ ಕೈಹಾಕುವದನ್ನು ಸಹಿಸುತ್ತಿರಲಿಲ್ಲ. ಆಗೆಲ್ಲ ಅರಸನೂ ಹೌದು ಪ್ರವಾದಿಯೂ ಹೌದು ಎನ್ನುವಂತೆ ವರ್ತಿಸುತ್ತಿದ್ದ.

ಅವನಿಗೆ ತನ್ನ ನ್ಯಾಯ ನಿಷ್ಠುರತೆಯನ್ನು ಹಿಂದೂ ಸಹಿಷ್ಣುತೆಯನ್ನು ತೋರಿಸುವದರಲ್ಲಿ ಆಸಕ್ತಿ ಬಲವಾಗಿತ್ತು. ಅದಕ್ಕೆ ಇಬ್ನ ಬತೂತ ಕೊಡುವ ಎರಡು ಉದಾಹರಣೆಗಳು : 1) ತನ್ನ ಸಹೋದರನನ್ನು ಸುಲ್ತಾನ ಅನ್ಯಾಯವಾಗಿ ಕೊಲ್ಲಿಸಿದನೆಂದು ಹಿಂದುವೊಬ್ಬ ಖಾಜಿಯ ಹತ್ತಿರ ದೂರು ಒಯ್ದಾಗ ತುಘಲಕ್ ಸ್ವತಃ ನಿಃಶಸ್ತ್ರನಾಗಿ ಆರೋಪಿಯ ಸ್ಥಾನದಲ್ಲಿ ನಿಂತು ನ್ಯಾಯ ನಿರ್ಣಯದಂತೆ ಆ ಹಿಂದುವಿಗೆ ಪರಿಹಾರ ಕೊಟ್ಟ. 2) ತನ್ನ ಆಸ್ತಿಯನ್ನು ಅನ್ಯಾಯವಾಗಿ ಅರಸ ಇಟ್ಟುಕೊಂಡಿದ್ದಾನೆಂದು ಮುಸ್ಲಿಮನೊಬ್ಬ ಖಾಜಿಗೆ ದೂರಿದಾಗ ನ್ಯಾಯಿ ಸುಲ್ತಾನ ಆ ಆಸ್ತಿಯನ್ನು ಅವನಿಗೆ ಹಿಂದಿರುಗಿಸಿದ.

ತುಘಲಕನಿಗೆ ವಿಶೇಷವಾದ ಸ್ವಂತಿಕೆಯಿತ್ತು. ಸಮಸ್ಯೆಗಳನ್ನು ನಿವಾರಿಸುವಲ್ಲಿ, ಬಿಡಿಸುವಲ್ಲಿ ಅವನು ಇತರರು ತುಳಿದ ದಾರಿಯನ್ನು ಬಿಟ್ಟು ತನ್ನದೇ ಪರಿಹಾರ ಹುಡುಕುತ್ತಿದ್ದ.

ಉತ್ತರದ ಕಣಿವೆಯ ದಾರಿಗಳಿಂದ ಆಗಾಗ ನಡೆಯುವ ದಾಳಿಗಳಿಂದ ಸುರಕ್ಷಿತವಾಗಿಡಲು ಹಾಗೂ ರಾಜ್ಯದ ಕೇಂದ್ರಸ್ಥಾನದಲ್ಲಿದ್ದು ಆಡಳಿತದ ಮೇಲೆ ಬಿಗಿಯಿಡಲು ಅವನು ರಾಜಧಾನಿಯನ್ನು ದೌಲತ್ತಾಬಾದಿಗೆ ವರ್ಗಾಯಿಸಿದ. [ಅಲ್ಲಿಯವರೆಗೂ ಉತ್ತರ ಭಾರತ ಮುಸ್ಲಿಂ ಆಡಳಿತಕ್ಕೆ ಒಳಗಾದಂತೆ ದಕ್ಷಿಣ ಭಾರತ ಒಳಗಾಗಿರಲಿಲ್ಲ. ಅಲ್ಲಿಯೂ ಹಿಡಿತ ಸಾಧಿಸಬೇಕಾದರೆ ದಕ್ಷಿಣದಲ್ಲಿ ಹಿಂದುಗಳ ಮಧ್ಯೆ ಮುಸ್ಲಿಂ ಬಾಹುಲ್ಯದ ರಾಜಧಾನಿ ಸ್ಥಾಪಿಸಬೇಕು ಎಂಬುದು ಅವನ ಒಳ ಉದ್ದೇಶವಿರಲೂ ಸಾಕು, ಆದರೆ ಅದನ್ನು ಅವನು ಬಹಿರಂಗವಾಗಿ ಹೇಳುವಂತಿರಲಿಲ್ಲ ಎಂದು ಈಶ್ವರೀ ಪ್ರಸಾದ ಅಭಿಪ್ರಾಯಪಡುತ್ತಾರೆ] ಅವನ ನಿರ್ಣಯವನ್ನು ವ್ಯಾಪಾರಿಗಳು, ಶ್ರೀಮಂತರು, ಆಸ್ಥಾನದ ಅಮೀರರು ಒಪ್ಪಲಿಲ್ಲ. ಜನರನ್ನು ಎತ್ತಿಕಟ್ಟಿದರು. ಜನ ರಾತ್ರಿಯ ಹೊತ್ತು ಅನಾಮಧೇಯ ಪತ್ರಗಳನ್ನು ಅರಮನೆಯೊಳಗೆ ತೂರಿ ಬರುತ್ತಿದ್ದರು. ಅವೆಲ್ಲ ಸುಲ್ತಾನನನ್ನು ಹೀನಾಯವಾಗಿ ಬಯ್ದವುಗಳೇ ಇರುತ್ತಿದ್ದವು. ಇದರಿಂದ ಸಿಟ್ಟಿಗೆದ್ದ ಸುಲ್ತಾನ ಎಲ್ಲರೂ ದೌಲತ್ತಾಬಾದಿಗೆ ಹೋಗಲೇಬೇಕೆಂದು ಕಟ್ಟಾಜ್ಞೆ ಮಾಡಿದ. ಒಂದು ಮನೆಯಿಂದಲೂ ಹೊಗೆಯಾಡಬಾರದು, ಒಂದು ಬೆಕ್ಕುನಾಯಿಯೂ ಉಳಿಯಬಾರದು ಎಂದು ಸಾರಿದ.

ತುಘಲಕನ ಜೊತೆ ಅವನ ತಾಯಿಯೂ ದೌಲತಾಬಾದಿಗೆ ಹೋದಳು. ದಾರಿಯಲ್ಲಿ ಹಲವರು ಮೃತಪಟ್ಟರು. ಅಧಿಕಾರಿಗಳು ಅರಸನ ಹೆಸರಿನಲ್ಲಿ ಜನರನ್ನು ಪೀಡಿಸಿ ಹಣ ಮಾಡಿದರು. ದೌಲತಾಬಾದಿನಲ್ಲಿಯೂ ಅವನಿಗೆ ತನ್ನ ಉದ್ದೇಶಕ್ಕೆ

ಪ್ರತಿಕೂಲವಾದ ವಾತಾವರಣವೇ ನಿರ್ಮಾಣವಾದುದ್ದು ಅರಿವಾದಾಗ ಮತ್ತೆ ರಾಜಧಾನಿಯನ್ನು ದೆಹಲಿಗೆ ತಂದ.

ಅವನ ಆಡಳಿತಾವಧಿಯಲ್ಲಿ ಬಂಡಾಯ, ಬರಗಾಲಗಳು ಒಂದಿಲ್ಲೊಂದು ಕಡೆ ಇದ್ದೇ ಇರುತ್ತಿದ್ದವು. ಅಯಿನೇ ಉಲ್ಮುಲ್ಕ ಜಿದ್ದದ ಆಡಳಿತಗಾರನಾಗಿದ್ದ. ಅಲ್ಲವನು ಜನಪ್ರಿಯನೂ ಆಗಿದ್ದ. ದಕ್ಷಿಣದ ಬಂಡಾಯವನ್ನಡಗಿಸಲು ಅವನನ್ನು ಅಲ್ಲಿಗೆ ಕಳಿಸಲು ಸುಲ್ತಾನ ನಿರ್ಣಯಿಸಿದಾಗ ತಾನು ಗಳಿಸಿದ ಜನಪ್ರಿಯತೆಗೆ ಸುಲ್ತಾನ ಹೆದರಿದನೆಂದು ತಿಳಿದು ಅವನು ತಿರುಗಿ ಬಿದ್ದ. ಅವನ ಬಂಡಡಗಿಸಿ ಅವನನ್ನು ಹಿಡಿಸಿ ತರಿಸಿ ಸುಲ್ತಾನನ ತೋಟದ ಮಾಲಿಯನ್ನಾಗಿ ನಿಯಮಿಸಿದ.

ಆರ್ಥಿಕ ತಜ್ಞನೂ ಆಗಿದ್ದ ಆತ ರಾಜ್ಯದಲ್ಲಿ ಬೆಳ್ಳಿ–ಬಂಗಾರದ ನಾಣ್ಯಗಳ ಜೊತೆಗೆ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದ. ಚೀನ ಹಾಗೂ ಪರ್ಷಿಯಂಗಳಲ್ಲಿ ಅಂತಹ ಪ್ರಯೋಗ ಮೂರು–ನಾಲ್ಕು ದಶಕಗಳ ಹಿಂದೆಯೇ ನಡೆದದ್ದು ಸುಲ್ತಾನನಿಗೆ ತಿಳಿದಿತ್ತು. ಬರನಿಯ ಹೇಳಿಕೆಯಂತೆ "ಪ್ರತಿಯೊಂದು ಹಿಂದೂವಿನ ಮನೆಯೂ ಒಂದು ಅನಧಿಕೃತ ಟಂಕಸಾಲೆಯಾಯಿತು. ಅರಸನ ಭಂಡಾರ ತಾಮ್ರದ ನಾಣ್ಯಗಳಿಂದ ತುಂಬಿ ಹೋಯಿತು. ಅವುಗಳ ಗುಡ್ಡದಂತಹ ರಾಶಿಯೇ ಅರಮನೆಯಲ್ಲಿ ಬಿತ್ತು.''. ಅವನ ನಾಣ್ಯಗಳ ಮೇಲೆ ಹಿಂದಿನಂತೆ ಖಲೀಫರ ಹೆಸರನ್ನು ಅವನು ಮುದ್ರಿಸಲಿಲ್ಲ. ಬದಲಿಗೆ, ''ಅರಸತ್ವ ಎಲ್ಲರಿಗೂ ಬರುವದಿಲ್ಲ, ಆರಿಸಿದ ಕೆಲವರೇ ಅರಸರಾಗಬಲ್ಲರು.'' ಎಂಬರ್ಥದ ಬರಹಗಳಿದ್ದವು.

ದಂಗೆ, ಪಿತೂರಿ, ಜನರ ಅಜ್ಞಾನಗಳಿಂದ ಮನನೊಂದ ಸಂದರ್ಭದಲ್ಲೊಮ್ಮೆ ಸುಲ್ತಾನ ತನ್ನ ಹತ್ತಿರ ಹೀಗೆ ಹೇಳಿದ ಎಂದು ಬರನಿ ಬರೆಯುತ್ತಾನೆ : ''ನನ್ನ ರಾಜ್ಯಕ್ಕೇ ರೋಗ ಹತ್ತಿದೆ. ಅದನ್ನು ಯಾವ ಚಿಕಿತ್ಸೆಯೂ ಗುಣಪಡಿಸಲಾರದು. ವೈದ್ಯ ತಲೆನೋವನ್ನು ಗುಣಪಡಿಸಿದರೆ ಜ್ವರವೇ ಕಾಣಿಸಿಕೊಳ್ಳುತ್ತದೆ...ಅರಾಜಕತೆ ನನ್ನ ರಾಜ್ಯದಲ್ಲಿ ತಾಂಡವವಾಡುತ್ತದೆ...ಒಂದೆಡೆ ನಾನದನ್ನು ಜಯಿಸಿದರೆ ಇನ್ನೊಂದೆಡೆ ತಲೆಯೆತ್ತುತ್ತದೆ. ನನ್ನ ಆಜ್ಞೆ ಉಲ್ಲಂಘಿಸಿದವರಿಗೆ ನಾನು ಮರಣ ದಂಡನೆ ವಿಧಿಸುತ್ತೇನೆ. ನಾನು ಸಾಯುವವರೆಗೆ ಇಲ್ಲವೇ ಜನ ಅರಿತು ಈ ದಂಗೆಯನ್ನು ನಿಲ್ಲಿಸುವವರೆಗೆ ಹೀಗೆ ನಾನು ಮಾಡಲೇಬೇಕು. ಇದನ್ನೆಲ್ಲ ನಿವಾರಿಸಬಲ್ಲ ಮಂತ್ರಿಯೊಬ್ಬ ನನಗಿಲ್ಲ...ನಾನು ಜನರನ್ನು ಶಿಕ್ಷಿಸುತ್ತೇನೆ ಏಕೆಂದರೆ ಅವರೇ ಇಂದು ನನ್ನ ವೈರಿಗಳಾಗಿದ್ದಾರೆ. ಅವರ ಪ್ರತಿರೋಧ ಹೆಚ್ಚಿದಂತೆ ನಾನು ಹೆಚ್ಚು ಹೆಚ್ಚು ಕ್ರೂರಿಯಾಗುತ್ತೇನೆ. ['ತುಘಲಕ' ನಾಟಕದ ದೃಶ್ಯ ಎಂಟರಲ್ಲಿ ಇಂತಹದೇ ಸಂದರ್ಭದಲ್ಲಿ ತುಘಲಕ ಬರನಿಗೆ ಹೇಳುವ ಮಾತುಗಳು ಇವೇ ಶಬ್ದಗಳಲ್ಲೇ ಇವೆ ಎಂಬುದನ್ನು ಗಮನಿಸಬೇಕು.]

ಪ್ರಜೆಗಳಲ್ಲಿ ತನ್ನ ಜನಪ್ರಿಯತೆ ಪೂರ್ಣ ನಶಿಸಿ ಹೋದಾಗ ಅವನು ಮತ್ತೆ ಧರ್ಮದ ಮೊರೆ ಹೋಗುತ್ತಾನೆ. ತನ್ನನ್ನು ದೆಹಲಿಯ ಸುಲ್ತಾನನೆಂದು ಜನರೊಪ್ಪಿಕೊಳ್ಳುವಂತೆ ನಿರೂಪ ಸಾರಲು ಇಜಿಪ್ತಿನ ಖಲೀಫನಿಗೆ ಕೇಳಿಕೊಳ್ಳುತ್ತಾನೆ. ಪ್ರತಿನಿಧಿಯೊಬ್ಬ ಆ ಕಾರಣಕ್ಕೆ ದೆಹಲಿಗೆ ಬರುತ್ತಾನೆ. ಅವನನ್ನು ಸ್ವಾಗತಿಸಲು ಸ್ವತಃ ಸುಲ್ತಾನ ಬರಿಗಾಲಲ್ಲಿ ಕೋಟೆಯ ಬಾಗಿಲವರೆಗೆ ಬಂದು ಅವನ ಪಾದವನ್ನು ಮುತ್ತಿಡುತ್ತಾನೆ. ಆದರೆ ಇವಾವುದೂ ಜನರ ಮನವೊಲಿಸಲು ನೆರವಾಗದಾಗ ಸುಲ್ತಾನ ಸೋಲುತ್ತಾನೆ.

ಬಂಡಾಯವೊಂದನ್ನು ಅಡಗಿಸಲು ದಂಡೆತ್ತಿ ಹೋದವನು ದಾರಿಯಲ್ಲೇ ಜ್ವರದಿಂದ ಸಾಯುತ್ತಾನೆ—

ಇತಿಹಾಸದ ಪುಟಗಳಲ್ಲಿ 'ತುಘಲಕ' ನಾಟಕಕ್ಕೆ ಸಂಬಂಧಿಸಿದಂತೆ ಕಾಣುವ ಘಟನೆಗಳನ್ನು ಮೇಲೆ ಪಟ್ಟಿ ಮಾಡಲಾಗಿದೆ. ಇಲ್ಲಿ ಬರನಿ ಹಾಗೂ ಬತೂತರ ಬರಹಗಳು ಎಷ್ಟರ ಮಟ್ಟಿಗೆ ಸತ್ಯನಿಷ್ಠವಾದವು ಎಂಬುದು ನಮಗೆ ಮುಖ್ಯವಲ್ಲ. ಆದರೆ ಅವರ ವರ್ಣನೆಯ ಸುಲ್ತಾನನಿಗೂ ಕಾರ್ನಾಡರ ತುಘಲಕನಿಗೂ ಇರುವ ಸಾಮ್ಯ ನಮ್ಮ ಮುಖ್ಯ ವಸ್ತು. ಇದರ ಜೊತೆಗೆ ಪಾಶ್ಚಾತ್ಯ ಇತಿಹಾಸಕಾರರ ಕೆಲವು ಅಭಿಪ್ರಾಯಗಳು ಸಹಕಾರಿಯಾಗುತ್ತವೆ.

ಲೆನೆ ಪೂಲೆ (Lene Poole) ಹೇಳಿಕೆಯಂತೆ "ತುಘಲಕನ ವಿಚಾರಗಳು ಅವನು ಬದುಕಿದ್ದ ಕಾಲಕ್ಕೆ ಮೀರಿದವುಗಳಾಗಿದ್ದವು. ಜೊತೆಗೆ ಅವುಗಳನ್ನೆಲ್ಲ ಕೂಡಲೇ ಕೃತಿಗಿಳಿಸಬೇಕೆಂಬ ಆವಸರ ಅವನಲ್ಲಿತ್ತು. ಅವನು ಕಾಯಲು ಸಿದ್ಧನಿರಲಿಲ್ಲ (ನನಗೆ ಅಂಬೆಗಾಲಿಕ್ಕುವದು ಬೇಕಾಗಿಲ್ಲ–ನನಗಿರುವದು ಒಂದೇ ಜನ್ಮ ಎಂದು ತುಘಲಕ ನಾಟಕದಲ್ಲಿ ಒಂದೆಡೆ ಹೇಳುತ್ತಾನೆ.) ಅದು ಸಾಧ್ಯವಾಗದಾಗ ಅವನ ನಿರಾಶೆ ಕ್ರೌರ್ಯದ ಅಂಚನ್ನು ಮುಟ್ಟುತ್ತಿತ್ತು.

ಸರ್‌ವೂಲ್ಸ್ಲೆ ಹೇಗ್ (Sir Wolseley Haig) ಹೇಳುವಂತೆ "ಇಷ್ಟೊಂದು ಸಂಕೀರ್ಣ ಹಾಗೂ ವಿರೋಧಾಭಾಸಗಳಿಂದ ಕೂಡಿದ ಪಾತ್ರವೊಂದರ ಚಿತ್ರಣ ಸುಲಭ ಸಾಧ್ಯವಲ್ಲ."

ಕಾರ್ನಾಡರಿಗೆ ದೊರಕಿದ ಈ ಮೂಲವಸ್ತುವನ್ನು ಎದುರಿಟ್ಟುಕೊಂಡು ಅವರ ತುಘಲಕನನ್ನು ನೋಡಿದರೆ ಅವನು ಈ ಇತಿಹಾಸದ ತುಘಲಕನಲ್ಲದೆ ಅವನ ವೇಷ ಧರಿಸಿದ ಕಾಲಿಗುಲ ಅಲ್ಲ ಎಂಬುದು ಅರಿವಾಗುತ್ತದೆ.

ಸಂಕೀರ್ಣವಾದ, ಪರಸ್ಪರ ವಿರೋಧಾಭಾಸಗಳಿಂದ ಕೂಡಿದ ಪಾತ್ರವೊಂದನ್ನು ಸೃಷ್ಟಿಸಬೇಕಾದ್ದರಿಂದ, ಆ ಪಾತ್ರ ಐತಿಹಾಸಿಕವೂ ಆದ್ದರಿಂದ ಕಾರ್ನಾಡರು

ಶೇಕ್ಸ್‌ಪಿಯರನ ಐತಿಹಾಸಿಕ ನಾಟಕಗಳನ್ನು ಹಾಗೂ ತಂತ್ರದ ದೃಷ್ಟಿಯಿಂದ ಬ್ರೆಕ್ಟನ ನಾಟಕಗಳನ್ನೂ ಓದಿದ್ದಾರೆ. (ಪ್ರಾರಂಭದಲ್ಲೇ ಸೂಚಿಸಿದ ಸಂದರ್ಶನದಲ್ಲಿ ಅವರದನ್ನು ಒಪ್ಪಿದ್ದಾರೆ)ಹಾಗೆ ಶೇಕ್ಸ್‌ಪಿಯರನ ಐತಿಹಾಸಿಕ ನಾಟಕಗಳ ಅದರಲ್ಲೂ ಅವನ ನಾಲ್ಕನೆಯ ಹೆನ್ರಿಯ ಎರಡು ಭಾಗಗಳು, ಐದನೇ ಹೆನ್ರಿ, ಮೂರನೇ ರಿಚರ್ಡ (Richard III) ನಾಟಕಗಳ ನೇರ ಪ್ರಭಾವ ತುಘಲಕ ನಾಟಕದ ಮೇಲೆ ಇರುವುದನ್ನು ನಾವು ಗುರುತಿಸಬಹುದು. ಇವಕ್ಕೆ ಪೂರಕವಾಗಿ ಶೇಕ್ಸ್‌ಪಿಯರ ಬದುಕಿದ್ದ ಕಾಲದ, ಮೇಲಿನ ನಾಟಕಗಳಲ್ಲಿ ಅವನು ಚಿತ್ರಿಸಿದ ಕಾಲದ ಹಾಗೂ ಕಾರ್ನಾಡರು ಚಿತ್ರಿಸಬೇಕಾಗಿರುವ ಕಾಲದ ಸಾಮಾನ್ಯ ಸಂಗತಿಗಳು, ಪರಿಸ್ಥಿತಿಗಳು ಈ ಪ್ರಭಾವವನ್ನು ಸ್ವಾಭಾವಿಕವಾಗಿಸುತ್ತವೆ.

ನಾಲ್ಕನೆಯ ಮತ್ತು ಐದನೆಯ ಹೆನ್ರಿಯ ಕಾಲದ ಇಂಗ್ಲೆಂಡಿನಲ್ಲಿ ಬಂಡಾಯಗಳು ದಿನನಿತ್ಯದ ಮಾತಾಗಿದ್ದವು. ಹೊಸವಿಚಾರ ಜಾಗ್ರತಿಯಿಂದಾಗಿ ಅರಸನಿಗೂ ಧರ್ಮಗುರುಗಳಿಗೂ ವಿರೋಧವೇರ್ಪಟ್ಟಿತ್ತು. ರಾಜಕೀಯ ಅಧಿಕಾರದ ಜೊತೆಗೆ ಧರ್ಮದ ಮುಂದಾಳತ್ವವೂ ಅರಸನಲ್ಲೇ ಇರಬೇಕೆಂಬ ವಿಚಾರ ಬಲಿಯುತ್ತಿತ್ತು. ಮೆಕಿಯಾವೆಲಿಯ ರಾಜನೀತಿ ಶೇಕ್ಸ್‌ಪಿಯರನ ಕಾಲದ ಚರ್ಚೆಯ ವಿಷಯವಾಗಿತ್ತು ಅರಸೊತ್ತಿಗೆಗಾಗಿ, ಅಧಿಕಾರಕ್ಕಾಗಿ ಕೊಲೆ ಸಾಮಾನ್ಯವಾಗಿತ್ತು. ಗಾಳಿಸುದ್ದಿ ಸಾಮಾನ್ಯನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಗಣ್ಯರು. ರಾಜಪ್ರಮುಖರೂ ಇದರಿಂದ ಹೊರತಾಗಿರಲಿಲ್ಲ. ಶೇಕ್ಸ್‌ಪಿಯರನ ಕಾಲದಲ್ಲಿನ ಇನ್ನೊಂದು ನಂಬುಗೆ ಅರಸತ್ವ ದೇವರವರ, ಅರಸನ ವಿರುದ್ಧದಂಗೆ ದೇವರ ವಿರುದ್ಧದಂಗೆ, ಅದು ಪಾಪ, ಈ ಪಾಪಕ್ಕೆ ಪ್ರಾಯಶ್ಚಿತ್ತ ದೊರಕಲೇ ಬೇಕು-ಎಂಬುದು ಶೇಕ್ಸ್‌ಪಿಯರ ತನ್ನ ನಾಟಕಗಳಲ್ಲಿ ಈ ಪ್ರಶ್ನೆ ಪದೇ ಪದೇ ಎತ್ತುತ್ತಾನೆ. Honors change manners ಎಂಬ ತನ್ನ ಕಾಲದ ನಂಬಿಗೆಯನ್ನು ತನ್ನ ನಾಟಗಳಲ್ಲಿ ಅವನು ಚರ್ಚಿಸುತ್ತಾನೆ. ಇದಕ್ಕೆ ಸಾಂಕೇತಿಕವಾಗಿಯೋ ಎಂಬಂತೆ ಬಟ್ಟೆ ಬದಲಾವಣೆ, ಬದಲಾವಣೆಯ ಮಾತುಗಳು ಪದೇ ಪದೇ ಅವನ ನಾಟಕಗಳಲ್ಲಿ ಬರುತ್ತವೆ. ಹಾಗೆಯೇ ಅಂದಿನ ದಿನಗಳಲ್ಲಿ 'ಸಾಹಿತ್ಯ ಬದುಕಿಗೆ ಹಿಡಿದ ಕನ್ನಡಿ, ಇತಿಹಾಸ ಭೂತಕಾಲದ ಬದುಕಿಗೆ ಕನ್ನಡಿ ಹಿಡಿಯುತ್ತದೆ' ಎಂಬ ಚರ್ಚೆ-ವಿವಾದ ನಡೆಯುತ್ತಿದ್ದವು. mirror for Magistrate ಎಲ್ಲೆಡೆ ಚರ್ಚೆಯ ವಿಷಯವಾಗಿತ್ತು. ಹೀಗಾಗಿ 'ಕನ್ನಡಿ' ವಿಶೇಷ ಸಾಂಕೇತಿಕ ಅರ್ಥಪಡೆದಿತ್ತು. ಇದನ್ನು ಶೇಕ್ಸ್‌ಪಿಯರನ ನಾಟಕಗಳಲ್ಲೂ ಕಾಣುತ್ತೇವೆ.

ಇವೆಲ್ಲವೂ ಕಾರ್ನಾಡರ ತುಘಲಕದಲ್ಲಿ ಹೇಗೆ ತೂರಿಕೊಂಡಿವೆಯೆಂಬುದನ್ನು ಸ್ಥೂಲವಾಗಿ ಮೊದಲು ನಿರೀಕ್ಷಿಸಬಹುದು.

x x

ಗಾಳಿಸುದ್ದಿಗಳ ಆವಾಂತರದಿಂದಲೇ ತುಘಲಕ ಪ್ರಾರಂಭವಾಗುತ್ತದೆ. ನಾಲ್ಕನೆಯ ಹೆನ್ರಿ ಹಿಂದಿನ ಅರಸನನ್ನು ಕೊಂದು ತಾನು ಅರಸನಾದಂತೆ ತುಘಲಕನೂ ತನ್ನ ತಂದೆ, ಸೋದರರನ್ನು ಕೊಲ್ಲಿಸಿದನೆಂದು ಚರ್ಚೆಯಾಗುತ್ತದೆ. ಇದನ್ನು ಅಮೀರರೂ, ದರಬಾರದವರೂ ನಂಬಿದ್ದರೆಂಬುದು ಮುಂದೆ ಸುಲ್ತಾನ ತನ್ನ ತಾಯಿಯೊಡನೆ ಆಡಿದ ಮಾತುಗಳಿಂದ ತಿಳಿಯುತ್ತದೆ.

ಐದನೆಯ ಹೆನ್ರಿ ಅರಸನಾಗುವ ಮುಂಚೆ ಕಳ್ಳಕಾಕರ ನಡುವೆ ಕಳೆದ ಅಂಕೆಯಿಲ್ಲದ ಜೀವನದ ನೆರಳನ್ನು ನಿವಾರಿಸಲು ತಾನು ಅರಸನಾಗುತ್ತಲೇ ಮುಂದಾದ. ತನ್ನ ಯೋಗ್ಯತೆಯನ್ನು, ನ್ಯಾಯ ನಿಷ್ಠುರತೆಯನ್ನು ಬಿಂಬಿಸಲು ತನ್ನ ಸ್ನೇಹಿತರನ್ನು ಗಡೀಪಾರು ಮಾಡಿದ. ತನ್ನ ಬಗ್ಗೆ ಹಬ್ಬಿದ ಗಾಳಿಸುದ್ದಿಯನ್ನು ನಿವಾರಿಸಲು ತುಘಲಕನೂ ತನ್ನ ನ್ಯಾಯ ನಿಷ್ಠುರತೆಯನ್ನು ಬಿಂಬಿಸಲು ಪ್ರಯತ್ನಿಸುವದನ್ನು, ಜನರನ್ನು ಒಲಿಸಿಕೊಳ್ಳಲು ಪ್ರಯತ್ನಿಸುವದನ್ನು ಪ್ರಾರಂಭದಲ್ಲೇ ಕಾಣುತ್ತೇವೆ.

ನಾಲ್ಕನೆಯ ಹೆನ್ರಿ ನಾಟಕದ ಮೊದಲ ಅಂಕದಲ್ಲಿಯೇ ದಂಗೆಯ ಸುದ್ದಿ ಬರುತ್ತದೆ. ತುಘಲಕದಲ್ಲಿಯೂ ಎರಡನೆಯ ದೃಶ್ಯದಲ್ಲಿಯೇ ಅಯಿನೇ ಉಲ್ಮುಲ್ಕ ತಿರುಗಿಬಿದ್ದ ಸುದ್ದಿ ತುಘಲಕ ಹೇಳುತ್ತಾನೆ. ಅರಸನ ವಿರೋಧಿಗಳೆಲ್ಲ ಒಂದಾಗುವದು, ಗುಪ್ತಸಭೆ ನಡೆಸುವದು, ಧರ್ಮ ಗುರುಗಳು ದಂಗೆಕೋರರ ಜೊತೆ ಸೇರುವುದು, ಅವರಲ್ಲಿಯೇ ಪರಸ್ಪರ ಸಂಶಯ, ಕೊನೆಗೆ ಅವರಲ್ಲಿಯೇ ಒಬ್ಬನ, ನಾರ್ದಂಬರ್ ಲ್ಯಾಂಡ್—ರತನಸಿಂಹ, ವಿಶ್ವಾಸ ದ್ರೋಹದಿಂದ ಅವರ ಯೋಜನೆಗಳು ಬುಡ ಮೇಲಾಗುವದು- ಎಲ್ಲವೂ ನಾಲ್ಕನೆಯ ಹೆನ್ರಿಯಲ್ಲೂ ತುಘಲಕದಲ್ಲೂ ಸಾಮಾನ್ಯ ಘಟನೆಗಳು. ಸಂಧಿಯ ಮಾತಾಡಲು ಪ್ರತಿನಿಧಿಗಳು ಬಂಡುಕೋರರ ಹತ್ತಿರ ಹೋಗುವದು, ಅಲ್ಲಿ ಮೋಸದಿಂದ ಬಂಡುಕೋರರನ್ನು ಸೆರೆ ಹಿಡಿಯುವದು, ಅರಸನ ವಸ್ತ್ರದಲ್ಲಿ ಬೇರೊಬ್ಬರು ಯುದ್ಧಭೂಮಿಯಲ್ಲಿಮುಂದಿದ್ದು ಅವನೇ ಅರಸನೆಂಬ ಭ್ರಮೆ ಹುಟ್ಟಿಸುವದು ಇವೆಲ್ಲ ಶೇಕ್ಸ್‌ಪಿಯರನ ನಾಟಕಗಳಲ್ಲೂ ಇವೆ ಕಾರ್ನಾಡರ ತುಘಲಕದಲ್ಲೂ ಇವೆ.

*ಇನ್ನೂ ಸೂಕ್ಷ್ಮವಾಗಿ ನೋಡಿದಾಗ ಶೇಕ್ಸ್‌ಪಿಯರನ ನಾಟಕಗಳಲ್ಲಿ—ತುಘಲಕದಲ್ಲಿ ಸಂಭಾಷಣೆಗಳಲ್ಲಿ ಕೂಡ ಬರುವ ವಿಪುಲ ಹೋಲಿಕೆಗಳು ಆಶ್ಚರ್ಯಪಡಿಸುವಂತಹವು. ಕೆಳಗಿನ ಉದಾಹರಣೆಗಳನ್ನು ನೋಡಬಹುದು.

ತುಘಲಕದ ದೃಶ್ಯ ಒಂದರಲ್ಲಿ, ಒಂಭತ್ತನೇ ಪುಟದಲ್ಲಿ, ತನ್ನ ಕಿಸೆ ಕತ್ತರಿಸುವ ಕೆಲಸ ಕುರಿತು ಆಜಂ ಹೇಳುವದು

---

*ಇಲ್ಲಿ ಹೋಲಿಕೆಗಾಗಿ William Shakespeare-the Complete works-Pub : The English Language Book Society, reprinted February 1965 ಹಾಗೂ 'ತುಘಲಕ್' ನಾಟಕದ ಮೊದಲ ಆವೃತ್ತಿಯ ಪ್ರತಿಗಳನ್ನು ಎತ್ತಿಕೊಳ್ಳಗಿಲಾದೆ.

"ಚಟ ಅಲ್ಲ, ವ್ಯವಸಾಯ"

ಇದಕ್ಕೆ ಸಂಬಂಧಿಸಿದಂತೆ Henry IV Part–I-Sc-II Line-101 ರಲ್ಲಿ Falstatt ಹೇಳುವದು.

"Why, Hal, 'tis my vocation".

ತುಘಲಕ ದೃಶ್ಯ 2 ರಲ್ಲಿ ಮಲತಾಯಿ ತುಘಲಕನ ಮೇಲೆ ಮಂತ್ರಿ ನಜೀಬನಿಂದ ಆಗುತ್ತಿರುವ ದುಷ್ಪರಿಣಾಮದ ಬಗ್ಗೆ ಬರನಿಯೊಡನೆ ವ್ಯಕ್ತಪಡಿಸುವ ಕಾಳಜಿ. (ಪುಟ 26).

"...ಇಂಥ ಬುದ್ಧಿವಂತ ! ಇಂಥ ವಿದ್ಯಾವಂತ ! ...ಭಾವನೆಗೆ ಬಲಿಬಿದ್ದನೆಂದರೆ ಹುಚ್ಚನಂತೆ ವರ್ತಿಸುತ್ತಾನೆ. ರೇಗಿ ಗದ್ದ, ಮನನೊಂದ ಎಂದರೆ ಆವೇಶದಲ್ಲಿ ಏನು ಮಾಡಿಯಾನು ಏನು ಬಿಟ್ಟಾನು ಹೇಳಲಿಕ್ಕಾಗುವದಿಲ್ಲ...ನಿಮ್ಮಂಥ ಗೆಳೆಯರ ಅವಶ್ಯಕತೆಯಿದೆ ಅವನಿಗೆ...ಏನಾದರೂ ಅವನನ್ನು ಬಿಟ್ಟು ಹೋಗಬೇಡಿರಿ..."

ಈ ಮಾತುಗಳನ್ನು ನಾಲ್ಕನೆಯ ಹೆನ್ರಿ ತನ್ನ ಮಗನು ಕಳ್ಳಕಾಕರ ಜೊತೆ ಸೇರಿಕೊಂಡಿದ್ದಕ್ಕೆ ಮಗನ ಸ್ನೇಹಿತನೊಡನೆ ಹೇಳುವ ಮಾತುಗಳೊಂದಿಗೆ ಹೋಲಿಸಬೇಕು.

Therefore omit him not ; blunt not his love.
......For he is gracious if he be observed.
He hath a tear for pity and a hand
Open as day for meiting charity ;
Yet not withstanding, being incensed he is flint ;
As humourous as winter, and as sudden
As flaws congealed in the spring of day,
......But, being moody, give him line and scope......

—Henry the Fourth-Part Two-Act IV-Sc-IV
Lines 27 to 39

ತುಘಲಕ ದೃಶ್ಯ 3 ರಲ್ಲಿ ತುಘಲಕನಿಗೂ ಶೇಖ ಇಮಾಮುದ್ದೀನನಿಗೂ ನಡೆಯುವ ಸಂಭಾಷಣೆಯ ಕೆಳಗಿನ ಸಾಲುಗಳನ್ನು ನಾಲ್ಕನೆಯ ಹೆನ್ರಿ ನಾಟಕದಲ್ಲಿ ರಾಜಕುಮಾರ ಹಾಗೂ ಧರ್ಮಗುರುಗಳಿಗೂ ನಡೆಯುವ ಸಂಭಾಷಣೆಯ ಕೆಲವು ಸಾಲುಗಳಿಗೆ ಹೋಲಿಸಬಹುದು. ನಾಲ್ಕನೆಯ ಹೆನ್ರಿ ನಾಟಕದಲ್ಲಿ ಅರಸನ ವಿರುದ್ಧ ತಿರುಗಿಬಿದ್ದ ಬಂಡಾಯಗಾರರು, ಧರ್ಮಗುರುಗಳ ಜೊತೆ ಅರಸನ ಪ್ರತಿನಿಧಿಯಾಗಿ ಅನುಕೂಲವಾದ ಮಾತಾಡುತ್ತಿದ್ದರೆ ತುಘಲಕದಲ್ಲಿ ತನ್ನ ವಿರುದ್ಧ ಜನರನ್ನು ಎತ್ತಿ

ಕಟ್ಟಿ ಹುರಿದುಂಬಿಸುತ್ತಿರುವ ಧರ್ಮಗುರುವಿನ ಜೊತೆ ತುಘಲಕ ಮಾತಾಡುತ್ತಿದ್ದಾನೆ.

ತುಘಲಕ ಹೇಳುವ ಮಾತಿನ ಸಾಲುಗಳು.

“ಅವರು ಧರ್ಮಬಿಟ್ಟು ರಾಜಕಾರಣದಲ್ಲಿ ಕೈಹಾಕಿದರು” ಪುಟ 30.

“ಕಾನಪುರದಲ್ಲಿ ನಿಮ್ಮ ಮಾತಿಗೆ ಮರುಳಾಗಿ ಕ್ರಾಂತಿಯ ದೀವಟಿಗೆಯನ್ನೆತ್ತಿದರು ಜನ. ನನ್ನ ಕೆಲ ಅಧಿಕಾರಿಗಳ ಮನೆಗಳನ್ನು ಸುಟ್ಟರು. ಪುಟ 32.

ನಾಲ್ಕನೇ ಹೆನ್ರಿ ನಾಟಕದಲ್ಲಿ,

> “... ..” You have taken up,
> Under the counterfeited zeal of God,
> The subjects of his substitue...” Part II Act IV Sc II-25-27.

‘ದೇವರ ಹೆಸರಿನಲ್ಲಿ ನೀವು ಅರಸನ ಕಾರ್ಯದಲ್ಲಿ ಕೈಹಾಕಿದಿರಿ’ ಎನ್ನುವದೇ ಅರ್ಥ.

> “When that your flock assembled by the bell,
> Encircled you to hear with reverence,
> ....
> Turning the word to sword and life to death”.
> Part II Act IV, Sc-II–4 to 10

ನಾಲ್ಕನೆಹೆನ್ರಿ ನಾಟಕದ ಈ ದೃಶ್ಯದ ಯಾವುದೇ ಒಂದೆರಡು ಸಾಲಿನ ಸಾಮ್ಯಕ್ಕಿಂತ ಹೆಚ್ಚಾಗಿ ಇಡೀ ದೃಶ್ಯದಲ್ಲಿ ಬರುವ ಸಂಭಾಷಣೆ ಹಾಗೂ ಬಂಡಾಯಗಾರರನ್ನು ಮೋಸದಿಂದ ಸೆರೆಹಿಡಿಯುವ ಘಟನೆಯೂ ತುಘಲಕದ ದೃಶ್ಯ ಮೂರರಲ್ಲಿ ಬರುವ ಸಂಭಾಷಣೆ ಹಾಗೂ ದೃಶ್ಯ ನಾಲ್ಕು ಪುಟ 48–49ರಲ್ಲಿ ರತನಸಿಂಹ ವರ್ಣಿಸುವ ಮೋಸದ ಯುದ್ಧಕ್ಕೂ ಹೆಚ್ಚಿನ ಸಾಮ್ಯ ಇದೆ. ಅರಸನ ವಸ್ತ್ರದಲ್ಲಿ ಅರಸನಂತೆಯೇ ಕಾಣುವ ಇಮಾಮುದ್ದೀನ ಬಲಿಯಾದಂತೆ ಅರಸನ ವಸ್ತ್ರ ಧರಿಸಿದ ಹಲವರು ಮುಂದಾಗಿ ಯುದ್ಧಭೂಮಿಯಲ್ಲಿದ್ದರೆಂಬುದು ನಾಲ್ಕನೆಯ ಹೆನ್ರಿ ನಾಟಕದ ಭಾಗ 1ರ ಅಂಕ ಐದು, ದೃಶ್ಯ ಮೂರರ ಸಾಲು 23–25ರಿಂದ ತಿಳಿಯುತ್ತದೆ.

> The king hath many marching in his coats-24

ಪುಟ 48ರಲ್ಲಿ ರತನಸಿಂಹ ಹೇಳುವ ಮಾತು–

"(ಇಮಾಮುದ್ದೀನ) ಮೈಯ ಮೇಲೆ ಸುಲ್ತಾನರು ಆಗ್ರಹದಿಂದ ತೊಡಿಸಿದ ಜರತಾರಿ ರಾಜವಸ್ತ್ರ ಇತ್ತು. ಶೇಖರು ದೂರದಿಂದ ಸುಲ್ತಾನರಂತೆಯೇ ಕಾಣುತ್ತಿದ್ದರು".

ಹಾಗೆಯೇ ಪುಟ 49 ರಲ್ಲಿ ಸುಲ್ತಾನ ಹೇಗೆ ಮೋಸದಿಂದ ಗೆದ್ದ ಎಂಬುದನ್ನು ವರ್ಣಿಸುತ್ತ ರತನಸಿಂಹ ಹೇಳುತ್ತಾನೆ.

"...ವೈರಿಯ ಸೈನ್ಯ ಸರಿಯಾಗಿ ಬಲೆಯಲ್ಲಿ ಸಿಕ್ಕಿತು. ಯುದ್ಧ ಮುಗಿಯುವ ಮೊದಲು ಮುಕ್ಕಾಲು ಪಾಲು ವೈರಿ-ಸೈನ್ಯ ತುಂಡರಿಸಿ ಹೋಗಿತ್ತು (ಅಣಕಿಸುವ ದನಿಯಲ್ಲಿ) ನಾವು ಗೆದ್ದೆವು!

ಈ ಸಾಲುಗಳನ್ನು ಕೆಳಗಿನ ಸಾಲುಗಳಿಗೆ ಹೋಲಿಸುವಾಗ ಮುಖ್ಯವಾಗಿ ಗೆಲುವನ್ನು ಹೇಳುವಾಗಿನ ಅಣಕ–ವ್ಯಂಗ್ಯವನ್ನು ಗುರುತಿಸಬೇಕು.

> Of those that turned their backs, and in his flight,
> Stumbling in fear was took. The sum of all
> Is that the the king hath won."
>
> —Part II Act I – Sc I– Lines 130-132

ತುಘಲಕದ ದೃಶ್ಯ ಐದರಲ್ಲಿ ನಡೆಯುವ ಅಮೀರರ ಗುಪ್ತಸಭೆ ಅವರು ಅರಸನ ಮೇಲೆ ಒಬ್ಬೊಬ್ಬರಾಗಿ ತಮ್ಮ ಸಿಟ್ಟು ತೋಡಿಕೊಳ್ಳುವದು, ಅರಸನನ್ನು ದೂಷಿಸುವದು, ಅವರೊಡನೆ ಧರ್ಮಗುರುಗಳೂ ಸೇರಿರುವದು. ಕೊನೆಯಲ್ಲಿ ಅರಸನನ್ನು ಮುಗಿಸುವ ಯೋಜನೆ ಹಾಕುವದು ಎಲ್ಲವನ್ನು ಸ್ಥೂಲವಾಗಿ ನಾಲ್ಕನೇ ಹೆನ್ರಿ ನಾಟಕದ ಮೊದಲ ಹಾಗೂ ಎರಡನೇ ಭಾಗದ ಮೊದಲಂಕದ ಮೂರನೇ ದೃಶ್ಯದಲ್ಲಿ ಕಾಣಬಹುದು.

ತುಘಲಕದ ದೃಶ್ಯ ಎಂಟರಲ್ಲಿ ನಿದ್ದೆ ಬಾರದೆ ಅಲೆಯುವ ಸುಲ್ತಾನ [illegible] ತನ್ನ ಅಳಲು ತೋಡಿಕೊಳ್ಳುತ್ತಾನೆ.

"ನಿದ್ರೆ ಬರಲಿ ಎಂದರೆ ನಿದ್ದೆಯಿಲ್ಲ...ಐದುವರುಷಗಳ ಹಿಂದೆ ನಾನು ನಿದ್ರೆ ಬರದಿರಲಿ ಎಂದು ದೇವರ ಹತ್ತಿರ ಪ್ರಾರ್ಥಿಸುತ್ತಿದ್ದೆ ಎಂಬುದನ್ನು ನೆನೆದರೆ ನಿಜ ಎನ್ನಿಸುವದಿಲ್ಲ ನನಗೆ"

ನಾಲ್ಕನೆಯ ಹೆನ್ರಿ ತನ್ನದೇ ಹಿಂದಿನ ಕೃತ್ಯಗಳಿಗೆ ಹಳಹಳಿಸಿ ತನ್ನ ಮಗನ ಅನುಚಿತ ವರ್ತನೆಗಳಿಂದ ನೊಂದು, ದಿನ ನಿತ್ಯದ ಬಂಡಾಯಗಳಿಂದ ವಿಷಣ್ಣನಾಗಿ ಹೇಳುತ್ತಾನೆ.

...O Sleep, O gentle sleep.
Nature's soft nurse, how have I frigtened thee.
That thou no more wilt weigh my eyelids down"
Henry IV Part II Act III, Sc-I Lins 5-7

ಹಾಗೆಯೆ ಮುಂದುವರಿದು ಸುಲ್ತಾನ ತನ್ನ ವಿರುದ್ಧ ಬಂಡೆದ್ದವರ ಹೆಸರು ಹೇಳುತ್ತಾನೆ, ರಾಜ್ಯಕ್ಕೆ ಕಾಯಿಲೆ ಬಡಿದಿದೆ ಎನ್ನುತ್ತಾನೆ :

"...ಮಾಬಾರದಲ್ಲಿ ಎಹಸಾನಶಾಹ ತಾನು ಸ್ವತಂತ್ರನೆಂದು ಸಾರಿದ್ದಾನೆ, ಇತ್ತ ಬಹಾಲುದ್ದೀನ್ ಗುರುಶಾಸ್ಪನೂ ಊರಿಂದೂರಿಗೆ ಓಡಿ ನನ್ನ ವಿರುದ್ಧ ಸೈನ್ಯ ಸಂಗ್ರಹಿಸುತ್ತಿದ್ದಾನೆ ... ನೂರಾರು ಕಾಯಿಲೆಗಳ ಹುತ್ತವಾಗಿವೆ ನನ್ನ ರಾಜ್ಯ" ನಾಲ್ಕನೆಯ ಹೆನ್ರಿ ಕೂಡ ಮುಂದುವರಿದು ಹೇಳುವ ಮಾತುಗಳು.

"Then you perceive thc body of our kingdom
How foul it is ; what rank diseases grow......"
H. IV Part II, Act III, Sc-I Lines-38-40.

ಹೀಗೆ ಕಳವಳಿಸುವದಕ್ಕಿಂತ ಸಿಂಹಾಸನವನ್ನು ಫಿರೋಜಶಹರಿಗೆ ಬಿಟ್ಟು ನಿವೃತ್ತನಾಗಬಾರದೇಕೆ ಎಂಬ ಸಲಹೆಯನ್ನು ಬರನಿ ಸುಲ್ತಾನನಿಗೆ ಕೊಟ್ಟಾಗ,

"ಉಪಾಯ ಅಷ್ಟು ಸುಲಭವಾಗಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು. ಇತಿಹಾಸವೆಂದರೆ ಒಂದು ಟಕ್ಕಾಟಕ್ಕಿ ಅದರಲ್ಲಿ ನಂಬಿಗೆಯಿಟ್ಟು ಕಳವಳಿಸುವದಕ್ಕಿಂತ ರಾಜ್ಯ ಬಿಟ್ಟು ಮಕ್ಕೆಗೆ ಹೋಗಬೇಕು, ತೌಅ ಬಾದೆದುರು ಬಾಳು ಕಳೆಯಬೇಕು.. ಆದರೆ ಸುತ್ತಲೂ ಹದ್ದುಗಳ ಜಾತ್ರೆ ನೆರೆದಿರುವಾಗ ಹೀಗೆ ಕಳವಳಿಸುತ್ತಿರುವ ರಾಜ್ಯ ಬೇರೆಯಲ್ಲ, ನಾನು ಬೇರೆಯಲ್ಲ" ಎನ್ನುವ ತುಘಲಕ ಮಕ್ಕಾ ಯಾತ್ರೆಯ ಮಾತಾಡುತ್ತಾನೆ. ಆದರೆ ರಾಜ್ಯದಲ್ಲಿ ಶಾಂತಿ ನೆಲಸಿದರೆ ಮಾತ್ರ ಅದು ಸಾಧ್ಯ ಎನ್ನುತ್ತಾನೆ.

ತನ್ನ ಮಗನ ಅನುಚಿತ ವರ್ತನೆಗೆ ಅರಸುಕುಮಾರನಿಗೆ ತಕ್ಕುದಲ್ಲದ ಅವನ ಸ್ನೇಹ, ನಡವಳಿಕೆಗೆ ತಪಿಸುವ ನಾಲ್ಕನೆಯ ಹೆನ್ರಿ ಅದೇ ದೃಶ್ಯದಲ್ಲಿ,

" I will take your counsel.
And. were these inward wars once out of hand.
We would, dear lords, unto the Holy Land"
H. IV Part II Act III Sc-I Lines 106-108

ಇವಲ್ಲದೆ ಒಟ್ಟೂ ತುಘಲಕನ ಪಾತ್ರ ಚಿತ್ರಣದಲ್ಲಿ ಬರುವ ಬಳಸಿಕೊಂಡ ಘಟನೆಗಳು, ತಂದೆ ಸೋದರರನ್ನು ಕೊಂದಿದ್ದು, ಪ್ರಜೆಗಳಲ್ಲಿ ಇನ್ನೊಬ್ಬ ಪ್ರೀತಿ ಪಾತ್ರನಾಗುತ್ತಾನೆಂದಾಗ ಅವನ ತಲೆ ಕೀಳಿಸುವದು, ಶಿಹಾಬುದ್ದೀನನ ಕ್ರೂರ ವಧೆ,

ನಂತರ ಅದನ್ನು ಮುಚ್ಚಲು ಉಪಯೋಗಿಸಿದ ತಂತ್ರ, ತುಘಲಕನ ಕ್ರೌರ್ಯ, ಮೋಸದ ರಾಜಕಾರಣ ಅಧಿಕಾರ ಗಳಿಸಲು, ಉಳಿಸಿಕೊಳ್ಳಲು ಅವನು ಉಪಯೋಗಿಸುವ ವರಸೆಗಳು, ಇವುಗಳಿಗೆಲ್ಲ ನಾಲ್ಕನೆಯ ಹೆನ್ರಿ ಎರಡು ಭಾಗಗಳು, 5 ನೇ ಹೆನ್ರಿ ಹಾಗೂ ಎರಡನೇ ರಿಚರ್ಡ ನಾಟಕಗಳಲ್ಲಿ ಒಂದಿಲ್ಲೊಂದು ಸಂದರ್ಭದಲ್ಲಿ ಸ್ಥೂಲವಾಗಿ ಉಪಯೋಗಿಸಲ್ಪಟ್ಟವೆ.

ಇಷ್ಟೊಂದು ಹೋಲಿಕೆಗಳನ್ನು ಶೇಕ್ಸ್‌ಪಿಯರನ ನಾಟಕಗಳಲ್ಲಿ ಹಾಗೂ ತುಘಲಕದಲ್ಲಿ ಕಾಣುವಾಗ ಅವು ಕೇವಲ ಕಾಕತಾಳೀಯವಾಗಿರಬಹುದೆಂದು ಹೇಳುವದು ಸಾಧ್ಯವಿಲ್ಲ ಹಾಗೆಯೇ ಈ ಹೋಲಿಕೆಗಳು ಇರುವ ಮಾತ್ರಕ್ಕೆ ತುಘಲಕ' ಒಂದು ಸಾಮಾನ್ಯ ಎರವಲು ನಾಟಕ ಎಂದು ಹೇಳುವದೂ ಸಾಧ್ಯವಿಲ್ಲ ಇವೆಲ್ಲವನ್ನು ಬಳಸಿಕೊಂಡೂ ತನ್ನದೇ ಸ್ವತಂತ್ರ ಪರಿಪೂರ್ಣ ಶಿಲ್ಪವಾಗಿ 'ತುಘಲಕ' ನಾಟಕವಾಗಿ ನಿಲ್ಲುತ್ತದೆಯೇ ವಿನಃ ತೇಪೆ ಹಾಕಿದ ಅಂಗಿಯಾಗುವದಿಲ್ಲ. ಇದಕ್ಕೆ ಕಾರಣ ತಮಗೆ ದೊರೆತ ಎಲ್ಲ ಮೂಲವಸ್ತುವನ್ನು, ತಂತ್ರ ವೈವಿಧ್ಯಗಳನ್ನು ತಮ್ಮ ಉದ್ದೇಶಕ್ಕೆ ಪೂರಕವಾಗುವಂತೆ ಮುರಿದು ಸಮರ್ಥವಾಗಿ ಕಾರ್ನಾಡರು ಬಳಸಿಕೊಂಡ ರೀತಿ.

ಇತಿಹಾಸ ಪುಟಗಳಲ್ಲಿಲ್ಲದ ಹಾಗೂ ಶೇಕ್ಸ್‌ಪಿಯರನಲ್ಲಿ ಕಾಣದ ಇನ್ಯಾವ ವಿಶೇಷಗಳನ್ನು ಕಾರ್ನಾಡರು ತಮ್ಮ 'ತುಘಲಕ' ನಾಟಕದಲ್ಲಿ ಕಾಲಿಗುಲದಿಂದ ಬಳಸಿಕೊಂಡಿದ್ದಾರೆಂದು ಅವಲೋಕಿಸುವುದು ಇಲ್ಲಿ ಸೂಕ್ತ.

ಐತಿಹಾಸಿಕವಾಗಿ ಕಾಲಿಗುಲ ಒಟ್ಟು ಪನ್ನೆರಡು ಜನ ಸೀಝರ್-ರಲ್ಲಿ ಮೂರನೆಯವನು. ಕಯಸ್ ಸೀಝರ್ ಕಾಲಿಗುಲ ಅವನ ಹೆಸರು ಕ್ರಿಸ್ತಶಕ 37 ರಿಂದ 41 ರ ವರೆಗೆ ಎಂದರೆ 4–5 ವರ್ಷಗಳು ಅವನು ಆಳಿದ್ದು ತನ್ನ 25ನೇ ವಯಸ್ಸಿನಲ್ಲಿ ಪಟ್ಟಕ್ಕೆ ಬಂದ. ಒಂದೆರಡು ವರ್ಷಗಳ ಆಳ್ವಿಕೆಯ ನಂತರ ತನ್ನ ಸೋದರಿಯನ್ನೇ ಪ್ರೀತಿಸಿ ಅವಳನ್ನೇ ಮದುವೆಯಾಗುವ ತನ್ನ ಇಚ್ಛೆಯನ್ನು ಸಾರಿದ. ಆಗಲೇ ಅವಳ ಆಕಸ್ಮಿಕ ಮರಣ ಅವನ ಗುಣವನ್ನು ಪೂರ್ತಿ ಬದಲಾಯಿಸಿತು. "ಮನುಷ್ಯನಿದ್ದವ ಮೃಗವಾದ". ತನ್ನ ಪ್ರಜೆಗಳನ್ನು ಪೀಡಿಸಿದ, ಹಿಂಸಿಸಿದ. ಕೊನೆಯಲ್ಲಿ ತಿರುಗಿಬಿದ್ದ ದಂಗೆಯೆದ್ದ ದಂಗೆಕೋರರಿಂದ ಕೊಲ್ಲಲ್ಪಟ್ಟ.

ಈ ಐತಿಹಾಸಿಕ ಕಾಲಿಗುಲನನ್ನೇ ಕಾಮು ತನ್ನ ಉದ್ದೇಶಕ್ಕೆ ಬಳಸಿಕೊಂಡಿದ್ದಾನೆ.

ಅವನ ಸೋದರಿ ಸತ್ತು ಮೂರು ದಿನಗಳಾಗಿವೆ, ಆ ಮೂರು ದಿನಗಳೂ ಕಾಲಿಗುಲ ನಾಪತ್ತೆಯಾಗಿದ್ದಾನೆ ಎನ್ನುವಲ್ಲಿಂದ ನಾಟಕ ಪ್ರಾರಂಭವಾಗುತ್ತದೆ. ತಿರುಗಿ ಬಂದಾಗ ಅವನು ಬದಲಾಗಿದ್ದಾನೆ. ಸೋದರಿಯ ಸಾವು ಒಂದು ನಿಮಿತ್ತ ಅದೊಂದು ದರ್ಶನ ಕೊಟ್ಟಿತು. "ಜನ ಸಾಯುತ್ತಾರೆ ಅವರು ಸುಖಿಗಳಲ್ಲ" ಈ

ಜಗತ್ತು ಈಗಿರುವಂತೆ ಸಹಿಸಲಸಾಧ್ಯ ಎನಿಸುತ್ತದೆ. ಅವನಿಗೆ ಇದ್ದಕ್ಕಿದ್ದಂತೆ, ಅಸಾಧ್ಯವಾದದ್ದನ್ನು ಪಡೆಯುವ, ಸಾಧ್ಯವಾಗಿಸುವ ಆಸೆಯಾಗುತ್ತದೆ. ಅವನಿಗೆ ಚಂದ್ರನನ್ನು ಹಿಡಿದು ತರುವ ಆಸೆಯಾಗುತ್ತದೆ. ಜನ ಅಜ್ಞಾನಿಗಳು, ಅವರಿಗೇನು ಬೇಕೆಂದು ಅವರಿಗೇ ಗೊತ್ತಿಲ್ಲ, ವಿಚಾರವನ್ನು ತರ್ಕಬದ್ಧ ತುದಿಗೆ ಒಯ್ಯುವ ಧೈರ್ಯ ಅವರಿಗಿಲ್ಲ ಎನ್ನುತ್ತಾನೆ.

ಸಿಸೋನಿಯ ಕಾಲಿಗುಲನಿಗಿಂತ ವಯಸ್ಸಿನಲ್ಲಿ ಬಹಳ ಹಿರಿಯಳಾದರೂ ಅವನ ಪ್ರೇಯಸಿ.

ತರ್ಕವನ್ನು ಕೊನೆಮುಟ್ಟಿಸುವ ದಾರಿಯಲ್ಲಿ ಪ್ರಜೆಗಳೆಲ್ಲ ತಮ್ಮ ಆಸ್ತಿಯನ್ನು ಬೊಕ್ಕಸದ ಹೆಸರಿಗೆ ಬರೆಯಬೇಕೆಂದು ಆಜ್ಞೆ ಹೊರಡಿಸುತ್ತಾನೆ. ಬೊಕ್ಕಸ ಹಣವೇ ಮುಖ್ಯವಾದರೆ ಜೀವಕ್ಕೆ ಬೆಲೆಯಿಲ್ಲ. ಈ ತರ್ಕ ಜನ ತಿಳಿಯಬೇಕು. ತನಗೆ ಮನ ಬಂದಾಗ ಮನಬಂದವರನ್ನು ತಾನು ಕೊಲ್ಲಿಸಬಲ್ಲ. ಅವರ ಜೀವಕ್ಕೆ ಬೆಲೆಯಿಲ್ಲ. ತಾನು ಯಾರ ಅಂಕೆಗೂ ಒಳಪಡಬೇಕಿಲ್ಲ. ತನಗೆ ಅಧಿಕಾರವಿದೆ, ತಾನೊಬ್ಬನೇ ಸ್ವತಂತ್ರ ತಾನು ದೇವನಿಗಿಂತಲೂ ಮೇಲೇರುತ್ತೇನೆ ಎನ್ನುತ್ತಾನೆ- ಇದು ಮೊದಲನೆಯ ಅಂಕ.

ಎರಡನೆಯ ಅಂಕದಲ್ಲಿ ಕಾಲಿಗುಲ ತನ್ನ ಆಜ್ಞೆಗಳನ್ನು ಕೃತಿಗಿಳಿಸಿದ್ದಾನೆ. ಪ್ರಜೆಗಳನ್ನು ಪೀಡಿಸಿದ್ದಾನೆ, ಕೊಲ್ಲಿಸಿದ್ದಾನೆ, ಆಸ್ಥಾನಿಕರನ್ನು ಅವಮಾನಿಸಿದ್ದಾನೆ, ಅವರ ಹೆಂಡಿರನ್ನು ಅವರೆದುರೇ ಭೋಗಿಸಿದ್ದಾನೆ. ಗಟ್ಟಿಯಾಗಿ ಬಾಯಿ ಬಿಡಲೂ ಧೈರ್ಯವಿಲ್ಲದ ಅವರೆಲ್ಲ ಜೀವಚ್ಛವಗಳೆಂದು ಸಿದ್ಧಮಾಡಿದ್ದಾನೆ.

ಅವನ ವಿಚಾರಗಳ ತರ್ಕಬದ್ಧತೆಯನ್ನು ಅರ್ಥಮಾಡಿಕೊಂಡ ಕವಿ ಚೆರಿಯಾ, ಕಾಲಿಗುಲನ ವಿರುದ್ಧ ಪಿತೂರಿ ಪ್ರಾರಂಭವಾಗುತ್ತದೆ.

ಬೊಕ್ಕಸಕ್ಕೆ ಹೆಚ್ಚಿನ ಹಣ ತರಲು ಸೂಳೆಗಾರಿಕೆಯನ್ನು ಉತ್ತೇಜಿಸುತ್ತಾನೆ. ಹೆಚ್ಚು ಹೆಚ್ಚಾಗಿ ವೇಶ್ಯಾಗೃಹಗಳಿಗೆ ಭೆಟ್ಟಿಕೊಡುವವರಿಗೆ ಸನ್ಮಾನ, ಪ್ರತಿಪ್ರಜೆಯೂ ಒಂದು ವರ್ಷದಲ್ಲಿ ಅಂತಹ ಒಂದಾದರೂ ಸನ್ಮಾನ ಚೀಟಿ ಪಡೆಯಬೇಕು. ಜನ ತನ್ನನ್ನು ತಿರಸ್ಕಾರದಿಂದ ನೋಡುತ್ತಿದ್ದಾರೆಂಬುದನ್ನು ಅವನು ಅರಿತಿದ್ದಾನೆ. ಈ ಗದ್ದಲದ ಜಗತ್ತಿನಲ್ಲಿ ಮನುಷ್ಯ ಏಕಾಕಿಯಾಗುವದು ಸಾಧ್ಯವೇ ಇಲ್ಲ ಎನ್ನುತ್ತಾನೆ. ಪ್ರೀತಿ, ಆಸೆ, ವಿಷಾದ, ಸಿಹಿ-ಕಹಿ ಭಾವನೆಗಳು ಎಲ್ಲವೂ ನಮ್ಮ ಜೊತೆಗಾರರು ಇವರೆಲ್ಲರಿಂದ ದೂರವಾದ ಏಕಾಕಿತನ ಬಯಸುತ್ತಾನೆ.

ಮೂರನೆಯ ಅಂಕದ ಪ್ರಾರಂಭದಲ್ಲೇ ಕಾಲಿಗುಲ ವೀನಸ್ ದೇವತೆಯಂತೆ ವೇಷ ಧರಿಸಿ ನಿಂತು ಪ್ರಜೆಗಳಿಂದ ಪೂಜೆ ಕೈಕೊಳ್ಳುತ್ತಾನೆ. ಅವರನ್ನು ಅಣ

ವರ್ಣಿಸುತ್ತಾನೆ. ಇದೊಂದು ದೇವತೆಗಳ ವಿಡಂಬನೆ. ದೇವರೆಂದರೆ ಜನರ ಮೂಢ ನಂಬಿಕೆ ಮಾತ್ರ ತಾನೂ ದೇವರಾಗಬಲ್ಲೆ ತಾನು ವಿಧಿಯಾಗಿ ಜನರನ್ನು ಆಳಬಲ್ಲೆ. ಜನ ತಿರುಗಿಬಿದ್ದರೆ ಅಷ್ಟರ ಮಟ್ಟಿಗೆ ಅವರು ಜೀವಂತವಾಗಿದ್ದಾರೆಂದು ವ್ಯಾಖ್ಯಾನಿಸುತ್ತಾನೆ. ತನ್ನ ವಿರುದ್ಧದ ಥಿಯೂರಿಯನ್ನು ತಿಳಿದೂ ಅದನ್ನು ತರ್ಕದಿಂದ ಅಲ್ಲಗಳೆಯುತ್ತಾನೆ. ತರ್ಕವನ್ನೇ ಅವಲಂಬಿಸಿ ಮುನ್ನಡೆಯುವುದೇ ಹೊರತು ಹಿಂತಿರುಗಲಾಗದು ಎಂದು ನಿರ್ಣಯಿಸುತ್ತಾನೆ.

ಚೇರಿಯನನ್ನು ಎದುರಿಟ್ಟುಕೊಂಡು ವ್ಯಕ್ತಿ ವ್ಯಕ್ತಿಯ ಬೂಟಾಟಿಕೆಯ, ತೋರಿಕೆಯ ಬದುಕನ್ನು, ಬದುಕಿನ ಸಂಬಂಧಗಳ ಅರ್ಥ ಹೀನತೆಯನ್ನು ತೆರೆದಿಡುತ್ತಾನೆ.

ನಾಲ್ಕನೆಯ ಅಂಕದಲ್ಲಿ ಕಾಲಿಗುಲ ತನ್ನ ವಿರುದ್ಧ ಥಿಯೂರಿ ಮಾಡುತ್ತಿರುವವರ ಪುಕ್ಕಲುತನವನ್ನು ವಿಡಂಬನೆಗೈಯ್ಯುತ್ತಾನೆ. ಕಾಲಿಗುಲನನ್ನು ಸ್ನೇಹಿತನಾಗಿ, ನೆರಳಿನಂತೆ ಅನುಸರಿಸಿಕೊಂಡು ಬಂದಿದ್ದ ಸಿಪಿಯೋ ಅವನನ್ನು ತೊರೆದು ಹೋಗುತ್ತಾನೆ. ಎಲ್ಲ ಬಂಧನಗಳನ್ನು ಕಳಚಿಕೊಂಡಾಗ ಉಳಿದ ಒಂದೇ ತಂತು ಪ್ರೇಯಸಿ ಸಿಸೋನಿಯಾಳನ್ನು ಕಾಲಿಗುಲ ಕುತ್ತಿಗೆ ಹಿಸುಕಿ ಕೊಲ್ಲುತ್ತಾನೆ.

ಪ್ರೀತಿ, ಸುಖ, ದುಃಖ ಯಾವುವೂ ಅವನನ್ನು ತಣಿಸಲಾರವು. ಅವೆಲ್ಲವನ್ನೂ ಮೀರುವುದೇ ಸ್ವತಂತ್ರ್ಯ. ಆದರೆ ಇದರ ಅರಿವಿನೊಂದಿಗೇ ಸಾವು ಎದುರು ನೋಡುತ್ತದೆ. ಈ ತಿಳುವಳಿಕೆಯೊಂದಿಗೇ ಸಾಯುವುದು ಎಂತಹ ಕಟಿ!

ಈಗ ತಾನು ಆರಿಸಿಕೊಂಡ ತರ್ಕದ ದಾರಿ ಸರಿಯಾದುದಲ್ಲವೆಂಬ ಅರಿವಾಗುತ್ತದೆ. ಜೊತೆಗೇ ಸಾವೂ ಬರುತ್ತದೆ.

"ನಾನು ಇನ್ನೂ ಬದುಕಿದ್ದೇನೆ" ಎನ್ನುವುದೇ ಅವನ ಕೊನೆಯ ಶಬ್ದಗಳು.

ಈ ಸ್ಥೂಲ ಕತೆಯ ಹಂದರದಲ್ಲಿ 'ತುಘಲಕ'ದ ಕತೆಗೆ ಸಮಾನವಾದ ಅಂಶ ತೀರ ಕಡಿಮೆ. ಅಥವಾ ಇತಿಹಾಸದ ಪುಟಗಳಲ್ಲಿಲ್ಲದ, ಆದರೆ ಕಾಲಿಗುಲದಲ್ಲಿರುವ ಯಾವುದೇ ಕಥೆಯ ಅಂಶವನ್ನಾಗಲೀ, ಘಟನೆಗಳ ನೇರ ಉದಾಹರಣೆಯನ್ನಾಗಲೀ 'ತುಘಲಕ'ದಲ್ಲಿ ಕಾಣುವುದಿಲ್ಲ. ಆದರೂ ಅಲ್ಲಲ್ಲಿ ಕೆಲವು ಸಮಾನ ಅಂಶಗಳನ್ನು ಗುರುತಿಸಬಹುದು.

ಎರಡೂ ನಾಟಕಗಳ ಪ್ರಾರಂಭದಲ್ಲಿ ಅರಸನ ಕುರಿತಾದ ಪರ-ವಿರೋಧಿ ಅಭಿಪ್ರಾಯದ ಚರ್ಚೆ ಬರುತ್ತದೆ. ಕಾಲಿಗುಲ ಅವನ ಸೋದರಿಯನ್ನು ಪ್ರೀತಿಸಿದ್ದನೇ ಇಲ್ಲವೇ, ಅವನ ಕಣ್ಮರೆಗೂ ಅವಳ ಸಾವಿಗೂ ಇರುವ ಸಂಬಂಧ ಇವು ಮುಖ್ಯವಾಗಿ ಚರ್ಚೆಯ ವಿಷಯ ತುಘಲಕ ನಗರದ ಮೇಲೆ ಬಂದಾಗ "ಜಗತ್ತಿನ ಜನರೆಲ್ಲರ

ಕಣ್ಣು ಕುಕ್ಕಿಸುವ ರಾಜ್ಯ ಕಟ್ಟುವ" ತನ್ನ ಕನಸನ್ನು ಜನರೆದುರು ಇಡುತ್ತಾನೆ. ಕಾಲಿಗುಲ ತನ್ನ ಕಣ್ಮರೆಯ ಬಗ್ಗೆ ಹೇಳುವ ಮಾತು : ತಾನು "ಚಂದ್ರನನ್ನು (ಳನ್ನು!) ಅರಸಲು ಹೋಗಿದ್ದೆ" ಅಸಾಧ್ಯವಾದದ್ದನ್ನು ಸಾಧ್ಯವಾಗಿಸುವ ಅವನ ಹುಡುಕಾಟ ಇಲ್ಲಿ ವ್ಯಕ್ತವಾಗುತ್ತದೆ.

ತುಘಲಕ ತನ್ನ ಮಲತಾಯಿಯೊಡನೆ ಹೇಳುವ ಮಾತು–"...ನೆಲದಲ್ಲಿ ಸೇರಿಳಿಯುವ ಮೊದಲು ನಕ್ಷತ್ರಗಳಲ್ಲಿ ಜೋಂಗೆ ಬಿಚ್ಚುವದಾದರೂ ಹೇಗೆ ಕಳೆದ ಸುಲ್ತಾನರ ಬೇಗೆಗೆ ಬತ್ತದ ನನ್ನ ಪ್ರಜೆಗಳು. ಅವರಲ್ಲಿ ಆಸೆ ಹರಿಸಬೇಕು. ಅವರನ್ನು ಮೇಲಕ್ಕೆತ್ತಬೇಕು. ಅವರ ಆಸೆ ಆಕಾಂಕ್ಷೆಗಳಿಗೆ ನೀರೆರೆಯುವಂತಾಗ ಬೇಕು. ......ನಿದ್ರೆಗೆಲ್ಲಿ ಸ್ಥಾನ ಕೊಡಲಿ ನೀನೆ ಹೇಳು."

ಕಾಲಿಗುಲ ಹೆಲಿಕಾನ್‌ನಿಗೆ ಹೇಳುತ್ತಾನೆ.

"...ಅವರಿಗೆ ಏನುಬೇಕು, ಅವರಲ್ಲಿ ಏನಿಲ್ಲ ಎನ್ನುವದು ನನಗೆ ಗೊತ್ತು. ಅವರಿಗೆ ತಿಳುವಳಿಕೆಯಿಲ್ಲ. ಅವರಿಗೊಬ್ಬ ಬೋಧಕ ಬೇಕು, ತಾನೇನು ಹೇಳುತ್ತಿದ್ದೇನೆ ಎಂದು ಗೊತ್ತಿರುವಂತೆ ಬೋಧಕ ಬೇಕು.'' ಇದು ಅವನ ಆದರ್ಶ ಅದರ ಬೆನ್ನು ಹತ್ತಿದಾಗ.

''ನಾನು ನಿದ್ದೆಮಾಡಿದರೆ ನನಗೆ ಚಂದ್ರನನ್ನು ತಂದು ಕೊಡುವವರು ಯಾರು? ಎಂದು ಕಾಲಿಗುಲ ಪ್ರಶ್ನಿಸುತ್ತಾನೆ. ಇನ್ನೊಂದೆಡೆ ಕಾಲಿಗುಲ ಸಿಸೋನಿಯೊಳಗೆ ಹೇಳುತ್ತಾನೆ.

"...ನನ್ನೀ ಆಳಿಕೆಯನ್ನು ನಾನೊಂದು ಉಡುಗೊರೆಯಾಗಿಸುತ್ತೇನೆ— ಸಮಾನತೆಯ ಉಡುಗೊರೆ."

ಇಲ್ಲಿ ಭೇದವಿಷ್ಟೆ ಜನರಿಗೆ ತಿಳುವಳಿಕೆ ಕೊಡಬೇಕು, ಅವರನ್ನು ಮೇಲಕ್ಕೆತ್ತಬೇಕು ಎಂಬ ಕಳಕಳಿ ತುಘಲಕನಲ್ಲಿದ್ದರೆ, ಎಲ್ಲವನ್ನು ಸಮತಟ್ಟಾಗಿಸುವ (when all is levelled out) ಭಾವರಹಿತ ತಾರ್ಕಿಕತೆ ಕಾಲಿಗುಲನಲ್ಲಿ ಕಾಣುತ್ತೇವೆ.

ಕಾಲಿಗುಲನನ್ನು ಹತ್ತಿರದಿಂದ ಅರ್ಥಮಾಡಿಕೊಂಡ ಆತ್ಮೀಯ ಸ್ನೇಹಿತ ಸಿಪಿಯೋ ಕೊನೆಯ ಗಳಿಗೆಯಲ್ಲಿ ಅವನನ್ನು ತೊರೆದು ಹೋಗುತ್ತಾನೆ. "ನಾನು ದೂರ, ಬಹುದೂರ, ಹೋಗುತ್ತೇನೆ, ಇವೆಲ್ಲದರ ಅರ್ಥ ಹುಡುಕಲು ಪ್ರಯತ್ನಿಸುತ್ತೇನೆ. ಎಂದು ಹೊರಡುತ್ತಾನೆ. ಹಾಗೆಯೇ ತುಂಘಲಕನನ್ನು ಅನುಸರಿಸಿಕೊಂಡು ಬಂದ ಬರನಿ ಅವನಿಂದ ದೂರ ಹೋಗುತ್ತಾನೆ. ಅವನಾಡುವ ಮಾತು "ನಾನು ದುರ್ಬಲ ಸ್ವಾಮಿ. ಇಲ್ಲಿ ಉಳಿದರೆ ಹಿಂಸೆಯ ಬೇನೆಯನ್ನು ಬಡಿಸಿಕೊಳ್ಳದೆ ಇರಲಾರೆ, ನಾನು ನನ್ನನ್ನು ಬದುಕಿಸಿಕೊಳ್ಳಬೇಕು. ನಾನು ಬರುತ್ತೇನೆ.

"ಜನರೆಲ್ಲ ನನಗೆ ಯಾವ ಹೆಸರಿಟ್ಟಿದ್ದಾರೆ ಗೊತ್ತೇ? ಹುಚ್ಚ ಮೊಹಮ್ಮದ" ತುಘಲಕ ಒಂದೆಡೆ ಹೇಳುತ್ತಾನೆ.

"—ನೀನೂ ನಾನು ಹುಚ್ಚನೆಂದು ತಿಳಿಯುತ್ತೀಯೆ..." ಎಂದು ಕಾಲಿಗುಲನೂ ಒಂದೆಡೆ ಕೇಳುತ್ತಾನೆ.

ತನ್ನ ಏಕಾಕಿತನದಲ್ಲಿ ತಾನು ಕೊಂದವರೆಲ್ಲ ತನ್ನ ಸಂಗಾತಿಗಳು ಎಂದು ಕಾಲಿಗುಲ ಹೇಳಿದರೆ, ಹಿಂಸೆಯೊಡನೆ ಆಟವಾಡುವ ತನ್ನ ಹುಚ್ಚಿನಲ್ಲಿ ತಾನೊಬ್ಬನೇ ಇಲ್ಲ ಆ ಸರ್ವಶಕ್ತ ದೇವರೂ ತನ್ನ ಜೊತೆಗಿದ್ದಾನೆ ಎಂದು ತುಘಲಕ ಹೇಳುತ್ತಾನೆ.

ಹೀಗೆ ಅಲ್ಲಲ್ಲಿ ಸಮಾನಾಂತರವಾಗಿ ಬರುವ ವಾಕ್ಯಗಳಿದ್ದರೂ ಅವುಗಳ ಅರ್ಥ ಹಾಗೂ ಸಂದರ್ಭ ಪರಸ್ಪರ ವಿರೋಧವಾಗಿವೆ.

ವಸ್ತು, ಪಾತ್ರಚಿತ್ರಣ, ತಂತ್ರ ಹಾಗೂ ವಿಚಾರ ಈ ನಾಲ್ಕು ದೃಷ್ಟಿಕೋನಗಳಿಂದ ಕಾಲಿಗುಲ ಹಾಗೂ ತುಘಲಕ ನಾಟಕಗಳನ್ನು ಹೋಲಿಸಿ ನೋಡುವುದು ಸಮಂಜಸವೆನಿಸುತ್ತದೆ.

ವಸ್ತು–ಕಥಾವಸ್ತುವಿನ ದೃಷ್ಟಿಯಿಂದ ತುಘಲಕಕ್ಕೆ ಬೇಕಾದ ಕತೆಯು ಹಂದರ, ಘಟನಾವಳಿಗಳು ಇತಿಹಾಸದ ಪುಸ್ತಕದಲ್ಲೆ ದೊರಕುತ್ತವೆ. ಕಾಲಿಗುಲದ ಕತೆ ಯಾ ಘಟನೆಗಳ ಯಾವ ಭಾಗವೂ ತುಘಲಕದಲ್ಲಿ ಬಂದಿಲ್ಲವೆಂದೇ ಹೇಳಬೇಕು. ತುಘಲಕನ ಹಿತಚಿಂತನೆಯನ್ನೇ ಬಯಸುವ ಅವನ ಮಲತಾಯಿಯ ಕುರಿತು ಇತಿಹಾಸ ಪುಸ್ತಕಗಳಲ್ಲಿ ಪ್ರಸ್ತಾಪ ಕಂಡುಬರುವುದಿಲ್ಲ. ಆದರೆ ಅವಳಿಗೆ ಸಮಾನವಾಗಿ ಕಾಲಿಗುಲದಲ್ಲಿ ಪಾತ್ರಗಳಿಲ್ಲ. ಸಿಸೋನಿಯು ಕಾಲಿಗುಲನ ಹಿತಚಿಂತಕಿಯಾದರೂ ಅವಳು ಅವನ ಪ್ರೇಯಸಿ, ಮಂತ್ರಿಯನ್ನು ತಾನೇ ಕೊಲ್ಲಿಸಿದೆನೆಂದು ಹೇಳಿದ ಮಲತಾಯಿ, ಆ ತಪ್ಪಿಗಾಗಿ, ತುಘಲಕ–ಮರಣದಂಡನೆ ವಿಧಿಸುತ್ತಾನೆ. ಆದರೆ ಕಾಲಿಗುಲ ಸಿಸೋನಿಯಳ ಯಾವ ತಪ್ಪು ಇಲ್ಲದೆಯೂ ತನ್ನ ತರ್ಕದ ಕೊನೆ ಮುಟ್ಟಲು ಅವಳನ್ನು ಸ್ವತಃ ಕ್ರೂರವಾಗಿ ಕೊಲ್ಲುತ್ತಾನೆ. ಹಾಗೆಯೇ ತುಘಲಕದ ಅಝೀಝು ಮತ್ತು ಅಝುರಿ ಪಾತ್ರಗಳು ಕಾರ್ನಾಡರ ಸೃಷ್ಟಿ. ಅದಕ್ಕೆ ಸಮನಾದ ಪಾತ್ರಗಳು ಕಾಲಿಗುಲದಲ್ಲಿಲ್ಲ.

ಪಾತ್ರ ಚಿತ್ರಣದಲ್ಲಿ ತುಘಲಕ ಹಾಗೂ ಕಾಲಿಗುಲ ಈ ಎರಡು ಪಾತ್ರಗಳನ್ನು ಮುಖ್ಯವಾಗಿ ಹೋಲಿಸಬೇಕು. ಇವೆರಡೂ ಪರಸ್ಪರ ಸಂಪೂರ್ಣ ಭಿನ್ನವಾದ ವಿಭಿನ್ನವಾದ ಪಾತಳಿಯಲ್ಲಿ ಚಿತ್ರಿತವಾಗಿರುವ ಪಾತ್ರಗಳು. ಮೂಲಭೂತವಾಗಿ ಕಾಲಿಗುಲ ಹೊರಗಿನ (ನಾಟಕದಲ್ಲಿ) ಕ್ರಿಯೆಗಳಿಗೆ ಪ್ರತಿಕ್ರಿಯಿಸುವದಿಲ್ಲ. ಅವನೊಳ

ಗಡೆಯೇ ನಡೆದ ವೈಚಾರಿಕ ಕ್ರಿಯೆಗೆ ಅವನು ಬಹಿರಂಗವಾಗಿ ಪ್ರತಿಕ್ರಿಯಿಸುತ್ತಾನೆ. ಆ ಪ್ರತಿಕ್ರಿಯೆಯ ಪರಿಣಾಮ ಪ್ರಜೆಗಳು, ಅವನ ಸುತ್ತಲಿನವರ ಮೇಲೆ ಅತಿ ಕ್ರೂರವಾಗಿ ಆಗುತ್ತಿದ್ದರೂ ಅವುಗಳಿಂದ ಕಾಲಿಗುಲ ವಿಚಲಿತನಾಗುವುದಿಲ್ಲ. ಹಾಗಾಗಿ ಕಾಲಿಗುಲ ಒಂದು ವಿಚಾರದ, ತತ್ವದ ಸಂಕೇತವಾಗುತ್ತಾನೆ. ಆ ತತ್ವದ ಸತ್ಯಾಸತ್ಯತೆ, ಸಾರ್ವಕಾಲಿಕತೆಯನ್ನರಿಯಲು ಕಾಲಿಗುಲ ನಿಮಿತ್ತ ಮಾತ್ರನಾಗಿ, ಪ್ರಜೆಗಳು ಪ್ರಯೋಗಪಶುಗಳಾಗುತ್ತಾರೆ. ಈ ಪಾತ್ರಗಳನ್ನು ತನ್ನ ವಿಚಾರಗಳಿಗೆ ಅಳವಡಿಸಿ ಕುಣಿಸುವ ನಾಟಕಕಾರ ಅದೃಶ್ಯನಾಗಿದ್ದೂ ತನ್ನ ಇರವನ್ನು ಸ್ಥಾಪಿಸುತ್ತಾನೆ. ಅಥವಾ ಅವನ ಇರವು ನಾಟಕದ ಅವಿಭಾಜ್ಯ ಅಂಗವಾಗುತ್ತದೆ. ಇದಕ್ಕೆ ವಿರುದ್ಧವಾಗಿ ತುಘಲಕ ನಾಟಕದಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಗೂ ಪ್ರತಿಕ್ರಿಯಿಸುತ್ತಾನೆ. ಈ ಕ್ರಿಯೆ/ಪ್ರತಿಕ್ರಿಯೆಗಳ ಸರಪಳಿ ಎಲ್ಲಿಯೂ ತುಂಡಾಗದೆ ಪಾತ್ರಗಳನ್ನು ಜೀವಂತವಾಗಿರಿಸುತ್ತದೆ. ತುಘಲಕ ಜೀವಂತ ಐತಿಹಾಸಿಕ ಪಾತ್ರವಾಗುತ್ತಾನೆ. ಸುತ್ತಲಿನ ಪ್ರತಿಕ್ರಿಯೆಗಳಿಗೆ ಸ್ಪಂದಿಸುತ್ತ ತುಘಲಕ ಬೆಳೆಯುತ್ತಾನೆ, ಬದಲಾಗುತ್ತಾನೆ, ಕೊನೆಯಲ್ಲಿ ತನ್ನ ಶಕ್ತಿಯ ಮಿತಿಯನ್ನು ಅರ್ಥಮಾಡಿಕೊಳ್ಳುತ್ತಾನೆ. ಕಾಲಿಗುಲ ಬದುಕಿನ ಅರ್ಥಹೀನತೆಯನ್ನು ತನ್ನ ಪ್ರಯೋಗಗಳ ಮೂಲಕ ಸಿದ್ಧಪಡಿಸಹೊರಟಿದ್ದರೆ ತುಘಲಕ ತನ್ನ ಪ್ರಯೋಗಗಳ ಮೂಲಕ ಬದುಕಿಗೆ ಅರ್ಥ ಕೊಡಲು, ಪ್ರಜೆಗಳನ್ನು ಸುಖಿಯಾಗಿಸಲು, ಆದರ್ಶ ರಾಜ್ಯ ಕಟ್ಟಲು ಹವಣಿಸುತ್ತಾನೆ. ಕಾಲಿಗುಲ ಕ್ರೂರಿಯಾಗಿ, ಸ್ವಾರ್ಥಿಯಾಗಿ ಕಂಡರೆ ತುಘಲಕ ಆದರ್ಶವಾದಿಯಾಗಿ, ಅರಸನಾಗಿ, ವೈಚಾರಿಕ ನೆಲೆಯಲ್ಲಿ ನಿಂತ ಮಾನವತಾವಾದಿಯಾಗಿ ಕಾಣುತ್ತಾನೆ. ಬಹುಶಃ ತನ್ನ ತಪ್ಪಿನ ಅರಿವಿನೊಂದಿಗೆ ಸತ್ತ ಕಾಲಿಗುಲ ತನ್ನ ಅನುಭವದ ನೆನಪಿನೊಂದಿಗೆ ಮತ್ತೊಮ್ಮೆ ಅರಸನಾಗಿ ಹುಟ್ಟಿದರೆ ಅವನು ತುಘಲಕನಂತಾಗಬಹುದು. ಆ ದೃಷ್ಟಿಯಿಂದ ನೋಡುವದಾದರೆ 'ಕಾಲಿಗುಲ'ದಲ್ಲಿ ಕಂಡ ದೋಷವನ್ನು ಕಾರ್ನಾಡರು 'ತುಘಲಕ'ದಲ್ಲಿ ವ್ಯಾಖ್ಯಾನಿಸಿದ್ದಾರೆನ್ನಬಹುದು. ಹಾಗೆ 'ತುಘಲಕ' ಕಾಲಿಗುಲದ ಅನುಕರಣೆಯಾಗದೆ. ಅದಕ್ಕೆ ಪ್ರತಿಕ್ರಿಯೆಯಾಗುತ್ತದೆ. ಇದನ್ನು ನೆಗೆಟಿವ್ ಇನ್‌ಫ್ಲುಯೆನ್ಸ್ ಎಂದು ಕರೆಯಬಹುದು.

ತುಘಲಕ ಅರಸನಾಗಿ ನಡೆಸಿದ ಪ್ರಯೋಗಗಳು ಐತಿಹಾಸಿಕ ದಾಖಲೆಗಳಿಂದ ಆಯ್ದವು. ಆದರೆ ಕಾಲಿಗುಲದಲ್ಲಿ ಬರುವ ಹೆಚ್ಚಿನ ಘಟನೆಗಳು ತನ್ನ ಉದ್ದೇಶ ಪೂರ್ತಿಗಾಗಿ ಕಾಮೂ ಸೃಷ್ಟಿಸಿಕೊಂಡವುಗಳು.

ತಾಂತ್ರಿಕವಾಗಿ ವಿವೇಚಿಸುವದಾದರೆ ಕಾಲಿಗುಲದಲ್ಲಿ ತುಘಲಕದಲ್ಲಿರುವಷ್ಟು ವೈವಿಧ್ಯಗಳಿಲ್ಲ. ಕಾಲಿಗುಲದಲ್ಲಿರುವದು ಒಂದೇ ಒಂದು ಎಳೆಯಾದರೆ ತುಘಲಕದಲ್ಲಿ ಹತ್ತು-ಹಲವಾರು ಎಳೆಗಳು ಹದವಾಗಿ ಬೆರೆತಿವೆ. ತಂತ್ರ ಹಾಗೂ ಬಂಧದ ದೃಷ್ಟಿಯಿಂದ ಕಾರ್ನಾಡರ ತುಘಲಕದ ಶೇಕ್ಸಪಿಯರನ ಐತಿಹಾಸಿಕ ನಾಟಕಗಳಿಗೆ ಹೆಚ್ಚು

ಹತ್ತಿರವಾಗಿದೆ. ಈ ಪ್ರಬಂಧದ ಪ್ರಾರಂಭದಲ್ಲಿಯೇ ಹೇಳಿದಂತೆ ಅಲ್ಲಿನ ಬೇರೆ ಬೇರೆ ನಾಟಕಗಳ ಕೆಲವು ಘಟನೆಗಳನ್ನು ಕತೆ ಕಟ್ಟುವ ವಿಧಾನಗಳನ್ನು ಕಾರ್ನಾಡರು ಇಲ್ಲಿ ಬಳಸಿಕೊಂಡಿದ್ದಾರೆ. ಹಾಗೆ ಬಳಸಿಕೊಂಡ ರೀತಿ ಎಷ್ಟು ಸಮರ್ಪಕವಾಗಿದೆಯೆಂದರೆ ನಾಟಕಗಳು ಬೇರೆಯಾಗಿಯೇ ನಿಲ್ಲುತ್ತವೆ.

ಮೇಲಿನ ಅಭ್ಯಾಸದಿಂದ ಒಂದಂಶ ಸ್ಪಷ್ಟ. ಕಾರ್ನಾಡರ ತುಘಲಕ ಕಾಮೂನ ಕಾಲಿಗುಲ ಅಲ್ಲ. ಕಾರ್ನಾಡರು ಕಾಲಿಗುಲಕ್ಕಿಂತಲೂ ಶೇಕ್ಸ್‌ಪಿಯರನ ಐತಿಹಾಸಿಕ ನಾಟಕಗಳನ್ನು ಹೆಚ್ಚು ಹತ್ತಿರದಿಂದ ಕಂಡಿದ್ದಾರೆ. ಅವುಗಳ ಪ್ರಭಾವ 'ತುಘಲಕ'ದ ಮೇಲೆ ವಿಪುಲವಾಗಿದೆ. ಮೊದಲ ನೋಟಕ್ಕೆ. ಸಾಮಾನ್ಯ ಅಭ್ಯಾಸಕ್ಕೆ ಎದ್ದು ಕಾಣುವಂತಿದೆ. ಇಲ್ಲಿಯೂ ಅನುಕರಣೆಯಿಲ್ಲ. ಶೇಕ್ಸಪಿಯರನ ತಂತ್ರಗಳನ್ನು ತಮ್ಮ ಉದ್ದೇಶಕ್ಕೆ ಅರ್ಥಪೂರ್ಣವಾಗಿ ಕಾರ್ನಾಡರು ಬಳಸಿಕೊಂಡಿದ್ದಾರೆ. ಇಲ್ಲಿ ಕಾರ್ನಾಡರ ತುಘಲಕದ ಮೌಲ್ಯಮಾಪನಕ್ಕಿಂತ ಅಲ್ಲಿನ ಪ್ರಭಾವವನ್ನು ಗುರುತಿಸುವದು ನನ್ನ ಮುಖ್ಯ ಉದ್ದೇಶವಾಗಿದ್ದರಿಂದ ಈ ವಿವೇಚನೆಯನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಪ್ರಿಯ ಪ್ರೇಯಸಿಗೆ*

ಮೂಲ : **ಸರೋಜಿನಿ ನಾಯ್ಡು**
ಅನು : **ಸಿ. ಪಿ. ಕೆ.**

ನೀನು ನಿನ್ನ ಸೌಂದರ್ಯವನ್ನು ಗುಲಾಬಿಯಲ್ಲಿ
ನಿನ್ನ ಕೀರ್ತಿಯನ್ನು ಉಷೆಯಲ್ಲಿ
ನಿನ್ನ ಮಾಧುರ್ಯವನ್ನು ಕೋಗಿಲೆಯಲ್ಲಿ
ನಿನ್ನ ಧವಳಿಮೆಯನ್ನು ಹಂಸದಲ್ಲಿ ಅಭಿವ್ಯಕ್ತಿಸುತ್ತೀಯೆ.

ನನ್ನ ಎಚ್ಚರವನ್ನು ಕನಸಿನ ಹಾಗೆ, ನಿದ್ದೆಯನ್ನು ಚಂದ್ರನ ಹಾಗೆ
ಕಾಡುತ್ತೀಯೆ;
ಕಸ್ತೂರಿ ಪರಿಮಳದ ಹಾಗೆ ನನ್ನನ್ನು ಆವರಿಸುತ್ತೀಯೆ,
ರಾಗದ ಹಾಗೆ ನನ್ನನ್ನು ವಶಪಡಿಸಿಕೊಳ್ಳುತ್ತೀಯೆ.

ಹೌದು, ನಾನು ನಿನ್ನೊಂದು ಕೋಮಲ ಕ್ಷಣಿಕ ಕೃಪೆಯನ್ನು
ಯಾಚಿಸಿದಾಗ,
ನೀನು ಕೂಗುತ್ತೀಯೆ, "ನಾನು ತೆರೆಯ ಹಿಂದಿದ್ದೇನೆ,
ನನ್ನ ಮುಖ ತೋರಿಸಲಾರೆ".

ಯಾವುದೇ ಮೂರ್ಖ ಪರದೆ ನನ್ನ ಹಂಬಲವನ್ನು
ನನ್ನ ಆನಂದದಿಂದ ಬೇರ್ಪಡಿಸುತ್ತದೆಯೆ ?
ಯಾವುದೇ ಭಂಗುರ ಪರದೆ ನಿನ್ನ ಸೌಂದರ್ಯವನ್ನು ನನ್ನ
ಚುಂಬನದಿಂದ ಬಚ್ಚಿಡುತ್ತದೆಯೆ ?

ನಿನ್ನ–ನನ್ನ ಈ ಸಮರ ಏನು ?
ಬಿಟ್ಟುಕೊಡು ನಿರರ್ಥಕ ಹೋರಾಟವನ್ನು ;
ನೀನು ನನ್ನ ಹೃದಯದೊಳಗಿನ ಹೃದಯ,
ನನ್ನ ಜೀವದೊಳಗಿನ ಜೀವ.

---

* **ಮೂಲತಃ ಇದು ಉರ್ದು ಕವನ ; ಇದನ್ನು ಸರೋಜಿನಿ ನಾಯ್ಡು Humayun to Zobeida ಎಂಬ ಹೆಸರಿನಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ.**

ದಕ್ಷಿಣ ಭಾರತದ ಸ್ಥಳನಾಮಗಳು*

ಒಂದು ಸಮೀಕ್ಷೆ

ರಘುಪತಿ ಕೆಮ್ತೂರು

ನಮ್ಮ ದೇಶದ ಪಾಲಿಗೆ ಇನ್ನೂ 'ಕನ್ನೆನೆಲ'ವಾಗಿಯೇ ಉಳಿದು ಬಿಟ್ಟಿರುವ ಸ್ಥಳನಾಮ ವಿಜ್ಞಾನ ಮತ್ತು ಒಟ್ಟಾರೆ ನಾಮವಿಜ್ಞಾನಗಳ ಕುರಿತು ಈಚೆಗೆ ಕೆಲವು ವಿದ್ವಾಂಸರು ಆಸಕ್ತಿ ವಹಿಸುತ್ತಿರುವುದು ಆಶಾದಾಯಕವೆನಿಸಿದೆ. ಮೈಸೂರಲ್ಲಿ 1978ರಲ್ಲಿ ಸ್ಥಾಪಿತವಾದ 'ಭಾರತೀಯ ಸ್ಥಳನಾಮ ಸಂಘ', ಪ್ರತಿವರ್ಷ ನಾಮ ವಿಜ್ಞಾನದಲ್ಲಿ ಆಸಕ್ತರಾದ ವಿದ್ವಾಂಸರ ಸಮ್ಮೇಳನವನ್ನು ಜರುಗಿಸುತ್ತ ಬಂದಿದೆಯಲ್ಲದೆ, ವಾರ್ಷಿಕಾಂಕವನ್ನೂ ಹೊರತರುತ್ತಿದೆ. 1983ರಲ್ಲಿ ತಿರುವನಂತಪುರದಲ್ಲಿ ರೂಪಿತವಾದ 'ಸ್ಥಳನಾಮ ಸಂಘ' (PLANS)ಕೂಡಾ ಸಮ್ಮೇಳನಗಳನ್ನೂ ವಿಚಾರ ಗೋಷ್ಠಿಗಳನ್ನೂ ನಿಯತಕಾಲಿತವಾಗಿ ನಡೆಸಿಕೊಂಡು ಬಂದಿದೆ. ವಾರ್ಷಿಕ ಪತ್ರಿಕೆಯನ್ನೂ ಪ್ರಕಟಿಸುತ್ತಿದೆ. ಜತೆಗೆ 'ಸ್ಥಳನಾಮಾಧ್ಯಯನಗಳ ನೋಟಗಳು' ಎಂಬ ಮೌಲಿಕ ಗ್ರಂಥವನ್ನೂ ಪ್ರಕಟಿಸಿದೆ.

ಇವು ಏನಿದ್ದರೂ ಸ್ಥಳನಾಮಾಧ್ಯಯನವನ್ನು ಒಂದು ಸುಸಂಬದ್ಧ ಅಧ್ಯಯನ ಕ್ಷೇತ್ರವನ್ನಾಗಿ ರೂಪಿಸುವ ಆರಂಭಿಕ ಯತ್ನಗಳೆನ್ನಬೇಕು. ಬೇರೆ ಬೇರೆ ಭಾಷೆಗಳಲ್ಲಿ ಚದುರಿದಂತೆಯೇ ಅವರೂ ಕೆಲವು ಉತ್ಕೃಷ್ಟ ಸ್ಥಳನಾಮ ಶೋಧನೆಯ ಲೇಖನಗಳು ಪ್ರಕಟವಾಗಿವೆ. ಆದರೆ, ಎಲ್ಲ ಪ್ರಮುಖ ದ್ರಾವಿಡ ಭಾಷೆಗಳ ಸ್ಥಳನಾಮಗಳೊಳಗಣ ಸಾದೃಶ್ಯ-ವೈದೃಶ್ಯಗಳ ತೌಲನಿಕ ಹಾಗೂ ಸಮಗ್ರ ಅಧ್ಯಯನ ಇನ್ನೂ ಮೊದಲಿಡಬೇಕಾಗಿದೆ. ಈ ನಿಟ್ಟಿನಲ್ಲಿ ಡಾ॥ ಕೆ. ಎಂ. ಜಾರ್ಜ್ ಅವರ 'ದಕ್ಷಿಣ ಭಾರತದ ಸ್ಥಳನಾಮಗಳು' ಎಂಬ ಗ್ರಂಥ ವಿಶೇಷ ಉಲ್ಲೇಖವನ್ನು ಬಯಸುತ್ತದೆ.

ಪ್ರೊ ಜಾರ್ಜ್ ಅವರು ಹಿರಿಯ ಮಲೆಯಾಳಿ ವಿದ್ವಾಂಸರು. 'ಸರ್ವವಿಜ್ಞಾನ ಕೋಶಂ' ಎಂಬ ಮಲೆಯಾಳ ವಿಶ್ವಕೋಶ ಮತ್ತು 'ಭಾರತೀಯ ಸಾಹಿತ್ಯದ ವಿಶ್ವ ಕೋಶದ ಪ್ರಧಾನ ಸಂಪಾದಕರಾಗಿ 'ತೌಲನಿಕ ಭಾರತೀಯ ಸಾಹಿತ್ಯ'ದ ಎರಡು ಬೃಹತ್ ಸಂಪುಟಗಳನ್ನು ಹೊರತಂದಿರುವರು. ಸಾಹಿತ್ಯ ಅಕಾದೆಮಿಯ...,

---

* ಇದು ತಿರುವನಂತಪುರದ 'ದ್ರಾವಿಡ ಭಾಷಾವಿಜ್ಞಾನ ಸಂಘ' (DLA)ದ ಪ್ರಕಟಣೆ (1986,)ಪು, 284, ಬೆಲೆ: 160

ರಾಷ್ಟ್ರೀಯ ಮಹತ್ವದ ಆಧುನಿಕ ಭಾರತೀಯ ಸಾಹಿತ್ಯವೆಂಬ ಹೊಸ ಯೋಜನೆಯ ಪ್ರಧಾನ ಸಂಪಾದಕರು. ಇವರು ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ (1976–86) ಕಲೆಹಾಕಿದ ಮಾಹಿತಿಗಳನ್ನು ಆಧರಿಸಿದ ವಿಶ್ಲೇಷಣೆ ಈ ಗ್ರಂಥದಲ್ಲಿದೆ.

ಗ್ರಂಥದ 'ಬೆನ್ನುಡಿ'ಯಲ್ಲಿ ಹೀಗೆ ಬರೆಯಲಾಗಿದೆ : 'ದ್ರಾವಿಡ ಕುಟುಂಬದ ನಾಲ್ಕು ಪ್ರಮುಖ ಭಾಷೆಗಳನ್ನು, ಅಂದರೆ ತಮಿಳು, ಮಲೆಯಾಳ, ಕನ್ನಡ ಮತ್ತು ತೆಲುಗು, ಅವುಗಳ ಸ್ಥಳನಾಮಗಳ ಧ್ವನಿವೈಜ್ಞಾನಿಕ ಹಾಗೂ ರೂಪವೈಜ್ಞಾನಿಕ ಲಕ್ಷಣಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸುವ ಮೂಲಕ, ಹತ್ತಿರತರಲು ಈ ಗ್ರಂಥ ಉದ್ದೇಶಿಸಿದೆ. ಈ ನಾಲ್ಕು ಭಾಷೆಗಳ ಸ್ಥಳನಾಮಗಳಲ್ಲಿ ಪ್ರತಿಬಿಂಬಿತವಾದ ರೀತಿಯಲ್ಲಿ ಸಮಾನ ಹಾಗೂ ವಿಭಿನ್ನ ವ್ಯಾಕರಣಾತ್ಮಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಂಶಗಳ ಲಕ್ಷಣಗಳನ್ನು ಶೋಧಿಸುವ ಅವಕಾಶವನ್ನು ನಾವಿಲ್ಲಿ ಪಡೆಯುತ್ತೇವೆ.

'ಈ ಆಕರ್ಷಕ ಅಧ್ಯಯನ ಕ್ಷೇತ್ರದಲ್ಲಿ ಈ ಗ್ರಂಥವನ್ನು ಓದುಗನಿಗೆ ಸ್ಥಳನಾಮಗಳ ಮೂಲ ಅಂಶಗಳಲ್ಲಿ ಅಡಕವಾಗಿರುವ ಸಂಬಂಧಗಳ ಒಳನೋಟಗಳನ್ನು ಪಡೆಯಲು ಸಹಾಯಕವಾಗುವ ಒಂದು ಆರಂಭಸೂಚಕ ಎಂಬುದಾಗಿ ಪರಿಗಣಿಸಬಹುದು. ಸ್ಥಳನಾಮಗಳ ಎರಡು ಪ್ರಮುಖ ಅಂಗಗಳಾಗಿರುವ ನಿರ್ದಿಷ್ಟಗಳು ಮತ್ತು ವಾರ್ಗಿಕಗಳೆರಡನ್ನೂ ಈ ಗ್ರಂಥ ಚರ್ಚಿಸುತ್ತದಾದರೂ, ಪ್ರಾಯೋಗಿಕವಾಗಿ ಬದ್ಧಗುಂಪಾಗಿರುವ ವಾರ್ಗಿಕಗಳ ಕ್ಷೇತ್ರವೇ ಇದರ ಲಕ್ಷ್ಯದ ಕೇಂದ್ರವಾಗಿದೆ'.

ಈ ಮಾತುಗಳಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಈ ಗ್ರಂಥದ ಅಧ್ಯಯನ ಸ್ಥಳನಾಮ ವಾರ್ಗಿಕಗಳ ಆಧಾರದಲ್ಲಿ ಸಾಗಿದೆ. ನಿರ್ದಿಷ್ಟಗಳ ಅಧ್ಯಯನದಲ್ಲಿ ಕೆಲವು ತೊಡಕುಗಳಿವೆ. ಅಂದರೆ, ಅವು ಪ್ರಾದೇಶಿಕವಾಗಿ ಹಾಗೂ ಭಾಷೆ ಭಾಷೆಗಳ ನಡುವೆ ಭಿನ್ನವಾಗಿದ್ದು, ಪರಸ್ಪರ ಹೋಲದಿರಬಹುದು. ಅವುಗಳನ್ನು ಒಂದು ಗುಂಪಿಗೆ ಒಳಪಡಿಸುವುದು ಕಷ್ಟವಾದೀತು. ಎರಡನೆಯದಾಗಿ, ಇದೀಗ ವಾರ್ಗಿಕಗಳ ಸ್ಥಾನದಲ್ಲಿ ನಿಂತಿರುವ ಘಟಕಗಳು ಸ್ವತಂತ್ರ ಸ್ಥಳನಾಮಗಳಾಗಿ ಕೂಡ (ಅಂದರೆ ಏಕಪದದ ಸ್ಥಳನಾಮಗಳಾಗಿ) ಇದ್ದುದು, ಇದ್ದಿರುವುದು, ಅವುಗಳ ಪ್ರಾಚೀನತೆಯ ದ್ಯೋತಕವಾಗಿದೆ. ಈ ಕಾರಣಕ್ಕಾಗಿ ಸ್ಥಳನಾಮಗಳನ್ನು ವಾರ್ಗಿಕವಾರು ವಿಭಜಿಸಿ ವಿಶ್ಲೇಷಿಸಿ ವ್ಯುತ್ಪತ್ತಿ ನೀಡುವುದು ಸೂಕ್ತ.

ಆದರೆ, ಅಧ್ಯಯನದ ನೆಲೆ ವಾರ್ಗಿಕವಷ್ಟೇ ಆಗಿಬಿಟ್ಟರೆ, ನಿರ್ದಿಷ್ಟಗಳನ್ನು ಒಳಗೊಂಡು ನಡೆಯುವ ಅಧ್ಯಯನದಷ್ಟು ವ್ಯಾಪಕವೂ ಫಲಪ್ರದವೂ ಆಗಲಾರದು ಏಕೆಂದರೆ, ವಾರ್ಗಿಕವಾಗಿ ಕಾಣಿಸಿಕೊಳ್ಳುವ ಕೆಲವು ಸ್ಥಳನಾಮ ಘಟಕಗಳು ನಿರ್ದಿಷ್ಟದ ಜಾಗದಲ್ಲಷ್ಟೇ ಗೋಚರವಾಗಬಹುದು ; ಅವು ಸ್ವಾರಸ್ಯಕರ ಅರ್ಥವನ್ನು ಒಳಗೊಂಡಿರಲೂಬಹುದು. ಆದ್ದರಿಂದ, ನಿರ್ದಿಷ್ಟ ಆಕೃತಿಮಗಳನ್ನು ಕೈಬಿಡದ

ರೀತಿಯಲ್ಲಿ ಎಲ್ಲ ಘಟಕಗಳನ್ನು ಪರಿಶೀಲಿಸಿ ಮಾಡುವ ಅಧ್ಯಯನ ಪ್ರಾದೇಶಿಕ ಸ್ಥಳನಾಮ ಸಂಶೋಧನೆಯ ಸಂದರ್ಭದಲ್ಲಿ–ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ–ಹೆಚ್ಚು ಉಪಾದೇಯ. ರಾಜ್ಯಮಟ್ಟದ ಮತ್ತು ದ್ರಾವಿಡಭಾಷಾ ಸ್ಥಳನಾಮಗಳ ಅಧ್ಯಯನದಲ್ಲಿ ವಾರ್ಗಿಕಗಳನ್ನು ಮಾತ್ರ ಮುಖ್ಯವಾಗಿ ಪರಿಶೀಲಿಸುವುದು ಕಾರ್ಯಸಾಧ್ಯವೆನಿಸಿದರೂ ಸಹ, ಕೋಶ ರಚನೆಯ ಸಂದರ್ಭದಲ್ಲಿ ಪ್ರಮಾಣಭೂತತೆ ಮತ್ತು ಸಮಗ್ರತೆಯ ಗುಣಗಳನ್ನು ದಕ್ಕಿಸಿಕೊಳ್ಳಬೇಕಾದರೆ ನಿರ್ದಿಷ್ಟಗಳ ಜತೆ ಜತೆಗೇ ಮತ್ತು ನಿರ್ದಿಷ್ಟಗಳ ಬೆಳಕಿನಲ್ಲಿ ವಾರ್ಗಿಕಗಳನ್ನು–ಅಂದರೆ ಸ್ಥಳನಾಮ ಸಮಸ್ತ ಪದವನ್ನು–ಅಧ್ಯಯನಮಾಡುವುದು ಹೆಚ್ಚು ಸೂಕ್ತ.

ಇಲ್ಲಿ ಇನ್ನೊಂದಂಶದ ಬಗ್ಗೆ ಪ್ರಸ್ತಾಪಿಸುವುದು ಅಗತ್ಯವೆನಿಸುತ್ತದೆ. ಅದೇನೆಂದರೆ, ಸ್ಥಳನಾಮಗಳನ್ನು ಯಾವ ನಿರ್ದಿಷ್ಟ ಅಧ್ಯಯನ ವಿಧಾನವನ್ನು (methodolgy) ಅನುಸರಿಸಿ ವಿಶ್ಲೇಷಿಸಬೇಕು ಎಂಬುದು. ನನಗೆ ತಿಳಿದ ಮಟ್ಟಿಗೆ, ಸ್ಥಳನಾಮಗಳ ಅರ್ಥಸಾಧ್ಯತೆ ನಮಗೆ ಹೆಚ್ಚು ಸಮರ್ಪಕವಾಗಿ ಪರಿಪೂರ್ಣವಾಗಿ ಮನವರಿಕೆಯಾಗಬೇಕೆಂದಿದ್ದರೆ ಬಹುಶಾಸ್ತ್ರೀಯ ವಿಧಾನವನ್ನು (multi-disciplinary approach) ಅನುಸರಿಸಬೇಕು. ಏಕೆಂದರೆ, ಕೇವಲ ಭಾಷಾವೈಜ್ಞಾನಿಕ ವಿಧಾನದ ಅಧ್ಯಯನದ ದೋಷ ಏನೆಂಬುದಕ್ಕೆ ನಮ್ಮಲ್ಲಿ ಹಲವಾರು ವಿದ್ವಾಂಸರ ಸ್ಥಳನಾಮಾಧ್ಯಯನದ ಲೇಖನಗಳೇ ಸಾಕ್ಷಿಯಾಗಿವೆ. ಸ್ಥಳನಾಮಗಳು ಮೂಲತಃ ಭಾಷಿಕ ಘಟಕಗಳೇ ಆಗಿದ್ದರೂ, ಭಾಷಾವೈಜ್ಞಾನಿಕ ನಿಯಮಗಳ ಪರಿಜ್ಞಾನ, ಅವು ರೂಪುಗೊಳ್ಳುವ, ಮಾರ್ಪಾಡಾಗುವ ಪರಿಶ್ರಮವನ್ನು ತಿಳಿಯಲಿಕ್ಕೆ ಸಹಕಾರಿಯಾಗುತ್ತದೆ ವಿನಾ ಅವುಗಳ ಯಥಾರ್ಥತೆಯನ್ನು ತನ್ನಿಂತಾನೇ ನಿಷ್ಕೃಷ್ಟವಾಗಿ, ನಿಖರವಾಗಿ ಕಂಡುಕೊಳ್ಳಲಾರದು ಎಂಬುದು ಕೇವಲ ಗುಮಾನಿಯಷ್ಟೇ ಅಲ್ಲ. ಸ್ಥಳ ಸಮೀಕ್ಷೆ, ಪ್ರಾದೇಶಿಕ ಭಾಷಾವ್ಯತ್ಯಾಸ, ಸಾಂಸ್ಕೃತಿಕ–ಸಾಮಾಜಿಕ ಮಾನವಶಾಸ್ತ್ರದ ಹಿನ್ನೆಲೆ, ಭೂವಿವರ, ಶಾಸನಗಳು, ಜಾನಪದ ಇವೆಲ್ಲವುಗಳ ಸಂಯೋಜಿತ ಅಧ್ಯಯನದ ಮೂಲಕ ಅರ್ಥವಿವರಣೆ ತರ್ಕಬದ್ಧವೂ ಸಮರ್ಪಕವೂ ಆಗಬಲ್ಲುದು. ನಿಘಂಟು ನೋಡಿ ಶಬ್ದರೂಪವನ್ನು ಬಿಡಿಸಿ ಅರ್ಥ ಹೇಳುವ ಕ್ರಮ ದೂರಾನ್ವಯದ, ಅರ್ಥಹೀನ ಉಪಕ್ರಮವಾಗುವುದು ಎಂಬುದಕ್ಕೆ ನಮ್ಮ ಬಹುತೇಕ ಸ್ಥಳನಾಮಾಧ್ಯಯನದ ಪ್ರಯತ್ನಗಳು ನಿದರ್ಶನವೊದಗಿಸುತ್ತವೆ. ಸಮೀಕ್ಷೆಗೆ ಒಳಪಟ್ಟಿರುವ ಈ ಗ್ರಂಥವೂ ಈ ಮಾತಿಗೆ ಪೂರ್ತಿ ಹೊರತಾಗಿಲ್ಲ.

ಈ ಗ್ರಂಥದಲ್ಲಿ ಎರಡು ಭಾಗಗಳಿದ್ದು ಮೊದಲ ಭಾಗದಲ್ಲಿ ಪೀಠಿಕೆ, ಭಾರತದಲ್ಲಿ ಸ್ಥಳನಾಮಗಳ ಅಧ್ಯಯನದ ಸಮೀಕ್ಷೆ, ತೌಲನಿಕ ಅಧ್ಯಯನದ ವ್ಯಾಪ್ತಿ, ವಾರ್ಗಿಕ-ನಿರ್ದಿಷ್ಟಗಳು ಚೆಲ್ಲುವ ಬೆಳಕು, ಸಾಮಾನ್ಯ ಪರಿಶೀಲನೆಗಳು ಹೀಗೆ ಐದು

ಅಧ್ಯಾಯಗಳಿವೆ. ಎರಡನೆ ಭಾಗದಲ್ಲಿ ಕೃತಿಕಾರನ ಪಾಂಡಿತ್ಯ, ಅಧ್ಯಯನದ ಪರಿಶ್ರಮ, ಶೋಧನೆಯ ಸತ್ವ ಹೆಚ್ಚು ಮನದಟ್ಟಾಗುತ್ತವೆ.

ಗ್ರಂಥದ ಮುಕ್ಕಾಲು ಭಾಗಕ್ಕಿಂತ ಹೆಚ್ಚು ಅವಕಾಶವನ್ನು ವಾರ್ಗಿಕಗಳ ಸಂಕಲನೆ ಮತ್ತು ವಿವರಣೆಗಳಿಗೆ ನೀಡಿರುವುದು ಸರಿಯಾಗಿದೆ. ಒಟ್ಟು 236 ವಾರ್ಗಿಕಗಳನ್ನು ವಿಭಜಿಸಿ, ನಾಲ್ಕು ಭಾಷೆಗಳ ನಡುವಣ ಸಂಬಂಧ-ವ್ಯತ್ಯಾಸವನ್ನು ಗುರುತಿಸಿರುವುದಲ್ಲದೆ, ವಾರ್ಗಿಕಗಳ ಹಂಚಿಕೆಯ (dispersal) ಪ್ರಮಾಣವನ್ನು ಲೆಕ್ಕಾಚಾರ ಮಾಡಿರುವುದರಿಂದ ಮೊದಲ ಭಾಗದ ವಿಶ್ಲೇಷಣೆಗೆ ನಿಖರತೆ, ತೂಕ ಪ್ರಾಪ್ತವಾಗಿದೆ (ಪು. 47–52). ನಿರ್ದಿಷ್ಟಗಳನ್ನು ಅವುಗಳ ಅರ್ಥಾನುಸಾರ ವಿಭಜಿಸಿ, ಭಾಷೆ–ಭಾಷೆಗಳೊಂದಿಗೆ ಹೋಲಿಸಲು ಅನುಕೂಲವಾಗುವಂತೆ ದೀರ್ಘವಾದ ಉದಾ. ಗಳ ಪಟ್ಟಿ ಕೊಟ್ಟಿದೆ (ಪು. 54-62). ವಾರ್ಗಿಕಗಳ ಉಚ್ಚಾರ ಕ್ರಮ (ಲಿಪ್ಯಂತರ)ವನ್ನು ಗುರುತಿಸಿರುವುದು ಉಪಯುಕ್ತವಾಗಿದೆ. ವಾರ್ಗಿಕಗಳನ್ನು ಪ್ರಾಕೃತಿಕ ಲಕ್ಷಣಗಳು, ಸಾಪೇಕ್ಷ ಕಲ್ಪನೆಗಳು, ವಸತಿ–ಬೀದಿ ಹೆಸರುಗಳು ಇತ್ಯಾದಿ, ಮತ್ತು ಇತರ–ಹೀಗೆ ಐದು ಗುಂಪುಗಳನ್ನಾಗಿ ವಿಭಜಿಸಲಾಗಿದೆ. ಸೂಕ್ಷ್ಮವಾಗಿ ನೋಡಿದರೆ, ಇವುಗಳಲ್ಲಿ ಇನ್ನೂ ಹೆಚ್ಚಿನ ಗುಂಪುಗಳನ್ನು ಕಲ್ಪಿಸಿ ವಿಶ್ಲೇಷಿಸಲು ಸಾಧ್ಯ.

ಸಂಶೋಧಕರಿಗೆ ಮತ್ತು ಸಾಮಾನ್ಯರಿಗೆ ಕೂಡಾ ಎರಡನೇ ಭಾಗ ಹೆಚ್ಚು ಉಪಯುಕ್ತವಾದುದರಿಂದ, ಅಲ್ಲಿನ ಅರ್ಥವಿವರಣೆಯ ಸಮರ್ಪಕತೆಯನ್ನು ಪರಿಶೀಲಿಸಲು ಹೊರಡೋಣ. ಇಲ್ಲಿ ನನ್ನ ಅಧ್ಯಯನದ ಕ್ಷೇತ್ರ ಕರಾವಳಿ ಪ್ರದೇಶದ ಕನ್ನಡ–ತುಳು ಸ್ಥಳನಾಮಗಳಾಗಿರುವುದರಿಂದ, ಈ ಪ್ರದೇಶದ ಹೆಸರುಗಳ ನಿಷ್ಪತ್ತಿಯ ಔಚಿತ್ಯವನ್ನು ಇದೇ ರೀತಿ ವಿಮರ್ಶಿಸಿದರೆ ಗ್ರಂಥದ ಒಟ್ಟಾರೆ ಸ್ಥಾನ ಏನು ಎಂಬ ಅಂಶ ಖಚಿತವಾದೀತು.

1. ‘ಅಕಂ’ ಎಂಬ ವಾರ್ಗಿಕದಡಿ ‘ಕರ್ನಾಟಕ’ ಎಂಬ ಉದಾ. ಇದ್ದು, ಅದನ್ನು ‘ಕರ್ನಾಟ+ಅಕಂ=ಕಪ್ಪುನಾಡಿನೊಳಗೆ’ (ಪು. 69) ಎಂದು ವರ್ಣಿಸಲಾಗಿದೆ. ಇಲ್ಲಿ ಹೆಸರು ಮೂಲತಃ ಕನ್ನಡದ್ದಾಗಿದ್ದು (ಕರು+ನಾಡು?) ‘ಕ’ ಪ್ರತ್ಯಯ ಸಂಸ್ಕೃತೀಕರಿಸುವ ಸಂದರ್ಭದಲ್ಲಿ ಸೇರಿಕೊಂಡಿದ್ದಾಗಿದೆ. ಹೀಗಾಗಿ, ಸಂಸ್ಕೃತದ ‘ಸ್ವಾರ್ಥೇ ಕನ್’ ಪ್ರತ್ಯಯ ದ್ರಾವಿಡದ ‘ಅಕಂ’ಗೆ ಸಂವಾದಿ ಎಂದು ತಿಳಿಯುವಂತಿಲ್ಲ. ಸಂಸ್ಕೃತ ಸ್ವೀಕರಿಸಿದ ಪ್ರಾಕೃತ, ಕನ್ನಡ ಶಬ್ದಗಳ ಕೊನೆಯಲ್ಲಿ ನಾಟಕಗಳಲ್ಲಿ ಪಾತ್ರಗಳ ದೇಸೀ ಹೆಸರನ್ನು ಸಂಸ್ಕೃತೀಕರಣಮಾಡುವ ಸಂದರ್ಭದಲ್ಲಿ ‘ಕ’ ಪ್ರತ್ಯಯ ಹೆಚ್ಚಾಗಿ ಬಳಕೆಯಾಗುವುದನ್ನು ಸ್ಮರಿಸಿಕೊಂಡರೆ ಇದು ಸ್ಪಷ್ಟವಾಗುತ್ತದೆ.

2. ‘ಅಗಳು’ಗೆ ಕೊಟ್ಟ (ಪು. 69) ಉದಾ.ಗಳಲ್ಲಿ ‘ಕಂದಗಾಲ’ (‘ಕಂದಕ + ಅಗಳ’) ಬೇಗಮಂಗಲ (‘ಬೇಗಮನ = ಬೇಗಮ್ಮಳ’), ಚಿಕ್ಕನೆಟ್ಟಿಗಾಳ—ಇವು ಮೂಲತಃ ‘ಮಂಗಲ’ ವಾರ್ಗಿಕದ ರೂಪಾಂತರಗಳು ಎಂಬುದನ್ನು ಸಂಶೋಧಕರು ಗುರುತಿಸಿದ್ದಾರೆ (ಚಿದಾನಂದಮೂರ್ತಿ, 1976). ‘ಅಗಳು’ ವಾರ್ಗಿಕ ಕೃತಕ ಭೌಗೋಳಿಕ ಲಕ್ಷಣವಾಗಿದ್ದರೆ, ‘ಮಂಗಲ’ ಜಲಸಂಬಂಧವಾಚಕ (ರಘುಪತಿ ಕೆಮ್ತೂರು, 1979) ವಾಗಿದೆ. ಇಂಥ ಪ್ರಮಾದಗಳು ಕೃತಿಯುದ್ದಕ್ಕೂ ಕಾಣಸಿಕೊಳ್ಳಲು ಕಾರಣ, ಲೇಖಕರು ಕನ್ನಡ ಸ್ಥಳನಾಮಗಳಿಗೆ ಸಂಬಂಧಿಸಿ ಪ್ರಕಟವಾದ ಪ್ರಮುಖ ಲೇಖನಗಳನ್ನು - ಅವುಗಳಲ್ಲೂ ಹೆಚ್ಚು ಶಾಸ್ತ್ರೀಯವೂ ಆಧುನಿಕವೂ ಆದ ಪರಿಶೀಲನೆಗಳುಳ್ಳವು—ಗಮನಿಸಿಲ್ಲ ಎಂಬುದು. ಗ್ರಂಥದ ಕೊನೆಯಲ್ಲಿ ಕೊಟ್ಟ ‘ಗ್ರಂಥಋಣ’ದ ಪಟ್ಟಿಯಲ್ಲಿ ಪ್ರಮುಖ ಸ್ಥಳನಾಮಗ್ರಂಥ ಮತ್ತು ಲೇಖನಗಳ ಹೆಸರೇ ಇಲ್ಲ.

3. ‘ಅಂಗಿ’ ಎಂಬ ವಾರ್ಗಿಕಕ್ಕೆ ಕನ್ನಡದ ಉದಾ.ಗಳನ್ನು ನೀಡುತ್ತಾ ಬೆಳ್ಳಂಗಿ (‘ಬೆಳ್ಳ = ಬಿಳಿ,’ ಪು. 73), ಹವಂಗಿ (‘ಹವ - ಹವೆ, ಒಂದು ಬಲಿ’ ಪು. 73) ಎಂದು ವಿವರಿಸಿದೆ. ನಿಘಂಟನ್ನು ಮಾತ್ರ ಆಧರಿಸಿ ನೀಡಿದ ವಿವರಣೆ ಇದೆಂದು ಬೇರೆ ಹೇಳಬೇಕೇ ? ಸ್ಥಳನಾಮಗಳ ವಾರ್ಗಿಕವಾಗಿ ಕಾಣಸುವ ಅಂಗಿ, –ಂಗೆ, –ಗ, –ಗಿ...ಮುಂತಾದವು ‘ಗ್ರಾಮ’ದ ರೂಪಾಂತರವಾಗಿರುವ ಸಂಭವ ಅಧಿಕ

4. ‘ಅಂಕಾಟಿ’ (ಅಂಗಡಿ)ಯ ಅಡಿಯಲ್ಲಿ, ‘ಬೆಳ್ತಂಗಡಿ’ಗೆ (‘ಬೆಳ್ - ಬಿಳಿ’, ಪು. 74) ಎಂದೂ, ‘ಪಡಂಗಡಿ’ಗೆ (‘ಪಡ – ಸರಿಯಾದ, ಒಳ್ಳೆಯ ಸ್ಥಿತಿ, ಆಹಾರ, ಮೆಟ್ಟಿಲು, ಪು. 75) ಎಂದೂ ಅರ್ಥೈಯಿಸಲಾಗಿದೆ. ಸ್ಥಳನಾಮ ನಿಷ್ಪತ್ತಿಯಲ್ಲಿ ವಾರ್ಗಿಕವನ್ನು ಪ್ರತ್ಯೇಕಿಸಿ ವರ್ಗೀಕರಿಸಿ, ಅದರ ವಿವರಣೆ ನೀಡುವುದಷ್ಟೇ ಸ್ಥಳನಾಮ ವಿಜ್ಞಾನಿಯ ಕೆಲಸವಲ್ಲ; ನಿರ್ದಿಷ್ಟದೊಂದಿಗೆ ವಾರ್ಗಿಕದ ಸಂಬಂಧ, ಅವೆರಡೂ ಕೂಡಿ ಧ್ವನಿಸುವ ಅರ್ಥವನ್ನು ಆತ ಗ್ರಹಿಸಬೇಕಾಗುತ್ತದೆ. ವಾರ್ಗಿಕದ ನಿಷ್ಪತ್ತಿ ಎಷ್ಟೇ ಸಮರ್ಪಕವಾಗಿದ್ದರೂ, ನಿರ್ದಿಷ್ಟದ ಅಪಗ್ರಹಿಕೆಯೊಂದಿಗೆ ಸ್ಥಳನಾಮದ ಒಟ್ಟು ನಿಷ್ಪತ್ತಿ ಅಯಥಾರ್ಥವಾಗುತ್ತದೆ; ದೂರಾನ್ವಯವಾಗುತ್ತದೆ. ಮೇಲಿನ ಉದಾ.ಗಳಲ್ಲಿ ‘ಬೆಳ್’ ಜಲಾರ್ಥಕವಾಗಿದ್ದು, ‘ಪಡಂಗಡಿ’ಯ ನಿರ್ದಿಷ್ಟ ‘ಪಡು’ ದಿಕ್ಕಿಗೆ ಸಂಬಂಧಿಸಿದ್ದಾಗಿದೆ. (ಲಿಪ್ಯಂತರದಲ್ಲಾದ ದೋಷವೂ ಈ ನಿಷ್ಪತ್ತಿಯ ದೋಷಕ್ಕೆ ಕಾರಣವಾಗಿರಬಹುದು).

5. ‘ಅಟಿ’ಯ ಕೆಳಗೆ ನೀಡಿದ ‘ಕಂಕನಾಡಿ’ ಎಂಬ ಉದಾ. (ಪು. 77) ‘ಕಂಕಣ’ಕ್ಕಿಂತ ‘ಕನಕ’ ಎಂಬ ವ್ಯಕ್ತಿನಾಮದ ಸಂಬಂಧದಿಂದ ಬಂದಿರುವ ಸಾಧ್ಯತೆ

ಹೆಚ್ಚಾಗಿದೆ. ಹಾಗಾದಾಗ ಅದರ ನಿಷ್ಪತ್ತಿ 'ಕಂಕನ+ಅಡಿ' ಆಗುವುದಿಲ್ಲ; 'ಕಂಕನ+ಹಾಡಿ>ಕಂಕನಾಡಿ' ಆಗುತ್ತದೆ.

6. 'ಅಡ್ಕ' 'ಒಂದು ಜಾತಿಯ ಬಳ್ಳಿ'ಯಾಗಿರುವುದಕ್ಕಿಂತ (ಪು. 77) ನಿರ್ದಿಷ್ಟ ಭೂವಾಚಕ (ಎತ್ತರದ ಮೈದಾನ, ಮರವಂಟ್ಟು ಪೊದರುಗಳು ಚದುರಿದಂತೆ ಇರುವ, ಅಷ್ಟಾಗಿ ಜನವಸತಿಯಿಲ್ಲದ ಸ್ಥಳ; cf. ಅಡೆ, ರಘುಪತಿ ಕೆಮ್ತೂರು, 1979) ವಾಗಿರುವುದಕ್ಕೆ 'ಹತ್ಯಡ್ಕ, ಪಳ್ಳತ್ತಡ್ಕ, ಮುಳ್ಳಡ್ಕ, ಪಾಲಡ್ಕ'ಗಳೂ ನಿದರ್ಶನವೊದಗಿಸುತ್ತವೆ. 'ಪಾಲಡ್ಕ'ದ ನಿಷ್ಪತ್ತಿ 'ಪಾಲ್=ಹಾಲು' (ಪು. 78) ಎಂದಾಗಿರದೆ 'ಪಾಲೆ+ಅಡ್ಕ' (ಪಾಲೆ–ಹಾಲೆ: ಒಂದು ಜಾತಿಯ ಮರ) ಎಂದಿರಬೇಕು.

7. 'ಅಣೈ' ಘಟಕದಡಿ 'ಅಣೆಕಟ್ಟು' (ಪು. 78) ಎಂದರ್ಥ ನೀಡಿದರೂ, 'ಅಣೆ=ಗುಡ್ಡದ ತುದಿ, ಎತ್ತರದ ಗುಡ್ಡ' ಎಂಬರ್ಥ ಕನ್ನಡ–ತುಳುಗಳಲ್ಲೂ (cf. ತೆ. ಏನೆ, ಏನ.) ಪ್ರಚಲಿತವಾಗಿರುವುದನ್ನು ಗುರುತಿಸಿಲ್ಲ.

8. 'ಅದ್ರಿ'ಗೆ 'ಹಳ್ಳಿ, ಬೆಟ್ಟ, ಗುಡ್ಡ' ಮುಂತಾಗಿ ವಿವರಣೆ ಕೊಟ್ಟಿದು (ಪು. 79), 'ಕೊಡಜಾದ್ರಿ' ಎಂಬ ಹೆಸರನ್ನು 'ಕೊಡಜ–ಕೊಡದಲ್ಲಿ ಹುಟ್ಟಿದವ, ಅಗಸ್ತ್ಯನಿಗೆ ಅನ್ವಯಿಸಲಾಗಿದೆ. ಆದರೆ 'ಕೊಡಚಾದ್ರಿ' ಎಂಬ ಹೆಸರು 'ಕೊಡಸಿಗೆ' (ಸಂ.ಕುಟಜ) ಎಂಬ ಮೂಲಿಕೆಯಿಂದ ಬಂದಿರುವುದು ಹೆಚ್ಚು ಸಂಭಾವ್ಯ. ಇಲ್ಲೇ ಕೊಟ್ಟಿರುವ 'ಉದ್ರಿ, ನಂದ್ರಿ, ಕದ್ರಿ'ಗಳನ್ನು ಬೇರೆ ರೀತಿ ನಿಷ್ಪನ್ನಗೊಳಿಸುವುದು ಹೆಚ್ಚು ಸೂಕ್ತ.

9 'ಅಂಪಲಂ'ದ ವಿವರಣೆ ಸರಿಯಾಗಿದ್ದರೂ, 'ಅಮ್ಮೆಂಬಳ'ದ (ಅಮ್ಮೆ=ಮುಖಂಡ, ತಂದೆ<ಆಣ್ಮ–ಮುಖಂಡ ಅಥವಾ ಬಲಿಷ್ಠ ವ್ಯಕ್ತಿ) ಹಾಗೂ 'ಕರಂಬಳ'ದ (ಉಕ<ಕಾರ್=ಕಪ್ಪು, ಕಲ್ಲು) ನಿಷ್ಪತ್ತಿ ವೈಜ್ಞಾನಿಕವಾಗಿಲ್ಲ. ಇವು ಕ್ರಮವಾಗಿ 'ಅಮ್ಮೆ+ಪಳ್ಳ' (ಗುಡ್ಡದ ಮೇಲಣ ಹಳ್ಳ) ಮತ್ತು 'ಕಾರ್+ಪಳ್ಳ' (ಗುಡ್ಡದ ಬಳಿಯ ಹಳ್ಳ') ಎಂಬಂತೆ ನಿಷ್ಪನ್ನಗೊಳ್ಳಬೇಕಾದುವು.

10. 'ಅರ=ಬಂಡೆ' ಎಂಬ ವರ್ಗಿಕಕ್ಕೆ ನೀಡಿದ ಉದಾ.ಗಳಲ್ಲಿ 'ಬೆಳ್ಳಂಬಾರೆ' ('ಬೆಳ್ಳಂಬು=ಜಿಳಿ, ನೀರು', ಎಲ್ಲಾರೆ ('ಎಲ್ಲೆ=ಗಡಿ'), ಜೆಲ್ಲಾರೆ (ಜೆಲ್ಲ–ನೀರು, ಬಿಳಿ)ಗಳ ನಿಷ್ಪತ್ತಿ (ಪು. 83) ಕ್ರಮವಾಗಿ 'ಬೆಳ್ಳಂ+ಪಾರೆ', 'ಎಲ್ಯ (ಸಣ್ಣ)+ಅರ್' ಮತ್ತು 'ಬೆಳ್+ಅರ್' (ದ್ವಿರುಕ್ತಿ) ಎಂದಿರಬೇಕು.

11. 'ಅಳಿಕೆ, ಆಳಿಕೆ'ಯಡಿ 'ಬಂದಳಿಕೆ' ಎಂಬ ಹೆಸರನ್ನು 'ಬಂದ+ಅಳಿಕೆ' (that which came, ಪು. 85) ಎಂದು ವಿವರಿಸಿರುವುದು ವಿಚಿತ್ರವಾಗಿದೆ. ಅದು 'ಬಂಡೆ+ಅಳಿಕೆ' ಎಂದಿದ್ದು ಡ>ದ ಆದಂತಿದೆ.

12. 'ಆಲ್'ಕ್ಕೆ 'ಕಬ್ಬಿನ ಆಲೆಮನೆ' (ಪು. 89) ಎಂದಷ್ಟೇ ಅಲ್ಲದೆ ಜಲಾರ್ಥವಿರುವುದನ್ನು, ವಿರಲವಾಗಿಯಾದರೂ ಪೂಜಾಕ್ಷೇತ್ರ (<ಆಲಯ: ಸಂ.) ಎಂದರ್ಥವಿರುವುದನ್ನು ದ.ಕ.ದ ಹೆಸರುಗಳಲ್ಲಿ ಗುರುತಿಸಲಾಗಿದೆ. ಈ ನಿಟ್ಟಿನಲ್ಲಿ ನೋಡಿದಾಗ, ಹೊಸಾಲ (ಹೊಸಾಳ<ಹೊಸ+ಹಾಳ), ಕೊಡಿಯಾಲ (>ಕೋಡು+ಆಲ್) ಎಂಬ ರೀತಿ ನಿಷ್ಪನ್ನಗೊಳಿಸುವುದು ಹೆಚ್ಚು ತರ್ಕಬದ್ಧವಾದೀತು.

13. 'ಇಟಂ–ಸ್ಥಳ' (ಇಡೆ/ಎಡೆ, ಪು. 92) ಎಂಬುದಕ್ಕೆ ಗುಲ್ಬರ್ಗ ಬಿಟ್ಟರೆ ಬೇರೆ ಜಿಲ್ಲೆಗಳ ಉದಾ. ನೀಡಿಲ್ಲ. ತುಳುವಿನಲ್ಲಿ 'ಎಡೆ ಮಾರ್ಗವಾಚಕವಾಗಿರುವುದಕ್ಕೆ 'ಇಡ್ಯ' ಶಾಸನೋಕ್ತ ರೂಪ: 'ಯೆಡೆಯ'), 'ಇಡ್ಯದು' (<ಇದೆ+ಕಿದು) ಮುಂತಾದ ಹೆಸರುಗಳೇ ಸಾಕ್ಷಿ.

14. 'ಎರಿ' ಎಂಬ ಘಟಕಕ್ಕೆ ನೀಡಿದ ಅರ್ಥ ಸಮಗ್ರವಾಗಿಲ್ಲ; ದ.ಕ.ದಿಂದ ಉದಾ.ಗಳೇ ಇಲ್ಲ (ಪು. 101). ದ.ಕ.ದ ಕೊಡೇರಿ, ಉದೇರಿ, ಮೊಗೇರಿ ಮುಂತಾದ ಹೆಸರುಗಳಲ್ಲಿ 'ಎರಿ' ಉನ್ನತಭೂವಾಚಕವಾಗಿದ್ದು, ಕೆಲವೊಮ್ಮೆ ದ್ವಿರುಕ್ತಿಯಾಗಿಯೂ ಕಾಣಿಸಿಕೊಂಡದ್ದಿದೆ.

15. 'ಕಟವು' ಘಟಕದ ಕೆಳಗೆ 'ಕೊಕ್ಕಡ'ದನ್ನು 'ಕೊಕ್ಕು+ಕದ>ಕೊಕ್ಕಪಡ >ಕೊಕ್ಕಡ' ಎಂಬುದಾಗಿ ವ್ಯಾಖ್ಯಾನಿಸಿರುವುದು ಸರಿಯೆನಿಸುವುದಿಲ್ಲ. ಇದು 'ಕೊಕ್ (=ಪರ್ವತಾಗ್ರ)+ಅಡೆ' (ದ್ವಿರುಕ್ತಿ) ಎಂದಿರಬೇಕು. 'ಕಾಕ್ಕಡ' ಮತ್ತು 'ಪಾವಗಡ'ಗಳ ನಿರುಕ್ತಿಯೂ ದೋಷಯುಕ್ತವಾಗಿದೆ (105).

16. 'ಕಂಡಿಗ'ಕ್ಕೆ 'ಗದ್ದೆಯ ಭಾಗ'ದೊಂದಿಗೆ 'ಕಿಟಕಿ' (ತ.) ಎಂಬರ್ಥವನ್ನೂ ಕೊಟ್ಟಿದೆ (109); ಖಂಡಿತ<ಖಂಡಿ=ಕಿಟಕಿ ಎಂದು ವಿವರಿಸಿದೆ. ಆದರೆ, ತುಳು–ಕನ್ನಡದಲ್ಲಿ ಸ್ವತಂತ್ರ ಸ್ಥಳನಾಮಗಳೇ ಆಗಿರುವ ಕಂಡಿಗ, ಕಂಡ್ಯೊ ಮುಂತಾದ ಹೆಸರುಗಳು ಗದ್ದೆಯನ್ನೇ ಸೂಚಿಸುತ್ತವೆ. (ಕಿಟಕಿಯಂಥ ಗೃಹಭಾಗದಿಂದ ಹೆಸರು ಬರಲಾರದು).

17. 'ಕರೆ=ದಡ' ಎಂಬ ಅರ್ಥಕ್ಕೆ ಕನ್ನಡದ ಉದಾ.ಯಾಗಿ 'ಬಡಗಾಯೆಕ್ಕರೆ' 'ತೆಂಕಾಯೆಕ್ಕರೆ'ಗಳನ್ನು ಉಲ್ಲೇಖಿಸಿದ್ದು, 'ತೆಂಕಾ'ಕ್ಕೆ 'ತೆಂಗಿನಕಾಯ' ಎಂದು ('ದಕ್ಷಿಣ'ದ ಜತೆಗೆ) ಅರ್ಥ ನೀಡುವ (ಪು. 113) ಅಗತ್ಯವಿರಲಿಲ್ಲ. ಇಲ್ಲಿ ಅತ್ಯಂತರದಲ್ಲಿ ದೋಷವುಂಟಾಗಿ ಅಪಾರ್ಥಕ್ಕೆ ಎಡೆಮಾಡಿಕೊಟ್ಟಿದೆ. 'ಬಡಗ+ಎರ್+ಕಾಲ್' 'ತೆಂಕ+ಎರ್+ಕಾರ್' ಎಂಬಂತೆ ವಿಂಗಡಿಸಬೇಕಾದ ಹೆಸರುಗಳಿವು. ಇವು ಸಮುದ್ರದ ದಡದಲ್ಲಿರುವ ಸ್ಥಳಗಳೂ ಅಲ್ಲ.

18. 'ಕವಲ'ವನ್ನು ಕವಲ್, ಕಾವಲು (ಕ.) ಗಳೊಂದಿಗೆ ಸೇರಿಸಿರುವುದಕ್ಕೆ (ಪು. 116) ಸಂದಿಗ್ಧತೆ ಕಾರಣ. ಬಸ್ತಿಕಟ್ಟೆ ಕವಲ್, ಚೌಳೂರ್ ಕವಲ ಇತ್ಯಾದಿಗಳ ವಿವರಣೆಯಲ್ಲಿ ಖಚಿತತೆ ಇಲ್ಲ (ಪು. 117–119). ಕಾವಲಿಗೆ ಕಾವಲಪಡೂರು, ಕಾವಲಕಟ್ಟೆಗಳಂಥ ಹೆಸರುಗಳೊಂದಿಗೆ ಕವಲ್–ಕಬೆ–ಕಬರ್‌ಗಳಿಗೆ ಕವಲ್‌ತೋಡು, ಕಬೆನಾಡು, ಕವತಾರ್ ಮುಂತಾದವು ದೊರಕುತ್ತವೆ.

19. 'ಕುಂಜ'ದ ಕೆಳಗೆ ನೀಡಿದ 'ಕರ್ಕುಂಜ' 'ಕಾಕುಂಜ'ಗಳ ವಿಭಜನಾಕ್ರಮ ಸರಿಯಲ್ಲ (ಪು. 130). ಅದು 'ಕಾರ್ + ಕುಂಜ' ಎಂದಿರಬೇಕು.

20. 'ಕದುರು'ವಿಗೆ ನೀಡಿದ ಉದಾ. 'ಬಲ್‌ಕುದ್ರು' (ಬಲ = ಶಕ್ತಿ) ತಪ್ಪು ಉಚ್ಚಾರದ ಫಲವಾಗಿದೆ (ಪು. 131). ಅದು ನಿಜವಾಗಿ 'ಬಾಳೆಕುದ್ರು' ಎಂದಿರಬೇಕು. (ಸಂಸ್ಕೃತದ 'ರಂಭಾದ್ವೀಪ' ಎಂಬ ಶಿಷ್ಟರೂಪ (ಗ್ರಾಂಥಿಕರೂಪ) ಕೂಡ ಅರ್ಥಕ್ಕೆ ಅನುಸಾರವಾಗಿಯೇ ಹುಟ್ಟಿಕೊಂಡುದು.

21. 'ಕುಂಪ'ಕ್ಕೆ ಕನ್ನಡದಲ್ಲಿ ''ಇಟ್ಟಿಗೆಯ ಕಂಬ' (131) ಎಂದಷ್ಟೇ ಅರ್ಥವಲ್ಲ; 'ಗುಡ್ಡ ದಿಬ್ಬ' ಎಂದೂ ಆಗುತ್ತದೆ. 'ನರಗುಂದ', 'ತಳಗುಂದ' (= ತಾಳಗುಂದ)ಗಳ ವ್ಯಾಖ್ಯೆ ಸರಿಯಲ್ಲ.

22. 'ಕುಪ್ಪಂ' ಕೆಳಗೆ 'ಮಕ್ಕಿಕೊಪ್ಪ' ಎಂಬ ಹೆಸರನ್ನು ಸಂಸ್ಕೃತದ 'ಮಕ್ಷಿ' (ಜೇನುನೊಣ, ನೊಣ)ದಿಂದ ನಿಷ್ಪನ್ನಗೊಳಿಸಿರುವುದು ಸಮರ್ಪಕವಾಗಿಲ್ಲ (ಪು. 135). 'ಮಕ್ಕಿ' ಎಂಬುದು ಒಂದು ಕೃಷಿ ಕ್ಷೇತ್ರದ ಜಾತಿ.

23. 'ಕುಳ್ಳಂ, ಕೊಳಂ' ಎಂಬುದರ ಕೆಳಗೆ 'ಬನ್ನಿಗೊಳ'ವನ್ನು ನಿಷ್ಪನ್ನ ಮಾಡುವಲ್ಲಿ (ಪು. 138) 'ಬನ್ನಿ' ಒಂದು–ವೃಕ್ಷವೆಂದು ಗುರುತಿಸುತ್ತಿದ್ದರೆ ಉಚಿತ ವೆನಿಸುತ್ತಿತ್ತು.

24. 'ಕೂಟಲ್, ಕೂಡು' ಎರಡು ಹೊಳೆ (ತೋಡು)ಗಳ ಸಂಗಮ ಸ್ಥಾನವನ್ನು ಸೂಚಿಸುತ್ತಿರುವುದನ್ನು ಗಮನಿಸಿಲ್ಲ (ಪು. 140). ಕೂಡಲ್, ಕುಡಲ, ಕೂಡ್ಲಿ, ಕೂಡಿಗೆ, ಕೊಡ್ಲ. ಕೊಡ್ಲಿ. ಕೂಟೇಲ್, ಕೂಟ್ಲು ಮುಂತಾಗಿ ರೂಪಾಂತರಗೊಂಡ ಈ ಹೆಸರು ಪ್ರಮುಖ ಸಂಗಮವಾಚಕವಾಗಿದೆ.

25. 'ಕೋಣ್, ಕೊಣ್'ಗೆ ದ.ಕ.ದಿಂದ ಉದಾ. ನೀಡಿಲ್ಲ. ಕೋಣೆ, ಬಿಂಜದ ಕೋಣೆ (—ಣೆ) ಪಡವಿನ ಕೋಣೆ (—ಣೆ) ಮುಂತಾದ ಚಂದದ ಹೆಸರುಗಳು ದ.ಕ. ಜಿಲ್ಲೆಯಲ್ಲಿ ಸಿಗುತ್ತವೆ.

26. ಕೋಲ್, ಕೋಲು, ಗೋಲು ಮುಂತಾದವು 'ಗುಡ್ಡ'ವನ್ನು ಸೂಚಿಸುತ್ತವೆ. 'ಕೊಳ್ಬೆ, ಕೊಳಿಗೆ, ಕೊಳಿಯೂರು, ಕೋಲ್ನಾಡು, ಕೊಳ್ಚಾರು, ಕೊಳ್ಚಿಪ್ಪು' ಮುಂತಾದ ಹೆಸರುಗಳು ಈ ಅರ್ಥವನ್ನೇ ಎತ್ತಿಹಿಡಿಯುತ್ತವೆ.

27. 'ಜಾಲ' ಎಂಬುದಕ್ಕೆ 'ಗುಡ್ಡದ ಕೆಳಗಣ ಸಮತಟ್ಟಾದ ಜಾಗ' ಎಂಬರ್ಥವೂ ಭೌಗೋಳಿಕವಾಗಿ ಹೊಂದುತ್ತದೆ. ಕಾಪೆಜಾಲ, ಹೆಣಜಾಲ, ಜಾಲ್ಸೂರು ಮುಂತಾದ ಸ್ಥಳಗಳ ಭೂವಿವರ ಇದನ್ನು ಸಮರ್ಥಿಸುತ್ತದೆ.

28. 'ತರ, ತರಿ'ಗೆ ನೀಡಿದ ಉದಾ. 'ಹೆಡತರಿ' (ಪು. 170) 'ಎಡತಾರ್' (ತಾರ್ = ತೋಡು) ಎಂದೂ ಇರಬಹುದು.

29. ತಲಂ, ತಲವು, ತಳದೊಂದಿಗೆ 'ಸ್ಥಳ'ವನ್ನು ಸಂವಾದಿಯಾಗಿ ತೆಗೆದುಕೊಳ್ಳುವುದು ಸರಿಯಲ್ಲ (ಪು. 171). 'ಸ್ಥಳ'ವೆಂಬ ಸಂಸ್ಕೃತ ವಾರ್ಗಿಕ, ತೀರ್ಥಕ್ಷೇತ್ರಗಳಿಗೇ ಸಾಮಾನ್ಯವಾಗಿ ಅನ್ವಯಿಸುತ್ತದೆ. ಉದಾ. ನೆಲ್ಲಿಸ್ಥಳ, ಧರ್ಮಸ್ಥಳ, ಅಡ್ಕಸ್ಥಳ ; ಮುಂ.

30. 'ತೋಟು' ವಿವರಣೆಯ ವೇಳೆ 'ಜೆನ್ನಾಯಿತೋಡು' ಎಂಬ ಹೆಸರನ್ನು 'ಜೆನ್ನಾಯಿ – ತೋಳ' ಎಂಬುದಾಗಿ ನಿಷ್ಪನ್ನ ಮಾಡಿರುವುದು (ಪು. 182) ತುಳು ಭಾಷಾ ಅಪರಿಚಯದ ದ್ಯೋತಕ. 'ಜೆನ್ನಾಯಿ – ಜೆನ್ನೆಕಾಯಿ' (ಜೆನ್ನಯ್ಯ ?) ಯಿಂದ ಬಂದಿರುವುದು ಹೆಚ್ಚು ಸಹಜ.

31. 'ನಾಟು, ನಾಡು'ಗಳ ಕೆಳಗೆ 'ಪಡುಮಾರ್ನಾಡ'ನ್ನು 'ಪಡುಮಾರ ನಾಡ್' ಎಂದೂ 'ಮೂಡು ಮಾರ್ನಾಡ'ನ್ನು 'ಮೂಡು ಮರನಾಡು' ಎಂದೂ ವಿವರಿಸಿರುವುದು (ಪು. 191) ದೂರಾನ್ವಯವಾಗಿದೆ.

32. 'ನೂತಾಲ, ನೂಯಿ = ಬಾವಿ' ಎಂಬರ್ಥವಿದ್ದರೂ, ತುಳುವಿನ ಉದಾ. ನೀಡಿಲ್ಲ, (ಪು. 193) ತುಳುವಿನ 'ನೂಜಿ, ನೂಜಜೆ. ನೂಜಿಬಾಳ್ತಿಲ' ಮುಂತಾದ ಹೆಸರುಗಳು ಹೀಗೇ 'ನೂಜಿ' (= ಬಾವಿ ?) ಯಿಂದ ನಿಷ್ಪನ್ನವಾಗಿರಬಹುದು.

33. 'ಪಟ್ಟಣಂ, ಪಟ್ಟಣ. ಪಟ್ಣ'ಗಳಿಗೆ 'ಮೊಗವೀರರ ಕೇರಿ' ಎಂಬರ್ಥ ತುಳು ಸ್ಥಳನಾಮಗಳಲ್ಲಿರುವುದನ್ನು ಗಮನಿಸಿಲ್ಲ(195).

34. 'ಪಾಟಿ, ಪಾಡಿ'ಯ ಕೆಳಗೆ 'ಸೋಮವಾಸಿ, ಬೆಳ್ಳಿಪಾಡಿ'ಗಳನ್ನು ಕ್ರಮವಾಗಿ ಚಂದ್ರ ಮತ್ತು ಬೆಳ್ಳಿಯಿಂದ ನಿಷ್ಪನ್ನ ಮಾಡಿರುವುದು ಅತಾರ್ಕಿತವೆನಿಸುತ್ತದೆ; ಹಾಗೆಯೇ 'ಕಿವಾರ್ಡಿ' ಕೂಡಾ. (ಪು. 207).

35. 'ಬಸಾರ್'ನೊಂದಿಗೆ 'ಬಸರಿ' (ಬಸ್ರಿ) ವೃಕ್ಷಾರ್ಥವನ್ನು ಗಮನಿಸು ತ್ತಿದ್ದರೆ ಹೆಚ್ಚು ಸರಿಯಾಗುತ್ತಿತ್ತು. ಉದಾ. ಬಸ್ರಿ, ಬಸ್ರಿಬೇರು, ಬಸ್ರಿಕಟ್ಟೆ, ಬಸ್ರೂರು—ಇವೆಲ್ಲಾ 'ಬಜಾರಿ'ನಿಂದ ನಿಷ್ಪನ್ನವಾದುದಲ್ಲ; 'ಬಸ್ರಿ' ಎಂಬ ಜಾತಿಯ ವೃಕ್ಷದಿಂದ.

36. ಸಂಸ್ಕೃತವನ್ನಾಧರಿಸಿ 'ಮಂಗಲ'ದ ಅರ್ಥ ನೀಡಿರುವುದು (277) ಸರಿಯಲ್ಲ. ಬಹುತೇಕ ಸ್ಥಳನಾಮಗಳಲ್ಲಿ (ದ. ಕ. ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ) 'ಮಂಗಲ', ಸಂಸ್ಕೃತೇತರ ಭಾಷಾ ಶಬ್ದವಾಗಿದ್ದು ವಿಶಿಷ್ಟ ಭೂವಾಚಕ ಅರ್ಥವನ್ನು ಹೊಂದಿದೆ ಎಂಬ ಸಂಗತಿಯನ್ನು ಈಗಾಗಲೆ ಸಾಧಿಸಿ ತೋರಿಸಲಾಗಿದೆ. (ರಘುಪತಿ ಕೆಮ್ತೂರು, 1979).

37. 'ಪುಟ್ಟಂ'ಗೆ ಕನ್ನಡ-ತುಳುಗಳಲ್ಲಿ ಸಂವಾದಿರೂಪ ಕೊಟ್ಟಿಲ್ಲ(243). ಕೊಟ್ಟಿರುವ ಇತರ ಭಾಷೆಗಳ ಅರ್ಥ ಭಾಷಾ ಪ್ರದೇಶಗಳಲ್ಲಿ ಹೊಂದುವುದಿಲ್ಲ. ಸಮುದ್ರಕ್ಕೆ ಸಮೀಪವಾಗುತ್ತ ತೋಡು–ಹೊಳೆಗಳ ಹೊಯ್ಗೆ ಸಂಚಯವಾಗಿ ನೀರು ಹರಿಯದಂತಾಗಿ ಬಿಡುವ ಭೂಸ್ಥಿತಿಯನ್ನು 'ಪುಂಟ್ಟ' ವಾರ್ಗಿಕ ಸೂಚಿಸುತ್ತದೆ.

38. 'ಪಂಕ, ವಾಗು'ಗಳಿಗೆ ಕನ್ನಡ–ತುಳುವಿನ ಉದಾ. ಕೊಟ್ಟಿಲ್ಲ. ಕನ್ನಡ, ತಮಿಳು, ಮಲೆಯಾಳ ಜ್ಞಾತಿರೂಪ ಕೊಟ್ಟಿಲ್ಲ (251), 'ವಕ್ವ, ಪಕ್ವಾಡಿ, ವಗ್ಗ, ವಕ್ಕೆತ್ತೂರುಗಳ ಭೂಸ್ಥಿತಿ ನೋಡಿದರೆ ಸಪೂರಾಗಿ, ಗುಡ್ಡಗಳೆಡೆಯಲ್ಲಿ ವಕ್ರವಾಗಿ ಚಾಚಿರುವ ಕಣಿವೆಯನ್ನು, ತೋಡನ್ನು, ಹಾದಿಯನ್ನು, ಇದು ಸೂಚಿಸುತ್ತದೆ ಎನ್ನಬಹುದು.

39. 'ವಳ್ಳಿ'ಯನ್ನು ಸಂಸ್ಕೃತದ 'ವಲ್ಲಿ' (=ಬಳ್ಳಿ)ಯಿಂದ ಸಿದ್ಧಗೊಳಿಸಿರುವುದು (255) ಸ್ಥಳನಾಮಗಳ ಒಟ್ಟಾರೆ ಪ್ರವೃತ್ತಿ (trend)ಯನ್ನು ತಿಳಿಯದ ಅಜ್ಞರಷ್ಟೇ ಮಾಡಬಹುದಾದ ಪ್ರಮಾದವಾಗಿದೆ. ಇಲ್ಲಿ ಉದಾಹರಿಸಿದ 'ಹಳೆವಳ್ಳಿ, ಹೆಂಗವಳ್ಳಿ'ಗಳಲ್ಲಿ ಅಡಕವಾಗಿರುವ '–ವಳ್ಳಿ' ವಾರ್ಗಿಕ 'ಹಳ್ಳಿ'ಯ ರೂಪ ಭೇದವಷ್ಟೆ.

40. 'ವಯಲ್, ಬೈಲು'ಗಳ ಬಗ್ಗೆ ಉದಾ. ನೀಡುವಾಗ ದ.ಕ.ದ 'ತಿರುವೈಲ'ನ್ನು (ತಿರು=ಶ್ರೀ+ಬೈಲ್) ನಿಷ್ಪನ್ನಗೊಳಿಸಿರುವ ಬಗೆ ವಿಲಕ್ಷಣ ವಾದುದು (ಪೃ. 256). ಇದು ನಿಜವಾಗಿ 'ತಿರ್ (<ತಿರ್ತ=ಕೆಳಗೆ, ತಗ್ಗು') +ಬೈಲ್' ಎಂಬಂತೆ ನಿಷ್ಪನ್ನವಾಗಿದೆ.

41. 'ಶೈಲಂ, ಶಿಲೆ'ಗಳನ್ನು ವಿವರಿಸುತ್ತಾ ದ.ಕ.ದ 'ಕಪಿಲ ಶಿಲೆ'ಯನ್ನು ಮೂಲರೂಪವೆಂದು ತಿಳಿದು ನಿರ್ವಚಿಸಿರುವುದು ಅಶಾಸ್ತ್ರೀಯವಾಗಿದೆ (ಪೃ. 270).

ಇದು ನಿಜವಾಗಿ 'ಕಮ್ಮಾರ ಸಾಲೆ>ಕಮ್ಮರ ಶಿಲೆ>ಕಮಲ ಶಿಲೆ' ಎಂದು ರೂಪುಗೊಂಡಿರುವುದಾಗಿದೆ (ರಘುಪತಿ ಕೆಮ್ತೂರು, 1985).

ಮುಕ್ತಾಯ : ಈ ಗ್ರಂಥದ ಮೊದಲ ಓದಿನಲ್ಲಿ ಕಣ್ಣಿಗೆ ಬಿದ್ದ ದೋಷಗಳಲ್ಲಿ ಕೆಲವನ್ನಷ್ಟೇ ಇಲ್ಲಿ ಓದಿನ ಕ್ರಮದಲ್ಲೇ ಕೊಟ್ಟಿದ್ದೇನೆ. ಸ್ಥಳ ಸಮೀಕ್ಷೆಯ ಪ್ರಾತ್ಯಕ್ಷಿಕ ಅನುಭವವಿಲ್ಲದೆ ಸ್ಥಳನಾಮಗಳನ್ನು ನಿಷ್ಪನ್ನಗೊಳಿಸುವುದು ದುಸ್ಸಾಧ್ಯ. ಕೆಲವೊಮ್ಮೆ ಸ್ಥಳನಾಮಗಳ ನಿಷ್ಪತ್ತಿ ನೀಡುವುದು ಅಸಾಧ್ಯವೆನಿಸಿದರೂ, ಕನಿಷ್ಠ ಅವುಗಳನ್ನು ವಿವರಿಸಲು, ವ್ಯಾಖ್ಯಾನಿಸಲು, ಸಾಧ್ಯ ಎಂಬುದರಿಂದ, ಹಾಗೆ ವ್ಯಾಖ್ಯಾನಿಸಬೇಕಾದರೂ ಭೂವಿವರಣಾತ್ಮಕ ಮಾಹಿತಿ ಹೊಂದಿರುವುದು ಆವಶ್ಯಕ ಅನಿಸುತ್ತದೆ. ಸ್ಥಳ ಸಮೀಕ್ಷೆಯಿಂದಾಗುವ ಇನ್ನೊಂದು ಲಾಭವೆಂದರೆ, ಸ್ಥಳೀಯರ ಬಾಯಿಯಲ್ಲಿ ನಿರ್ದಿಷ್ಟ ಸ್ಥಳನಾಮದ ಉಚ್ಚಾರ ಅಥವಾ ರೂಪವೇ ಬೇಕಾಗಿರುವ ಸಂದರ್ಭವಿದ್ದಲ್ಲಿ, ಅದರ ಪರಿಶೀಲನೆ ಮೂಲಕ ಅರ್ಥವಿವರಣೆ ಹೆಚ್ಚು ಸುಕರವಾಗುತ್ತದೆ, ಎಂಬುದು. ಹಾಗೆಯೇ, ಸರಹದ್ದಿನ ಹೆಸರುಗಳ ಬೆಳಕಿನಲ್ಲಿ, ಊರಿನ ಪರಿಸರದ ಭೌಗೋಳಿಕ ವೈಲಕ್ಷಣ್ಯಗಳ ಹಿನ್ನೆಲೆಯಲ್ಲಿ, ನಾಮಕರಣದ ಸಾಪೇಕ್ಷತೆ ಏನೆಂಬುದು ವ್ಯಕ್ತವಾಗಿ, ಅರ್ಥವಿವರಣೆ ಹೆಚ್ಚು ಸುಲಭವೂ ನಿಖರವೂ ಆಗಬಹುದು. ಈ ಗ್ರಂಥದ ದೋಷಗಳನ್ನು ಈ ದೃಷ್ಟಿಯಿಂದ ಗುರುತಿಸಿದರೆ ಸ್ಥಳನಾಮಾಧ್ಯಯನ ಎಂಬುದು ಸ್ಥಳ ಸಮೀಕ್ಷೆಯ ಮೇಲೆ ನಿಂತಿರುವುದೇ ವಿನಾ ದಂತಗೋಪುರದಲ್ಲಿ ವಿಹರಿಸುವ ಬಗೆಯದಲ್ಲ ಎಂಬುದು ವಿಶದವಾಗುತ್ತದೆ. ಯಾವುದೇ ಶೋಧಕನಿಗೆ, ಚಿಕಿತ್ಸಕ ಪ್ರವೃತ್ತಿಯವನಿಗೆ, ಭಾಷಾಜ್ಞಾನ, ಭೌಗೋಳಿಕ ಪರಿಜ್ಞಾನ ಮತ್ತು ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಹರಿದೊಗೆಯಬಲ್ಲ ಸ್ವತಂತ್ರ ದೃಷ್ಟಿ–ಈ ಮೂರು ಅರ್ಹತೆಗಳಿರತಕ್ಕದ್ದು ಎಂಬ ಮಾತಿದೆ. ಇದು ಸ್ಥಳನಾಮ ಶೋಧಕನ ಮಟ್ಟಿಗಂತೂ ನೂರಕ್ಕೆ ನೂರು ಒಪ್ಪಬೇಕಾದ ಸಂಗತಿಯಾಗಿದೆ.

ಆಕರಗಳು :

1. ಡಾ॥ ಎಂ. ಚಿದಾನಂದ ಮೂರ್ತಿ. : 1976, 'ಕರ್ನಾಟಕ ಸ್ಥಳನಾಮಗಳು' ಸೆಮಿನಾರ್ ಪ್ರಬಂಧ.
2. ರಘುಪತಿ ಕೆಮ್ತೂರು : 1979, ಬೆಂಗಳೂರು, ತುಳುನಾಡಿನ ಸ್ಥಳನಾಮಗಳು.
3. ರಘುಪತಿ ಕೆಮ್ತೂರು : 1980, ತುಳುನಾಡಿನ ಸ್ಥಳನಾಮಾಧ್ಯಯನ (ಪಿಎಚ್.ಡಿ. ನಿಬಂಧ, ಅಚ್ಚಿನಲ್ಲಿ.)
4. ರಘುಪತಿ ಕೆಮ್ತೂರು : 1980, 'ಸ್ಥಳನಾಮಾಧ್ಯಯನ, ವಿಧಿವಿಧಾನಗಳು', ಬಯಲೂರ ಬೆಳ್ಳಿ.

5. ರಘುಪತಿ ಕೆಮ್ತೂರು : 1985. 'ಸ್ಥಳನಾಮಾಧ್ಯಯನ : ಸಾಧ್ಯತೆ ಮತ್ತು ಸಾಧನೆ', ರುಜುವಾತು–19.

6. Raghupathi Kemthuru : 1978. 'Topographical, Epigraphical, Linguistic Investigation of place names of Tulunadu', Journal of Institute of Indian Studies, I-1.

7. Raghupathi Kemthuru : 1979, Themes of place names in Tulunadu, Ibid. I-2.

8. Raghupathi Kemthuru 1983, A Glossary of place names Elements in Tulu & Kannada, An ICHR Project (Unpub.)

9. Dr. N. Lahovary, : 1963, Dravidian Origins and the West (Eng. Trans.), Orient Longamns Ltd.

ಜನಸಂಖ್ಯಾ ಧೋರಣೆಗಳು : ಒಂದು ಪರಿಚಯ

ಮಾವಿನಕುಳಿ ಶ್ರೀನಿವಾಸ

ವಿಶ್ವ ಜನಸಂಖ್ಯೆ ಐನೂರು ಕೋಟಿ ಸಮೀಪಿಸಿರುವ ಈ ಸಂದರ್ಭದಲ್ಲಿ, ಒಂದು ಜನಸಂಖ್ಯಾ ಧೋರಣೆಯ ಪರಿಚಯ ಇರಬೇಕಾದ್ದು ತೀರಾ ಅಗತ್ಯ. ಭಾರತದಂತಹ ರಾಷ್ಟ್ರಗಳನ್ನು ಕುರಿತು ತಿಳಿದಿರುವಂತೆ ಒಂದು ಜನಸಂಖ್ಯಾ ಧೋರಣೆಯು ಜನಸಂಖ್ಯೆಯು ಕ್ಷೀಣಿಸುತ್ತಾ ಹೋಗಬೇಕೆಂಬ ಗುರಿಗೆ ಮಾತ್ರವೇ ಸೀಮಿತವಾಗಿಲ್ಲ. ಜನಸಂಖ್ಯೆಯನ್ನು ಯಥಾಸ್ಥಿತಿಯಲ್ಲಿ ನಿಶ್ಚಯಪಡಿಸುವುದೂ ಕೂಡ ಈ ಧೋರಣೆಯ ಉದ್ದೇಶ. ಜನಸಂಖ್ಯಾ ಧೋರಣೆಯು ಶಿಶುಗಳ ಆಗಮನವನ್ನು ಸಂಯೋಜಿಸುವುದರಲ್ಲಿಯೂ ಗುರಿಯನ್ನು ಹೊಂದಿರುತ್ತದೆ. ಇದು ನಿಯೋಜಿತ ಮಾತಾಪಿತೃತ್ವ ಅಥವಾ ಮಾತಾಪಿತೃತ್ವವಲ್ಲದ ಅಂಶಗಳನ್ನು ಕುರಿತು ಉಪಾಯಗಳನ್ನು ನಿರ್ಧರಿಸುತ್ತದೆ. ಗುನ್ನಾರ್ ಮಿರ್ಡಾಲ್‌ರವರು ಅಭಿಪ್ರಾಯಪಟ್ಟಿರುವಂತೆ ಸಾಮಾಜಿಕ ಧೋರಣೆ ಎಂಬ ಪದವನ್ನು ದೊಡ್ಡದಾಗಿ ಬಳಸುವಂತೆ, ಜನಸಂಖ್ಯಾ ಧೋರಣೆ ಎಂಬುದು ಅದಕ್ಕಿಂತ ಚಿಕ್ಕದೇನೂ ಅಲ್ಲ. ಸಾಮಾಜಿಕ ಗೆಳೆತನವನ್ನು ಸರಿಪಡಿಸುವುದಷ್ಟೇ ಜನಸಂಖ್ಯಾ ಧೋರಣೆಯಾಗಲಾರದು. ಜನಸಂಖ್ಯಾ ಧೋರಣೆಯು ಸಾಮಾಜಿಕ ಬದುಕಿನ ಒಟ್ಟು ಚೌಕಟ್ಟಿನ ಒಳಗಡೆಯೇ ತನ್ನ ಕಾರ್ಯ ನಿರ್ವಹಿಸಬೇಕಾಗುತ್ತದೆ. ಜನಸಂಖ್ಯಾ ಧೋರಣೆಯು ತರ್ಕಸಮ್ಮತವಲ್ಲದ ಸಂಕುಚಿತ ಪ್ರವೃತ್ತಿಯನ್ನು ಹೊಂದಿರುವುದಿಲ್ಲ. ಜನಸಂಖ್ಯಾ ಧೋರಣೆಯು ಸಾಮಾಜಿಕ ಪರಿವರ್ತನೆಯನ್ನು ತರುವುದಲ್ಲದೆ ಸಾಮಾಜಿಕ ಪರಿವರ್ತನೆಯ ಪ್ರಭಾವಕ್ಕೂ ಒಳಗಾಗುತ್ತದೆ.

ಜನಸಂಖ್ಯಾ ಧೋರಣೆಯು ಜನಸಂಖ್ಯಾ ಬೆಳವಣಿಗೆಯ ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಚಾರಗಳಿಗೆ ಸಮಾನ ಪ್ರಾಮುಖ್ಯತೆಯನ್ನು ಕೊಡುತ್ತದೆ. ಎಲ್ಲಾ ವಿಧವಾದ ಜನಸಂಖ್ಯಾ ಪರಿಗಣನೆಗಳು 'ಆದರ್ಶಮಯ' ಅಥವಾ 'ಅನುಕೂಲಕರ' ಜನಸಂಖ್ಯೆ ಎಂಬರ್ಥದಲ್ಲಿ ಉಲ್ಲೇಖಿತವಾಗಿರುವ ಚೌಕಟ್ಟಿಗೆ ಹೊಂದಿಕೊಂಡೇ ಇರುತ್ತವೆ. ಫೆರೆಂನ್ಸಿಯವರ ಹೇಳಿಕೆಯನ್ನು ಅನುಸರಿಸಿ, 'ಆದರ್ಶಮಯ' ಜನಸಂಖ್ಯೆಯನ್ನು ಪತ್ತೆ ಮಾಡುವುದರಲ್ಲಿ ನಾವು ಎರಡು ದೃಷ್ಟಿಕೋನಗಳನ್ನು ಮನಗಾಣಬಹುದು. ಮೊದಲನೆಯದಾಗಿ, ಪರಿಮಾಣಾತ್ಮಕವಾಗಿ ನೋಡಿ

ದರೆ, ಪ್ರತಿಯೊಬ್ಬ ಪೌರನೂ ನಿಶ್ಚಿತವಾದ ಕನಿಷ್ಠ ಮಟ್ಟಗಳಿಗೆ ಅನುಗುಣವಾಗಿ ತನ್ನ ಮೂಲಭೂತ ಅವಶ್ಯಕತೆಗಳನ್ನು ತೃಪ್ತಿಪಡಿಸಿಕೊಳ್ಳುವ ಅವಕಾಶವನ್ನು ಹೊಂದಿರುತ್ತಾನೆ. ಮತ್ತು ಈ ಅವಕಾಶವು ಆತನಿಗೆ ಒಪ್ಪಿತವಾಗುವ ರೀತಿಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿರಬೇಕೆಂಬುದನ್ನು ಸೂಚಿಸುತ್ತದೆ. ಎರಡನೆಯದಾಗಿ, ಗುಣಾತ್ಮಕವಾಗಿ ನೋಡಿದರೆ, ಜನಸಂಖ್ಯೆಯಲ್ಲಿ ಒಂದು ಕಾಲದ ಅಭಿವೃದ್ಧಿ ಮಾತ್ರವೇ ಆಗಿರದೆ, ಆದರ ಸಂತತಿ ಜ್ಞಾನವನ್ನು ಗಣನೆಗೆ ತೆಗೆದು ಕೊಳ್ಳುವ ಮೂಲಕ ಅವ್ಯಾಹತವಾಗಿ ಜನರನ್ನು ಸಲಹುವ ಭರವಸೆಯನ್ನು ಸೂಚಿಸುವ ಒಂದು ಜನಸಂಖ್ಯಾ ಕಾರ್ಯಕ್ರಮ ಎಂಬುದನ್ನೂ ಇದು ಅರ್ಥೈಸುತ್ತದೆ. 'ನಿಗದಿತ ಆದರ್ಶಮಯ' ಅಥವಾ 'ಸ್ಪಷ್ಟ ಅನುಕೂಲಕರ' ಎನ್ನುವುದೆಲ್ಲ ಒಂದು ಅಸಾಧ್ಯತೆ, ಒಂದು ಭ್ರಮೆ ಎಂಬುದು ನಿಸ್ಸಂಶಯ.

ಜನಸಂಖ್ಯಾ ಧೋರಣೆಯು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಹಾಗೂ ವಿವಿಧ ವರ್ಗಗಳ ನಡುವೆ ಸಮತೋಲನ ಸ್ಥಾಪಿಸುವುದರ ಗುರಿಯನ್ನೂ ಸಹ ಹೊಂದಿರುತ್ತದೆ. ಭೂಮಿ ಉಪಯೋಗದ ಮಾದರಿಯೂ ಸಹ ಜನಸಂಖ್ಯಾ ಧೋರಣೆಯ ಒಂದು ಭಾಗವಾಗಿರುತ್ತದೆ. ವಸತಿ ಸುಧಾರಣೆ, ಆರೋಗ್ಯ ಮತ್ತು ಪೌಷ್ಟಿಕತೆಯ ಅಂಶಗಳಲ್ಲಿ ಸುಧಾರಣೆ, ಉದ್ಯೋಗ ಮತ್ತು ಮಾನವ ಶಕ್ತಿಯ ಯೋಜನೆ, ಹಾಗೂ ಪರಿಸರ ಸುಧಾರಣೆ ಇತ್ಯಾದಿಗಳೂ ಸಹ ಜನಸಂಖ್ಯಾ ಧೋರಣೆಗೆ ಪ್ರಸಕ್ತವಾದವುಗಳಾಗಿರುತ್ತವೆ.

ಜನಸಂಖ್ಯಾ ಧೋರಣೆಯು ಒಂದು ದೇಶದಲ್ಲಿ ಅಸ್ತಿತ್ವದಲ್ಲಿರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ತಾಂತ್ರಿಕ ಹಾಗೂ ಜನಸಾಂಖ್ಯಿಕ ಪರಿಸ್ಥಿತಿಗಳ ಮುಖಾಂತರ ನಿರ್ಧರಿತವಾಗುವುದು ಮಾತ್ರವಲ್ಲದೆ ಈ ಪರಿಸ್ಥಿತಿಗಳಲ್ಲಿ ತಲೆದೋರುವ ಇಚ್ಛಿತ ಬದಲಾವಣೆಗಳ ಕಡೆಗೂ ಸಹ ಇದು ಗುರಿಯನ್ನು ಹೊಂದಿರುತ್ತದೆ. ಜನಸಂಖ್ಯಾ ಧೋರಣೆಯು ಈ ಕೆಳಗಿನ ವಿಚಾರಗಳಿಗೆ ಸಂಬಂಧಿಸಿರುತ್ತದೆ.

(ಅ) ಆವಿರ್ಭವಿಸಿದ ಫಲಶಕ್ತಿ ದರಗಳಲ್ಲಿ ಉಂಟಾಗಿರುವ ಕುಸಿತದ ಪ್ರಮಾಣ ಎಷ್ಟು ಮತ್ತು ಎಷ್ಟು ಜಾಗ್ರತೆಯಾಗಿ ಸಂಗ್ರಹಿಸಲಾಗಿದೆ ಎಂಬುದು ;

(ಆ) ಉದ್ಭವಿಸಿದ ರೋಗವ್ಯಾಪನೆ ಹಾಗೂ ಮರಣ ಪ್ರಮಾಣ ಮಾದರಿಯಲ್ಲಿ ಉಂಟಾಗಿರುವ ಕುಸಿತದ ಪ್ರಮಾಣ ಎಷ್ಟು ಮತ್ತು ಎಷ್ಟು ಜಾಗ್ರತೆಯಾಗಿ ಸಂಗ್ರಹಿಸಲಾಗಿದೆ ಎಂಬುದು ;

(ಇ) ಕುಲ, ಆರ್ಥಿಕ ಹಾಗೂ ಸಾಮಾಜಿಕ ಸಂಬಂಧವಾದ ಸಮೂಹಗಳಲ್ಲಿ ಯಾವುದು ದೊಡ್ಡ ಪ್ರಮಾಣದಲ್ಲಿ ಗಮನ ಸೆಳೆಯುತ್ತದೆ ಎಂಬುದು ;

(ಈ) ವಿವಿಧ ಗರ್ಭಧಾರಣ ನಿಯಂತ್ರಣ ವಿಧಾನಗಳಲ್ಲಿ ಕಂಡುಬರುವ ಮಿಶ್ರಣ ಮಾದರಿ ಯಾವುದು ? ಗರ್ಭಧಾರಣ ನಿಯಂತ್ರಣದಲ್ಲಿ ಒತ್ತಾಯಪೂರ್ವಕ ಹಾಗೂ ಕತ್ತಾಯಪೂರ್ವಕ (ಬಳಕೆಯಲ್ಲಿ ಮಿಶ್ರಿತವಾಗಿರುವುದು ಯಾವುದು ? ಹಾಗೂ, ಅಲ್ಪ ಕಾಲಾವಧಿ ಮತ್ತು ದೀರ್ಘ ಕಾಲಾವಧಿಯ ಹಣಕಾಸು ಸೌಲಭ್ಯ ಪ್ರಮಾಣ ಎಷ್ಟು ಎಂಬುದು ;

(ಉ) ಸಾಮಾಜಿಕ, ಆರ್ಥಿಕ ಹಾಗೂ ಜೀವ-ಪರಿಸರಾತ್ಮಕ ಸಮಸ್ಯೆಗಳನ್ನು ಬಗೆಬರಿಸುವುದರಲ್ಲಿ ಜನರು ವಾಸಿಸುವ ಜಾಗದ ನಡುವಣ ಅಂತರದ ವಿತರಣಾ ಪ್ರಮಾಣ ಎಷ್ಟು ಎಂಬುದು ;

(ಊ) ಜನಸಂಖ್ಯೆ ಕಡಿಮೆಯಾಗುವ ಪ್ರವೃತ್ತಿಗಳು ಉಂಟಾಗದೇ ಇರುವ ಕಡೆಗಳಲ್ಲಿ ಕನಿಷ್ಠ ಇದ್ದಂತಹ ಜಾಗ ಬದಲಾಯಿಸದೇ ಇರುವ ಪ್ರಮಾಣಗಳು ಹೇಗಿದ್ದವು ಎಂಬುದು ;

(ಋ) ಪರಿಣಾಮಕಾರಿ ಉದ್ಯೋಗ ಹಾಗೂ ಮಾನವಶಕ್ತಿ ಯೋಜನೆಯ ಧೋರಣೆಗಳು ಎಷ್ಟರಮಟ್ಟಿಗೆ ಇದ್ದವು ಎಂಬುದು ;
ಸ್ಪೆಂಗ್ಲರ್‌ರವರ ಮಾತಿನಲ್ಲಿ ಹೇಳುವುದಾದರೆ

"ಒಂದು ಸಾರ್ವಭೌಮ ರಾಜ್ಯದಲ್ಲಿನ ಕರ್ತವ್ಯಗಳು ತಮ್ಮ ಭಾಗದ ಮೇಲಿನ ಪ್ರತಿಯೊಂದು ಅಥವಾ ಎಲ್ಲಾ ಕ್ರಿಯೆಗಳನ್ನು ಒಳಗೊಂಡಿರುವಂತೆಯೇ ಈ ರಾಜ್ಯವು ತನ್ನ ಜನಸಂಖ್ಯೆಯಲ್ಲಿನ ಗುಣವನ್ನಾಗಲಿ, ಪರಿಮಾಣವನ್ನಾಗಲಿ ಅಥವಾ ಸ್ಥಳಕ ಪ್ರವೃತ್ತಿಯನ್ನಾಗಲಿ ಹೊಂದಿರುತ್ತದೆಯೋ ಅದೇ ರೀತಿ ಇದಕ್ಕೆ ಹೊರತಾಗಿ ಅಂತಹ ಕ್ರಿಯೆಯನ್ನು ಅನುಷ್ಠಾನಕ್ಕೆ ತರಲಾರದ ಸ್ಥಿತಿಯಲ್ಲಿಯೂ ಆ ರಾಜ್ಯವಿರುತ್ತದೆ ಎಂಬುದನ್ನು ಅರಿಯುವುದೂ ಜನಸಂಖ್ಯಾ ಧೋರಣೆಯ ಉದ್ದೇಶ".

ಜನಸಂಖ್ಯಾ ಧೋರಣೆಯು ವ್ಯಕ್ತವಾಗಿರುತ್ತದೆ ಅಥವಾ ಅವ್ಯಕ್ತವಾಗಿರುತ್ತದೆ. ವ್ಯಕ್ತ ಧೋರಣೆಯು ಜನಸಂಖ್ಯಾ ಸಮಸ್ಯೆಯ ಪ್ರತ್ಯಕ್ಷ ಅಧ್ಯಯನಕ್ಕೆ ಸಂಬಂಧಿಸಿದ್ದರೆ, ಅವ್ಯಕ್ತ ಧೋರಣೆಯು ಪರೋಕ್ಷ ಅಧ್ಯಯನಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಜನಸಂಖ್ಯಾ ಧೋರಣೆಯು ಅಲ್ಪಕಾಲಿಕ ಓಟ ಹಾಗೂ ದೀರ್ಘಕಾಲಿಕ ಓಟದ ಉದ್ದೇಶಗಳನ್ನು ಹೊಂದಿರುತ್ತದೆ. ಉದಾಹರಣೆಗೆ, ಒಂದು ರಾಷ್ಟ್ರವು ಇತ್ತೀಚೆಗಷ್ಟೇ ತಾನು ತೆಗೆದುಕೊಂಡ ಸ್ವರಾಜ್ಯ ಅವಧಿಯಿಂದಾಗಿ ರೋಗ ವ್ಯಾಪನೆ ಮತ್ತು ಮರಣ ಪ್ರಮಾಣ ದರಗಳನ್ನು ಕಡಿಮೆ ಮಾಡುವುದರಲ್ಲಿ ಹೆಚ್ಚಾಗಿ ತನ್ನ ಆಸಕ್ತಿಯನ್ನು ಕೇಂದ್ರೀಕರಿಸಬಹುದು. ಅಥವಾ ವಲಸೆಯ ಸಮಸ್ಯೆಯ ಕುರಿತು ಹೆಚ್ಚಾಗಿ ತನ್ನ ಗಮನವನ್ನು ಕೇಂದ್ರೀಕರಿಸಬಹುದು.

ಭವಿಷ್ಯತ್ತಿನಲ್ಲಿ ಅಧಿಕಗೊಳ್ಳಬಹುದೆಂದು ಊಹಿಸಲಾದ ಜನಸಂಖ್ಯೆ ಬೆಳವಣಿಗೆಯ ಮಿತಿಗಳನ್ನು ಆಧರಿಸಿಯೇ, ಬೆಳವಣಿಗೆ ಸಂಭವನೀಯತೆಗಳಲ್ಲಿ ಉದ್ಭವಿಸುವ ಕಡಿತದ ಪ್ರಮಾಣವನ್ನು ಕಂಡುಹಿಡಿಯಲಾಗುತ್ತದೆ. ಮರಣ ಪ್ರಮಾಣ ಹಾಗೂ ಜನನ ಪ್ರಮಾಣ ಇವೆರಡೂ ಸಮತೋಲನ ಸಾಧಿಸುವುದಕ್ಕಿಂತ ಮೊದಲೇ ಕುಸಿದು ಬೀಳುವುದರಲ್ಲಿ ದೀರ್ಘವಾದ ದಾರಿಯನ್ನು ಕ್ರಮಿಸುತ್ತವೆ ಜನರು ಹೊಸ ಆಸಕ್ತಿಗಳನ್ನು ಹಾಗೂ ಆಕಾಂಕ್ಷೆಗಳನ್ನು ಪಡೆದುಕೊಂಡ ನಂತರದಲ್ಲಿ ಫಲಶಕ್ತಿ ಪ್ರಮಾಣವು ಕ್ರಮಕ್ರಮೇಣವಾಗಿ ಕುಸಿಯುತ್ತಾ ಹೋಗುತ್ತದೆ. ಈ ಬಗೆಯ ನೂತನ ಆಸಕ್ತಿಗಳು ಮತ್ತು ಆಕಾಂಕ್ಷೆಗಳು, ಜೀವನ ಮಟ್ಟಗಳ ಏರುತ್ತಿರುವ ಅವಧಿಯಲ್ಲಿ, ನಗರೀಕರಣ ಶಿಕ್ಷಣದ ಹರಡುವಿಕೆ, ಹಾಗೂ ವಿದೇಶಿ ಸಂಸ್ಕೃತಿಗಳೊಂದಿಗೆ ಬೆಳೆಸಿಕೊಳ್ಳುವ ಸಂಪರ್ಕಗಳು ಇವುಗಳಿಂದ ಮಾತ್ರವೇ ಅಭಿವೃದ್ಧಿಗೊಳ್ಳುತ್ತವೆ. ಈ ಎಲ್ಲಾ ಅಭಿವೃದ್ಧಿ ಹಂತಗಳು ಪ್ರಾರಂಭಿಕ ಮಟ್ಟದಲ್ಲಿ ಫಲಶಕ್ತಿ ಪ್ರಮಾಣಕ್ಕಿಂತ ಹೆಚ್ಚು ತೀವ್ರವಾಗಿ ಮರಣ ಪ್ರಮಾಣವನ್ನು ಕುಗ್ಗಿಸುತ್ತವೆ, ಮತ್ತು ಈ ಕಾರಣದಿಂದ ಫಲಶಕ್ತಿ ಬೆಳವಣಿಗೆ ಅತಿಶಯವಾಗಿರುವಂತೆ ಕಂಡು ಬರುತ್ತದೆ ಮರಣ ಪ್ರಮಾಣ ಹಾಗೂ ಫಲಶಕ್ತಿಗಳ ಕೆಳಮುಖ ಪ್ರವೃತ್ತಿಗಳ ನಡುವಣ ದೊಡ್ಡ ಪ್ರಮಾಣದಲ್ಲಿ ಉಂಟಾಗುವ ಕಡಿತದ ಸಾಧ್ಯತೆಯು ಜನಸಂಖ್ಯಾ ಧೋರಣೆ ಸಮಸ್ಯೆಯ ಪ್ರಮುಖ ಘಟ್ಟವಾಗಿದೆ. ಇದನ್ನು ಫಲಶಕ್ತಿ ಹಾಗೂ ಮರಣ ಪ್ರಮಾಣಗಳ ಹಿಂಬೀಳಿಕೆ ಎಂಬುದಾಗಿ ಕರೆಯಬಹುದು.

ಇಂದಿನವರೆಗೂ ಅಭಿವೃದಿಗೊಳ್ಳುತ್ತಿರುವ ರಾಷ್ಟ್ರಗಳಲ್ಲಿ ಜನಸಂಖ್ಯಾ ಬೆಳವಣಿಗೆಗೆ ಕಡಿವಾಣ ಹಾಕುವ ಪ್ರಯತ್ನಗಳು ಒಂದು ಕಡೆಗೆ 'ಆರ್ಥಿಕ ಅಭಿವೃದ್ಧಿ ದೃಷ್ಟಿಕೋನ'ವನ್ನೂ, ಇನ್ನೊಂದು ಕಡೆಗೆ 'ಕುಟುಂಬ ಯೋಜನೆ ದೃಷ್ಟಿಕೋನ' ವನ್ನೂ ಹೀಗೆ ಇಬ್ಬಗೆಯಲ್ಲಿ ಧ್ರುವೀಕರಣಗೊಂಡಿವೆ. ಮೊದಲನೆಯ ದೃಷ್ಟಿಕೋನದ ಪ್ರಕಾರ, ಸಂಪೂರ್ಣವಾದ ಸಾಮಾಜಿಕ ಆರ್ಥಿಕ ಅಂಶಗಳ ಒತ್ತಡದಿಂದ ಉಂಟಾಗಿರುವ ದೀರ್ಘ ಶ್ರೇಣಿಯ ಪರಿಣಾಮಗಳಿಂದಾಗಿ, ಕುಟುಂಬ ಗಾತ್ರದಲ್ಲಿನ ಕುಸಿತವು ಕೆಲವೇ ಮಕ್ಕಳನ್ನು ಹೊಂದಿರಬೇಕೆಂಬ ಇಚ್ಛೆಗೆ ದಾರಿ ಮಾಡಿಕೊಡುತ್ತದೆ. ಎರಡನೆಯ ದೃಷ್ಟಿಕೋನವು ಪೂರ್ತಿಯಾಗಿ ಉತ್ಪಾದನೆಯ ಸಾಂಸ್ಥೀಕರಣವನ್ನೇ ನಿರ್ಲಕ್ಷಿಸುವುದಲ್ಲದೆ ಜನನ ನಿಯಂತ್ರಣವನ್ನು ಕುರಿತಂತೆ ಶಿಕ್ಷಣ ಮತ್ತು ಸಂಪರ್ಕಗಳು ಕಡಿಮೆ ಮರಣ ಪ್ರಮಾಣದೊಂದಿಗೆ ಸಹವರ್ತಿಯಾಗಿ ಒಂದು ಮಟ್ಟದಲ್ಲಿರುವಂತೆ, ಸಂಭವಿಸಬಹುದಾದ ಜನನಗಳನ್ನು ತಡೆಗಟ್ಟುತ್ತವೆ ಎಂಬುದಾಗಿ ಎಣಿಸುತ್ತದೆ. ಜನಸಂಖ್ಯಾ ಬೆಳವಣಿಗೆಯು ಆಧುನಿಕೀಕರಣ ಪ್ರಕ್ರಿಯೆಯ ಮುಖಾಂತರ ಕಡಿತಗೊಳ್ಳುವುದಕ್ಕಿಂತ ಹೆಚ್ಚಾಗಿ ಅತ್ಯಂತ ಬಡರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯ ನಿರ್ಬಂಧನೆಗೆ ಸ್ಪಷ್ಟವಾಗಿ ಒಳಗಾಗಿದೆ. ಇಂತಹ ರಾಷ್ಟ್ರಗಳಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮಗಳು ಜನಸಮೂಹದ ನಡುವೆ ಜನನದರಗಳನ್ನು ಕೆಳಗಿಳಿಸಲು ಸಾಧ್ಯ

ವಿಲ್ಲ, ಅಷ್ಟೇ ಅಲ್ಲ, ಮೇಲ್ನೋಟದಲ್ಲಿಯೇ ಅವುಗಳ ವಿಫಲತೆಯು ಚೆನ್ನಾಗಿ ಕಂಡು ಬರುತ್ತದೆ. ಈ ರೀತಿ, ಕುಟುಂಬದ ಗಾತ್ರವನ್ನು ಕಡಿತಗೊಳಿಸುವ ನೇರಕ್ರಿಯೆಯ ಜೊತೆಗೂಡಿದ ವಿಧಗಳು ಜನಸಂಖ್ಯಾ ಧೋರಣೆಯಲ್ಲಿ ಏಕೀಭವಿಸುವುದಿಲ್ಲ ಎಂಬುದನ್ನು ನಾವು ಮನಗಾಣಬಹುದು.

ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ವಿಜ್ಞಾನಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಅಕಾಡೆಮಿ ಅಧ್ಯಯನ ಸಮಿತಿಯ ಅಭಿಪ್ರಾಯ ಹೀಗಿದೆ ಒಂದು ಅರ್ಥದಲ್ಲಿ, ರಾಷ್ಟ್ರದ ಜನತೆಯ ಕಲ್ಯಾಣವನ್ನು ಒಳಗೊಂಡಿರುವ ಎಲ್ಲಾ ಧೋರಣೆಗಳು ಜನಸಂಖ್ಯಾ ಧೋರಣೆಗಳಾಗಿವೆ. ಆದರೆ ಇಲ್ಲಿ ನಾವು ಈ ಧೋರಣೆಗಳೊಂದಿಗೆ ಸಹವರ್ತಿಯಾಗಿರುವಂತೆಯೇ, ಈ ಧೋರಣೆಗಳೂ ಸಹ ಜನಸಂಖ್ಯೆಯ ಗುಣ ಹಾಗೂ ಪರಿಮಾಣದಲ್ಲಿ ಮತ್ತು ಭೌಗೋಳಿಕ ವಿತರಣೆಯಲ್ಲಿ ಉಂಟಾಗುವ ಬದಲಾವಣೆಗಳಿಗೆ ಸ್ಪಂದಿಸುತ್ತವೆ. ಅಲ್ಲದೆ, ಈ ಧೋರಣೆಗಳು, ಪ್ರತಿಯೊಬ್ಬ ವ್ಯಕ್ತಿಗೂ ಅವಶ್ಯಕವಾದ ಸ್ಥಳ ಹಾಗೂ ಇತರ ಮೂಲಗಳಿಗೆ ಸಂಬಂಧಿಸಿದಂತೆ ಈ ವ್ಯಕ್ತಿಗಳು ಎಲ್ಲೆಲ್ಲಿ ಮತ್ತು ಹೇಗೆ ವಾಸಿಸುತ್ತಾರೆ ಮತ್ತು ವಾಸಿಸುವ ಮಾನವ ಜೀವಿಗಳ ಸಂಖ್ಯೆಗಳು, ಅವರ ಶಿಕ್ಷಣ ಹಾಗೂ ಕುಶಲತೆಗಳಿಗೂ ಸಂಬಂಧಪಟ್ಟಿರುತ್ತವೆ.

ಜನಸಂಖ್ಯಾ ಧೋರಣೆಯು, ಜನಸಂಖ್ಯಾ ಗಾತ್ರದಲ್ಲಾಗುವ ಬದಲಾವಣೆ ದರಕ್ಕೆ, ಫಲಶಕ್ತಿ ಮತ್ತು ಮರಣ ಪ್ರಮಾಣ ಮಟ್ಟಗಳಿಗೆ, ಗ್ರಾಮೀಣ ಮತ್ತು ನಗರ ಪರಿಸರಗಳ ನಡುವಣ ಜನಗಳ ವಿತರಣೆಗೆ ಸಂಬಂಧಿಸಿರುವಂತೆ ಇದು ಜನತೆಯ ಸಾಮಾಜಿಕ ಹಾಗೂ ಆರ್ಥಿಕ ಕಲ್ಯಾಣದೊಂದಿಗೆ ಪರಸ್ಪರ ಸಂಬಂಧ ಹೊಂದಿದ್ದು ಈ ವಿತರಣೆಯಲ್ಲಾಗುವ ಬದಲಾವಣೆಯ ದರಕ್ಕೂ ತನ್ನ ಗಮನವನ್ನು ಕೊಡುತ್ತದೆ.

ಜನಸಂಖ್ಯಾ ಸಂಬಂಧಿತ ಧೋರಣೆಗಳಲ್ಲಿ ಎರಡು ವಿಧ. ಮೊದಲನೆಯದು ಜನಸಂಖ್ಯಾ ಅನುರೂಪ ಧೋರಣೆಗಳು, ಎರಡನೆಯದು ಜನಸಂಖ್ಯಾ ಪ್ರಭಾವಿತ ಧೋರಣೆಗಳು. ಜನಸಂಖ್ಯಾ ಅನುರೂಪ ಧೋರಣೆಗಳು, ಅಧಿಕ ಜನನ ದರಗಳು ಹಾಗೂ ಅಧಿಕ ಜನಸಂಖ್ಯಾ ಬೆಳವಣಿಗೆ ದರಗಳು, ಜನಸಂಖ್ಯೆಯ ಗಾತ್ರ ಮತ್ತು ಸಾಂದ್ರತೆಯಲ್ಲಿ ಕಂಡುಬರುವ ಅಭೂತಪೂರ್ವ ಏರಿಕೆಯ ಪರಿಣಾಮಗಳನ್ನು ನಿರೀಕ್ಷಿಸುತ್ತವೆ ಇಲ್ಲವೆ ಸರಿಪಡಿಸುತ್ತವೆ, ಹಾಗೆಯೇ, ಜನಸಂಖ್ಯಾ ಪ್ರಭಾವಿತ ಧೋರಣೆಗಳು ಫಲಶಕ್ತಿ ಮತ್ತು ಮರಣ ಪ್ರಮಾಣಗಳಲ್ಲಿ ಹಾಗೂ ಬೆಳವಣಿಗೆ ದರಗಳಲ್ಲಿ ಕಡಿತವನ್ನುಂಟುಮಾಡುತ್ತವೆ ಇಲ್ಲವೆ ಅನುಕೂಲಕರ ರೀತಿಯಲ್ಲಿ ಏರಿಕೆಯನ್ನು ಪ್ರಚೋದಿಸುತ್ತವೆ.

ಉದ್ಯೋಗ, ಆಹಾರ ವಿತರಣೆ, ನಗರಗಳು ಮತ್ತು ಪಟ್ಟಣಗಳ ನಿರ್ಮಾಣ ಹಾಗೂ ಸಾಧನ ಸಂಪತ್ತು ಬೆಳವಣಿಗೆಗೆ ಸಂಬಂಧಿಸಿದ ಧೋರಣೆಗಳು ಮೊದಲ

ನೆಯ ವರ್ಗಕ್ಕೆ ಸೇರಿದವುಗಳಾಗಿದ್ದರೆ, ಫಲಶಕ್ತಿಯನ್ನು ಕುಂಠಿತಗೊಳಿಸುವ ಕುಟುಂಬ ಯೋಜನಾ ಕಾರ್ಯಕ್ರಮಗಳು ಹಾಗೂ ಇತರ ಧೋರಣೆಗಳು, ಮರಣ ಪ್ರಮಾಣವನ್ನು ಕಡಿಮೆ ಮಾಡುವ ಸಾರ್ವಜನಿಕ ಆರೋಗ್ಯ ಮತ್ತು ಪೌಷ್ಠಿಕತೆ ಕಾರ್ಯಕ್ರಮಗಳು, ಮತ್ತು ಆಂತರಿಕ ವಲಸೆಯನ್ನು ಪ್ರಚೋದಿಸುವ ಸಾಗಾಣಿಕೆ ಹಾಗೂ ಕೈಗಾರಿಕಾ ಯೋಜನೆ ಎರಡನೆಯ ವರ್ಗಕ್ಕೆ ಸೇರಿದವುಗಳಾಗಿವೆ. ಅಭಿವೃದ್ಧ ರಾಷ್ಟ್ರಗಳಲ್ಲಿನ ಜನಸಂಖ್ಯಾ ಧೋರಣೆಗಳು ಕಾರ್ಯಗತವಾಗುವ ಶ್ರೇಣಿಯಲ್ಲಿ ಒಂದು ಮಹತ್ವದ ಅಸಮರೂಪತೆ ಇದೆಯೆಂಬುದು ನಿರ್ವಿವಾದ.

ಜನಸಂಖ್ಯಾ ಧೋರಣೆಯು ನಕಾರಾತ್ಮಕವಾಗಿರಬಹುದು ಇಲ್ಲವೆ ಸಕಾರಾತ್ಮಕವಾಗಿರಬಹುದು. ನಕಾರಾತ್ಮಕ ಜನಸಂಖ್ಯಾ ಧೋರಣೆಯು ಅಧಿಕ ಮರಣದರಗಳನ್ನು ನಿರೀಕ್ಷಿಸುತ್ತದೆ. ಭ್ರೂಣಹತ್ಯೆ, ಮುದಿ ವ್ಯಕ್ತಿಗಳ ಸಾವು, ನಿಶ್ಯಕ್ತ ಅಥವಾ ರೋಗಪೀಡಿತ ಜನರು ಹಾಗೂ ಗರ್ಭಪಾತ, ಇವುಗಳು ನಕಾರಾತ್ಮಕ ಜನಸಂಖ್ಯಾ ಧೋರಣೆಯ ಉಪಕರಣಗಳೆಂದು ಪರಿಗಣಿತವಾಗಿವೆ. ವೈದ್ಯಕೀಯ ಸವಲತ್ತುಗಳ ಹರಡದಿರುವಿಕೆಯೂ ಸಹ ಉದ್ದೇಶಪೂರ್ವಕವಾಗಿ ಅಥವಾ ಅಸಡ್ಡೆ ತೋರುವ ಮೂಲಕ ನಕಾರಾತ್ಮಕ ಜನಸಂಖ್ಯಾ ಧೋರಣೆಯನ್ನು ಬೆಂಬಲಿಸುತ್ತದೆ. ಸಕಾರಾತ್ಮಕ ಜನಸಂಖ್ಯಾ ಧೋರಣೆಯು ಜನಸಂಖ್ಯಾ ಬೆಳವಣಿಗೆ ದರವನ್ನು ಕಡಿತಗೊಳಿಸುವ ಗುರಿಯನ್ನು ಹೊಂದಿರುವುದು ಮಾತ್ರವಲ್ಲದೆ ಅದೇ ಸಂದರ್ಭದಲ್ಲಿ ಬಡಜನರ ಜೀವನಮಟ್ಟವನ್ನು ಏರಿಸಬೇಕೆಂಬ ಧ್ಯೇಯವನ್ನೂ ಹೊಂದಿರುತ್ತದೆ.

ಥಾಂಪ್ಸನ್ ಮತ್ತು ಲೆವಿಸ್‌ರವರ ಅಭಿಪ್ರಾಯದಲ್ಲಿ ಜನಸಂಖ್ಯಾ ಧೋರಣೆಯು ಅವಶ್ಯಕವಾಗಿ ಒಂದು ರಾಷ್ಟ್ರೀಯ ಧೋರಣೆಯಾಗಿ ಉಳಿದುಕೊಳ್ಳುತ್ತದೆ. ವಾಣಿಜ್ಯೀಕೃತ ನಿರ್ಬಂಧಗಳನ್ನು ಹೊರತುಪಡಿಸಿ ಜನನ ದರಗಳು ಮತ್ತು ಮರಣದರಗಳನ್ನು ಕಡಿತಗೊಳಿಸುವುದರಲ್ಲಿ ಪ್ರಪಂಚದ ವಿವಿಧ ಸರಕಾರಗಳ ನಡುವೆ ಹೆಚ್ಚಿನ ಹೊಂದಾಣಿಕೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಅಲ್ಲದೆ ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಸಾಲಗಳು ಹಾಗೂ ಸಹಾಯಧನಗಳ ರೂಪದಲ್ಲಿ ನೀಡಲಾಗುವ ಅಂತರರಾಷ್ಟ್ರೀಯ ಸಹಾಯವು ನಿರರ್ಥಕವಾಗಿ ಉಳಿದುಬಿಡುತ್ತದೆ. ಆರ್ಥಿಕ ಅಭಿವೃದ್ಧಿ ಹಾಗೂ ಜನಸಂಖ್ಯೆ ನಿಯಂತ್ರಣಕ್ಕೆ ಸ್ವ-ಸಹಾಯವು ಉತ್ತಮ ಮಾರ್ಗ ಎನಿಸಿಕೊಳ್ಳುತ್ತದೆ. ಭೂಭಾಗದಲ್ಲಿನ ಜನಸಂಖ್ಯೆಯ ಗಾತ್ರವು ಇಂದು ಅತಿವೇಗದಲ್ಲಿ ಓಗ್ಗುತ್ತಿರುವುದರಿಂದ ಅಂತರರಾಷ್ಟ್ರೀಯ ವಲಸೆ ಈಗ ಜನಸಂಖ್ಯಾ

ಬೆಳವಣಿಗೆಯ ಪರಿಣಾಮಗಳನ್ನು ಹಗುರಗೊಳಿಸುವುದರಲ್ಲಿ ಯಾವೊಂದು ಕೊಡುಗೆಯನ್ನೂ ನೀಡಲು ಸಾಧ್ಯವಾಗುತ್ತಿಲ್ಲ.

ಜನಸಂಖ್ಯಾ ಧೋರಣೆಗಳು ರಾಷ್ಟ್ರೀಯ ಉದ್ದೇಶಗಳ ಒಂದು ಅತಿಶಯತೆಯನ್ನು ಪ್ರತಿಬಿಂಬಿಸುತ್ತವೆ. ವ್ಯಕ್ತಿಗತ ಉದ್ದೇಶಗಳು ರಾಷ್ಟ್ರೀಯ ಕಲ್ಯಾಣ ಉದ್ದೇಶಗಳೊಂದಿಗೆ ಸಮಗ್ರಗೊಳ್ಳುತ್ತವೆ. ಈ ಉದ್ದೇಶಗಳು ಕಾಲಕ್ರಮೇಣ ಬದಲಾಗುತ್ತಿರುತ್ತವೆ. ಉದ್ದೇಶಗಳಲ್ಲಿ ಕೆಲವು ಗ್ರಹಿಸಲು ಸುಲಭವಾಗಿರುತ್ತವೆ ; ಉಚಿತಾಯ ದರದ ಗುರಿಯೆಂದು ಅರ್ಥ ಬರುವಂತಹ ಮಧ್ಯ-ಸಂತತಿಯ ಕಲ್ಯಾಣದ ಮೇಲಿನ ಧೋರಣೆ, ಒಪ್ಪಿತವಾಗಿರುವ ಕನಿಷ್ಠ ಆದಾಯಮಟ್ಟಗಳು ಅಥವಾ ಆರೋಗ್ಯ ಮಾನದಂಡಗಳ ಮೇಲಿನ ಧೋರಣೆ, ವ್ಯವಸ್ಥಾಪನೆಗೊಂಡ ಧರ್ಮದ ತತ್ವದ ಮೇಲಿನ ಧೋರಣೆ. ಅಥವಾ ಒಂದು ಕುಲಸಂಬಂಧವಾದ ಅಲ್ಪಸಂಖ್ಯಾತರ ಬೇಡಿಕೆಗಳ ಮೇಲಿನ ಧೋರಣೆ-ಈ ಬಗೆಯ ಎಲ್ಲಾ ಉದ್ದೇಶಗಳು ಪ್ರತಿಯೊಂದನ್ನೂ ದೊಡ್ಡ ಅಥವಾ ಸಣ್ಣ ಕೋನಾಂಶದಲ್ಲಿ ಸ್ಪಷ್ಟವಾಗಿ ನಿರ್ಧರಿಸುವುದೇ ಒಂದು ಜನಸಂಖ್ಯಾ ಧೋರಣೆ. ಬರಗಾಲದ ಭಯ, ಸಮೂಹ ನಿರುದ್ಯೋಗ ಮತ್ತು ನಿರ್ಗತಿಕತನದ ಭಯ, ಅನಿಯಂತ್ರಿತ ಕೊಳಚೆ ಪ್ರದೇಶಗಳ ಭಯ, ಅಧಿಕ ಜನಸಂಖ್ಯಾ ಬೆಳವಣಿಗೆ ದರಗಳು ಮತ್ತು ಅವಲಂಬನೆ ಕುರಿತ ಭಯ ಆಹಾರ, ಆರೋಗ್ಯ ಮತ್ತು ಸಾಗಾಣಿಕೆಯ ಮೇಲಿನ ಅವ್ಯವಹಾರದ ಭಯ, ಇವುಗಳೆಲ್ಲವೂ ಜನಸಂಖ್ಯಾ ಧೋರಣೆಯ ಉದ್ದೇಶಗಳನ್ನು ಕರಗಿಸುತ್ತಾ ಹೋಗುತ್ತವೆ. ಒಂದು ರಾಜ್ಯವು ಮಕ್ಕಳ ಉತ್ಪಾದನೆಯ ಮೇಲೆ ತನ್ನ ಹಕ್ಕುಗಳನ್ನು ಸ್ಥಾಪಿಸಿದಾಗ, ಮಗುವಿನ ಮಾನಸಿಕ ಮೌಲ್ಯವನ್ನು ಗುರುತಿಸಿ ಅದು ಹುಟ್ಟಲು ಸಮ್ಮತಿಯಿಲ್ಲದ ಕಟ್ಟುಪಾಡಿಗೆ ಒಳಗಾಗುವ ತಂದೆತಾಯಿಗಳು ಆ ರಾಜ್ಯದ ಗೌರವಾದರಗಳಿಗೆ ಪಾತ್ರರಾಗುತ್ತಾರೆ. ಎಲ್ಲಿ ಮಕ್ಕಳು ತಮ್ಮ ವಾಸಕ್ಕಾಗಿ ಕೆಲವು ಸಮಸ್ಯೆಗಳ ಮಧ್ಯೆ ಇರುತ್ತಾರೆಯೋ ಅಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳ ಕಲ್ಯಾಣದಲ್ಲಿ ನಷ್ಟವನ್ನು ಅನುಭವಿಸುವುದರಿಂದ ಅಂತಹ ಆದಾಯದ ಕೆಳಮಟ್ಟಗಳಲ್ಲಿ ಈ ಬಗೆಯ ನಿಯಂತ್ರಣವು ಅತ್ಯಂತ ಸಮರ್ಪಕವಾದದ್ದೂ ಆಗಿರುತ್ತದೆ. ಇದರೊಂದಿಗೆ ತಂದೆತಾಯಿಗಳು ಉತ್ತಮ ಉದ್ಯೋಗ ಹಾಗೂ ಹೆಚ್ಚು ವರಮಾನವನ್ನು ಪರಿಹಾರವಾಗಿ ಪಡೆಯಲು ಅವಕಾಶವಾಗುತ್ತದೆ. ಹೀಗೆ ಈ ವಿಚಾರವೂ ಕೂಡ ಜನಸಂಖ್ಯಾ ಧೋರಣೆಯ ಒಂದು ಭಾಗವಾಗಿರುತ್ತದೆ.

ಎಲ್‌ಡ್ರಿಜ್‌ರವರ ಮಾತುಗಳಲ್ಲಿ ಹೇಳುವುದಾದರೆ,—

ರಾಷ್ಟ್ರೀಯ ಉಳಿವು ಹಾಗೂ ಕಲ್ಯಾಣದ ಹಿತದೃಷ್ಟಿಯಲ್ಲಿ ಹುದುಗಿರುವ ಜನಸಂಖ್ಯಾ ಪ್ರವೃತ್ತಿಗಳು ಹಾಗೂ ಸಂಯೋಜನೆಯನ್ನು ಮಾರ್ಪಡಿಸುವ ಇಲ್ಲವೆ

ಬದಲಾಯಿಸುವುದರಲ್ಲಿ ಆಸಕ್ತನಾಗಿರುವ ಶಾಸನಬದ್ಧ ಪರಿಹಾರ ಕ್ರಮಗಳು, ಆಡಳಿತಾತ್ಮಕ ಕ್ರಮಗಳು ಮತ್ತು ಇತರ ಸರ್ಕಾರಿ ಕ್ರಮಗಳನ್ನು ಜನಸಂಖ್ಯಾ ಧೋರಣೆಗಳೆಂದು ವ್ಯಾಖ್ಯಾನ ಮಾಡಬಹುದು. ಸಾರ್ವಜನಿಕ ಧೋರಣೆ ಹಾಗೂ ಸಹಜ ಸ್ಥಿತಿಯಲ್ಲಿ ಸಾಮಾಜಿಕ ಪರಿವರ್ತನೆಯ ಬಹುತೇಕ ವಿಚಾರಗಳು ಜನಸಾಂಖ್ಯಿಕ ಪ್ರವೃತ್ತಿಗಳ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಒಟ್ಟು ಧೋರಣೆ ಹಾಗೂ ಇತರ ಸಾಮಾಜಿಕ ಶಕ್ತಿಗಳಿಂದ ಅನಪೇಕ್ಷಿತಗೊಂಡ ಜನಸಾಂಖ್ಯಿಕ ಪ್ರವೃತ್ತಿಗಳನ್ನು ಎದುರಿಸುವುದರ ಮೂಲಕ ಜನಸಂಖ್ಯಾ ಧೋರಣೆಗಳು ವಿನ್ಯಾಸಗೊಳ್ಳುತ್ತವೆ.

ವಿಶಾಲತೆಯುಳ್ಳ ಒಟ್ಟು ಧೋರಣೆಯ ಮೂಲಕ ಅಗೋಚರವಾದ ಅಥವಾ ಅನಪೇಕ್ಷಿತವಾದ ಅಡ್ಡ ಪರಿಣಾಮಗಳಿಗೆ ಜನಸಂಖ್ಯಾ ಧೋರಣೆಯು ಪ್ರಧಾನವಾಗಿ ಹೊಂದಾಣಿಕೆಯ ಒಂದು ಪ್ರತಿಕ್ರಿಯೆಯಾಗಿ ಪರಿಣಮಿಸುತ್ತದೆ. ಕಡಿಮೆ ಅಭಿವೃದ್ಧಿ ಇರುವ ದೇಶಗಳಲ್ಲಿ ಜನಸಂಖ್ಯೆ ಸಮಸ್ಯೆಯು ಕೇವಲ ಜನಸಾಂಖ್ಯಿಕ ಮಾತ್ರವಾಗಿರದೆ ಸಾಮಾಜಿಕ-ಆರ್ಥಿಕ ಸಮಸ್ಯೆಯೂ ಆಗಿದೆ. ಅಭಿವೃದ್ಧಿ ಧೋರಣೆಯ ಪ್ರತ್ಯೇಕತೆಯಲ್ಲಿ ಜನಸಂಖ್ಯಾ ಧೋರಣೆಯು ಉತ್ತಮಗೊಳ್ಳದಿದ್ದರೆ ಜನಸಂಖ್ಯಾ ಧೋರಣೆಯ ಪ್ರತ್ಯೇಕತೆಯಲ್ಲಿ ಅಭಿವೃದ್ಧಿ ಧೋರಣೆಯೂ ಪರಿಪಕ್ವವಾಗುವುದಿಲ್ಲ.

ಜನಸಂಖ್ಯೆ ಬೆಳವಣಿಗೆಯ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡು ನಕಾಶೆಯನ್ನು ರೂಪಿಸುವುದರಲ್ಲಿ ಒಂದು ಸಣ್ಣ ತೊಡಕು ಕಂಡುಬರುವುದು ಸ್ವಾಭಾವಿಕ. ಫಲಶಕ್ತಿ, ವಯೋರಚನೆ, ವಿತರಣೆ ಹಾಗೂ ಜನಸಂಖ್ಯಾ ಬೆಳವಣಿಗೆ ದರದಲ್ಲಿ ಉಂಟಾಗುವ ಬದಲಾವಣೆಗಳಿಗೆ ಸಿದ್ಧವಾಗಿರಬೇಕಾದ ನಕ್ಷೆಯು ಕೆಲವು ಸಂದರ್ಭಗಳಲ್ಲಿ ಪರಿಣಾಮಕಾರಿಯಾಗದೆ ಇರುವ ಸಾಧ್ಯತೆಗಳಿರುತ್ತವೆ. ಈ ಜನಸಾಂಖ್ಯಿಕ ಬದಲಾವಣೆಗಳು ವಸತಿ, ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಹಾಗೂ ಸಾಮಾಜಿಕ ಸೇವೆಗಳಿಗೆ ಸಂಬಂಧಿಸಿದ ಬೇಡಿಕೆಗಳ ಮೇಲೆ ಸತ್ವಪೂರಿತ ಪ್ರಭಾವವನ್ನು ಬೀರುತ್ತವೆ. ಆಶ್ಚರ್ಯವೆಂದರೆ, ಕಡಿಮೆ ಅಭಿವೃದ್ಧಿ ಹೊಂದಿರುವ ಅನೇಕ ರಾಷ್ಟ್ರಗಳು ಜನಸಾಂಖ್ಯಿಕ ದತ್ತಾಂಶಗಳನ್ನು ಸಮರ್ಪಕ ರೀತಿಯಲ್ಲಿ ಉಪಯೋಗಕ್ಕೆ ಬಳಸಿಕೊಂಡಿರುವುದಿಲ್ಲ.

'ಜನಸಂಖ್ಯಾ ಸಮಸ್ಯೆ'ಗಳ ಹನ್ನೊಂದು ಸಾಮಾನ್ಯ ಬಗೆಗಳನ್ನು ಇಲ್ಲಿ ಗುರುತಿಸಬಹುದು. 1) ಜನಸಂಖ್ಯಾ ಬೆಳವಣಿಗೆಯ ಮೂಲಕ ಕುಂಠಿತಗೊಳ್ಳುವ ಆರ್ಥಿಕ ಬೆಳವಣಿಗೆ 2) ಜನಸಂಖ್ಯಾ ಬೆಳವಣಿಗೆಯ ಏರಿಕೆಯ ಪ್ರಮಾಣ 3) ನಿರುದ್ಯೋಗ 4) ಅಧಿಕಗೊಳ್ಳುತ್ತಿರುವ ಶಾಲಾ ವಯಸ್ಸಿನ ಜನಸಂಖ್ಯೆ 5) ಅಧಿಕ ಅವಲಂಬನಾ ಪ್ರಮಾಣ 6) ಆರೋಗ್ಯ ಸೇವೆಗಳ ಮೇಲಿನ ಜನಸಂಖ್ಯಾ

ಒತ್ತಡ 7) ಸಾಮಾಜಿಕ ಸೇವೆಗಳ ಮೇಲಿನ ಜನಸಂಖ್ಯಾ ಒತ್ತಡ 8) ವಸತಿ ಮೇಲಿನ ಜನಸಂಖ್ಯಾ ಒತ್ತಡ 9) ಕೃಷಿ ವ್ಯವಸ್ಥೆ ಮೇಲಿನ ಜನಸಂಖ್ಯಾ ಒತ್ತಡ 10) ವ್ಯಕ್ತಿಗತ ಜೀವನ ಮಟ್ಟದ ಕುಸಿತ ಮತ್ತು ಜನಸಂಖ್ಯಾ ಸಾಂದ್ರತೆ.

ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಜನಸಂಖ್ಯಾ ಧೋರಣೆಗಳ ನಾಲ್ಕು ಬಗೆಗಳಲ್ಲಿ ಒಂದಲ್ಲ ಒಂದು ಬಗೆಯನ್ನು ಅಂಗೀಕರಿಸಿವೆ. ಪ್ರಥಮವಾಗಿ, ಜನಸಂಖ್ಯಾ ಬೆಳವಣಿಗೆ ದರಗಳನ್ನು ಕಡಿತಗೊಳಿಸುವ ಧೋರಣೆ. ಎರಡನೆಯದಾಗಿ, ಕೆಲವು ರಾಷ್ಟ್ರಗಳು ಜನಸಂಖ್ಯಾ ಬೆಳವಣಿಗೆಯನ್ನು ಕಡಿತಗೊಳಿಸುವುದರ ಪರವಾಗಿ ತಮ್ಮ ಧೋರಣೆಯನ್ನು ಘೋಷಿಸಿದ್ದರೂ, ಅದನ್ನು ಸಾಧಿಸುವುದರಲ್ಲಿ ಅಗತ್ಯವಾದ ಯಾವುದೇ ಕಾರ್ಯಕ್ರಮ ಅಥವಾ ಸರ್ಕಾರಿ ಕ್ರಮವನ್ನು ಹಮ್ಮಿಕೊಂಡಿಲ್ಲ. ಮೂರನೆಯದಾಗಿ, ಕೆಲವು ರಾಷ್ಟ್ರಗಳು ತಾಯ್ತನದ ಆರೋಗ್ಯ ಅಥವಾ ಕುಟುಂಬ ಕಲ್ಯಾಣದಂತಹ ಜನಸಾಂಖ್ಯಿಕವಲ್ಲದ ಕಾರಣಗಳಿಗಾಗಿಯೂ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿವೆ. ನಾಲ್ಕನೆಯದಾಗಿ, ಕೆಲವು ರಾಷ್ಟ್ರಗಳು ತಮ್ಮ ಅಭಿವೃದ್ಧಿ ಯೋಜನೆಗಳಲ್ಲಿ ಜನಸಂಖ್ಯೆ ಸಮಸ್ಯೆ ಕುರಿತು ಚರ್ಚೆಯನ್ನೇ ನಡೆಸಿಲ್ಲ. ಹಾಗಿದ್ದರೂ ಕೂಡ, ಯೋಜನೆಗಳಲ್ಲಿ ಸೂಚಿತವಾಗಿರುವ ಕೆಲವಾದರೂ ಸಂಬಂಧಿತ ಧೋರಣೆಗಳು ಹಾಗೂ ಕಾರ್ಯಕ್ರಮಗಳಿಗೆ ಹೊರತಾದ ಜನಸಂಖ್ಯಾ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ಮಾನ್ಯ ಮಾಡಿವೆ.

ಜನಸಂಖ್ಯೆಯ ಗಾತ್ರ, ಭೌಗೋಳಿಕ ವಿತರಣೆ, ಸಂಯೋಜನೆ ಇವುಗಳಲ್ಲಿನ ಪರಿವರ್ತನೆ ಹಾಗೂ ಪ್ರಕ್ರಿಯೆ ಇವೆಲ್ಲವೂ ಸರ್ಕಾರಿ ತೀರ್ಪುಗಳು ಹಾಗೂ ಶಾಸನಗಳ ಮೂಲಕ ಪ್ರಭಾವಿತವಾಗುತ್ತವೆ. ಜನಸಂಖ್ಯೆಗೆ ಧಕ್ಕೆಯುಂಟುಮಾಡಬಲ್ಲ ಕೆಲವು ಶಾಸನಗಳು ಒಂದು ರಾಷ್ಟ್ರದ ಜನಸಂಖ್ಯೆಯ ಒಂದು ಅಥವಾ ಅದಕ್ಕಿಂತ ಹೆಚ್ಚಿನ ವಿಷಯಗಳನ್ನು ಪ್ರಭಾವಿತಗೊಳಿಸುವುದರಲ್ಲಿ ಶ್ರದ್ಧಾಪೂರ್ವಕವಾಗಿ ವಿನ್ಯಾಸಗೊಂಡಿರುತ್ತವೆ. ಹಾಗೆಯೇ ಜನಸಂಖ್ಯೆಯನ್ನು ಬಾಧಿಸುತ್ತಿರುವ ಇನ್ನಿತರ ಅನೇಕ ಶಾಸನಗಳು ತಮ್ಮ ಪ್ರಾಥಮಿಕ ಧ್ಯೇಯಕ್ಕನುಸಾರವಾಗಿ ಕೆಲವು ಗುರಿಗಳನ್ನು ಹೊಂದಿರುತ್ತವೆ. ಮೊದಲನೆಯದನ್ನು ಜನಸಂಖ್ಯಾ ಧೋರಣೆಯೆಂದು ಕರೆಯಬಹುದಾದರೂ ಸಹ, ಎರಡನೆಯದನ್ನು ನಾವು ಕಡೆಗಣಿಸಲು ಸಾಧ್ಯವಿಲ್ಲ. ಜನಸಂಖ್ಯೆಯ ಮೇಲೆ ಪ್ರಭಾವ ಬೀರುವ ಮೂಲಕ ಪ್ರಜ್ಞಾಪೂರ್ವಕವಾಗಿ ವಿನ್ಯಾಸಗೊಂಡಿರುವ ಶಾಸನಕ್ಕಿಂತಲೂ ಹೆಚ್ಚಾಗಿ ಜನಸಂಖ್ಯೆಯ ಮೇಲಿನ ಅದರ ಒಟ್ಟು ಪರಿಣಾಮ ಮಹತ್ವವಾದುದಾಗಿರುತ್ತದೆ ಎಂಬುದು ಇದಕ್ಕೆ ಮೂಲ ಕಾರಣ. ಜನಸಂಖ್ಯಾ ಶಾಸನದ ಅಂತಿಮ ಪರಿಣಾಮವು ಜನಸಂಖ್ಯೆಯ ಗಾತ್ರ, ಭೌಗೋಳಿಕ ವಿತರಣೆ, ಹಾಗೂ ಸಂಯೋಜನೆಯ ಮೇಲಾಗುವ ಸಂಭವವಿರುತ್ತದೆ. ಈ ಪರಿಣಾಮಗಳಲ್ಲಿ ಯಾವುದೇ ಒಂದನ್ನು ಸಾಧಿಸಬಹುದಾದ ಯಾಂತ್ರಿಕ ವಿಧಾನವು

ಮರಣ ಪ್ರಮಾಣ, ಫಲಶಕ್ತಿ ಹಾಗೂ ವಲಸೆ ಈ ಮೂರೂ ಜನಸಂಖ್ಯಾ ಪ್ರಕ್ರಿಯೆಗಳಲ್ಲಿ ಒಂದರಲ್ಲಿಯಾದರೂ ಪರಿವರ್ತನೆ ಉಂಟುಮಾಡಲು ನೆರವಾಗುತ್ತದೆ.

ಜನಸಂಖ್ಯೆಗೆ ಸಂಬಂಧಿಸಿದಂತೆ ಧೋರಣೆ ಮತ್ತು ಕಾರ್ಯಕ್ರಮ ಇವೆರಡೂ ಬೇರೆ ಬೇರೆ ಭಾವರೂಪಗಳು. ಧೋರಣೆ ಎನ್ನುವುದು ಸೈದ್ಧಾಂತಿಕವಾಗಿದ್ದರೆ, ಕಾರ್ಯಕ್ರಮ ಎನ್ನುವುದು ಪ್ರಾಯೋಗಿಕವಾದದ್ದಾಗಿರುತ್ತದೆ. ಹೀಗಾಗಿ, ಧೋರಣೆ ಜಾರಿಗೊಳಿಸುವಿಕೆ ಮತ್ತು ಕಾರ್ಯಕ್ರಮ ಜಾರಿಗೊಳಿಸುವಿಕೆ ಇವುಗಳ ನಡುವಣ ವ್ಯತ್ಯಾಸ ಗೋಚರವಾಗುತ್ತದೆ. ಧೋರಣೆ ಜಾರಿಗೊಳಿಸುವಿಕೆ ಎಂಬುದು ವಿಶಾಲಾರ್ಥದಲ್ಲಿ ಅನುವಾದಿತಗೊಳ್ಳುವ ಅಥವಾ ಹೊಸ ಹೊಸ ಅಂಶಗಳನ್ನು ಶೇಖರಿಸಿಕೊಳ್ಳುವ ಒಂದು ಪ್ರಕ್ರಿಯೆ. ಧೋರಣೆಗೆ ಸಂಬಂಧಿಸಿದ ಪೀಳಿಕೆಯು ಹೆಚ್ಚಾಗಿ ರಾಜಕೀಯ ಪಟ್ಟಗಳಲ್ಲಿ ನಿರ್ದಿಷ್ಟ ಯೋಜನೆಗಳಡಿಯಲ್ಲಿ ಉದ್ಭವಿಸುವಂತಹುದು ಎಂದು ವ್ಯಾಖ್ಯಾನಿಸಲಾಗಿದೆ. ಕಾರ್ಯಕ್ರಮ ಜಾರಿಗೊಳಿಸುವಿಕೆಯು ಕಾರ್ಯಕ್ರಮಗಳಿಗೆ ತೀವ್ರತೆಯನ್ನು ನೀಡುವ ಒಂದು ಚಲನಶೀಲ ಪ್ರಕ್ರಿಯೆಯಾಗಿರುವುದಲ್ಲದೆ ಈ ಕಾರ್ಯಕ್ರಮಗಳು ಧೋರಣೆಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಸೃಷ್ಟಿಗೊಳ್ಳುತ್ತವೆ.

ಜನಸಂಖ್ಯೆಯ ಒಂದು ದೃಢವಾದ ಹಾಗೂ ಬೆಂಬಲಿತ ಧೋರಣೆಯ ಸೂತ್ರೀಕರಣವು ಒಂದು ಅವಶ್ಯ ಅಂಶವಾಗಿದ್ದರೂ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದರಲ್ಲಿ ಇದು ತಕ್ಕಷ್ಟು ಸಮಾನಂಸಾರಕ್ಕೆ ಒಳಪಡುವುದಿಲ್ಲ. ಯಾವ ಜನರಿಗೆ ಧೋರಣೆಗಳನ್ನು ನಿರ್ದೇಶಿಸಲಾಗುವುದೋ ಆ ಜನರ ಅಗತ್ಯಗಳು ಹಾಗೂ ಧೋರಣೆಗಳ ಏಕರೂಪತೆಯ ಮೇಲೆ ಬಹುತೇಕ ಅಧ್ಯಯನಗಳು ಕೇಂದ್ರೀಕೃತವಾಗಿದ್ದರೆ, ಕೆಲವೇ ಅಧ್ಯಯನಗಳು ಈ ಧೋರಣೆಗಳನ್ನು ಕಾರ್ಯಗತಗೊಳಿಸುವುದರ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಿರುತ್ತವೆ. ಈ ಎರಡೂ ವಿಚಾರಗಳಲ್ಲಿ ಪ್ರಾಥಮಿಕವಾಗಿ ಧೋರಣೆಗಳು ಹಾಗೂ ಜನರ ಮೌಲ್ಯಗಳು ಮತ್ತು ಮನೋಭಾವಗಳ ನಡುವೆ ಮೈತ್ರಿ ಕಂಡುಬರುತ್ತದೆ. ಮೌಲ್ಯಗಳು ಅಂದರೆ ಸ್ವಾತಂತ್ರ್ಯ, ನ್ಯಾಯ, ಸಾಮಾನ್ಯ ಕಲ್ಯಾಣ, ರಕ್ಷಣೆ ಹಾಗೂ ಉಳಿವು ಇವೆಲ್ಲವೂ ಸಂಪ್ರದಾಯದ ಒಂದು ಭಾಗವಾಗಿದ್ದು ಇವು ಜನಸಂಖ್ಯಾ ಕಾರ್ಯಕ್ರಮಗಳು ಅಥವಾ ಧೋರಣೆಗಳನ್ನು ತೀರ್ಮಾನಿಸುವುದರಲ್ಲಿ ಮಾರ್ಗಸೂಚಿಗಳಾಗಿ ಅಥವಾ ಮಾನದಂಡಗಳಾಗಿ ಬಳಕೆಯಾಗುತ್ತವೆ. ಧೋರಣೆಗಳು ಅವು ಹೇಗೆ ಈ ಮೌಲ್ಯಗಳನ್ನು ಪ್ರವರ್ಧಿಸುತ್ತವೆ, ಕಡಿತಗೊಳಿಸುತ್ತವೆ, ಗುಣಾಂತರಕ್ಕೀಡುಮಾಡುತ್ತವೆ ಅಥವಾ ನಿರರ್ಥಕಗೊಳಿಸುತ್ತವೆ ಎಂಬುದರ ಮಿತಿಗಳಲ್ಲಿ ಮೌಲ್ಯೀಕೃತಗೊಳ್ಳುತ್ತವೆ. ಯಾವಾಗ ಧೋರಣೆ ನಿರ್ಣಯಗಳು ಘರ್ಷಣೆಯುಂಟುಮಾಡುವಂತಹ ಮೌಲ್ಯಗಳನ್ನು ಒಳಗೊಂಡಿರುತ್ತದೆಯೋ ಆಗ

ಅದು ಈ ಬಗೆಯ ಘರ್ಷಣೆಗಳನ್ನು ವಿಮುಕ್ತಿಗೊಳಿಸುವ ಒಂದು ವಿಧಾನವಾಗಿ ಬೆಳೆಯುವುದು ಮುಖ್ಯವಾಗುತ್ತದೆ.

ಮಿಲ್ಲರ್ ಮತ್ತು ಗಾಡ್‌ವಿನ್‌ರವರು ಜನಸಂಖ್ಯಾ ಧೋರಣೆಗಳನ್ನು ಮೌಲ್ಯೀಕರಣಗೊಳಿಸಬಲ್ಲ ಒಂದು ಚೌಕಟ್ಟನ್ನು ರೂಪಿಸಿ ಅಭಿವೃದ್ಧಿಗೊಳಿಸಿದ್ದಾರೆ. ಜನಸಂಖ್ಯಾ ಧೋರಣೆಗಳ ನಾಲ್ಕು ಬಗೆಗಳು ಗುರುತಿಸಲ್ಪಟ್ಟಿವೆ. 1) ವಿತರಣಾತ್ಮಕ ಧೋರಣೆಗಳು ಸಾಮಾನ್ಯ ನಿಧಿಯಿಂದ ಸಂಪನ್ಮೂಲಗಳನ್ನು ಪಡೆಯುತ್ತವೆ. ಮತ್ತು ಅವುಗಳನ್ನು ನಿರ್ದಿಷ್ಟ ವ್ಯಕ್ತಿಗಳಿಗೆ ನೀಡುತ್ತವೆ. ಉದಾಹರಣೆಗೆ, ಕುಟುಂಬ ಯೋಜನಾ ಕಾರ್ಯಕ್ರಮಗಳು. ಇಂತಹ ಧೋರಣೆಗಳು ರಾಜಕಾರಣಿಗಳಿಂದ ಬೆಂಬಲಿತವಾಗುವುದಕ್ಕೆ ಕಾರಣ ತಮ್ಮ ಸಂಪಾದನೆಗಳ ಕುರಿತು ಎಚ್ಚರ ವಹಿಸುವ ಅನುಕೂಲಸಿಂಧು ಜನ ಇವರಾಗಿರುವುದರಿಂದ ಸಾಮಾನ್ಯ ಜನತೆಯು ತಮಗೆ ಸಹಾಯ ಮಾಡುತ್ತಿರುವವರು ಯಾರು ಎಂಬುದರ ಬಗೆಗೆ ಅರ್ಥ ಮಾಡಿಕೊಳ್ಳಲು ಹೋಗುವುದಿಲ್ಲ. 2) ಪುನರ್-ವಿತರಣಾಧೋರಣೆಗಳು ನಿರ್ದಿಷ್ಟ ವ್ಯಕ್ತಿಗಳಿಂದ ಸಂಪನ್ಮೂಲಗಳನ್ನು ಪಡೆಯುತ್ತವೆ ಮತ್ತು ಇತರರಿಗೆ ಅವುಗಳನ್ನು ವಿತರಣೆ ಮಾಡುತ್ತವೆ. ಉದಾಹರಣೆಗೆ, ವೃದ್ಧರಿಗೆ ಸರ್ಕಾರದ ವೈದ್ಯಕೀಯ ನೆರವು. ವರಮಾನ ಆಧಾರಿತ ಎಚ್ಚರದಲ್ಲಿ ನೆರವು ನೀಡಬಹುದಾದ ಈ ತೆರನ ಧೋರಣೆಗಳು ಈ ಬಗೆಯ ಬೇಡಿಕೆಗಳು ಒಂದಾಗಿದ್ದಾಗ ಮತ್ತು ಸುವ್ಯವಸ್ಥಿತವಾಗಿದ್ದಾಗ ಮಾತ್ರ ಕಾರ್ಯಗತಗೊಳ್ಳಲು ಅರ್ಹತೆಯನ್ನು ಪಡೆಯುತ್ತವೆ. 3) ಸ್ವ-ನಿಯಂತ್ರಣ ಧೋರಣೆಗಳು ನಿರ್ದಿಷ್ಟ ಗುಂಪುಗಳಿಗೆ ಅಧಿಕಾರ ಮತ್ತು ಹಕ್ಕು ಬಾಧ್ಯತೆಗಳನ್ನು ವಿತರಿಸುತ್ತವೆ. ವ್ಯಕ್ತಿಗತ ಸ್ವಾತಂತ್ರ್ಯವು ತಮಗೆ ಅವಶ್ಯವಾದ ಆಸಕ್ತಿಗಳನ್ನು ಅಪೇಕ್ಷಿತ ದಾರಿಯಲ್ಲಿ ಮುಂದುವರೆಸಿಕೊಂಡು ಹೋಗುವುದರಲ್ಲಿ ನಿರ್ಬಂಧಗಳಿರುವುದಿಲ್ಲ. ಆದರೆ ಕೆಲವು ನಿರ್ದಿಷ್ಟ ಸನ್ನಿವೇಶಗಳಲ್ಲಿ ವ್ಯಕ್ತಿಗಳ ಕೆಲವು ಸ್ವಾತಂತ್ರ್ಯ ಪ್ರವೃತ್ತಿಗಳು ಮಿತಿ ಮೀರದಂತೆ ನಿರ್ಬಂಧಗಳನ್ನು ಹೇರುವುದು ಅನಿವಾರ್ಯವಾಗುತ್ತದೆ. ಉದಾಹರಣೆಗೆ. ಗರ್ಭಪಾತಗಳಿಗೆ ಸಹಾಯಕವಾಗುವಂತೆ ರಕ್ಷಣೆ ನೀಡಬಲ್ಲ ಕಾನೂನುಗಳು. 4) ಸ್ವ-ನಿಯಂತ್ರಣ ಧೋರಣೆಗಳು ಒಪ್ಪಿಗೆಗಳು ಮತ್ತು ಪ್ರಚೋದನೆಗಳ ಬಳಕೆಯ ಮುಖಾಂತರ ಶಕ್ತಿ. ಅಧಿಕಾರ ಮತ್ತು ಹಕ್ಕು ಬಾಧ್ಯತೆಗಳನ್ನು ಪುನರ್ ವಿತರಣೆ ಮಾಡುತ್ತವೆ. ಉದಾಹರಣೆಗೆ, ಒಬ್ಬ ಮಹಿಳೆಯು ಹೊಂದಬಹುದಾದ ಮಕ್ಕಳ ಸಂಖ್ಯೆಯನ್ನು ನಿರ್ಬಂಧಿಸುವುದು. ಇಂತಹ ಧೋರಣೆಗಳು ಕಳೆದುಕೊಳ್ಳುವ ಜನರಿಗೆ ತಾವು ಕಳೆದುಕೊಳ್ಳುವುದರ ಬಗೆಗೆ ಇರುವ ಎಚ್ಚರದಿಂದಾಗಿ ಕಾರ್ಯಗತವಾಗುವುದು ಕಷ್ಟಕರವಾಗುತ್ತದೆ.

ಕಾರ್ಯಕ್ರಮವನ್ನು ಜಾರಿಗೊಳಿಸುವುದರ ಮೌಲ್ಯೀಕರಣವು ಕಾರ್ಯಗತಗೊಳಿಸುವ ಘಟಕದ ಸಾಮರ್ಥ್ಯ ಮತ್ತು ನಿಗದಿತ ಕಾರ್ಯಕ್ರಮವನ್ನು ಕಾರ್ಯ

ಗತಗೊಳಿಸುವ ಪ್ರಕ್ರಿಯೆ ಇವುಗಳ ಅಧ್ಯಯನದಿಂದ ಕೂಡಿದೆ. ಡ್ಯಾವರ್ತ್‌ರವರು ಕುಟುಂಬ ಯೋಜನೆಗೆ ಸಂಬಂಧಿಸಿದ ಯೋಜನೆಗಳು ಮತ್ತು ಅವುಗಳನ್ನು ನೆರವೇರಿಸಬಲ್ಲ ಸರ್ಕಾರದ ಸಾಮರ್ಥ್ಯಗಳ ನಡುವಣ ಅಂತರವನ್ನು ಸ್ಪಷ್ಟಪಡಿಸಿದ್ದಾರೆ. ರೋಜರ್ಸ್‌ರವರು, ಅಧಿಕಾರಶಾಹಿಯು ಸೃಷ್ಟಿಯಾದ ವಸಾಹತು ಬಗೆಯು ಕುಟುಂಬ ಯೋಜನೆಯಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವ ದಿಕ್ಕಿನಲ್ಲಿ ಆತಂಕವನ್ನುಂಟುಮಾಡುವ ಅಡೆತಡೆಗಳಲ್ಲಿ ಒಂದಾಗಿದೆ ಎಂಬುದಾಗಿ ವಾದಿಸುತ್ತಾರೆ. ನಿಗದಿಪಡಿಸಿದಂತೆ ಕಾರ್ಯಗತಗೊಳಿಸಬೇಕಾಗಿರುವ ಘಟಕದಲ್ಲಿ ಅಧಿಕಾರಶಾಹಿ ಸ್ವರೂಪ, ಕುಟುಂಬ ಯೋಜನಾ ಕಾರ್ಯಕ್ರಮದ ಸ್ಥಳ ಇವು ಕಾರ್ಯಕ್ರಮ ಜಾರಿಗೊಳಿಸುವಿಕೆಯಲ್ಲಿ ಅನೇಕ ಬಾರಿ ಚರ್ವಿತ ಚರ್ವಣವಾಗುತ್ತಿರುವ ವಿಚಾರಗಳಾಗಿವೆ. ಇದಕ್ಕೆ ತದ್ವಿರುದ್ಧ ದೃಷ್ಟಿಕೋನವನ್ನು ವಿಶ್ವ ಆರೋಗ್ಯ ಸಂಸ್ಥೆ, ಜನಸಂಖ್ಯಾ ಪರಿಷತ್ತು ಮತ್ತಿತರ ಸಂಸ್ಥೆಗಳು ಹೊಂದಿದ್ದು ಅವುಗಳ ಪ್ರಕಾರ, ವಾಸ್ತವವಾಗಿ ಒಂದು ಜನಸಂಖ್ಯಾ ಕಾರ್ಯಕ್ರಮವು ಅಸ್ತಿತ್ವದಲ್ಲಿರುವ ಆರೋಗ್ಯ ವ್ಯವಸ್ಥೆಯೊಳಕ್ಕೆ ಸಮಗ್ರಗೊಳ್ಳಬೇಕು, ಅದರಲ್ಲಿಯೂ ನಿರ್ದಿಷ್ಟವಾಗಿ ತಾಯ್ತನ ಮತ್ತು ಮಗುವಿನ ಆರೋಗ್ಯ ಸೇವೆಗಳು ಉಚಿತವಾದುದಾಗಿರಬೇಕು. ಕಾರ್ಯಗತಗೊಳಿಸುವುದರ ಪ್ರಕ್ರಿಯೆಗಳಿಗೆ ಸಂಬಂಧಿಸಿ ಬಹುತೇಕ ಮೌಲ್ಯೀಕೃತ ಅಧ್ಯಯನಗಳು ಸೂಚಿಸಿರುವಂತೆ ಜನಸಂಖ್ಯಾ ಕಾರ್ಯಕ್ರಮಗಳು ಅತ್ಯಂತ ಪರಿಣಾಮಕಾರಿ ನಿರ್ವಹಣೆಯೊಂದಿಗೆ ಅದರಲ್ಲಿಯೂ ನಿರ್ದಿಷ್ಟವಾಗಿ ಕುಟುಂಬ ಯೋಜನೆಯಂತಹ ಕಾರ್ಯಕ್ರಮದಲ್ಲಿ ಸಮ್ಮಿಳನಗೊಂಡಿವೆ.

ಪರಾಮರ್ಶನ ಗ್ರಂಥಗಳು

1) ಡೇವಿಡ್ ಎಂ. ಹೀರ್– ಸೊಸೈಟಿ ಅ್ಯಂಡ್ ಪಾಪ್ಯುಲೇಷನ್
2) ಒ. ಎಸ್. ಶ್ರೀ ವಾಸ್ತವ– ಎ ಟೆಕ್ಸ್ಟ್ ಬುಕ್ ಆಫ್ ಡೆಮಾಗ್ರಫಿ
3) ಭಾಸ್ಕರ್ ಡಿ. ಮಿಶ್ರ- ಆ್ಯನ್ ಇನ್‌ಟ್ರಡಕ್ಷನ್ ಟು ದ ಸ್ಟಡಿ ಆಫ್ ಪಾಪ್ಯುಲೇಷನ್.

"ಸೀಮೆ" ಮತ್ತು ಅದರ ಆಡಳಿತ ವ್ಯವಸ್ಥೆ

ಎಚ್. ವಿ. ಶ್ರೀಧರ

ಪ್ರಾಚೀನ ಕಾಲದಲ್ಲಿ ಹಳ್ಳಿ ಸ್ಥಾನಿಕ ಆಡಳಿತದ ಘಟಕವಾಗಿತ್ತು. ಶಾನಬೋವ. ತಲವಾರ ಇತ್ಯಾದಿ ಅಧಿಕಾರಿಗಳನ್ನು ಹೊಂದಿದ್ದ ಅದು ಸ್ವಯಂ ಆಡಳಿತದ ಘಟಕವಾಗಿದ್ದು ದಕ್ಷತೆಯಿಂದ ಕಾರ್ಯವನ್ನೂ ನಿರ್ವಹಿಸುತ್ತಿತ್ತು. ಅಂದಿನ ಆಡಳಿತ ವರ್ಗ ಪ್ರತಿಯೊಂದು ಹಳ್ಳಿಯ ಗಡಿಗಳನ್ನು ಗುರುತಿಸಿದ್ದು ಅದನ್ನು 'ಸೀಮೆ' ಎಂದು ಕರೆಯಲಾಗಿತ್ತು. ಭೂಮಿಯನ್ನು ಉಂಬಳಿಯಾಗಿ, ನೆತ್ತರ ಕೊಡುಗೆ ಇತ್ಯಾದಿ ಕಾರಣಗಳಿಗೆಂದು ದಾನ ಮಾಡಿದಾಗ ಆ ಭೂಮಿಯ ನಾಲ್ಕು ಸೀಮೆಗಳನ್ನು ಗುರುತಿಸಿ ಶಾಸನವನ್ನು ಮಾಡಿಕೊಡುತ್ತಿದ್ದರು. ಇಲ್ಲಿಯೂ ಈ ಪದ ಹಿಂದಿನಿಂತ ಭಿನ್ನಾರ್ಥದಲ್ಲೇನೂ ಬಳಕೆಯಾಗಿಲ್ಲ. ಕಾಲ ಕಳೆದಂತೆ 'ಸೀಮೆ' ಪ್ರಾಂತ ಸೂಚಕವಾಗಿ ಬಳಕೆಯಾಗಿ ಅರಸರ ಆಡಳಿತದ ಘಟಕದಲ್ಲಿ ಬಂದಿರುವುದು ಕಂಡು ಬರುತ್ತದೆ. ಆಡಳಿತದ ಸೌಕರ್ಯಕ್ಕಾಗಿ ಸಾಮ್ರಾಜ್ಯವನ್ನು ಪ್ರಾಂತಗಳಾಗಿ ರಾಜ್ಯ, ಮಂಡಲ, ಸೀಮಾ, ಸ್ಥಳ, ಎಂದಿತ್ಯಾದಿಯಾಗಿ ವಿಂಗಡಿಸುವಲ್ಲಿ 'ಸೀಮೆ' ಪ್ರಾಂತ ಸೂಚಕ ಎನ್ನುವುದು ಖಚಿತವಾಗಿದೆ. ಸೀಮೆ ಅರಸರ ಆಡಳಿತ ಘಟಕವಾಗಿತ್ತೆನ್ನುವುದು ಒತ್ತಟ್ಟಿಗಿರಲಿ. ಆದರೆ ಇದು ಗೋಕರ್ಣ ಮಂಡಲದ ವ್ಯಾಪ್ತಿಯಲ್ಲಿ ಬರುವ ಹವ್ಯಕ ಬ್ರಾಹ್ಮಣರ ಮಠದ ಆಡಳಿತದ ಅನುಕೂಲಕ್ಕೆಂದು ಮಾಡಿದ ವಿಂಗಡಣೆಯೂ ಹೌದೆನ್ನುವುದು ಹೆಚ್ಚು ಮಂದಿಗೆ ಹೊಳೆದಿರಲಿಕ್ಕಿಲ್ಲ! ಇದರ ವಿಂಗಡಣೆ, ರಚನೆ, ಆಡಳಿತಕ್ಕೆ ಸಂಬಂಧಿಸಿದಂತೆ ತಾತ್ವಿಕ ತಳಹದಿಯೊಂದಿದೆ ಎಂಬ ವಿಚಾರವನ್ನು, ಸೀಮೆ ಪೌರೋಹಿತ್ಯಕ್ಕೆ ಸಂಬಂಧಿಸಿ ದೊರೆತ ಓಲೆಗರಿ ದಾಖಲೆಯೊಂದನ್ನು ದಾಖಲೆಯಾಗಿ ಇಟ್ಟುಕೊಂಡು ಸ್ಪಷ್ಟಪಡಿಸಲು ಇಲ್ಲಿ ಯತ್ನಿಸಲಾಗಿದೆ.

ಕದಂಬ ವಂಶದ ಮಯೂರವರ್ಮ ಬ್ರಾಹ್ಮಣರನ್ನು ಉತ್ತರದ ಅಹಿಚ್ಛತ್ರದಿಂದ ಕರೆತಂದು ಸ್ಥಾನುಗೂಢಪುರ (ಶಿಕಾರಿಪುರ ತಾಲೂಕಿನ ತಾಳಗುಂದ) ದಲ್ಲಿ ಅಗ್ರಹಾರವನ್ನು ರಚಿಸಿಕೊಟ್ಟು ಅವರನ್ನು ನೆಲೆಗೊಳಿಸಿದನೆಂದು ಉತ್ತರ ಸಹ್ಯಾದ್ರಿ ಖಂಡ ಪುರಾಣದಲ್ಲಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಇವರನ್ನು ನೆಲೆಗೊಳಿಸಿದನೆಂಬ ಉಲ್ಲೇಖವೂ ಅಲ್ಲಿದೆ. ಕ್ರಿ. ಶ. ಸು ೭ನೇ ಶತಮಾನದ ಉತ್ತರ ಕನ್ನಡ ಜಿಲ್ಲೆಯ ಕಂಪ್ಲಿ ಶಾಸನದಲ್ಲಿ "ಪೈವೆಯರು" ಎಂಬ ಶಬ್ದವಿದ್ದು ಇವರೇ ಮುಂದೆ ಹೈವೆಯರು, ಹವ್ಯಕರು ಎಂದಾಗಿರುವಂತಿದೆ.

ಪ>ಹ ಕಾರಗಳ ಬದಲಾವಣೆಯು ಕ್ರಿಯೆ ಭಾಷಾಶಾಸ್ತ್ರದ ದೃಷ್ಟಿಯಿಂದಲೂ ಸಮರ್ಥನೀಯ. ಒಟ್ಟಿನಲ್ಲಿ ಕ್ರಿ.ಶ. ೬ನೇ ಶತಮಾನದ ವೇಳೆಗೆ ಈ ಪಂಗಡ ಸಾಮಾಜಿಕವಾಗಿ ಪ್ರಮುಖ ವರ್ಗಗಳಲ್ಲಿ ಒಂದಾಗಿತ್ತೆನ್ನಬಹುದು. ಇಲ್ಲಿಂದ ಕರ್ನಾಟಕದಲ್ಲಿ ಆರಂಭವಾಗುವ ಹವ್ಯಕರ ಇತಿಹಾಸ ಹಲವು ಪರಿಚಿತಗಳನ್ನು ಕಂಡಿದೆ. ಸಮಾಜದಲ್ಲಿ ಉನ್ನತ ಸ್ಥಾನವನ್ನು, ಅರಸರಿಂದ ಗೌರವ ಪುರಸ್ಕಾರ, ಸನ್ಮಾನಗಳನ್ನು ನಿರಂತರವಾಗಿ ಪಡೆದು, ಧಾರ್ಮಿಕ ಕಾರ್ಯಕಲಾಪಗಳಲ್ಲಿ ಮುಂಚೂಣಿಯಲ್ಲಿದ್ದ ಈ ವರ್ಗದಲ್ಲಿ ಕೆಲವರು ರಾಜನ ಆಪ್ತ ಮಂತ್ರಿಗಳೂ, ಶ್ರೇಷ್ಠಕವಿಗಳೂ ಆಗಿ ಹೋಗಿರುವರು. ಪ್ರಸ್ತುತ ಈ ವರ್ಗದ ಆಂತರಿಕ ಬದುಕಿನ ಆಡಳಿತ ವ್ಯವಸ್ಥೆಗೆ ಬೆಳಕು ಚೆಲ್ಲುವ ಓಲೆಗರಿಯ ದೀರ್ಘವಾದ ವಿವರವನ್ನು ಗಮನಿಸಬಹುದು.

ಶುಭಮಸ್ತು ॥ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷ ನಾ ೧೪೬೧ನೆಯ ಪರಿವರ್ತನೆಗೆ ಸಲುವ ರಕ್ತಾಕ್ಷಿನಾಮ ಸಂ। ವೈಶಾಖ ಶುದ್ಧ ೩ ಗುರುವಾರದಲ್ಲು ಶ್ರೀಮತು ವಿಶ್ವಾಮಿತ್ರ ಗೋತ್ರ ಬೋಧಾಯನ ಸೂತ್ರದ ಯಜುಶಾಖೆಯ ಯಲಕೋಡ ಚಂದ್ರ ಶಂಕ್ರಭಟ್ಟರ ಪ್ರಪೌತ್ರ ಪುಟ್ಟ ಭಟ್ಟರ ಪುತ್ರರಾದ ಸಂಪದ ಶಂಕರ ಭಟ್ಟರೀಗೆ ॥

ಮೊರಬಿಡಿ ಶೀಮೆ ತಲಕಳಲೆವಾಸಿ ಜಾಡಗಲ್ಲಿ ತಂಮಂಣನ ನಾರಾಯಣಪ್ಪ । ಅರಳಗೊಂಡ ಪುಟಂಣ ಮಂಣಳಿಗೆ ತಿಂಮಪ್ಪ ಮಲಿಗೆ ಬಿಳಿಲಿ ಬಿಮಂಣ। ದಬ್ಬೆ ಕೃಷ್ಣ ಜೆಂನೆ ಶಂಬುಲಿಂಗ ಕಂಚಿಕೈ ॥ ೧ ॥ ಯಲಕಳಲೆವಾಸಿ ಉಂಬಿನಿರಮನೆ ಹೊಂನಂಣ । ಯಿಟ್ಟಿಮನೆ ಚೆನುಲಿಂಗ ಮೆಲೂರ ತಿಂಮಂಣ ಭಟ । ಆ ಬಿಮಂಣ ಭಟನ ಬಿಂಭಟ । ಅಸ ಖಂಡದ ಬಿಮಂಣ। ಮುಸುಗುತಿ. ಮದಂಣ ನಾರಣಪ್ಪನ ಬಿಮಂಣ ಬೆಟ್ಟೆ ಬಿಮಂಣ।......ಕೊಟ್ಟಲಿ ನರಸಂಣನ ಶಂಕರ. ಆ ಕೃಷ್ಣನ ತಿಂಮಂಣ। ಯಿಂದ್ರೊಡಿ ತಿಂಮಯ| ಅಡಮನೆ ಹರಿಯಂಣ ಆ ಸಂಬಯ ಕಾಳಿಬಿಳಲ ವರದಪ್ಪನ ಬಿಮಂಣ ಆ ಗೋಪಂಣ, ನರಸಂಣನ ಗಣಪಯ ಜಡಿನ ತಿಂಮಯ ಅೃತಕ್ಕನ ವರದಂಣ। ಆ ಮಾದಂಣ ಮುತ್ತುವಳ್ಳಿ ಹರಿಯಂಣ। ಆಯಾಗಾರ ಸೂರಂಣ ॥ ೨ ॥ ರವಾಸಿ ಹುಕ್ಕಲಿ ಬಿಮಂಣ। ಕಲ್ಲಾಡಿ ಬಮಂಣ। ಆ ತಿಂಮಂಣ। ಹೊಸಗದ್ದೆ ನರಸಪ್ಪ! ಬಿಮಂಣ। ತಾರಿಕೊರಕಲ್ಲಿ......ಸಂಬಯ ಆ ಕೃಷ್ಣಯ ॥ ೩ ॥ ಕೂಡಲಿ ಬಾಗದ ವಾಸಿ ಬೆಳಗೂಲ್ಲೂರ ಬಿಮಂಣ ಹರಿಯಂಣ। ತಿಂಮಪ್ಪನ ಹ .....ಮೂಲೆ ವಾಸುದೇವ। ಪುಟಂಣ ಕೃಷ್ಣಪ್ಪ। ಮಳ್ಳಿ ಬಿಮಂಣ। ಕೆರೆಕೈ ಶಂಭುಲಿಂಗ ಶೆನಬೊವ.. ...ಕೆಸಪ್ಪನ ಸಂಬಯ ಆ ಜೋಗಪ್ಪ। ಬಿಮಂಣನ ಸಂಬಯ। ಬೇಣಿಮನೆ ಜ......ಬಿಮಂಣಾ ಚಿಕ್ಕ ತಿಂಮಪ್ಪ। ಕೆದಿಗೆ ನಾರಾಣಪ್ಪ। ಸರುಹಿನ ಗದ್ದೆ ದೇವರ ಬಟಾ ॥ ೪ ॥ ಹೊನ್ನೆಮಕ್ಕಿ ವಾಸಿ ಕುಳುಕಾರ ದೆವಪ್ಪ। ಸಂಬಯ ಹಳೆತೋಟದ ಮಡಿಕೆ ದೇವಪ್ಪ ಆ..... ಣ......ತಿಂಮಪ್ಪ ಕಾಳ ಮಹಾಬಲ್ಲಯ। ನರಸ್ಸಯ। ಅಸಳ್ಳೆ ಪರಮೇಶ್ವರ ಆ ನಾಗ್ಯಯ......ತಾರೆ ಸೂರಂಣ। ತಲಗಣಿ ನರಸಪ್ಪ ಸಂಕಣ। ಅಡೆಮನೆ ರಾಮ್ಯಯ। ತೋರವೆ ಮಾದಂಣ। ತಿಂಮಣಾ। ಆ ಮಾದಪ್ಪ ಜಿಗ್ಗನ ಸೂರಯ ಆ ಗೋಪಂಣ ಮಕ್ಕಿಸಂಬಯ ಸಂಕಣನ ತಿಂಮಯ। ನಾಗ್ರಯನ ಸಂಬಯ। ಗಂಗೊಡಿ ತ್ರಿಂಮಂಣನ ವಿಟ್ಟಪ್ಪ। ಮಾವಪ್ಪ। ಮಹಬಲ ತಿಂಮಯ। ಗಾಂಜಹಳ್ಳಿ ತಂಮಂಣ। ಆ ಸಂಕಂಣ। ಮುಂದಿಗೆ ರಘು ಬಟರ ರಾಂಬಟ | ಆ ತಿಂಮಯ | ತಂಮಂಣ। ಅತ್ರಿಗಾರ ಗೋಪಂಣ। ಸಂಬಯ ಮತ್ತಿ ಶಂಕರ ನಾರಾಯಣನ ಬಿಮ ಹೊಲಿಮನೆ ಮಾದಂಣ | ಉಪ್ಪಡಿಕೆ ಸೂರಯ್ಯ | ಪರಮಂಣ। ವಾಟಗಾರ ರಾಮಂಣ | ಕಲ್ಗಬ್ಬಿ ತಿಮಂಣ | ಕರಮನೆ ಸಂಕಂಣನ ಬಿಮಂಣ। ಸಂಕಣನ ಪರಮಂಣ। ೫ ॥ ಹಾಂಸೆವಾಸಿ ಗಂಡಮನೆ ತಿಂಮಪ್ಪ। ಶಿರೂರ ಬಿಮಂಣ | ಆ ಪರಮ್ಯಯ।

ಮಡಿಕೆಯ ಚದುರಳ್ಳಿ ಶಂಕ್ರರ ಬಿರುಕಿನ ಮನೆಯ ಗೋವಿಂದ । ತ್ರೆಂಕೊಡಮನೆ ತಿಂಮಣ ಬಟರ ದೇವರ ಬಟ । ವಿಷ್ಣುಮೂರ್ತಿ ಸಂಕಂಣ ಬಟ್ಟ ದೆವಂಣ । ಆ ತಿಂಮಂಣ । ಕಂಚಿಕೈ ಸಂಕಂಣನ ತಿಂಮಂಣ | ಪುಟಂಣ | ಆ ಬಿಮಂಣ | ವಾರಣಾಶಿ ಬಿಮಂಣ । ಆ ದೆವಪ್ಪ । ಲಿಂಗಾಬಟ । ಸಂಣ ಲಿಂಗಾ ಬಟ ಗುಂಡಿ ವಿಶ್ವನಾಥ| ಜಾಕದ ಪರಮಂಣ । ಹೊಂನೆ ಮಕ್ಕಿ ತಿಂಮಣ । ಆ ಕಿಷ್ಣಯ । ಜಡ್ಡಿನ ಕ್ರುಷ್ಣ | ದಂಡವಾಡಿ ವರದಪ್ಪನ ನಾರಣಪ್ಪ ಬಟನ ಸಂಬಯ | ಬಿಮಂಣ ತಿಂಮಂಣ | ಮಂತ್ರನ ಮಹಾಬಲ । ಹರಿ । ನಾರಾಣಪ್ಪ । ಚಂದಕ್ಕನ ಸಂಕಂಣ । ತಿಂಮಪ್ಪನ ಸಂಬಯ | ತಂಮಂಣನ ವರದಂಣ । ಅಂಣು ತಿಂಮಂಣ | ಬಂಣುದನ ಮನೆ ದೊಡ್ಡ ಬಿಮಂಣನ ನಾರಣಪ್ಪ । ಸಂಬಯ ಬಿಮಂಣ । ಹೊಂನಪ್ಪನ ತಿಂಮಪ್ಪ । ನಾರಣಪ್ಪನ ಸಂಬಂಣ । ಕೃಷ್ಣಯನ ತಿಂಮಂಣ | ನಲುಂಡೆ ಹೆಬ್ಬಾರ ಸಂಕಂಣ । ಶಂಬು ಬಿಮಂಣ । ಆ ಗೋಪಂಣ ದೊಂಬೆ ಕೈ ಸಂಬಯನ ತಿಂಮಂಣ । ದೊಡ ತಿಂಮಂಣ । ಆ ನಾರಣಪ್ಪ ಹರಿಯಂಣ | ಮಾಂಡವ್ಯ ಮನೆ ದೆವಂಣ । ತಿಂಮಯ । ಕೂಗ ತೆಬೆಮ್ಮಯ | ಉಪ್ಪ ಶನದ ಬಿಮಬಟ | ಆ ಹೊಂನಪ್ಪನ ಬಿಮಂಣ । ತುಂಬಿಹಳ್ಳಿ ಬಿಮಂಣ |ಸಂಬಂಣನ ತಿಂಮಂಣ | ಆ ಕೃಷ್ಣಯ | ಹೊಂನಿ ಬಿಮಂಣ | ಪಕ್ಕ್ಯಾಪ್ರ ತಿಂಮಂಣ । ಆ ಪರಮೇಶ್ವರ | ತೂಕರಿ ಕೊಪದ ಬಿಮಂಣ | ಚಿಕ್ಕ ಬಿಮಂಣ ॥ ೬ ॥ ಹಾನಗೆರೆ ವಾಸಿ ಕಂದಿ ತಿಂಮಂಣ । ಶಂಬೂ ತಿಂಮಣ | ಆ ಸುಬಂಣ | ಆ ಹರಿಯಂಣ | ಅಂಣು ಬಿಮಂಣ । ಕಣಗಲಗಟದ ಮದ್ದಿನ ಕೈ ಸಂಕಣ | ಗುಂಡಿ ಬಿಮಂಣ | ಚಿಕ್ಕ ಬಿಮಂಣ | ದೆವಪ್ಪದ ಶಂಬಟ । ಕೊಪರಿಗೆ ಹರಿದಿಸಿಮನೆ ತಿಂಮಂಣ । ಆ ಬಿಮಂಣನ ತಿಂಮಣ । ಆ ಶಿವಂಣ | ಆ ತಿಂಮಂಣ | ಆಳಿಯ ತಿಂಮಂಣ | ಗೋವಿಂದನ ಪರಮಂಣ । ವಾರಣಾಶಿ ತಿಂಮಂಣ | ಆ ಪರಮೇಶ್ವರ | ಆ ಶಿವಂಣ । ಕಳಗಣ । ಮಾದಿ । ಪುಟಂಣನ ತಿಂಮಂಣ ಕೃಷ್ಣನ ರಾಮಂಣ । ಆ ನರಸಂಣ ॥ ೭ ॥ ಮಂಡವಳ್ಳಿ ವಾಸಿ ಯಿಟ್ಟಿಗೆ ದೇವಂಣ । ತಿಂಮರಿ ರಾಂಭಟ । ಚಕ್ರಾಣ ತಿಂಮಪ್ಪ । ಅ್ಯತಿ ಗೋಪಂಣ । ರುದ್ರಾಕ್ಷಿ ತಿಂಮಣ । ಜಗ್ಗನ ಬಿಮಂಣ । ಆ ಮಾದಂಣ । ಆ ಶಿವಣ ಭಟ । ಆ ಯೀಶ್ವರಪ್ಪ । ಸಂಪದ ಮತ್ತಿ ಸಂಕಣ । ಆ ತಿಂಮಂಣ । ಆಳಗೋಡ ಬಿಮ್ಮನ ತಿಂಮಂಣ । ಹೊಂನಿ ಕೃಷ್ಣಯ । ನಜೂರ್‍ರ ನಾರಣಪ್ಪ ! ಜಗ್ಗನ ಸಂಕಂಣ। ಕಳ್ಳಿ ಬಿಳಿನ ದೆವಂಣ। ಧರೆಮನೆ ಹರಿಯಂಣ । ಕಸುಗುಪ್ಪೆ ಶಾಂತಿ ಪುಟಂಣ । ಅಂಣು ಮಹಾಬಲ್ಯಯ । ಪರ್ತೆಕೊಡ್ಲು ತಿಂಮಂಣ । ಆ ದೇವಪ್ಪ । ಬಾಳೆಕೊಪ್ಪದ ತಿಂಮಂಣ । ಅರವಡಿ ಮಹಬಲನ ಸಂಕಂಣ। ದೇವರಬಟರ ತಿಂಮಂಣ। ಶಿವಂಣನ ತಿಂಮಯ। ಮೊಗವಳ್ಳಿ ನಾಗಪಯ । ಬಾರಕದ ಮನೆ ದೊಡ್ಡ ಕಿತನ್ಯಯ। ಆ ಕೃಷ್ಣ । ತೋಟದ ಮನೆ ಶ್ರೀಧರ। ಆ ಮಹಬಲ। ಆ ಶಂಬುಲಿಂಗ್ಯಯ। ಮಂತಾದ ಯೆಂಟೂಗ್ರಾಮದ ಅಶೆಶ ಗ್ರಾಮ ಸಮಸ್ತ ಬ್ರಾಂಹ್ಮಣ ಮಹಾಜನರುಗಳು ಬರಶಿಕೊಟ್ಟ ಗ್ರಾಮಸ್ತಳ ಪೌರೋಹಿತ್ಯದ ಮೂಲಸಾಧನದ ಭಾಷಾಕ್ರಮವೆಂತ್ತೆಂದರೆ ನಮಗೆ ಯಿಲ್ಲವರಿಗು ಪ್ರಾಕು ಪೌರೋಹಿತ್ಯವ ನಡೆಸುವ ಪುರೋಹಿತರು ಗತಮೃತದೂರಸ್ತರಾಗಿ ಅಂತರ ಸಂತತಿಯಾಗಿ। ಮರಿದುಹೋಗಿ ಉಕ್ತ ಕರ್ಮಗಳು ನಡಉತಿದ್ದ ಬ್ರಾಂಹ್ಮಣ್ಯ ವಿದ್ಯುಕ್ತ ಕರ್ಮ ಲುಪ್ತವಾಗುತ್ತಯಿದ್ದಲ್ಲಿ ಸಿಬುಪಿದ್ಯಾ ಪ್ರಬಾವ ಪ್ರಸಿದ್ದರಾಗಿ ನಂಮ ಗ್ರಾಮಸ್ತರಾದ ಸಂಮಂದಾ ನಿಂಮನ ಪಡಂಬಡಿಶಿ ಪೂರ್ವಪ್ರಮಾಣ । ಮರ್ಯಾದಿಪ್ರಕ್ಲಿ। ನಂಮ ಶಿಮೆಸ್ತಳ ಪೌರೋಹಿತ್ಯ ಜೋಯಿಶಿಕೆಯಂನು ನೀವು ಅನುಭವಿಶಿ ಬರುವೆಕೆಂದು ನಾವು ಸಮಸ್ತರು ಯೆಕಸ್ತರಾಗಿ ಅಸ್ಮಾತ್ಪುತ್ರಪೌತ್ರ ಜ್ಞಾತಿ ಸಮ್ಮತವಾಗಿ ನಂಮ ಶಿಮೆಸ್ತಳ ಪೌರೋಹಿತ್ಯವಂನು । ಸರ್ವಮಾನ್ಯವಾಗಿ। ನಡಿಶಿಕೊಂಡು ಬಿಹಾರಿಶಿದಲ್ಲಿ ಮೂಲ ಸಾಧನವ ಬರಕೊಟ್ಟೆವು। ಪೂರ್ವಪ್ರರೂಢವಾರಭ್ಯ ರಾಜಸ್ಥಾನ ಬ್ರಂಹ್ಮ ಮಹಾಸಬಾಗ್ರ ಬಾಗಮಾನ್ಯತ್ವ ವಿದ್ವಪ್ರಭುತ್ವಾದಿ ಮರ್ಯಾದ ಮನೆತನರಾದ ಸಮಂದ ನಿಂಮವಳಗೆ ಯೋಗ್ಯರಾದ ವೈದಿಕ ಪ್ರತಿಹಸ್ತಿಕರನಿಟ್ಟುಕೊಂಡು ನಿಂಮಿಂದ ಅವರ ಮುಖದಿಂದ್ಯ ಸಹಾ ನಂಮಂಯೆಲ್ಲರ ಗ್ರುಹಾ

ದಲ್ಲಿ ಸರ್ವತ್ರ ನಿತ್ಯ ನೈಮಿತ್ಯಕ ಕಾಮ್ಯ ಪೂರ್ವ ಕರ್ಮ ಅಪರ ಕ್ರಿಯೆಗಳು। ಹವ್ಯಕವ್ಯಶಾಂತಿಕ ಪೌಷ್ಠಿಕ ಅಲೌಕಿಕ ಶಾಸ್ತ್ರೀಯ ಆಚಾರ ವೆವಹಾರ ಪ್ರಾಯಶ್ಚಿತ್ತ ಕಂರ್ಮ। ವಿವಾಹಾದಿ। ಪೂರ್ವ ಶೋಡಶ ಕಂರ್ಮ ನಾನವ್ರತ ಪ್ರಾರಂಬಾ ಉದ್ಯಾಪನಾ। ದೇವತಾಗ್ರಹ। ಯಜನ। ಹವನ। ಜಪ। ತರ್ಪಣಾದಿ ಸತ್ಕ್ರುತ ವಿದ್ವತ್ಪ್ರಬುತ್ವಾ। ಪಾಂಡಿತ್ಯ। ಪ್ರಥಮ ಪೂಜತ್ವ। ಸರ್ವತ್ರ ಜಾತಕ ಲೆಖನಾದಿ ಕ್ರುತಿ। ಶಿವಮಾಸ್ತಳ ಆದಿಕ್ರಯ। ದಾನ। ಪರಿವರ್ತಮಾನಾದಿ। ಸರ್ವ ಮೂಲ ಶಾಸನಾ। ಲೆಖ್ಯಾಧಿಕಾರಿತ್ವ। ಸ್ಥಿ ಶಿಮಾನ್ಯವೆಂಬುದರಿಂದ। ನಿಂಮ ರಾಜಾಪ್ರಬು। ಉತ್ರಿಕ್ಷೇತ್ರ ವಾಸ್ಥ ನಿಮಿತ್ಯವಾಗಿ। ನಿಂಮ ಮೆಲೆ ಅರಮನೆಯಿಂದಾ ಹುಟ್ಟಿದ ಗ್ರಾಮ ದೆಶಗಳಿಗೆ ಬಂದ ನಿಂಮ ವಟ್ಟ ವರಾಡ ಕಾಣಿಕೆ। ಆದಾಯ ಹಡಿಕೆ ಬಿಟ್ಟಿ ಬಿರಾಡ ಹೊರೆ ಹೊತ್ತಳ ಅಕಲ ಚಕ್ರ ಮುಂತಾಗಿ ಯೆನು ಉಂಟ್ಟಾದ್ದ ಅದಾಯಂಗಳಂನು। ನಂಮ ನಂಮಗ್ರಾಮದಿಂದಾ ನಾಉ ಸಮಸ್ತರು ವರಾಡಿಶಿಕೊಂಡು ನಾಉ ತೆತ್ತು ಬಹೆಉ। ನಿಂಮನ ಕೆಳಕಾರಣವಿಲ್ಲ। ನಿಮಗೆ ಸಮಂದವಿಲ್ಲ। ನಿಉ ಊರ್ದ್ವದೆ ಹಿತ ಪಿತೃ ವೇದ ಕಂರ್ಮಗಳಂನು। ನಿಂಮ ಹಸ್ತಿಕರ ಮುಖದಿಂದ ನಡಶಿ ನಿಮಗೆ ಸಲುವ ದಕ್ಷಿಣಾಂಶ ಮರ್ಯಾದಿಗಳಂನು ತೆಗೆದು ಕೊಂಬಿರಿ। ನೀವು ಅಸ್ಮದ್ದಶಿಪ ಗ್ರಾಮಸ್ತಳ ನಾನಾ ಗೋತ್ರ ಬ್ರಾಂಹ್ಮಣ ಕುಲ ಪೌರೊಹಿತ್ಯ। ವಾಸ್ತುಗ್ರಹ ಪ್ರವೇಶ ಮುಹೂರ್ತಿಕತ್ವ। ಘಟಿಕಾ ಯಂತ್ರ ಪ್ರತಿಷ್ಠಾಪನಾ। ಅನಾಯರಾಹಿತ್ಯ ರಾಜಸ್ತಾನ। ಸಬಾಗ್ರ ಬಾಗ ಮಾಂನ್ಯತ್ವ। ಸ್ವಯತ್ತಾ ಗ್ರಾಮಣಿತ್ವ। ದನಾರ್ಜನೆ ಶಿಂಹ್ಯಮಾಸ ಪುರಾಣ। ವಚನ ಭೂಗೋಳಾದಿ ಅಬ್ದಾದಿ ಫಲವಾಚನ ಪ್ರಥಮ ಪೂಜ್ಯತ್ವಾದಿ। ಸಂಸ್ಥಾನಮಾನ ಮರ್ಯಾದಿ ಗಳಂನು ಅನುಭವಿಶಿಕೊಂಡು। ತತತ್ಕ್ರುತ್ಯಗಳಲ್ಲಿ ನಿಮಗೆ ಸಲುವ ಕಾಲೋಚಿತ ದಕ್ಷಿಣೆ ತೆಜ ಮರ್ಯಾದಿ ಉಚಿತ ಉಡುಗೆರೆ ಕಲಶ ದಕ್ಷಿಣೆ ಸಂಬಾವನೆ ಮುಂತಾದಂನು ತೆಗೆದುಕೊಂಡು। ನಿಂಮಿಂದ ನಿಂಮ ಹಸ್ತಿಕರ ಮುಖದಿಂದ ಸಹಾ ಸಕಲ ಕಂರ್ಮಾದಿಗಳಂನು। ನಡಶಿಕೊಂಡು। ನಂಮ ಶಿಮೆಯ ಗ್ರಾಮಸ್ತಳ ನಾನಾ ಗೋತ್ರ ಜನದ ಕುಲಪೌರೂಹಿತ್ಯವಂನು ನಡಶಿಕೊಂಡು। ಸುಖಮಂ ಬೋಗಿಶಿಬಾಳಿ ಬಹಿರಿಯೆಂದು ನಾವು ಅಶೇಷ ಗ್ರಾಮ ಸಮಸ್ತರೂ ಯೆಕಸ್ತರಾಗಿ ಅಸ್ಮಾಸ್ತ್ರೀ ಪುತ್ರ ಜ್ಞಾತಿ ಸರ್ವ ಸಂಮ್ಮತವಾಗಿ ನಿಮಗೆ ಬರಶಿಕೊಟ್ಟ ನಂಮ ಶಿಮೆ ಸ್ತಳದ ಪೌರೂಹಿತ್ಯದ ಮೂಲ ಸಾಧನಾ ಕರ್ತುಗಳ ಆದ್ಯಂತರವಪ್ರಿತ. ಯಿದಕ್ಕೆ ಸಾಕ್ಷಿಗಳು॥ ಚಂದ್ರಾದಿತ್ಯರು॥ ಬಿದರೂರ ಗ್ರಾಮದ ನರಶಿಹ್ಮದೆವರು। ವಿದ್ವಂನರ ಸಾಕ್ಷಿಗಳು॥ ಅಬಿನವ ವಿರಾಪುರದ ಅಗ್ರಹಾರದ ನಾಮಕ ಯಂಕಟಾದ್ರಿ ಭಟರ್ರು। ಸ್ರೌತಿಗಳು॥ ಗಂಗಾಧರ ಭಟರು। ಸರಳಹೊಳೆ ಶಿಮೆ ಕೋಣನಮಕ್ಕಿ ವಾಸುದೇವ ಭಟರ್ರು। ಕರೂರ ಶಿಮೆ ಬಂಗಲಗಲ್ಲಿ ಸೂರ್ಯ ನಾರಾಯಣ ಭಟರ್ರೂ। ಯಿಂತ್ತಿ ಸರ್ವರ ಸಂಮ್ಮತದಿಂದ ಬರದಾತ ತಿಂಮೆರಿ ಶಾಂಭಟರ ಮಗ ರಾಮಾಭಟರ ಬರಹಾ.

ಪ್ರಾಚೀನ ಕಾಲದಲ್ಲಿ ಶಾಸನವೆಂದರೆ ರಾಜಾಜ್ಞೆ ಎಂದರ್ಥವಿತ್ತು. ಶಿಲೆ, ತಾಮ್ರ ಪಟಗಳ ಮೇಲೆ ಬರೆದ ಬರಹಗಳನ್ನು ಇಂದು ಶಾಸನವೆಂದು ಉಲ್ಲೇಖಿಸಿ ದರೂ ಕೌಟಿಲ್ಯನ ದೃಷ್ಟಿಯಲ್ಲಿ ತಾಳಪತ್ರಾದಿಗಳ ಮೇಲೆ ಬರೆದ ಬರಹಗಳೂ ಶಾಸನಗಳಾಗಿದ್ದವು. ಅಲ್ಲಿಂದೀಚೆಗೆ ದಾನ ಎಂಬರ್ಥದಲ್ಲಿಯೂ ಶಾಸನ ಪದವನ್ನು ಬಳಸಲಾಗಿದೆ. ಹೀಗಾಗಿ ಇಲ್ಲಿ ಇದನ್ನ ಸರಳವಾಗಿ ಶಾಸನವೆಂದು ಕರೆದರೂ ಖಚಿತವಾಗಿ ಹೇಳುವುದಾದರೆ "ಪೌರೋಹಿತ್ಯ ವರ್ಗಾವಣೆಯ ಕರಾರು ಪತ್ರ" ಎನ್ನಬಹುದು.

ಇಲ್ಲಿ ಉಲ್ಲೇಖಿತವಾದ ಶಾಲಿವಾಹನ ಶಕ 1461ನೇ ವರ್ಷ ಕ್ರಿ.ಶ. 1539ಕ್ಕೆ ಸರಿಹೊಂದುತ್ತದೆ. ಬ್ರಾಹ್ಮಣ ವರ್ಗದಲ್ಲಿ ಸಕಲ ಕರ್ಮಾಂಗಗಳನ್ನು ನಡೆಸಿಕೊಂಡು ಬರುತ್ತಿದ್ದ ಸೀಮೆಯ ಪುರೋಹಿತರೊಬ್ಬರು ಪುತ್ರಹೀನರಾಗಿ ಮೃತರಾಗಲು ಅವರ ಅಧಿಕಾರವನ್ನು ಯೋಗ್ಯರಾದ ಪುರೋಹಿತ ವಿದ್ವಾಂಸರಿಗೆ ವರ್ಗಾಯಿಸುವ ವಿಧ್ಯುಕ್ತಕಾರ್ಯದ ವಿವರ ಇಲ್ಲಿದೆ. ಸೀಮೆ ಪೌರೋಹಿತ್ಯ ಆನುವಂಶಿಕ ಎಂಬ ಅಂಶವೂ ಇಲ್ಲಿ ವ್ಯಕ್ತವಾಗಿದೆ. ಮರಬಿಡಿ ಸೀಮೆಯ ವ್ಯಾಪ್ತಿಯಲ್ಲಿ ತಲಕಳಲೆ, ಯಲಕಳಲೆ ಇತ್ಯಾದಿ ಎಂಟು ಗ್ರಾಮಗಳು ಅಲ್ಲಿ ವಾಸಿಸುವ ಸಮಸ್ತ ಬ್ರಾಹ್ಮಣ ಸಮುದಾಯದ ಕುಟುಂಬಗಳು ಬರುತ್ತವೆ. ಈ ಸೀಮೆಯ ಗಡಿಯನ್ನು ಗುರುತಿಸಲು ಬೆಟ್ಟ, ಹೊಳೆ, ರಸ್ತೆ ಇತ್ಯಾದಿಗಳನ್ನು ಮೂಲವಾಗಿಟ್ಟುಕೊಳ್ಳುತ್ತಿದ್ದರು. ಅಲ್ಲದೆ ಇದರ ವಿಂಗಡಣೆಯಲ್ಲಿ ಖಚಿತ ತಾತ್ವಿಕ ತಳಹದಿ ಇದ್ದಂತಿಲ್ಲ. ಸುಮಾರಾಗಿ ಪ್ರತೀ ಸೀಮೆಯಲ್ಲಿ 8–10 ಗ್ರಾಮಗಳಿರುತ್ತವೆ. ಇದಕ್ಕೂ ಹೆಚ್ಚಿನ ಗ್ರಾಮಗಳಿದ್ದರೆ ಸೀಮೆಯನ್ನು ಭಾಗಿಸಿ ಅದನ್ನು ಭಾಗಿ, ಒಳಭಾಗಿ, ಕೆಳಭಾಗಿ ಎಂದು ಕರೆಯಲಾಗಿದೆ. ಉದಾಹರಣೆಗೆ ಶಿರಸೀಮೆಯಲ್ಲಿ ತೋರಣಸಿ, ಬೆಟ್ಟಳ್ಳಿ ಎಂಬೆರಡು ಒಳಭಾಗಿಗಳಿವೆ. ಶೃಂಗೇರಿ ಮಠೀಯ ಪ್ರಾಕ್ತನ ಲೇಖಮಾಲಾ ಸಂಗ್ರಹದ 1ನೇ ಭಾಗದ ಕ್ರಿ. ಶ. 1346ರ ಶಿಲಾಶಾಸನದಲ್ಲಿ'' ಆ ಸಾಸ್ತಳಿಗೆ ನಾಡ ಮೇಲುಭಾಗಿ ಎಂಬ ಉಲ್ಲೇಖವಿದೆ. ಈ ಸೀಮೆಗಳಿಗೆ ಆ ಪ್ರದೇಶದ ಪರಿಸ್ಥಿತಿ ಪ್ರಭಾವಗಳಿಂದ ಹೆಸರು ಹುಟ್ಟಿರಬೇಕು. ಮುಖ್ಯವಾಗಿ ಹವ್ಯಕ ಸಮಾಜದ ಗೋಕರ್ಣ ಮಂಡಲದ ಮಠವೇ ಎಲ್ಲಾ ಕಾರ್ಯಗಳಿಗೂ ಪರಮಾಧಿಕಾರವನ್ನು ಹೊಂದಿದ್ದರಿಂದ ಸೀಮೆ ವಿಂಗಡಣೆಗೂ ಮಠದ ಹಿನ್ನೆಲೆ ಇತ್ತು. ಮಠದ ಆಡಳಿತ ವ್ಯವಸ್ಥೆಗೆಂದು ಮಾಡಿದ ಏರ್ಪಾಡಿದು. ಮಠದ ಗುರುಗಳು ಸೀಮೆಯಲ್ಲಿ ಸಂಚಾರ ಹೊರಟಾಗ ಅವರ ವಾಸ್ತವ್ಯಕ್ಕೆ ಅನುಕೂಲವಾಗುವಂತೆ ಬಹುತೇಕ ಎಲ್ಲ ಸೀಮೆಗಳಲ್ಲೂ ಇರುವ ಕಿರು ಮಠಗಳು ಹಿಂದಿನ ಮಾತಿಗೆ ಪುಷ್ಟಿನೀಡುತ್ತದೆ. ಬ್ರಾಹ್ಮಣರು ವಾಸವಾಗಿರುವ ಪ್ರದೇಶವನ್ನು ಮಾತ್ರ ಸೀಮೆಯೆಂದು ವಿಂಗಡಿಸಿರುವುದು, ಇತರ ವರ್ಗದವರು ವಾಸ ಮಾಡುವ ಹಳ್ಳಿಗಳು ಸೀಮೆಯ ವ್ಯಾಪ್ತಿಯಲ್ಲಿ ಬಂದರೂ ಅವನ್ನು ಆಡಳಿತದ ದೃಷ್ಟಿಯಿಂದ ಪರಿಗಣಿಸದಿರುವುದು, ಇಂದಿಗೂ ಬಹುತೇಕ ಸೀಮೆಯ ದೇವಾಲಯಗಳಿಗೆ ಹವ್ಯಕರು ಮಾತ್ರ ವರಾಡವನ್ನು ನೀಡುವುದು - ಸೀಮೆಯ ವಿಂಗಡಣೆ ಬ್ರಾಹ್ಮಣರಿಗೆ ಮಾತ್ರ ಸಂಬಂಧಿಸಿದ್ದೆಂದು. ಇದು ಮಠದ ನೇತೃತ್ವದಲ್ಲಿ ಆದದ್ದೆನ್ನುವುದನ್ನು ಖಚಿತಪಡಿಸುತ್ತದೆ. ಶ್ರೀ ಶಂಕರಾಚಾರ್ಯರಿಂದ ಮಠದ ಪರಂಪರೆ ಆರಂಭವಾಯಿತೆನ್ನುವುದು ಇಂದು ಒಪ್ಪಿತ ವಿಷಯವಾಗಿದ್ದು, ಎಲ್ಲ ಮಠಗಳೂ ಶ್ರೀ ಶಂಕರರನ್ನೇ ತಮ್ಮ ಮಠಸ್ಥಾಪನೆಗೆ ಮೂಲಪುರುಷರೆಂದು ಉಲ್ಲೇಖಿಸುವುದರಿಂದ, ಸೀಮೆ ವಿಂಗಡಣೆಯೂ ಸುಮಾರಾಗಿ ಶಂಕರರ ಕಾಲದಷ್ಟು ಹಿಂದೆ ಹೋಗುತ್ತದೆ. ಅವರ ಜೀವಿತಾವಧಿಯ ಬಗ್ಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲದಿದ್ದರೂ ಕ್ರಿ.ಶ. 788 ಎಂದು ತಾತ್ಕಾಲಿಕವಾಗಿ ಸ್ವೀಕರಿಸಬಹುದು. ಈ ವೇಳೆಗಾಗಲೇ ರಾಜಾ

ಶ್ರಯ ಪಡೆದಿದ್ದ ಜೈನಧರ್ಮದ ಪ್ರವಾಹದಲ್ಲಿ ಸಿಕ್ಕಿ ವೈದಿಕಧರ್ಮದ ಕರ್ಮನಿಷ್ಠ ಬ್ರಾಹ್ಮಣರು ಚದುರಿಹೋಗಿದ್ದರಿಂದ, ಬಹುತೇಕ ರಾಜಾಶ್ರಯವನ್ನು ಕಳೆದು ಕೊಂಡು ಕಾಡು ಕಡಿದು ಕೃಷಿಯನ್ನವಲಂಭಿಸಿದ ಇವರನ್ನು ಸಂಘಟಿಸಿ ಒಗ್ಗೂಡಿಸಲು ಮುಂದಿನ ಒಂದು ಶತಮಾನದ ಅವಧಿಯೊಳಗೆ ಈ ಪಿಂಗಡಣೆ ವ್ಯವಸ್ಥಿತ ರೀತಿಯಲ್ಲಿ ಆಗಿರಬಹುದೆಂದು ಊಹಿಸಬಹುದು. ಒಮ್ಮೆ ಹೀಗಾಗಿದ್ದಲ್ಲಿ ಮಠದ ಆಡಳಿತ ಕ್ಕೆಂದು ಮಾಡಿದ "ಸೀಮೆ ವ್ಯವಸ್ಥೆ" ಪದ್ಧತಿಯನ್ನು ಮುಂದೆ ಬಂದ ವಿಜಯನಗ ರದ ಅರಸರು, ಅವರ ಅನಂತರದವರು ರಾಜ್ಯದ ಆಡಳಿತ ಘಟಕವನ್ನಾಗಿ ಈ ಪ್ರಾಂತದಲ್ಲಿ ಬಳಸಿಕೊಂಡರು ಎನ್ನಬೇಕಾಗುವುದು.


ಇನ್ನು ಇಲ್ಲಿ ಬಂದ "ಮಹಾಜನ" ಪದ ಮುಖ್ಯವಾದುದು. ಅಗ್ರಹಾರ ವನ್ನು ದಾನವಾಗಿ ಪಡೆದ ಬ್ರಾಹ್ಮಣರು ಮಹಾಜನರು. ಇವರು ಅಗ್ರಹಾರದ ಒಡೆ ಯರು ; ಪ್ರಭುಗಳು ಅಗ್ರಹಾರದ ಆಂತರಿಕ ಆಡಳಿತಕ್ಕಾಗಿ ಸಮಿತಿಯೊಂದು ಇತ್ತೋ ಇಲ್ಲವೇ ಎನ್ನುವ ಬಗ್ಗೆ ಅಸ್ಪಷ್ಟತೆಯಿದ್ದರೂ ಸೀಮೆಯ ಆಗುಹೋಗುಗಳಿಗೆ, ಧಾರ್ಮಿಕ ಕಾರ್ಯಕಲಾಪಗಳಿಗೆ ಮಹಾಜನರು ಒಮ್ಮತದಿಂದ ಆರಿಸಿ ನೇಮಕ ಮಾಡಿದ ಪುರೋಹಿತ ಜವಾಬ್ದಾರನಾಗಿರುತ್ತಿದ್ದ, ಅಗ್ರಹಾರ, ಗ್ರಾಮ ಮತ್ತು ಸೀಮೆಯ ಒಳ ಆಡಳಿತವನ್ನು ಸೀಮೆಯ ಪುರೋಹಿತನ ನೇತೃತ್ವದಲ್ಲಿ ತಾವೇ ಸಾಮೂಹಿಕವಾಗಿ ಕೂಡಿ ನಡೆಸಿಕೊಂಡು ಹೋಗುತ್ತಿದ್ದರು. ಹೀಗಾಗಿ ಇಲ್ಲಿನ ಮಹಾಜನಗಳ ಸಂಖ್ಯೆ ಸೀಮೆಯ ಎಲ್ಲಾ ಬ್ರಾಹ್ಮಣ ಕುಟುಂಬದ ಯಜಮಾನರನ್ನು ಸೂಚಿಸುವಂತಿದೆ. ಮುಖ್ಯವಾಗಿ ವೇದ ಶಾಸ್ತ್ರಗಳಲ್ಲಿ ಪರಿಣತರಾಗಿದ್ದ "ಮಹಾ ಜನರು" ಸೀಮೆಯ ದೇವಸ್ಥಾನಗಳಲ್ಲಿ ಸಭೆ ಸೇರುತ್ತಿದ್ದರೆಂದು ಕಾಣುತ್ತದೆ.

ಪ್ರತೀ ಸೀಮೆಯೂ ರಾಜನಿಗೆ ಸಲ್ಲಿಸಬೇಕಾದ ತೆರಿಗೆ ಸಲ್ಲಿಸಿ ಬಿಟ್ಟರೆ ವರ್ಷಪಿಡೀ ಒಂದು ರೀತಿ ಪ್ರತ್ಯೇಕ ರಾಜ್ಯವೆಂಬಂತೆ ಸ್ವತಂತ್ರವಾಗಿ ಬದುಕುತ್ತಿತ್ತು. ಸೀಮೆಯ ಮೇಲೆ ಬೀಳುವ ಕರವನ್ನು ಸೀಮೆಯ ಮಹಾಜನರೇ ಕೂಡಿಸಿ ಸಲ್ಲಿಸುತ್ತಿದ್ದರೆನ್ನಲು "ನಿಂಮ ಮೇಲೆ ಅರಮನೆಯಿಂದ ಹುಟ್ಟಿದ ಗ್ರಾಮ ದೇಶಗಳಿಗೆ ಬಂದ ನಿಂಮ ವಟ್ಟ ವರಾಡ ಕಾಣಿಕೆ ಆದಾಯ ಹಡಿಕೆ ಬಿಟ್ಟಿ ಬಿರಾಡ, ಹೊರೆ ಹೊತ್ತಳ ಅಕಲ ಚಕ್ರ ಮುಂತಾಗಿ ಯೇನು ಉಂಟಾದ ಆದಾಯಂಗಳನು ನೀವು ನಿಂಮ ಗ್ರಾಮದಿಂದಾ ನಾಲು ಸಮಸ್ತರು ವರಾಡಿಶಿಕೊಂಡು ನಾಲು ತೆತ್ತು ಬಹೆಲು ನಿಂಮನ ಕೆಳ ಕಾರಣವಿಲ್ಲ" ಎಂಬ ಮಾತು ಸಾಕ್ಷಿಯಾಗಿದೆ. ಸ್ವತಃ ಅವರೇ ಕರ ಕೂಡಿಸಿ ಮುಂದಾಳಾಗಿ ಹೋಗಿ ನೀಡಿ ಬರುತ್ತಿದ್ದ ಕ್ರಮ ಇಂದಿಗೂ ಆದರ್ಶ ಪ್ರಾಯ ! ಇದು ಬ್ರಾಹ್ಮಣರು ಬಾಳಿದ ಸುಸಂಸ್ಕೃತ ಜೀವನಕ್ಕೆ ಹಿಡಿದ ಕನ್ನಡಿ.

"ಶೀಮಾಸ್ತಳ ಆದಿಕ್ರಯ । ದಾನ। ಪರಿವರ್ತಮಾನಾದಿ ಸರ್ವಮೂಲ ಶಾಸನಾ । ಲೇಖ್ಯಾದಿಕಾರಿತ್ವ" ಇತ್ಯಾದಿ ಮಹತ್ವಪೂರ್ಣ ಕೆಲಸಗಳನ್ನು ಸೀಮೆಯ

ಪುರೋಹಿತರೇ ನೋಡಿಕೊಳ್ಳುತ್ತಿದ್ದರಿಂದ ಮಹಾಜನಗಳ ಪಟ್ಟಿಯಲ್ಲಿ ಸಾಮುಭೊಗರ ಹೆಸರೂ ಇರುವುದರಿಂದ ಇವರ ಅಧಿಕಾರ ಗ್ರಾಮಾಧಿಕಾರಿಗಿಂತ ಹಿರಿದಾಗಿತ್ತೆಂದು ಗುರುತಿಸಬಹುದು ಅಥವಾ ಸೀಮೆಯಲ್ಲಿ ನಡೆವ ಪ್ರತಿಯೊಂದು ಕಾರ್ಯಕಲಾಪಗಳು ಈ ಸೀಮಾ ಪುರೋಹಿತರ ನೇತೃತ್ವದಲ್ಲಿ ನಡೆಯುತ್ತಿದ್ದಿತೆಂದು ಊಹಿಸಬಹುದು. ಒಟ್ಟಿನಲ್ಲಿ ಸೀಮಾಧ್ಯಕ್ಷರು ಇವರಾಗಿದ್ದರು. ಇವರಿಗೆ ಸಹಾಯಕರಾಗಿ ಭಾಗಿಗೆ ಭಾಗೀ ಅಧ್ಯಕ್ಷರು, ಗ್ರಾಮಕ್ಕೆ ಮೊಕ್ತೇಸರರು ಸೀಮೆ ಅಥವಾ ಭಾಗಿಗೆ ಒಬ್ಬರಂತೆ ಆಚಾರ ಭಟ್ಟರು ಇದ್ದರೆನ್ನುವುದನ್ನು ರೂಢಿಯಿಂದ ಇಂದೂ ಗುರುತಿಸಬಹುದು. ಮಠದ ಕಾಗದ ಪತ್ರಗಳನ್ನು ಒಯ್ಯುವುದು, ಕಾಣಿಕೆ ವಸೂಲಿ, ಜನರ ಹೇಳಿಕೆಯನ್ನು ಶ್ರೀಗಳಿಗೂ ಅಧಿಕಾರಿಗಳಿಗೂ ಮುಟ್ಟಿಸುವುದು ಆಚಾರ ಭಟ್ಟರ ಕಾರ್ಯವಾಗಿತ್ತು. ಇದಕ್ಕಾಗಿ ಅವರನ್ನು ಗೌರವಿಸಿ, ಸೀಮೆಯ ಶುಭ ಶೋಭನ ಕಾರ್ಯಗಳಲ್ಲಿ ಆಮಂತ್ರಿಸಿ ಸಂಭಾವನೆ (ವೀಳ್ಯ) ಕೊಡುವ ಪದ್ಧತಿ ಈಗಲೂ ಅಲ್ಲಲ್ಲಿ ಉಳಿದು ಬಂದಿದೆ. ಇದೇ ರೀತಿ ಮಂಡಲಕ್ಕೊಬ್ಬರು ಆಚಾರ ಭಟ್ಟರೂ ಇರುವರು. ಸೀಮೆ ದೇವಾಲಯದ ಅಧಿಪತಿ, ಗ್ರಾಮದೇವಾಲಯದ ದೇವರಿಗೆ ಶುಭ ಕಾರ್ಯಗಳಲ್ಲಿ ವೀಳ್ಯಕೊಡುವ ಸಂಪ್ರದಾಯ ಈಗಲೂ ಇದೆ. ಅಧಿಕಾರದ ವರ್ಗಾವಣೆಯ ಸಂದರ್ಭದಲ್ಲಿ ಇಷ್ಟೊಂದು ಜನ ಒಂದೆಡೆ ಸೇರಿರುವುದು ಆಶ್ಚರ್ಯವುಂಟು ಮಾಡಿದರೂ ಅದನ್ನು ಅಲ್ಲಗಳೆವಂತಿಲ್ಲ, ಇದು ಬ್ರಾಹ್ಮಣ ಸಮುದಾಯದಲ್ಲಿದ್ದ ಆಂತರಿಕ ಒಗ್ಗಟ್ಟಿನ ಸೂಚನೆ. ಸಮಸ್ತರೂ ಯೇಕಸ್ತರಾಗಿ ಅಧಿಕಾರದ ಗುರುತರ ಜವಾಬ್ದಾರಿಗಳನ್ನೆಲ್ಲ ಒಬ್ಬರಿಗೇ ವಹಿಸಿ ಕೊಡುವಲ್ಲಿ ಸಮುದಾಯವನ್ನು ಯಥಾವತ್ತಾಗಿ ಕಾಯ್ದುಕೊಂಡು ಬರಬೇಕೆಂಬ ಎಚ್ಚರವೂ ಇಲ್ಲಿದೆ.

ಮಂಡಲ ಮಠದಲ್ಲಿ ಮಂಡಲ ಮತ್ತು ಮಠದ ಪುರೋಹಿತರೆಂದು ಎರಡು ವಿಧ ಪಂಚಾಂಗ, ಹಬ್ಬ ಹರಿದಿನಗಳ ಬಗೆಗೆ ಸೂಕ್ತ ತಿಳುವಳಿಕೆ ನೀಡುವುದು ಮಂಡಲ ಪುರೋಹಿತರ ಜವಾಬ್ದಾರಿ. ಮಠದ ಪೂಜಾದಿ ಕ್ರಿಯೆಗಳಲ್ಲಿ ಲೋಪ ಬರದಂತೆ ನೋಡಿಕೊಳ್ಳುವುದು ಮಠದ ಪುರೋಹಿತರ ಕರ್ತವ್ಯ. ಇವರಿಬ್ಬರಲ್ಲದೆ ಕ್ಷೇತ್ರ ಪುರೋಹಿತರೆಂಬ ಒಂದು ವರ್ಗವೂ ಇದೆ. ಗೋಕರ್ಣದಲ್ಲಿ ನೆಲೆಸಿರುವ ಇವರು ಆ ಸ್ಥಳದಲ್ಲಿ ಮಂಡಲದ ಬ್ರಾಹ್ಮಣರ ಅಪರ ಕ್ರಿಯೆ ಇತ್ಯಾದಿಯನ್ನು ನಡೆಸಿಕೊಡಲೆಂದು ನಿಯುಕ್ತರಾದವರು. ಮಠದ ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳಲು "ಮಠದ ಹೆಗಡೆ" ಇರುವಂತೆ ಸೀಮೆ ಹಾಗೂ ಗ್ರಾಮಗಳಿಗೂ "ಹೆಗಡೆಗಳು" ಇರುವರು, ಮಂಡಲ ಮಠದ ಆಡಳಿತ ವ್ಯವಸ್ಥೆಯನ್ನು ನಕ್ಷೆಯ ರೂಪದಲ್ಲಿ ಹೀಗೆ ಗುರುತಿಸಬಹುದು.



ದಕ್ಷಿಣ ಕನ್ನಡದಲ್ಲಿ ಸೀಮೆ ಹೆಗಡೆಯ ಕೆಲಸವನ್ನು ಸೀಮೆಯ ಗುರಿಕಾರನೂ, ಸೀಮೆ ಪುರೋಹಿತನ ಕಾರ್ಯವನ್ನು ಸೀಮೆ ಶಾಸ್ತ್ರಿಯೂ ನಿರ್ವಹಿಸುವರು. ಇಲ್ಲಿನ 'ಅೃತಕ್ಕ' 'ಅೃತಿ ಗೋಪಣ' ಇವು ಲಿಪಿಯ ದೃಷ್ಟಿಯಿಂದ ಕುತೂಹಲಕರ ಪ್ರಯೋಗಗಳು ಇಲ್ಲಿನ ಹೆಸರುಗಳಲ್ಲಿ ಕೆಲವು, ವಂಶ, ವೃತ್ತಿ, ಊರುಗಳನ್ನೂ ಸೂಚಿಸುತ್ತವೆ "ಮದ್ದಿನ ಕೈ ಸಂಕಣ" ಎಂಬಲ್ಲಿ ಸಂಕಣನು ಆಯುರ್ವೇದದ ಔಷಧಿಗಳನ್ನು ಕೊಡುತ್ತಿದ್ದನೆಂಬ ಸೂಚನೆಯಿದೆ. "ಅ" ಎಂಬುದು ಇಲ್ಲಿ "ಅದೇ" ಎಂಬ ಅರ್ಥದಲ್ಲಿ ಬಳಕೆಯಾದಂತಿದೆ. "ಅಡಮನೆ ಹರಿಯಂಣ ಅ ಸಂಬಯ" ಅಂದರೆ ಬಹುಶಃ ಅಡಮನೆ ಹರಿಯಣ್ಣನ ಸೋದರ, ಸಂಬಯ ಎಂಬುದನ್ನು ಸೂಚಿಸುವಂತಿದೆ.

ಒಟ್ಟಿನಲ್ಲಿ ಮಠ, ಸೀಮೆ, ಸೀಮೆಗೊಂದು ದೇವಾಲಯ, ಸೀಮಾ ಪುರೋಹಿತ, ಗ್ರಾಮದೇವಾಲಯ, ಗ್ರಾಮ ಪುರೋಹಿತ, ಆಚಾರದ ಭಟ್ಟ, ಹೆಗಡೆ ಇವರ ಸರಪಳಿಯ ಕೊಂಡಿಯಲ್ಲಿ ಸಾಂಪ್ರದಾಯಿಕ ಕಟ್ಟು ಕಟ್ಟಳೆಯೊಂದಿಗೆ ಬ್ರಾಹ್ಮಣ ಸಮುದಾಯದ ಜೀವನ ಪ್ರವಾಹ ವ್ಯವಸ್ಥಿತ ರೀತಿಯಲ್ಲಿ ಸಾಗುತ್ತಿತ್ತು ಎನ್ನಬಹುದು. ಇಂದಿನ ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತುಗಳ ರಚನೆಯ ಹೋಲಿಕೆ ಇಲ್ಲಿರುವುದು ಗಮನೀಯ ಅಂಶವಾಗಿದೆ.

ಈ ಲೇಖನವನ್ನು ಪರಿಶೀಲಿಸಿ ಸೂಕ್ತ ಸಲಹೆ ನೀಡಿದ ಶ್ರೀ ಅಮೃತ ಸೋಮೇಶ್ವರ, ಎ. ಬಿ. ಅರ್ತಿಕಜೆ ಹಾಗೂ ನನ್ನ ಸಹೋದ್ಯೋಗಿಗಳಿಗೆ ಅನಂತ ವಂದನೆಗಳು. ಪ್ರೋತ್ಸಾಹ ನೀಡುತ್ತಿರುವ ಗುರುವೃಂದಕ್ಕೆ, ಗೆಳೆಯರೆಲ್ಲರಿಗೂ ವಂದನೆಗಳು.

ಶ್ರೇಷ್ಠ ಮಲಯಾಳಿ ಸಾಹಿತಿ–ತಗಳಿ ಶಿವಶಂಕರ ಪಿಳ್ಳೈ

ಶ್ರೀಕೃಷ್ಣ ಭಟ್ ಅರ್ತಿಕಜೆ

1984ರ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದು ಮಲಯಾಳಕ್ಕೆ ಮೂರನೆಯ ಬಾರಿ ಈ ಪ್ರಶಸ್ತಿಯನ್ನು ಗಳಿಸಿಕೊಟ್ಟ ತಗಳಿ ಶಿವಶಂಕರ ಪಿಳ್ಳೈಯವರು ಮಲಯಾಳ ಸಾಹಿತ್ಯ ಕ್ಷೇತ್ರದ ಹಿರಿಯ, ಶ್ರೇಷ್ಠ ಹಾಗೂ ಪ್ರಮುಖ ಸಾಹಿತಿಗಳಲ್ಲೊಬ್ಬರು. ಮಲಯಾಳ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟಕ್ಕೇರಿಸಿದ ಅವರ ಸಾಧನೆ ಅನುಪಮವಾದುದು. ಬಹುಕಾಲ ಉಳಿಯುವಂಥ ಅನೇಕ ಉತ್ತಮ ಕೃತಿಗಳನ್ನು ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ. ಅವರ ಸಾಹಿತ್ಯಿಕ ರಚನೆಗಳಂತೆಯೇ ಅವರ ಬದುಕು ಕೂಡಾ ವೈವಿಧ್ಯಮಯವಾದುದು.

ಕೇರಳದ ಆಲೆಪ್ಪಿ ಜಿಲ್ಲೆಯ ಕುಟ್ಟನಾಡು ತಾಲೂಕಿನ ತಗಳಿ ಗ್ರಾಮದ 'ಅರೀಪುರತ್ತ್' ಎಂಬ ಮನೆಯಲ್ಲಿ 1912ರ ಏಪ್ರಿಲ್ ತಿಂಗಳ 17 ರಂದು ಶಂಕರ ಕುರುಪ್ಪ ಹಾಗೂ ಪಾರ್ವತಿ ಅಮ್ಮನಿಗೆ ಮಗನಾಗಿ ಶಿವಶಂಕರ ಪಿಳ್ಳೆ ಜನಿಸಿದರು. ವ್ಯವಸಾಯವೇ ಮುಖ್ಯ ಕಸುಬಾಗಿದ್ದ ಸಣ್ಣ ಊರಾದ ತಗಳಿಯಲ್ಲಿ ಶಿವಶಂಕರ ಪಿಳ್ಳೆ ಬೆಳೆದು ದೊಡ್ಡವರಾದರು. ತಗಳಿಯ ಎಂ. ಎಂ. ಸ್ಕೂಲ್, ಅಂಬಲಪ್ಪುಳ ಇಂಗ್ಲೀಷ್ ಸ್ಕೂಲ್, ತಿರುವನಂತಪುರದ ಲಾ ಕಾಲೇಜು ಮುಂತಾದ ವಿದ್ಯಾ ಸಂಸ್ಥೆಗಳಲ್ಲಿ ಅವರು ಶಿಕ್ಷಣ ಪಡೆದರು. ಚಿಕ್ಕಂದಿನಲ್ಲೇ ಬರೆಯುವ ಗೀಳನ್ನು ಹೊಂದಿದ್ದ ತಗಳಿಯವರು ಮೊದಲು ಬರೆದುದು ಕವಿತೆಗಳನ್ನು. ಅವರ ಆಸಕ್ತಿಯನ್ನು ಗದ್ಯದ ಕಡೆಗೆ ತಿರುಗಿಸಿದವರು ಅವರ ಮುಖ್ಯೋಪಾಧ್ಯಾಯರಾಗಿದ್ದ ಮಲಯಾಳದ ಪ್ರಸಿದ್ಧ ಗದ್ಯ ಲೇಖಕ ಕೈನಿಕರ ಕುಮಾರ ಪಿಳ್ಳೈ. ತಗಳಿಯವರ ಪ್ರತಿಭೆಯನ್ನು ಕಂಡ ಕುಮಾರ ಪಿಳ್ಳೆ ಕಥೆ ಕಾದಂಬರಿಗಳನ್ನು ರಚಿಸಲು ತಗಳಿಯವರನ್ನು ಪ್ರೋತ್ಸಾಹಿಸಿದರು. ಹೈಸ್ಕೂಲಿನಲ್ಲಿ ಓದುತ್ತಿದ್ದಾಗ 'ಕಮಲ' ಎನ್ನುವ ಕಥೆಯನ್ನು ರಚಿಸಿ ಒಬ್ಬಳು ಹುಡುಗಿಗೆ ಕೊಟ್ಟಿದ್ದರು. ಅವಳು ಅದನ್ನೋದಿ ಚೆನ್ನಾಗಿದೆಯೆಂದು ಹೇಳಿದಾಗ ತಗಳಿಯವರಿಗಾದ ಸಂತೋಷಕ್ಕೆ ಮಿತಿಯಿರಲಿಲ್ಲ. ಅವರ ಈ ಮೊದಲ ಕಥೆ ಎಲ್ಲೂ ಪ್ರಕಟವಾಗಿಲ್ಲ. ಸ್ಕೂಲ್ ಫೈನಲ್‌ನಲ್ಲಿದ್ದಾಗ 'ಸಾಧುಕ್ಕಳ್' (ಸಾಧುಗಳು) ಎಂಬ ಕಥೆಯನ್ನು ಬರೆದು 'ಸರ್ವೀಸ್'ನಲ್ಲಿ ಪ್ರಕಟಿಸಿದ್ದರು. ಬೆಳಕು ಕಂಡ ಅವರ ಮೊದಲ ಕಥೆ ಇದೇ.

ಲಾ ಕಲಿಯಲು ತಿರುವನಂತಪುರಕ್ಕೆ ಹೋದಾಗ ,ಅಲ್ಲಿ ತಗಳಿಯವರಿಗೆ ಮಲಯಾಳದ ಉತ್ತಮ ವಿಮರ್ಶಕ, ಬರಹಗಾರ ಕೇಸರಿ ಬಾಲಕೃಷ್ಣ ಪಿಳ್ಳೆಯವರ ಸಂಪರ್ಕವಾಯಿತು. ಅವರ ಮೂಲಕ ತಗಳಿಯವರಿಗೆ ಬಲ್ಜಾಕ್, ಮೋಪಸಾಂಗ್, ಫ್ಲಾಬೇ, ಚೆಕೋವ್, ಇಬ್ಸನ್ ಮುಂತಾದ ಪಾಶ್ಚಾತ್ಯ ರಿಯಲಿಸ್ಟಿಕ್ ಸಾಹಿತಿಗಳ ಸಾಹಿತ್ಯದ ಪರಿಚಯವಾಯಿತು. ಬಾಲಕೃಷ್ಣ ಪಿಳ್ಳೆಯವರ ಪ್ರಭಾವಕ್ಕೊಳಗಾದ ತಗಳಿಯವರು ಸಣ್ಣ ಕತೆ ಬರೆಯುವುದನ್ನು ಮುಂದುವರಿಸಿದರು. ಪಾಶ್ಚಾತ್ಯ ಕಥೆಗಾರರ ಉತ್ತಮ ಕಥಾತಂತ್ರಗಳನ್ನು ಬಳಸಿಕೊಂಡು ಕಥೆ ಬರೆಯುವಂತೆ ಬಾಲಕೃಷ್ಣ ಪಿಳ್ಳೆ ಸಲಹೆ ಮಾಡಿದರು. ಬಾಲ್ಯದಲ್ಲಿ ತಂದೆ ಹೇಳಿದ ರಾಮಾಯಣ ಮಹಾಭಾರತಗಳ ಕಥೆಗಳು ಅವರ ಮನಸ್ಸಿನ ಮೇಲೆ ಬೀರಿದ ಪರಿಣಾಮವೂ ಅವರಿಗೆ ಕಥೆಗಳನ್ನು ಬರೆಯಲು ಪ್ರೇರೇಪಣೆ ನೀಡಿತು.

ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಿಂದಿರುಗಿದ ಬಳಿಕ ತಗಳಿಯವರು ಅಂಬಲಪ್ಪುಳದಲ್ಲಿ ವಕೀಲ ವೃತ್ತಿಯನ್ನಾರಂಭಿಸಿದರು. 1935ರಲ್ಲಿ ತಮ್ಮ ಇಪ್ಪತ್ತಮೂರನೆಯ ವಯಸ್ಸಿನಲ್ಲಿ ಚೆಂಬಗಶ್ಶೇರಿಚ್ಚಿರ ಎಂಬಲ್ಲಿನ ಕಮಲಾಕ್ಷಿ ಅಮ್ಮನನ್ನು ಅವರು ವಿವಾಹವಾದರು. ತಗಳಿಯವರಿಗೆ ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿ ಮೂಡಿದುದು ಆಗಲೇ. ಚೆಕೋವ್, ಮೋಪಸಾಂಗ್, ಕಾರ್ಲ್‌ಮಾರ್ಕ್ಸ್ ಮೊದಲಾದವರ ಪ್ರಭಾವದಿಂದ ಅವರ ಸಾಹಿತ್ಯಮಾರ್ಗದಲ್ಲಿ ಒಂದು ತಿರುವುಂಟಾಯಿತು. ತನ್ನ ಸುತ್ತಮುತ್ತಲೂ ಹೆಡೆಯೆತ್ತಿ ಕುಣಿಯುತ್ತಿದ್ದ ಅಸಂತೃಪ್ತಿಯ ಹಾಗೂ ಅಶಾಂತಿಯ ಚೀತ್ಕಾರ ಧ್ವನಿಗಳು ಅವರ ಮನಸ್ಸಾಕ್ಷಿಯನ್ನು ಅಲುಗಾಡಿಸಿದುವು. ಉಪವಾಸದಿಂದ ಕೊರಗುವ ಬಡವರ, ಅತಿವೃಷ್ಟಿ ಅನಾವೃಷ್ಟಿಗಳಿಂದಾಗಿ ಕಷ್ಟಕ್ಕೊಳಗಾದ ಕುಟ್ಟನಾಡಿನ ಕೃಷಿಕರ ದೈನಂದಿನ ದುಃಖಗಳು ತಗಳಿಯವರ ಮನಸ್ಸಿನಲ್ಲಿ ಬೆಂಕಿಯ ಜ್ವಾಲೆಯಾಗಿ ಉರಿದುವು. ಸಮಾಜದಲ್ಲಿ ತುಂಬಿದ ಅನಾಚಾರ ಹಾಗೂ ಮಾನವನನ್ನು ವಿನಾಶದ ಕಡೆಗೆ ಕೊಂಡೊಯ್ಯುವ ಅಸಮಾನತೆಗಳು ನಿರ್ಮೂಲಗೊಳಿಸಲು ತನಗೂ ಹಕ್ಕಿದೆ, ಅದು ತನ್ನ ಕರ್ತವ್ಯ ಕೂಡಾ ಹೌದೆಂದು ಭಾವಿಸಿದ ತಗಳಿಯವರು ಸೋಷ್ಯಲಿಸಂ, ರಿಯಲಿಸಂ ಮತ್ತು ಸಾಮಾಜಿಕ ದೃಷ್ಟಿಕೋನಗಳೇ ಮುಖ್ಯ ವಸ್ತುವಾಗುಳ್ಳ ಕೃತಿಗಳನ್ನು ರಚಿಸಿ ಮಲಯಾಳ ಸಾಹಿತ್ಯದಲ್ಲಿ ಕ್ರಾಂತಿಕಾರಿ ಪರಿವರ್ತನೆಗೆ ಕಾರಣರಾದ ಪ್ರತಿಭಾಶಾಲಿಗಳಲ್ಲಿ ಪ್ರಸಿದ್ಧರೆನಿಸಿದರು. ತಗಳಿಯವರ ಇಂತಹ ಕೃತಿಗಳನ್ನು ಹಿಂದಿಗೆ ಅನುವಾದಿಸಲು ಕೇಂದ್ರ ಸರಕಾರವು ತೀರ್ಮಾನಿಸಿದಾಗ ಕೆಲವು ಹಿಂದಿ ಪಂಡಿತರು ಅವನ್ನು ವಿರೋಧಿಸಿ ತಗಳಿಯವರ ಕೃತಿಗಳಲ್ಲಿರುವುದು ಪೂರ್ತಿ ಕಮ್ಯೂನಿಸಂ ಎಂದು ವಾದಿಸಿದರು. ಆಗ ಸಹಾಯಕ್ಕೆ ಬಂದ ಜವಹರಲಾಲ್ ನೆಹರೂ ಅವರ ಪ್ರಯತ್ನದಿಂದ ತಗಳಿಯವರ ಕೃತಿಗಳು ಹಿಂದಿಗೆ ಅನುವಾದಗೊಂಡುವು.

ತಗಳಿಯವರ ಸಾಹಿತ್ಯರಚನೆ ದಿನದಿಂದ ದಿನಕ್ಕೆ ವೃದ್ಧಿಸುತ್ತಾ ಹೋಯಿತು. ಅವರು ಅನೇಕ ಕಥೆಗಳನ್ನು, ಕಾದಂಬರಿಗಳನ್ನು ರಚಿಸಿದರು. ಕಥೆ ಹೇಳುವ ರೀತಿಯಲ್ಲಿ ಹೊಸತನವನ್ನು ತಂದು ಆವರೆಗೆ ಶುಷ್ಕವಾಗಿದ್ದ ಮಲಯಾಳ ಕಥಾ ಸಾಹಿತ್ಯಕ್ಕೆ ಜೀವಂತಿಕೆಯನ್ನು ತಂದರು. ವಿಶ್ವಸಾಹಿತ್ಯದ ಪ್ರಭಾವ, ಕೇಸರಿ ಬಾಲಕೃಷ್ಣ ಪಿಳ್ಳೆ ಮತ್ತು ಮಲಯಾಳದ ಪ್ರಸಿದ್ಧ ಕತೆಗಾರ ಹಾಗೂ ಪ್ರಹಸನಗಾರ ಇ. ವಿ. ಕೃಷ್ಣಪಿಳ್ಳೆಯವರ ಪ್ರಭಾವ ತಗಳಿಯವರ ಮೇಲಾಯಿತು. ಹಿಂದೊಮ್ಮೆ ತಗಳಿಯವರು ಬರೆದ ಕಥೆಯನ್ನು ಓದಿ ಹಿಂತಿರುಗಿಸಿದ ಬಾಲಕೃಷ್ಣ ಪಿಳ್ಳೆಯವರು ಇನ್ನಷ್ಟು ಚೆನ್ನಾಗಿ ಬರೆಯಬೇಕೆಂದು ಸೂಚಿಸಿದರು. ಮುಂದೆ ತಗಳಿಯವರು ಹೆಚ್ಚಿನ ಶ್ರಮವಹಿಸಿ ಬರೆಯತೊಡಗಿದರು. ಜನಸಾಮಾನ್ಯರ ಜೀವನವನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಲು ಪ್ರಯತ್ನಿಸಿದರು. ಅವರ 'ಞಾನ್ ಎರನ್ನ ನಾಡು' (ನಾನು ಹುಟ್ಟಿದ ನಾಡು), 'ಆದ್ಯತ್ತೆ ಪ್ರಸವಂ' (ಮೊದಲ ಪ್ರಸವ), 'ಅಡಿಯಾಳುಕ್ಕಳ್' (ಅಡಿಯಾಳುಗಳು), 'ಪತಿವ್ರತ' (ಪತಿವ್ರತೆ), 'ಮಾಂಚುವಟ್ಟಿಲ್' (ಮಾವಿನ ಮರದ ಕೆಳಗೆ), 'ಘೋಷಯಾತ್ರ' (ಘೋಷಯಾತ್ರೆ), 'ಮಗಳುಡೆ ಮಗಳ್' (ಮಗಳ ಮಗಳು) ಮುಂತಾದ ಹದಿನೆಂಟು ಸಣ್ಣಕಥಾ ಸಂಗ್ರಹಗಳು ಪ್ರಕಟವಾಗಿವೆ.

ತಗಳಿಯವರು 1930 ರಲ್ಲಿ ಬರೆದ 'ಸಾಧುಕ್ಕಳ್' (ಸಾಧುಗಳು) ಕಥೆಯಿಂದ ಮಲಯಾಳದಲ್ಲಿ ರಿಯಲಿಸ್ಟಿಕ್ ಸಣ್ಣ ಕಥೆಯು ಆರಂಭವಾಯಿತು. ಮೋಪಸಾಂಗ್ ಹಾಗೂ ಚೆಕೊವ್ ಅವರ ಪ್ರಭಾವ ತಗಳಿಯವರ ಕಥೆಗಳಲ್ಲಿ ಎದ್ದು ಕಾಣುತ್ತದೆ. ಕಥೆಗಳ ಶೈಲಿ ಹಾಗೂ ಶಿಲ್ಪದಲ್ಲಿ ಪಾಶ್ಚಾತ್ಯ ಸಣ್ಣ ಕಥೆಗಾರರನ್ನು ತಾವೇ ಅನುಸರಿಸಿದರು. ಜನಸಾಮಾನ್ಯರು ಬಳಸುವ ಸರಳವೂ ಲಲಿತವೂ ಆದ ಭಾಷೆಯನ್ನು ಮಲಯಾಳ ಸಾಹಿತ್ಯಕ್ಕೆ ತಂದವರು ತಗಳಿ ಶಿವಶಂಕರ ಪಿಳ್ಳೆ.

ಹಿಂದಿನ ಆಚಾರ-ವಿಚಾರ, ನಡವಳಿಕೆ, ನಂಬಿಕೆಗಳಿಗೆ ವಿರುದ್ಧವಾದ, ಅದುವರೆಗೂ ಸಾಹಿತ್ಯಕ್ಕೆ ಹೊರಗೆನಿಸಿದ ವಿಷಯಗಳನ್ನಾರಿಸಿ ಕೃತಿಗಳನ್ನು ರಚಿಸಿದ್ದರಿಂದ ಸಂಪ್ರದಾಯವಾದಿಗಳು ತಗಳಿಯವರನ್ನು ಕಟುವಾಗಿ ಟೀಕಿಸಿದರು. ಯಾವುದೇ ರೀತಿಯ ಟೀಕೆಗಳಿಗೂ ವಿರೋಧಗಳಿಗೂ ಎದೆಗೆಡದ ಅವರು ದೀನದಲಿತರ, ಸಮಾಜದ ಅತ್ಯಂತ ಕೆಳವರ್ಗದ ಜನರ ಜೀವನ ಸಮಸ್ಯೆಗಳ ಬವಣೆಗಳ ಕುರಿತು ಕಾದಂಬರಿಗಳನ್ನು ಬರೆದು, 'ತಲಯೋಡು' (ತಲೆಬುರುಡೆ), 'ತೋಟ್ಟಿಯುಡೆ ಮಗನ್' (ತೋಟಿಯ ಮಗ), 'ತೆಂಡಿವರ್ಗ' (ಭಿಕ್ಷುಕ ವರ್ಗ) ಮುಂತಾದುವು ಅಂತಹ ಕಾದಂಬರಿಗಳಲ್ಲಿ ಕೆಲವು. ಇವು ಮಾತ್ರವಲ್ಲದೆ ತಗಳಿಯವರು 'ಪರಮಾರ್ಥಂಙಳ್' (ಪರಮಾರ್ಥಗಳು), 'ಪೇರಿಲ್ಲಾಕ್ಕಥ' (ಹೆಸರಿಲ್ಲದ ಕಥೆ), 'ಆಕಾಶಂ' 'ಜೀವಿತಂ ಸುಂದರಮಾಣ್ ಪಕ್ಷೆ' (ಜೀವನ ಸುಂದರ ಆದರೆ), 'ಜೌಸ್ಸೇಪ್ಪಿಂಡೆ ಮಗಳ್' (ಜೌಸ್ಸೇಪ್ಪಿನ ಮಗಳು), 'ಅನುಭವಂಗಳ್ ಪಾಳಿಚ್ಚಗಳ್'

(ಅನುಭವಗಳು ಅನಿರೀಕ್ಷಿತಗಳು), 'ಅಂಜು ಪೆಣ್‌ಗಳ್' (ಐವರು ಹೆಂಗಸರು), 'ನುರಯುಂ ಪದಯುಂ' (ನೊರೆಯೂ ಗುಳ್ಳೆಯೂ), 'ರಂಡಿಡಜಳಿ' (ಎರಡು ಬಳ್ಳ), 'ಚೆಮ್ಮೀನ್' (ಕೆಂಪು ಮೀನು), 'ಏಣಿಪ್ಪಡಿಗಳ್' (ಏಣಿ ಮೆಟ್ಟಲುಗಳು), 'ಕಯರ್' (ಹಗ್ಗ) ಮುಂತಾದ ಸುಮಾರು ನಲವತ್ತು ಕಾದಂಬರಿಗಳನ್ನು ರಚಿಸಿದ್ದಾರೆ.

1930ರ ಸಾಲಿನಲ್ಲೇ ತಗಳಿಯುವರು ಕಾದಂಬರಿ ರಚನೆಗೆ ತೊಡಗಿದರೂ ಅವರ ಆರಂಭದ ಕೃತಿಗಳು ಅಷ್ಟು ಯಶಸ್ಸನ್ನು ಪಡೆಯಲಿಲ್ಲ. 1948 ರಲ್ಲಿ ಅವರು ಪ್ರಕಟಿಸಿದ 'ರಂಡಿಡಜಳಿ' (ಎರಡು ಬಳ್ಳ) ಯು ಕಾದಂಬರಿಯ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲು. ವಸ್ತುವಿನ ಹೊಸತನ ಹಾಗೂ ಪ್ರತಿಪಾದನೆಯ ಶಕ್ತಿಯಿಂದ ಇದು ಅವರ 'ಓಡಿಯಿಲ್ ನಿನ್ನ್' (ಗಟಾರದಿಂದ), 'ಬಾಲ್ಯಕಾಲ ಸಖಿ'ಗಳಂತೆ ಗಮನಾರ್ಹವಾಗಿದೆ. ಮಲಯಾಳ ಕಾದಂಬರಿಯನ್ನು ವಿಶಿಷ್ಟ ಭಾರತೀಯ ಕಾದಂಬರಿಯ ಮಟ್ಟಕ್ಕೇರಿಸಲು 'ರಂಡಿಡಜಗಳಿ' ಸಹಾಯ ಮಾಡಿತು. ಈ ಕಾದಂಬರಿಯ ಕಥೆ ಸುಂದರವಾಗಿದೆ. ಕುಟ್ಟನಾಡಿನ ಶ್ರಮಜೀವಿಗಳಾದ ಅಸ್ಪೃಶ್ಯರ ಜೀವನ ಸಮಸ್ಯೆಗಳನ್ನು ಕುರಿತ ಕಥೆಯಿದು. ಮಿತ್ರರಾದ ಕೋರನೂ ಚಾತ್ತನೂ ಚಿರುದೆಯೆಂಬುವಳನ್ನು ಪ್ರೇಮಿಸುತ್ತಾರೆ. ಚಿರುದೆ ಕೋರನನ್ನು ಗಂಡನನ್ನಾಗಿ ಆರಿಸುತ್ತಾಳೆ. ಹೆಂಡತಿಯನ್ನು ಮಾನಭಂಗ ಮಾಡಲು ಯತ್ನಿಸಿದ ಯಜಮಾನನ ಮಗನನ್ನು ಕೊಂದ ಕೋರನು ಜೈಲು ಶಿಕ್ಷೆ ಅನುಭವಿಸುತ್ತಾನೆ. ಆತನ ಗರ್ಭಿಣಿ ಹೆಂಡತಿಗೆ ರಕ್ಷಣೆ ನೀಡಿದ ಚಾತ್ತನು ಕಾರಾಗೃಹದಿಂದ ಹೊರಬಂದಾಗ ಕೋರನಿಗೆ ಅವನ ಹೆಂಡತಿಯನ್ನು ಮಗುವನ್ನೂ ವಹಿಸಿಕೊಡುತ್ತಾನೆ. ದೀನರೂ ದಲಿತರೂ ಆದ ಅಸ್ಪೃಶ್ಯರ ಬಾಳನ್ನೂ ವರ್ಗ ಸಂಘರ್ಷವನ್ನೂ ಇಲ್ಲಿ ತಗಳಿಯುವರು ಚಿತ್ರಿಸಿದ್ದಾರೆ. ಇತರ ಭಾಷಾ ಸಾಹಿತಿಗಳ ಗಮನ ಸೆಳೆದ ಈ ಕಾದಂಬರಿ ರಶ್ಯನ್, ಉರ್ದು, ಪಂಜಾಬಿ, ತೆಲುಗು, ಕನ್ನಡ ಮೊದಲಾದ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. 'ತೋಟ್ಟಿಯುಡೆ ಮಗನ್' ಕಾದಂಬರಿಯಲ್ಲಿ ಜಾಡಮಾಲಿ ದಂಪತಿಗಳು ತಮ್ಮ ಮಗನನ್ನು ಮುಂದಕ್ಕೆ ತರಲು ಯತ್ನಿಸಿ ವಿಫಲರಾಗುತ್ತಾರೆ. ಇದರಿಂದ ತನ್ನ ಜೀವನಕ್ಕೇ ಹೇಸಿದ ಮಗನು ಕ್ರಾಂತಿಯ ನಾಯಕನಾಗಿ ತನ್ನನ್ನೇ ಬಲಿಕೊಡುತ್ತಾನೆ. ಇಲ್ಲಿನ ತೋಟ್ಟಿಗಳು ಸಮಾಜದ ಶೋಷಿತ ವರ್ಗಕ್ಕೆ ಸೇರಿದವರು. ಸಮಾಜದಲ್ಲಿ ಶೋಷಣೆಗೊಳಗಾದ ವರ್ಗದವರೆಲ್ಲ ಸ್ವತಂತ್ರರಾಗಬೇಕೆಂಬುದು ತಗಳಿಯುವರ ಹುಬಲ. 'ತೋಟ್ಟಿಯುಡೆ ಮಗನ್' ನಂತೆ 'ಚೆಮ್ಮೀನ್' ಕೂಡಾ ತಗಳಿಯುವರ ಉತ್ತಮ ವಾಸ್ತವಿಕ ಕಾದಂಬರಿ.

ತಗಳಿಯುವರ ಕಾದಂಬರಿಗಳಲ್ಲಿ ಅತ್ಯಂತ ಹೆಚ್ಚು ಪ್ರಸಿದ್ಧಿಯನ್ನೂ ಪ್ರಚಾರವನ್ನೂ ಪಡೆದುದು 'ಚೆಮ್ಮೀನ್'. 1956 ರಲ್ಲಿ ಇದಕ್ಕೆ ಕೇಂದ್ರ ಸಾಹಿತ್ಯ

ಅಕಾಡೆಮಿ ಬಹುಮಾನ ದೊರೆಯಿತು. ಮಲಯಾಳದಲ್ಲಿ ಹಲವಾರು ಮುದ್ರಣಗಳನ್ನು ಕಂಡ ಚೆಮ್ಮೀನ್ ಭಾರತದ ಹಾಗೂ ವಿಶ್ವದ ಸುಮಾರು ಐವತ್ತಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದಗೊಂಡು ವಿಶ್ವವಿಖ್ಯಾತಿ ಪಡೆದಿದೆ. ಇತ್ತೀಚೆಗೆ ಇದು ವಿಯೆಟ್ನಾಮೀಸ್ ಭಾಷೆಗೂ ಅನುವಾದಗೊಂಡಿದೆ. ಕಡಲ ಮಕ್ಕಳಾದ ಮೀನುಗಾರರ ಜೀವನದ ಹೋರಾಟದ ಸುತ್ತ ಹೆಣೆಯಲ್ಪಟ್ಟ ಚೆಮ್ಮೀನ್ ಅವಿಸ್ಮರಣೀಯವಾದ ಒಂದು ಪ್ರೇಮ ಕಥೆ. ಚಲನಚಿತ್ರವಾಗಿ ಇದು ತಗಳಿಯವರಿಗೆ ಅಸಾಧಾರಣ ಯಶಸ್ಸನ್ನೂ ಜನಪ್ರಿಯತೆಯನ್ನೂ ತಂದುಕೊಟ್ಟಿತು. ಕಡಲಿನೊಂದಿಗೆ ಮಾನವನಿಗಿರುವ ಗಾಢವಾದ ಸಂಬಂಧವನ್ನೂ, ಧಾರ್ಮಿಕ ನಿಯಮಗಳನ್ನೂ ಉಲ್ಲಂಘಿಸಿದಾಗ ಉಂಟಾಗುವ ಭೀಕರ ದುರಂತವನ್ನೂ, ಹಣದ ದುರಾಸೆಯಿಂದ ಒದಗುವ ಅನರ್ಥಗಳನ್ನೂ 'ಚೆಮ್ಮೀನ್'ನಲ್ಲಿ ಚಿತ್ರಿಸಲಾಗಿದೆ. ಗಂಡ ಪಳನಿಯು ಮೀನು ಹಿಡಿಯಲು ಕಡಲಿಗೆ ಹೋಗಿದ್ದಾಗ ಆತನ ಕುರಿತೇ ಚಿಂತಿಸುತ್ತಿದ್ದ ಮಡದಿ ಕರುತ್ತಮ್ಮ ಕಾಮುಕನಾದ ಪರಿಕ್ಕುಟ್ಟಿಯ ಬಲಾತ್ಕಾರಕ್ಕೆ ಬಲಿಯಾಗಿ ದುರಂತಕ್ಕೊಳಗಾಗುವುದೇ ಇಲ್ಲಿನ ಕಥಾವಸ್ತು. 'ಚೆಮ್ಮೀನಿ'ನ ಪರಿಕ್ಕುಟ್ಟಿ, ಕರುತ್ತಮ್ಮ, ಪಳನಿ, ಚೆಂಬನ್‌ಕುಞ್ಞು ಮೊದಲಾದ ವ್ಯಕ್ತಿಗಳನ್ನು ತಗಳಿ ಹತ್ತಿರದಿಂದ ತಿಳಿದವರಾಗಿದ್ದರು. ತಗಳಿಯವರ ಕೃತಿಗಳಲ್ಲಿ ಬರುವ ಪಾತ್ರಗಳು ಅವರಿಗೆ ಪರಿಚಿತವಾದ ಪರಿಸರದ ಸುತ್ತಮುತ್ತಲ ವ್ಯಕ್ತಿಗಳು.

ತಗಳಿಯವರ ಇನ್ನೊಂದು ಅತ್ಯುತ್ತಮ ಕಾದಂಬರಿ 1964 ರಲ್ಲಿ ಪ್ರಕಟವಾದ 'ಏಣಿಪ್ಪಡಿಗಳ್' (ಏಣಿಯ ಮೆಟ್ಟಿಲುಗಳು). ಇದು ಅವರ ಹದಿಮೂರನೆಯ ಕಾದಂಬರಿ. ನ್ಯಾಷನಲ್ ಬುಕ್ ಟ್ರಸ್ಟ್‌ನ ಮೂಲಕ ಇದು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿದೆ. ಸ್ವಾತಂತ್ರ್ಯ ಪೂರ್ವದ ತಿರುವಾಂಕೂರಿನ ರಾಜಕೀಯ, ಸಾಮಾಜಿಕ ವಿಚಾರಗಳೇ ವಸ್ತುವಾಗುಳ್ಳ 'ಏಣಿಪ್ಪಡಿ'ಗಳಲ್ಲಿ ಅಧಿಕಾರಶಾಹಿ ವರ್ಗದ ಚಿತ್ರಣವಿದೆ. ಒಬ್ಬ ಅಧಿಕಾರಿಯ ಕಥೆಯ ಮೂಲಕ ಇಡೀ ಅಧಿಕಾರಿ ವರ್ಗದ ಒಳಹೊರಗುಗಳನ್ನು ಚಿತ್ರಿಸುವ ಈ ಕಾದಂಬರಿಯ ಹರಹು ತುಂಬ ವಿಶಾಲವಾಗಿದೆ. ಮಧ್ಯಮ ವರ್ಗಕ್ಕೆ ಸೇರಿದ ಒಬ್ಬ ನಾಯರ್ ಯುವಕನು ಉದ್ಯೋಗದ ಏಣಿಮೆಟ್ಟಿಲುಗಳನ್ನು ಒಂದೊಂದಾಗಿ ಏರಿ ಚೀಫ್ ಸೆಕ್ರೆಟರಿ ಪದವಿಯನ್ನು ಹೊಂದುವುದು, ಸ್ವಾತಂತ್ರ್ಯ ಪ್ರಕ್ಷೋಭವು ಅತಿಯಾದಾಗ ಅಲ್ಲಿಂದ ಜಾರಿ ಕೆಳಗೆ ಬೀಳುವುದು ಈ ಕಾದಂಬರಿಯ ವಸ್ತು. ಸಮಾಜವನ್ನು ರೂಪಿಸುವ ಶಕ್ತಿಗಳನ್ನು ಎತ್ತಿ ತೋರಿಸುವುದರಲ್ಲಿ ಹಾಗೂ ಸಾಮಾಜಿಕ ಕ್ರಾಂತಿಯ ದಾರಿಗಳನ್ನು ನಿರ್ದೇಶಿಸುವಲ್ಲಿ ತಗಳಿಯವರು ತಮ್ಮ ಅಸಾಮಾನ್ಯ ಪ್ರತಿಭೆಯನ್ನು ತೋರಿದ್ದಾರೆ. ಆರಂಭಕಾಲದಲ್ಲಿ ಮಾರ್ಕ್ಸಿಸಂನೊಂದಿಗೆ ತಗಳಿಯವರು ತೋರಿದ ಆಸಕ್ತಿ ಕ್ರಮೇಣ ಕಡಿಮೆಯಾಗುತ್ತ ಬಂದುದು ಕಂಡುಬರುತ್ತದೆ. ಕೇವಲ ಸಮಾಜ ವಿಮರ್ಶೆಯೊಂದೇ

ಕೃತಿಯು ಲಕ್ಷ್ಯವಾಗಬಾರದೆಂಬುದನ್ನು ಅವರು ಚೆನ್ನಾಗಿ ಅರಿತವರು. ಅದಕ್ಕಾಗಿಯೇ ಅವರು ಯಾವುದಾದರೊಂದು ಪ್ರೇಮಕಥೆಯಲ್ಲಿ ಸಮಾಜ ವಿಮರ್ಶೆಯನ್ನು ಚಿತ್ರಿಸಿ ಕೃತಿಯನ್ನು ಆಸ್ವಾದಕರವಾಗುವಂತೆ ಮಾಡುತ್ತಾರೆ. ಹೆಣ್ಣು, ಅಧಿಕಾರ ಹಾಗೂ ಹಣ ಮುಂತಾದುವುಗಳ ಮೇಲಿನ ಅತಿಯಾದ ಮೋಹವೇ ಪುರುಷನ ಮೌಲಿಕಹರಣ ಶಕ್ತಿಗಳು. ಅವನ್ನು ನಿಯಂತ್ರಿಸದಿದ್ದಲ್ಲಿ ಸಮಾಜವು ಪ್ರಗತಿ ಹೊಂದಲಾರದು. ಮಾನವನು ತನ್ನ ಜೀವನದಲ್ಲಿ ಸಫಲನಾಗಲಾರ.

1978ರಲ್ಲಿ ಪ್ರಕಟವಾಗಿ 1984ರ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ 'ಕಯುರ್' (ಹಗ್ಗ) ಎಂಬ ಬೃಹತ್ ಕಾದಂಬರಿಯು ತಗಳಿಯವರ ಕೃತಿಗಳಲ್ಲೆಲ್ಲಾ ಮಹೋನ್ನತವಾದುದೆಂದೂ ಅದೇ ಅವರ Master piece work ಎಂದೂ ಪರಿಗಣಿತವಾಗಿದೆ. ಅನೇಕ ವಿಷಯಗಳನ್ನೊಳಗೊಂಡು ಸುಮಾರು ಒಂದು ಸಾವಿರ ಪಾತ್ರಗಳಿರುವ 'ಕಯುರ್'ನಲ್ಲಿ ಇಡೀ ಕೇರಳದ ಕಥೆಯೇ ಚಿತ್ರಿತವಾಗಿದೆ. ಮಾನವನ ಹಲವಾರು ತಲೆಮಾರುಗಳ ಕತೆಯಾದ ಇದರಲ್ಲಿ ಮಾನವಾನುಕಂಪ ಚೆನ್ನಾಗಿ ಪ್ರತಿಬಿಂಬಿತವಾಗಿದೆ. ಇದು ಅವರು ಜೀವಿಸಿದ ಸಮಾಜದ ಒಂದು ನೂರು ವರ್ಷಗಳ ಕಥೆ. 'ಕಯುರ್'ನಲ್ಲಿ ತಾನು ಹೊಸ ವಿಧಾನವನ್ನು ಬಳಸಿರುವೆನೆಂದೂ ಅದು ಮಾನವ ಸಂಬಂಧದ ಸಂಕೀರ್ಣತೆಯನ್ನು ವಿವರಿಸುವುದೆಂದೂ, ಕಥನಾತ್ಮಕ ರೀತಿಗೆ 'ಕಯುರ್' ಹೆಸರಾಗಿದೆಯೆಂದೂ ತಗಳಿಯವರೇ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. 'ಕಯುರ್'ನ ಶಿಲ್ಪವಿಧಾನ ಇತರ ಕಾದಂಬರಿಗಳಿಗಿಂತ ಭಿನ್ನವಾದುದು. ಜೀವನವನ್ನು ಹೆಚ್ಚು ಸಮಗ್ರವಾಗಿಯೂ ವಿಶಾಲವಾಗಿಯೂ ಅವರು ಇಲ್ಲಿ ಕಂಡಿದ್ದಾರೆ. ಮನುಷ್ಯನಿಗೆ ಮಣ್ಣಿನೊಂದಿಗಿರುವ ಬಂಧವನ್ನೂ ಹಲವು ತಲೆಮಾರುಗಳಿಂದ ತಿರುವಾಂಕೂರಿನಲ್ಲಿ ಉಂಟಾದ ವಿಕಾಸದ ಪರಿಣಾಮವನ್ನೂ ಚಿತ್ರಿಸುವ ಈ ಕೃತಿ ತಗಳಿಯವರ ಅದ್ಭುತ ಪ್ರತಿಭಾಶಕ್ತಿಗೆ ಉತ್ತಮ ನಿದರ್ಶನವಾಗಿದೆ. ಹಲವಾರು ಭಾಷೆಗಳಿಗೆ ಅನುವಾದಗೊಂಡ 'ಕಯುರ್' ಅವರ 35 ವರ್ಷಗಳ ಸಂಶೋಧನೆಯ ಫಲ. ಈ ಕೃತಿಯ ಸಾಮಾಜಿಕ ದೃಷ್ಟಿಕೋನದ ಕುರಿತು ಒಬ್ಬರು ಪಿಎಚ್.ಡಿ. ಗಾಗಿ ಸಂಶೋಧನೆ ಮಾಡುತ್ತಿದ್ದಾರೆ. 1982ರಲ್ಲಿ ತಗಳಿಯವರು 'ಬಲೂನುಗಳು' ಎಂಬ ಇನ್ನೊಂದು ಕೃತಿಯನ್ನೂ ಪ್ರಕಟಿಸಿದರು.

ಸಾಹಿತ್ಯಾಸಕ್ತರಿಗೆ ಸಾಕಷ್ಟು ಪರಿಚಯವಿರುವ ತಗಳಿ ಶಿವಶಂಕರ ಪಿಳ್ಳೆಯವರು ಕಥೆ ಕಾದಂಬರಿಗಳನ್ನು ಮಾತ್ರವಲ್ಲದೆ 'ತೋಟ್ಟಿಲ್ಲ' (ಸೋಲಲಿಲ್ಲ) ಎನ್ನುವ ನಾಟಕವನ್ನು 'ಎಂಡೆ ವಕೀಲ್ ಜೀವಿತಂ' (ನನ್ನ ವಕೀಲ ಜೀವನ) ಎನ್ನುವ ಆತ್ಮಕಥೆಯನ್ನೂ. 'ಅಮೆರಿಕನ್ ತಿರಶ್ಶೀಲ (ಅಮೇರಿಕನ್ ಪರದೆ) ಎನ್ನುವ ಪ್ರವಾಸ ಕಥವನ್ನೂ ಬರೆದಿರುವರು. ತಗಳಿಯವರು ಇಂಗ್ಲೆಂಡ್, ಸೋವಿಯತ್ ಯೂನಿಯನ್, ದಕ್ಷಿಣ ಪೂರ್ವ ರಷ್ಯಾ ಮುಂತಾದ ವಿದೇಶಗಳನ್ನು ಸಂದರ್ಶಿಸಿದ್ದಾರೆ.

ಪ್ರಗತಿಶೀಲ ಸಾಹಿತ್ಯ ಚಳವಳಿ ಹಾಗೂ ವಿವಿಧ ಸಾಂಸ್ಕೃತಿಕ ಸಂಘಟನೆಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದ ತಗಳಿಯುವರು ಸಾಹಿತ್ಯ ಪ್ರವರ್ತಕ ಸಹಕಾರ ಸಂಘದ ಉಪಾಧ್ಯಕ್ಷರೂ ಆಗಿದ್ದರು.

ಒಬ್ಬ ಸಾಹಿತಿಗೆ ಸಿಗುವ ಹೆಚ್ಚಿನ ಎಲ್ಲಾ ಪ್ರಶಸ್ತಿಗಳೂ ತಗಳಿ ಶಿವಶಂಕರ ಪಿಳ್ಳೈಯವರಿಗೆ ಲಭಿಸಿದೆ. ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸೋವಿಯತ್ ನೆಹರೂ ಪ್ರಶಸ್ತಿ, ವಯಲಾರ್ ಪ್ರಶಸ್ತಿ, ಜ್ಞಾನಪೀಠ (1984) ಹಾಗೂ ಪದ್ಮ ಭೂಷಣ (1985) ಮುಂತಾದ ಅನೇಕ ಪ್ರಶಸ್ತಿಗಳನ್ನು ಪಡೆದ ತಗಳಿಯುವರು ಮಲಯಾಳ ಸಾಹಿತ್ಯಕ್ಕೆ ಚಿನ್ನದ ಕೋಡನ್ನು ಮೂಡಿಸಿದವರು. ಅದನ್ನು ವಿಶ್ವ ಸಾಹಿತ್ಯದ ಮಟ್ಟಕ್ಕೇರಿಸಿದವರು. ತಗಳಿಯವರ ಚೆಮ್ಮೀನ್, ಅನುಭವಂಗಳ್, ಓಮನಕುಟ್ಟ, ರಂಡ್ ಇಡಜಳಿ, ಪಣಿಪ್ಪಡಿಗಳ್ ಎಂಬ ಐದು ಕಾದಂಬರಿಗಳು ಚಲನ ಚಿತ್ರವಾಗಿ ಪ್ರಸಿದ್ಧಿ ಪಡೆದಿವೆ. ತಾನು ಮಲಯಾಳದಲ್ಲಿ ಬರೆದಿರುವುದಾದರೂ ತನ್ನ ರಚನೆಗಳು ಭಾರತೀಯ ಸಾಹಿತ್ಯಕ್ಕೆ ನೀಡಿದ ಕೊಡುಗೆ ಎಂಬುದು ತಗಳಿಯುವರ ಅಭಿಪ್ರಾಯ.

ಮಧ್ಯಮವರ್ಗದ ಜೀವನ ಚಿತ್ರಣವೇ ಅವರ ಸಣ್ಣಕಥೆಗಳ ಹಾಗೂ ಕಾದಂಬರಿಗಳ ವಸ್ತು. ಅವರ ಬರವಣಿಗೆಯು ಬೇರು ಹಳ್ಳಿಯಲ್ಲಿದೆ. ಕೃಷಿಕನಾಗಿದ್ದು ಬರಹಗಾರನಾಗಿ ಪರಿವರ್ತನೆಗೊಂಡವರು ತಗಳಿ. ತಾವು ಹುಟ್ಟಿ ಬೆಳೆದ ಸುತ್ತಮುತ್ತಲ ಪರಿಸರದ ಜನಜೀವನವನ್ನೇ ಆರಿಸಿಕೊಂಡು ಕೃತಿಗಳನ್ನು ರಚಿಸಿ ತಮ್ಮ ಮಣ್ಣಿನ ಗುಣವನ್ನು ಎತ್ತಿತೋರಿದ ತಗಳಿಯುವರು ಮಲಯಾಳ ಸಾಹಿತ್ಯದಲ್ಲಿ ಒಂದು ಹೊಸ ಮಾರ್ಗವನ್ನೇ ನಿರ್ಮಿಸಿದರು. ತನ್ನ ಹುಟ್ಟೂರಿನ ಮೇಲೆ ಅವರಿಗೆ ತುಂಬಾ ಅಭಿಮಾನ. "ಮೊದಲು ನಾನು ಕುಟ್ಟನಾಡಿನವ ಬಳಿಕ ತಿರುವಾಂಕೂರಿನವ ಬಳಿಕ ಭಾರತೀಯ. ತಾನೊಬ್ಬ ಭಾರತೀಯನೆನ್ನುವುದರಲ್ಲಿ ನನಗೆ ಅಭಿಮಾನವಿದೆ. ಆದರೆ ಭಾರತವನ್ನು ನಾನು ಕಾಣುವುದು ಒಬ್ಬ ಕುಟ್ಟನಾಡಿನವನ ದೃಷ್ಟಿಯಲ್ಲಿ" ಎನ್ನುತ್ತಾರೆ ತಗಳಿ.

ತನ್ನ ಅತ್ಯುತ್ತಮ ಕೃತಿ ಇನ್ನೂ ಬಂದಿಲ್ಲವೆಂದೇ ತಗಳಿ ಭಾವಿಸುತ್ತಾರೆ. ಈಗ ಅವರು ಮೂರು ಕಾದಂಬರಿಗಳನ್ನು ರಚಿಸುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಮೊದಲನೆಯದು ಹದಿಹರೆಯದವರ ಪ್ರೇಮ ಕಥೆ, ಎರಡನೆಯದು ಮಧ್ಯ ವಯಸ್ಸಿನವರ ವಿಚಾರಗಳನ್ನು ಕುರಿತದ್ದು, ಮೂರನೆಯದು ವೃದ್ಧರ ಜೀವನವನ್ನು ಕುರಿತ ಚಿತ್ರಣ.

ಸರಳ ನಿರಾಡಂಬರ ವ್ಯಕ್ತಿತ್ವಹೊಂದಿದ ತಗಳಿ ಸ್ನೇಹಪರರೂ ವಿನಯಪರರೂ ಆಗಿದ್ದಾರೆ. ಅತ್ಯಂತ ಅಸಂಸ್ಕೃತ ಪ್ರದೇಶವಾದ ಕೇರಳದ ಕುಟ್ಟನಾಡಿನಲ್ಲಿ ಜನಿಸಿ, ಹಲವಾರು ಕೃತಿಗಳನ್ನು ರಚಿಸಿ, ಅನೇಕ ಪ್ರಶಸ್ತಿಗಳನ್ನು ಪಡೆದರು. ತಾನು ಸಾಧಾರಣರಲ್ಲಿ ಸಾಧಾರಣ ವ್ಯಕ್ತಿ ಎಂದು ಭಾವಿಸಿದ ಅವರಿಗೆ ಪ್ರಶಸ್ತಿಗಳು ಬಂದಾಗ ಲೆಲ್ಲ ತಾನಿದಕ್ಕೆ ಅರ್ಹನೇ ಎಂಬ ಸಂದೇಹ ಉಂಟಾಗುತ್ತಿತ್ತಂತೆ.

ಅವರ ಲೇಖನಿಯಿಂದ ಇನ್ನೂ ಅನೇಕ ಉತ್ತಮ ಕೃತಿಗಳು ಮೂಡಿಬರಲಿ. ಅವರ ಉತ್ತಮ ಕೃತಿಗಳು ಇತರ ಭಾಷೆಗಳಿಗೂ ಅನುವಾದಗೊಂಡು ಇತರರೂ ಅವರ ಕೃತಿಗಳನ್ನು ಆಸ್ವಾದಿಸುವಂತಾಗಲಿ.

ಮಂಥನ

'ಮನೋಹರಿ'ಯೊ 'ಚಲಾಚಲ'ವೊ ?

ಇದು 'ಆದಿಪುರಾಣ'ದ ಒಂದು ಪ್ರಸಿದ್ಧ ಪದ್ಯ :

> ನೆಲಸುಗೆ ನಿನ್ನ ವಕ್ಷದೊಳ್ ನಿಶ್ಚಲಮೀ ಭಟಖಡ್ಗಮಂಡಲೋ
> ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
> ಲಲನೆಯನಯ್ಯ ನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ಸಿ
> ನ್ನೊಳಿದ ಲತಾಂಗಿಗಂ ಧರೆಗಮೊಪ್ಪಿಸಿದಂದು ನೆಗಳ್ತೆಮಾಸದೇ (೧೪-೧೨೮)

ಇಲ್ಲಿ ಎರಡನೆಯ ಪಾದದಲ್ಲಿರುವ 'ಮನೋಹರಿ' ಎಂಬ ಪಾಠ ಸುಪರಿಚಿತವಾದದ್ದು. ಎಸ್. ಜಿ. ನರಸಿಂಹಾಚಾರ್ಯರೂ ಕೆ. ಜಿ. ಕುಂದಣಗಾರರೂ ತಮ್ಮ ಸಂಪಾದನಗಳಲ್ಲಿ ಈ ಪಾಠವನ್ನೇ ಸ್ವೀಕರಿಸಿದ್ದಾರೆ. ಎಸ್. ಜಿ. ನ. ಅವರು ಯಾವುದೇ ಪಾಠಾಂತರ ವನ್ನು ಸೂಚಿಸಿಲ್ಲ ; ಆದರೆ ಕುಂದಣಗಾರರು 'ಚಲಾಚಲ' ಎಂಬ ಪಾಠಾಂತರವನ್ನು ಕೊಟ್ಟಿದ್ದಾರೆ. ಈಚೆಗೆ ಎಲ್. ಬಸವರಾಜು ಅವರು ತಮ್ಮ ಪರಿಷ್ಕರಣದಲ್ಲಿ 'ಚಲಾಚಲ' ಎಂಬ ಪಾಠವನ್ನು ಪುರಸ್ಕರಿಸಿ, 'ಮನೋಹರಿ'ಯನ್ನು ಪಾಠಾಂತರ ವಾಗಿ ಗುರುತಿಸಿದ್ದಾರೆ.

ಇಲ್ಲಿ ಕವಿಪಾಠ ನಿಜವಾಗಿ ಯಾವುದಿರಬೇಕು ? ಅದರ ನಿರ್ಣಯಕ್ಕೆ ಪೂರ್ವ ಪುರಾಣದಿಂದ ನೆರವು ಸಿಕ್ಕುವುದಿಲ್ಲ. ಅಲ್ಲಿ "ನೆಲಸುಗೆ .... ರಾಜ್ಯಲಕ್ಷ್ಮಿ" ಎಂಬುದಕ್ಕೆ ಸಂವಾದಿಯಾಗಿ "ಪ್ರೇಯಸಿಯಂ ತವೈವಾಸ್ತು ರಾಜ್ಯಶ್ರೀರ್ಯಾ ತ್ವಯಾದೃತಾ" ಎಂದಿದೆ.[1] ಆ ಶ್ಲೋಕಕ್ಕೆ ಹಿಂದಾಗಲಿ ಮುಂದಾಗಲಿ 'ಚಲಾಚಲ'ದ ಅಥವಾ 'ಮನೋಹರಿ'ಯ ಸುಳಿವಿಲ್ಲ.

'ಚಲಾಚಲ' ಎಂಬುದು ತುಸು ಕಠಿಣವಾದ ಪಾಠವಾದ್ದರಿಂದ, ಯಾವನೋ ಲಿಪಿಕಾರ ಅದಕ್ಕೆ ಬದಲು 'ಮನೋಹರಿ'ಯನ್ನು ಹಾಕಿದ್ದಾನೆಂದು ಮೇಲುನೋಟಕ್ಕೆ ತೋರುತ್ತದೆ. ಆದರೆ ಪಂಪನೆ 'ಭ್ರಮರಿ'ಗೆ ಪ್ರಾಸವಾಗಿ 'ಮನೋಹರಿ'ಯನ್ನು ಪ್ರಯೋಗಿಸಿರುವ ಸಂಭವ ಹೆಚ್ಚು. ಆದ್ದರಿಂದ ಈ ಪಾಠ ಮನೋಹರ ಮಾತ್ರ ಶ್ರವಣಸುಭಗ. ಅಲ್ಲದೆ, 'ಭ್ರಮರಿ'ಯೆ ಚಂಚಲತೆಯನ್ನು ಧ್ವನಿಸುತ್ತಿರುವಾಗ, ಮತ್ತೆ 'ಚಲಾಚಲ'ದ ಅಗತ್ಯವಾದರೂ ಏನು ? ಹೀಗಾಗಿ, ಮೂಲಪಾಠವಾಗುವ ಅರ್ಹತೆ 'ಮನೋಹರಿ'ಗೇ ಮಿಗಿಲಾಗಿದೆ ಎನಿಸುತ್ತದೆ. ಆದರೂ ನಿಖರವಾಗಿ ನಿರ್ಣಯಿಸುವುದು ಶಕ್ಯವಿಲ್ಲ ಎಂದೊಪ್ಪಬೇಕು.

ಇನ್ನು 'ಚಲಾಚಲ'ದ ಅರ್ಥವೇನು ? ಎಲ್. ಬಸವರಾಜು ತಮ್ಮ ಪರಿಷ್ಕರಣದ 'ಅರ್ಥಕೋಶ'ದಲ್ಲಿ ಮಿಂಚಿನಂತೆ 'ಚಂಚಲ' ಎಂದು ಅರ್ಥೈಸಿದ್ದಾರೆ. ಆದರೆ ಇಲ್ಲಿ ಮಿಂಚಿನ ಪ್ರಸಕ್ತಿಯಿಲ್ಲ, ವಿ. ಎಸ್. ಆಪ್ಟೆಯವರ ನಿಘಂಟಿನಲ್ಲಿ 'ಚಲಾಚಲ' ಎಂದರೆ fickle, unsteady, very transitory (= ಅತಿಚಲ) ಎಂಬ ಅರ್ಥ ಕೊಡಲಾಗಿದೆ.[2] ಕಿಟ್ಟೆಲ್ ಕೋಶದಲ್ಲೂ movable, unsteady ಎಂಬ ಅರ್ಥವಿದೆ[3],

ಆದರೆ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟಿನಲ್ಲಿ 'ಚಲಾಚಲ' ಶಬ್ದವೆ ಇಲ್ಲದಿರುವುದು ವಿಚಿತ್ರವಾಗಿದೆ. 'ಆದಿಪುರಾಣ' ವಲ್ಲದೆ ಬೇರೆ ಕನ್ನಡ ಕಾವ್ಯಗಳಲ್ಲಿ 'ಚಲಾಚಲ'ದ ಪ್ರಯೋಗವಿಲ್ಲವೆ ?

ಸಿ. ಪಿ. ಕೆ.

ಅಲ್ಲಮ್ಮನ ವಚನದಲ್ಲಿ 'ಅಡಿಗಲ್ಲು'

ಇದು ಅಲ್ಲಮ ಪ್ರಭುವಿನ ವಚನದ ಒಂದು ಭಾಗ :

> ವ್ಯಾಧನು ಸೂಸಲ ಚೆಲ್ಲಿ ಜಂತ್ರವ ಹಣ್ಣಿ
> ಅಡಿಗಲ್ಲನೊಡ್ಡಿ ಹೋದ ಬಳಿಕ,
> ಸೂಸಲ ಕಂಪಿಗೆ ಹೆಗ್ಗಣ ಬಂದು ಬಿದ್ದಂತೆ
> ಬಿದ್ದಿರಲ್ಲಾ ಮಾಯದ ಬಲೆಯಲ್ಲಿ[4]

ಇಲ್ಲಿ 'ಅಡಿಗಲ್ಲು' ಎಂದರೇನು ? ಸಾಮಾನ್ಯವಾಗಿ ಈ ಶಬ್ದಕ್ಕೆ ತಳಹದಿ ಎಂದರ್ಥ. ಆದರೆ ಅದು ಈ ಸಂದರ್ಭಕ್ಕೆ ಹೊಂದುವುದಿಲ್ಲ. ಇಲ್ಲಿ ಅಡಿಗಲ್ಲು ಒಂದು ಬೇಟೆಯ ಸಾಧನ ಎಂಬುದು ಮೇಲುನೋಟಕ್ಕೇ ಸ್ಪಷ್ಟ (ತಳಪಾಯ ಎಂಬ ಅರ್ಥದ ನಂಟು ಇದಕ್ಕೆ ಇಲ್ಲದಿಲ್ಲ).

'ಅಡಿಗಲ್ಲು' ಎಂದರೆ ಒಂದು ಸಣ್ಣ, ಹಗುರವಾದ ಚಪ್ಪಡಿ. ಅದರ ಒಂದು ತುದಿಯನ್ನು ಮೇಲಕ್ಕೆತ್ತಿ, ಒಂದು ಕೋಲನ್ನು ಸಡಿಲವಾಗಿ ಊರೆ ಕೊಟ್ಟು ನಿಲ್ಲಿಸುತ್ತಾರೆ ; ಊರೆಗೋಲಿನ ಸುತ್ತ 'ಸೂಸಲು' ಚೆಲ್ಲುತ್ತಾರೆ. ಸಣ್ಣ ಪಶು ಪಕ್ಷಿಗಳು ಅದರಿಂದ ಆಕರ್ಷಿತವಾಗಿ ಬಂದು ಊರೆಗೋಲನ್ನು ಅಲುಗಿಸಿದಾಗ ಅದು ಕುಸಿದು ಇಡೀ ಚಪ್ಪಡಿ ಮೇಲೆ ಬೀಳುತ್ತದೆ. ಪ್ರಾಣಿಗಳು ಅದರಡಿಯಲ್ಲಿ ಸಿಕ್ಕಿ ಸಾಯುತ್ತವೆ.[5]

ಆಶ್ಚರ್ಯವೆಂದರೆ, ಪ್ರಸ್ತುತ ವಚನಕ್ಕೆ ಸಂಬಂಧಿಸಿದಂತೆ 'ಅಡಿಗಲ್ಲು' ಶಬ್ದಕ್ಕೆ ಈ ಅರ್ಥ ಎಲ್ಲಿಯೂ ಉಕ್ತವಾದ ಹಾಗೆ ತೋರುವುದಿಲ್ಲ.[6]

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು' ಕೂಡ 'ಅಡಿಗಲ್ಲು' ಶಬ್ದಕ್ಕೆ ತಳಪಾಯ ಎಂಬ ಅರ್ಥವನ್ನು ಮಾತ್ರ ಕೊಟ್ಟಿದೆಯೆ ವಿನಾ ಬೇಟೆಯ ಒಂದು ಪರಿಕರ

ಎಂಬ ಅರ್ಥವನ್ನು ಕಾಣಿಸಿಲ್ಲ; ವಾಸ್ತವವಾಗಿ ಈ ಅರ್ಥವನ್ನು ಅಲ್ಲಿ ದಾಖಲಿಸಿ, ಅಲ್ಲಮನ ಪ್ರಕೃತ ವಚನ ಭಾಗವನ್ನು ಅದಕ್ಕೆ ಲಕ್ಷ್ಯವಾಗಿ ಕೊಡಬೇಕಿತ್ತು.

ಅಡಿ ಟಿಪ್ಪಣಿಗಳು

1. ಪಂಪ ಇಲ್ಲಿ ಬಾಣನ ಈ ಗದ್ಯಖಂಡವನ್ನು ಬಳಸಿಕೊಂಡಿದ್ದಾನೆ : "ಭಟಪಿಡ್ಗ ಮಂಡಲೋತ್ಪನವನ ವಿಭ್ರಮ ಭ್ರಮರೀ ಲಕ್ಷ್ಮೀ :"
2. 'The Students Sanskrit-Fnglish Dictionary'. p. 205
3. 'A Kannada-English Dictionary' 597.
4. 'ಅಲ್ಲಮ ಪ್ರಭುದೇವರ ವಚನಗಳು'. ಸಂ. ಡಾ॥ ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ, ೧೯೭೬, ಪು. ೯೮೭ (ಮುಸಿಯುದಿರಿ, ಮುಸಿಯುದಿರಿ ಎಂದು ವಚನ ಮೊದಲಾಗುತ್ತದೆ)
5. ನಮ್ಮೂರಿನಲ್ಲಿ ಕೋಳಿಗಳಿಗೆ ಹೀಗೆ ಅಡಿಗಲ್ಲನ್ನೊತ್ತುವುದನ್ನು ಬಾಲ್ಯದಲ್ಲಿ ಕಂಡಿದ್ದೆ.
6. ಪೂರ್ವೋಕ್ತ 'ಅಲ್ಲಮ ಪ್ರಭುದೇವರ ವಚನಗಳು' ಗ್ರಂಥದ 'ಕಠಿನ ಶಬ್ದಕೋಶ'ದಲ್ಲಿ 'ಅಡಿಗಲ್ಲು' ಶಬ್ದವೇ ಇಲ್ಲ, ಎಲ್. ಬಸವರಾಜು ಅವರ 'ಅಲ್ಲಮನ ವಚನಗಳು' ಗ್ರಂಥದ 'ಅರ್ಥ ಮತ್ತು ಗಮನಾರ್ಹ ಪದಕೋಶ'ದಲ್ಲೂ ಅಷ್ಟೆ. ಎಂ. ಆರ್. ಶ್ರೀ ಅವರ 'ವಚನ ಧರ್ಮಸಾರ'ದಲ್ಲೂ ಸದರಿ ವಚನ ಉದ್ಧೃತವಾಗಿದ್ದು, ಅದರ 'ಶಬ್ದಕೋಶದಲ್ಲೂ 'ಅಡಿಗಲ್ಲು' ಬಿಟ್ಟುಹೋಗಿದೆ. (ಆಧಾರ ಎಂಬ ಪ್ರಸಿದ್ಧಾರ್ಥದಲ್ಲಿ 'ಅಡಿಗಲ್ಲು' ಚಿರಪರಿಚಿತ ಶಬ್ದವಾದ್ದರಿಂದ, ಎಲ್ಲರೂ ಬಿಟ್ಟಿರಬೇಕೆನಿಸುತ್ತದೆ).
7. ಮೊದಲನೆಯ ಸಂಪುಟ. ಪು. ೧೪೭. ಕಿಟ್ಟೆಲ್‌ಕೋಶದಲ್ಲೂ (ಪು. 34) The lower milt stone ಎಂಬ ಅರ್ಥವಷ್ಟೆ ಇದೆ.

ಸಿ. ಪಿ. ಕೆ.

ನಾಯುರುಮೂಲ

ತುಳುನಾಡಿನ ಮಧ್ಯಯುಗೀನ ಶಾಸನಗಳಲ್ಲಿ ಕಂಡುಬರುವ ಶಬ್ದ 'ನಾಯುರು ಮೂಲ'ವನ್ನು ಜಾತಿವಾಚಕವೆಂದು ತಿಳಿಯಲಾಗಿದೆ. ಕೇರಳದ ನಾಯರ್ ಜನಾಂಗದ ಉಲ್ಲೇಖ ಬ್ರಾಹ್ಮಣರಿಗೆ ಭೂಮಿಯನ್ನು ದತ್ತಿನೀಡುವುದನ್ನು ತಿಳಿಸುವ ಶಾಸನಗಳಲ್ಲಿ 13 ರಿಂದ 16 ನೇ ಶತಮಾನದ ಮಧ್ಯೆ ಕಂಡು ಬರುತ್ತದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಿದೆ. ನಾಯರ್ ಜನಾಂಗದವರು ಇಲ್ಲಿ ನೆಲೆಸಿದ್ದ ಬಗ್ಗೆ ಮುಖ್ಯ ದಾಖಲೆಯಾಗಿ ಈ ಶಾಸನಗಳನ್ನು ಉಲ್ಲೇಖಿಸಿದ್ದೂ ಇದೆ [1]. ಆದರೆ ಬಹಳ ಜಾಗರೂಕತೆಯಿಂದ ಈ ಶಾಸನಗಳನ್ನು ಆಳವಾಗಿ ಅಧ್ಯಯನ ಮಾಡಿದಾಗ ಈ ಅಭಿಪ್ರಾಯ ಸರಿಯೆನಿಸುವುದಿಲ್ಲ, ಮಾತ್ರವಲ್ಲ 'ನಾಯುರುಮೂಲ' ಎಂಬ ಪದಕ್ಕೆ ವಿಶಿಷ್ಟ ಅರ್ಥವಿರುವುದು ಸ್ಪಷ್ಟವಾಗುತ್ತದೆ.

ಕ್ರಿ.ಶ. 1365 ನೇ ಇಸವಿಯ ಬಾರಕೂರಿನ ಮೂಡುಕೇರಿಯ ಶಾಸನವೊಂದಕ್ಕೆ ಬಾಸುರಿ ಈಶ್ವರ ಸೇನಭೋವ ಮತ್ತು ದೇವರು ಸೇನಬೋವ ಇವರುಗಳಿಂದ ಮೂಲಹಕ್ಕನ್ನು ಕ್ರಯಕ್ಕೆ ತೆಗೆದುಕೊಂಡು ಆ ಭೂಮಿಯನ್ನು 14 ಜನ ಬ್ರಾಹ್ಮಣರಿಗೆ ಅನ್ನದಾನಕ್ಕಾಗಿ ಮಠವೊಂದಕ್ಕೆ ನೀಡಿದ ವಿವರವಿದೆ. ಈ ಭೂಮಿಯನ್ನು ರಾಮಕಾರಂತನ ಮಕ್ಕಳು ನಾಯುರುಮೂಲವಾಗಿ ಪಡೆದುಕೊಂಡ ಪ್ರಯುಕ್ತ ವರ್ಷಕ್ಕೆ ನೂರು ಮುಡಿ ಅಕ್ಕಿಯನ್ನು ಮಠಕ್ಕೆ ಗೇಣಿಯಾಗಿ ನೀಡಬೇಕೆಂದು ಈ ಶಾಸನ ತಿಳಿಸುತ್ತದೆ.[2]

ಬಾರಕೂರಿನ ಮೂಡುಕೇರಿಯ ಸೋಮೇಶ್ವರ ದೇವಾಲಯದಲ್ಲಿರುವ ಕ್ರಿ. ಶ. 1371 ರ ಶಾಸನವು ದುಗ್ಗು ಭೆನ್ನಾಣತಿ ಎಂಬವಳು, ತನ್ನ ಮಗ ನರಸಿಂಗ ಭೆನ್ನಾಣಿ ಕಾಲವಾದ ಪ್ರಯುಕ್ತ ಅವನ ಸದ್ಗತಿಗಾಗಿ ಈ ದೇವಾಲಯದಲ್ಲಿ ಬ್ರಾಹ್ಮಣರಿಗೆ ಅನ್ನದಾನದ ವ್ಯವಸ್ಥೆಗೋಸ್ಕರ ಭೂಮಿಯನ್ನು ದಾನವಿತ್ತ ವಿವರವನ್ನು ನೀಡುತ್ತದೆ. ಈ ಭೂಮಿಯನ್ನು ಕೇಶವ ಮಂಡಚನ ಮಗ ಕೃಷ್ಣ ಮಂಡಚನಿಗೆ 'ನಾಯುರುಮೂಲವಾಗಿ ಎರಡು ಕೂಟ್ಟರು' ಎಂಬುದಾಗಿ ಹೇಳಲಾಗಿದೆ. ಹೀಗೆ ಪಡೆದ ಭೂಮಿಯ ಬಗ್ಗೆ ಅವನು 10 ಮುಡಿ ಅಕ್ಕಿಯನ್ನು ನೀಡಬೇಕೆಂದು ಈ ಶಾಸನ ಹೇಳುತ್ತದೆ.[3]

ಅಂತೆಯೇ 1393 ರಲ್ಲಿ ಜಮಖಂಡಿ ಸಿದ್ದಪ್ಪನ ಮಗ ಕರಣಿಕ ಸಿಂಗಣ್ಣ ಪ್ರತಿದಿನ ಆರುಜನ ಬ್ರಾಹ್ಮಣರಿಗೆ ಅನ್ನದಾನಕೋಸ್ಕರ ಮಠವನ್ನು ಕಟ್ಟಿಸಿ, ಅದರ ಖರ್ಚಿಗಾಗಿ ಭೂಮಿಯನ್ನು ದಾನವಾಗಿ ನೀಡಿದ. ಈ ಭೂಮಿಯ ಒಂದು ಭಾಗವನ್ನು ಈಶ್ವರ ಬಾಚಿರಿಯು ನಾಯುರುಮೂಲವಾಗಿ ತೆಗೆದುಕೊಂಡನೆಂದು ಇನ್ನೊಂದು ಭಾಗವನ್ನು ನಾಯುರುಮೂಲವಾಗಿ ಕೇಶವ ಮಡಿಕಲ್ಲನಿಗೆ ಕೊಡಲಾಯಿತೆಂದೂ ಶಾಸನವೊಂದು ತಿಳಿಸುತ್ತದೆ.[4]

ಹಾಗೆಯೇ 1429 ರ ಉದ್ಯಾವರದ ಶಾಸನವು ವೀರಭದ್ರದೇವರ ದೇವಸ್ಥಾನ ಭೂಮಿಯನ್ನು ಹದಿನೇಳೊಕ್ಕಲು ಬ್ರಾಹ್ಮಣರು ನಾಯರುಮೂಲವಾಗಿ ಕೊಂಡರೆಂದೂ, ಆ ಬಗ್ಗೆ 30 ಮುಡಿ ಅಕ್ಕಿಯನ್ನು ಅವರು ದೇವಾಲಯಕ್ಕೆ ವರ್ಷಂಪ್ರತಿ ನೀಡಬೇಕೆಂದೂ ಶಾಸನದಲ್ಲಿ ಹೇಳಲಾಗಿದೆ.[5]

ಈ ಮೇಲಿನ ಆಕರಗಳನ್ನು ಪರಿಶೀಲಿಸುವಾಗ ಸ್ಪಷ್ಟವಾಗುವ ಅಂಶವೆಂದರೆ ದೇವಾಲಯ ಅಥವಾ ಮಠಕ್ಕೆ ದತ್ತಿನೀಡಿದ ಭೂಮಿಯನ್ನು ನಾಯರುಮೂಲವಾಗಿ ಸಾಗುವಳಿಗೆ ಪಡೆದಿರುವುದು. ಮೇಲೆ ಹೇಳಿದ ಈ ಸಂಸ್ಥೆಗಳಿಗೆ ಭೂಮಿಯನ್ನು ಬಿಟ್ಟುಕೊಟ್ಟಾಗ ಅದನ್ನು ಸಾಗುವಳಿ ಮಾಡಿಸುವ ವ್ಯವಸ್ಥೆ ಆಗಬೇಕಾದ್ದರಿಂದ ಆ ಭೂಮಿಯನ್ನು ಬ್ರಾಹ್ಮಣರು (ಪ್ರಾಯಶಃ ಆ ದೇವಾಲಯ ಅಥವಾ ಮಠಕ್ಕೆ ಸಂಬಂಧಿಸಿದವರು) ಸಾಗುವಳಿಗಾಗಿ ಗೇಣಿಗೆ ಪಡೆಯುತ್ತಿದ್ದರು. ವರ್ಷಂಪ್ರತಿ ತೆರಬೇಕಾದ ಗೇಣಿಯನ್ನು ಮೇಲೆ ಉಲ್ಲೇಖಿಸಿದ ಶಾಸನಗಳಲ್ಲಿ ಹೇಳಿರುವುದನ್ನು ಗಮನಿಸಬಹುದು. ಬ್ರಾಹ್ಮಣರು ಹೀಗೆ ಗೇಣಿಗೆ ಪಡೆದ ಭೂಮಿಯ ಮೇಲೆ ಸಾಗುವಳಿ ಮಾಡುವ (ಉಳುವ) ಹಕ್ಕನ್ನು ಮಾತ್ರ ಹೊಂದಿದ್ದರು, ಮೂಲಿ ಹಕ್ಕು ದೇವಾಲಯ ಅಥವಾ ಮಠದ್ದಾಗಿದ್ದು ಇವರು ಆ ಭೂಮಿಯಲ್ಲಿ 'ನಾಯರುಮೂಲ' ಅಥವಾ ಉಳುವ ಅರ್ಥಾತ್ ಕೃಷಿ ಮಾಡುವ ಹಕ್ಕನ್ನು ಮಾತ್ರ ಪಡೆದುಕೊಂಡರು. ಇಲ್ಲಿ 'ನಾಯರು' ಎಂಬ ಪದ 'ನೇಗಿಲು' ಎಂಬರ್ಥದಲ್ಲಿ ಉಳುವುದರ ಅಥವಾ ಸಾಗುವಳಿ ಮಾಡುವುದರ ಸಂಕೇತವಾಗಿ ಉಪಯೋಗಿಸಲ್ಪಟ್ಟಿದೆ.[6]

ಹೀಗೆ ಭೂಮಿಯನ್ನು ಗೇಣಿಗೆ ಪಡೆದು ವರ್ಷವೂ ಗೇಣಿ ಸಲ್ಲಿಸುತ್ತಾ ಸಾಗುವಳಿ ಮಾಡಿಕೊಂಡು ಬರುವ ಈ ವ್ಯವಸ್ಥೆಯಲ್ಲಿ ಬೇಸಾಯ ಮಾಡುವವನಿಗೆ ಭದ್ರತೆಯಿದೆ ಹಾಗೂ ಅವನು ಖಾಯಂ ಆಗಿ ಆ ಭೂಮಿಯನ್ನು ತಾನೇ ಅನುಭವಿಸಿಕೊಂಡು ಬರಬಹುದಿತ್ತು.

ಈ ನಾಯರುಮೂಲ ಹೆಚ್ಚಾಗಿ ಬಾರಕೂರು ರಾಜ್ಯದ (ವಿಜಯನಗರ ಕಾಲದ) ಪ್ರದೇಶದಲ್ಲಿ ಪ್ರಚಲಿತವಿದ್ದ ಪದವಾಗಿ ಕಾಣುತ್ತದೆ. ಕೆಲವು ಸಾರಿ ಹೀಗೆ ಪಡೆದ ಭೂಮಿಯನ್ನು ಬ್ರಾಹ್ಮಣರು ಇತರರಿಗೆ ಸಾಗುವಳಿಗೆ ನೀಡಿದ ಉದಾಹರಣೆಯೂ ಇದೆ. 1546 ರ ಬಸರೂರಿನ ಶಾಸನವೊಂದರಲ್ಲಿ[7] ನಾಪಡ ಮನೆತನದವರು ನಾಯರುಮೂಲ ಭೂಮಿಯನ್ನು ಕುಪಣ ಸೆಟ್ಟಿಗೆ ನೀಡಿದ್ದಾಗಿ ತಿಳಿದು ಬರುತ್ತದೆ. ಮಠದ ಭೂಮಿಯನ್ನು ನಾಯರುಮೂಲವಾಗಿ ನೇರವಾಗಿ ಬ್ರಾಹ್ಮಣರಲ್ಲದವರಿಗೂ ನೀಡಿದ ಉದಾಹರಣೆ ಇಲ್ಲದಿಲ್ಲ. ಬಸರೂರಿನಲ್ಲಿ ಶಂಕರ ಲಿಂಗಸೆಟ್ಟಿ ವಿಠಲದೇವರಿಗೆ ಮಠಕಟ್ಟಿಸಿ, ಕೆರೆ ತೋಡಿಸಿ ಕೊಟ್ಟದ್ದು ಕೆಲವು ಕಾಲದ ಮೇಲೆ ಮಠಬಿದ್ದುಹೋದಾಗ ಕುಪ್ಪಣ ಸೆಟ್ಟಿ ಪುನಃ ಕಟ್ಟಿಸಿ ಭೂಮಿಯನ್ನು ದತ್ತಿ ಬಿಟ್ಟ. ಈ ದತ್ತಿ

ಯನ್ನು ನಡೆಸಿಕೊಂಡು ಬರುವ ಜವಾಬ್ದಾರಿಯನ್ನು ಹೊತ್ತ 'ಹಲರು' ಆ ಭೂಮಿಯನ್ನು ಆರು ವಾರ ಮಾಡಿಕೊಂಡು 'ನಾಯರುಮೂಲ'ವಾಗಿ ಸಂಕರ ಲಿಂಗಸೆಟ್ಟಿಗೆ ಕೊಟ್ಟಿರೆಂದು ಬಸರೂರಿನ ಹಲವರ ಕೆರೆಯ ಶಾಸನದಿಂದ ತಿಳಿಯುತ್ತದೆ[8]

ಆದರೆ, ಸಾಮಾನ್ಯವಾಗಿ ದೇವಾಲಯ ಅಥವಾ ಮಠದ ಭೂಮಿಯನ್ನು 'ನಾಯರುಮೂಲ'ವಾಗಿ ಮಾಡಿಕೊಂಡುದು ಬ್ರಾಹ್ಮಣರೇ ಎಂಬುದು ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆಯಲ್ಲದೆ, ಈ ಎಲ್ಲಾ ಸಂದರ್ಭಗಳಲ್ಲೂ ಈ ಪದ ಪ್ರಯೋಗ ಸಾಗುವಳಿಯ (ಉಳುವ) ಹಕ್ಕು ಎಂಬರ್ಥದಲ್ಲಿ ಆಗಿದೆ ಎಂದೂ ತಿಳಿಯಬಹುದಾಗಿದೆ.

ಅಡಿ ಟಿಪ್ಪಣಿಗಳು

1. ಗುರುರಾಜ ಭಟ್ ಪಿ ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್ (ಕಲ್ಯಾಣಪುರ 1975) ಪು. 234–35
2. ಎಸ್. ಐ. ಐ. ಸಂ. VII ಸಂಖ್ಯೆ 332
3. ಅದೇ ಸಂ. ಸಂಖ್ಯೆ 319
4. ಅದೇ ಸಂ. ಸಂಖ್ಯೆ 344
5. ಇ ಐ ಸಂ IX ಪು 20
6. ಉಳ್ಳಾಲ ನರಸಿಂಗರಾವ್ ಎ. ಕಿಸಮ್‌ವಾರ್ ಗ್ಲೋಸರಿ ಆಫ್ ಕನ್ನಡ ವರ್ಡ್ಸ್ (ಬೊಂಬಾಯಿ, 1985) ಪು. 13. ಇಲ್ಲಿ 'ನಾಯರು' ಪದಕ್ಕೆ ನೇಗಿಲು ಎಂಬರ್ಥ ನೀಡಿದರೂ ಪುಟ 94 ರಲ್ಲಿ ನಾಯರ್ ಜನಾಂಗಕ್ಕೂ ಭೂಮಿಯನ್ನು ಗೇಣಿಗೆ ನೀಡುವ ಪದ್ಧತಿಗೂ ಗಂಟುಹಾಕಿರುವುದನ್ನು ಒಪ್ಪಲಾಗದು (ತುಳುವಿನಲ್ಲಿ 'ನಾಯರ್' ಪದಕ್ಕೆ ನೇಗಿಲು ಎಂಬರ್ಥವಿರುವುದನ್ನು ಗಮನಿಸಬಹುದು)
7. ಎಸ್. ಐ. ಐ. ಸಂ. IX ಭಾಗ II ಸಂಖ್ಯೆ 360
8. ಮೇಲಿನದೇ ಶಾಸನ

—ಡಾ॥ ಬಿ. ವಸಂತ ಶೆಟ್ಟಿ

ಈ ಸಂಚಿಕೆಯ ಲೇಖಕರು

ಡಾ॥ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560 056
ಡಾ॥ ಹಂಪ. ನಾಗರಾಜಯ್ಯ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560 056
ವಸಂತಕುಮಾರ್ ಪೆರ್ಲ	163, ಹರಿ ನಿವಾಸ, ಒ. ವಿ. ಎಚ್. ರಸ್ತೆ, ಬಸವನಗುಡಿ, ಬೆಂಗಳೂರು–560 004
ಶ್ರೀಮತಿ ಎಸ್. ಆರ್. ಲೀಲಾ	ಸಂಸ್ಕೃತ ವಿಭಾಗ, ಎನ್. ಎಂ. ಕೆ. ಆರ್. ವಿ. ಮಹಿಳಾ ಪ್ರಥಮ ದರ್ಜೆ ವಿದ್ಯಾಲಯ ಜಯನಗರ, ಬೆಂಗಳೂರು–560 011
ಪ್ರಭು ಖಾನಾಪೂರೆ	ಕನ್ನಡ ಅಧ್ಯಾಪಕರು, ಪದವಿ ಮಹಾವಿದ್ಯಾಲಯ, ಆಳಂದ, ಗುಲ್ಬರ್ಗಾ ಜಿಲ್ಲೆ–585 302
ದಿವಸ್ಪತಿ ಹೆಗಡೆ	C/o ಡಾ॥ ಸುಮತೀಂದ್ರ ನಾಡಿಗ್, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560 056
ಸರೋಜಿನಿ ನಾಯ್ಡು	

ಡಾ॥ ರಘುಪತಿ ಕೆಮ್ತೂರು	ಮಣಿಪಾಲ ಜೂನಿಯರ್ ಕಾಲೇಜು ಮಣಿಪಾಲ–576 119
ಮಾವಿನಕುಳಿ ಶ್ರೀನಿವಾಸ	ಸಮಾಜಶಾಸ್ತ್ರ ಅಧ್ಯಾಪಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು–570 006
ಎಚ್. ವಿ. ಶ್ರೀಧರ	ಕನ್ನಡ ಉಪನ್ಯಾಸಕರು, ವಿವೇಕಾನಂದ ಕಾಲೇಜು, ಪುತ್ತೂರು–ದ. ಕ.
ಡಾ॥ ಕೃಷ್ಣಭಟ್ ಅರ್ತಿಕಜೆ	ಪ್ರವಾಚಕರು ಕನ್ನಡ ವಿಭಾಗ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್–600 005
ಡಾ॥ ಸಿ. ಪಿ. ಕೆ.	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು–570 006
ಡಾ॥ ಸಿ. ಪಿ. ಕೆ.	
ಡಾ॥ ಬಿ. ವಸಂತಶೆಟ್ಟಿ	ಪ್ರವಾಚಕರು ಮತ್ತು ಮುಖ್ಯಸ್ಥರು, ಇತಿಹಾಸ ವಿಭಾಗ, ಸೇಂಟ್ ಮೇರೀಸ್ ಸಿರಿಯನ್ ಕಾಲೇಜ್, ಬ್ರಹ್ಮಾವರ–576 213

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8-00 ರೂ.
(ವಿದ್ಯಾರ್ಥಿಗಳಿಗೆ) 5-00 ರೂ.
ಆಜೀವ ಚಂದಾ ಹಣ 100-00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10-00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10-00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12-00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು, ವಿದ್ಯಾರ್ಥಿಗಳಿಗೆ 6-00 ರೂ.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056